ಕನ್ನಡ ವಿಶ್ವವಿದ್ಯಾಲಯ, ಹಂಪಿ

"ಖಾಸನೀಸರ ಕಥೆಗಳಲ್ಲಿ ಸಂಬಂಧಗಳ ಸ್ವರೂಪ"

ಕನ್ನಡ ಎಂ. ಫಿಲ್ ಪದವಿಗಾಗಿ ಕಾವ್ಯಮಂಡಲದ ವತಿಯಿಂದ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ನಿಬಂಧ

ಮಾರ್ಗದರ್ಶಕರು
ಡಾ. ಬಿ.ಎಂ. ಮಂಗಳಾ ಶ್ರೀಧರ್
ಎಂ.ಎ. ಎಂ.ಫಿಲ್. ಪಿಹೆಚ್.ಡಿ.

ಸಂಶೋಧನಾ ವಿದ್ಯಾರ್ಥಿ
ಚಂದ್ರಶೇಖರ. ಜಿ. ಎಂ.ಎ.

ಹಂಪಿ ಕನ್ನಡ ವಿಶ್ವವಿದ್ಯಾಲಯದ
ಕಾವ್ಯಮಂಡಲ
೧೩/೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ
ಬಸವನಗುಡಿ, ಬೆಂಗಳೂರು-೦೪.

2008

ಕನ್ನಡ ವಿಶ್ವವಿದ್ಯಾಲಯ, ಹಂಪಿ

" ಖಾಸನೀಸರ ಕಥೆಗಳಲ್ಲಿ ಸಂಬಂಧಗಳ ಸ್ವರೂಪ"

ಕನ್ನಡ ಎಂ.ಫಿಲ್ ಪದವಿಗಾಗಿ ಕಾವ್ಯಮಂಡಲದ ವತಿಯಿಂದ
ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ನಿಬಂಧ

ಮಾರ್ಗದರ್ಶಕರು

ಡಾ. ಬಿ. ಎಂ. ಮಂಗಳಾ ಶ್ರೀಧರ್
ಎಂ.ಎ. ಎಂ.ಫಿಲ್. ಪಿಹೆಚ್.ಡಿ.

ಸಂಶೋಧನಾ ವಿದ್ಯಾರ್ಥಿ

ಚಂದ್ರಶೇಖರ. ಜಿ. ಎಂ.ಎ.

ಹಂಪಿ ಕನ್ನಡ ವಿಶ್ವವಿದ್ಯಾಲಯದ
ಕಾವ್ಯಮಂಡಲ
೧೩/೮೫, ರಾಷ್ಟ್ರೀಯ ವಿದ್ಯಾಲಯ ರಸ್ತೆ
ಬಸವನಗುಡಿ, ಬೆಂಗಳೂರು-೦೪.

2008

ದೃಢೀಕರಣ ಪತ್ರ

ಚಂದ್ರಶೇಖರ. ಜಿ. ರವರು ಎಂ.ಫಿಲ್ ಪದವಿಗಾಗಿ ಬರೆದು ಸಿದ್ಧಪಡಿಸಿರುವ "ಖಾಸನೀಸರ ಕಥೆಗಳಲ್ಲಿ ಸಂಬಂಧಗಳ ಸ್ವರೂಪ" ಎಂಬ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಇದಕ್ಕೆ ಮೊದಲು ಬೇರೆ ಯಾವುದೇ ಪದವೀಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲೀ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಬಿ.ಎಂ. ಮಂಗಳ

ಮಾರ್ಗದರ್ಶಕರು

ಸ್ಥಳ : ಬೆಂಗಳೂರು

ದಿನಾಂಕ :

ಡಾ. ಬಿ.ಎಂ. ಮಂಗಳಾ ಶ್ರೀಧರ್

ಎಂ.ಎ. ಎಂ.ಫಿಲ್. ಪಿಹೆಚ್.ಡಿ.

ಪ್ರಮಾಣ ಪತ್ರ

''ಖಾಸನೀಸರ ಕಥೆಗಳಲ್ಲಿ ಸಂಬಂಧಗಳ ಸ್ವರೂಪ'' ಎಂಬ ನಿಬಂಧವನ್ನು ಎಂ.ಫಿಲ್ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕಾವ್ಯಮಂಡಲದ ವತಿಯಿಂದ ಸಲ್ಲಿಸಲು ಡಾ. ಬಿ.ಎಂ. ಮಂಗಳಾ ಶ್ರೀಧರ್ ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವಾಗಿ ಇದುವರೆವಿಗೂ ಬೇರೆ ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

ಚಂದ್ರಶೇಖರ. ಜಿ.

ಸ್ಥಳ : ಬೆಂಗಳೂರು
ದಿನಾಂಕ :

ಚಂದ್ರಶೇಖರ. ಜಿ.
ಸಂಶೋಧನಾ ವಿದ್ಯಾರ್ಥಿ

ಪರಿವಿಡಿ

ಪೀಠಿಕೆ

ಕನ್ನಡ ಕಥಾಸಾಹಿತ್ಯಕ್ಕೆ ವಿಶಿಷ್ಟವಾದ ಮತ್ತು ವಿಭಿನ್ನವಾದ ಮಹತ್ವದ ಕಥೆಗಳನ್ನು ಕೊಟ್ಟವರಲ್ಲಿ ಖಾಸನೀಸರದು ಮಹತ್ವದ ಹೆಸರು. ಅವರ ವಿಶಿಷ್ಟ ಕಥನಶಕ್ತಿ ಅವರ ಕತೆಗಳನ್ನು ಕನ್ನಡ ಕಥಾಸಾಹಿತ್ಯದಲ್ಲಿ ಬೇರೆಯದೇ ಆದ ಒಂದು ನೆಲೆಯಲ್ಲಿ ಸ್ಥಾಪಿಸಲು ನೆರವಾಗಿದೆ. ಇಂತಹ ಕಥನಗುಣದ ವಿಶಿಷ್ಟತೆಯಿಂದಾಗಿಯೇ ಅವರು ಒಂದೊಂದು ಕಥೆಯ ಮೂಲಕವೂ ಸಾವಿರ ಸಾವಿರಮನಸ್ಸುಗಳನ್ನು ಗೆಲ್ಲಲು ಸಾಧ್ಯವಾಯಿತೆನ್ನಬಹುದು. ಸಂಖ್ಯೆಯಲ್ಲಿ ಮಿತವಾದ ಅವರ ಕತೆಗಳು ಜನಪ್ರಿಯತೆಯಲ್ಲಿ ಮುಗಿಲನ್ನು ಮುಟ್ಟಿದವು ಎಂದರೆ ಅತಿಶಯೋಕ್ತಿಯಾಗಲಾರದು ಅವರ ತಬ್ಬಲಿಗಳು, ಮೊನಾಲಿಸಾ, ಇಂತಹ ಕತೆಗಳು ಸಾಹಿತ್ಯ ಓದುಗನೊಬ್ಬನಿಗೆ ಪರಿಚಯವಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಇದಕ್ಕೆಲ್ಲಾ ಪ್ರಮುಖವಾದ ಕಾರಣ ಖಾಸನೀಸರ ಬರವಣಿಗೆಯ ಶಕ್ತಿ.

ಖಾಸನೀಸರ ಇಂತಹ ಬರವಣಿಗೆಯಶಕ್ತಿಯ ಹಿಂದಿನ ಗುಟ್ಟು ಪ್ರಧಾನವಾಗಿ ಅವರ ಕಥೆಗಳಲ್ಲಿನ ಆಪ್ತತೆ. ಅಂದರೆ ಕಥೆಯನ್ನು ಬರೀ ಕಥೆಯಾಗಿಸದೇ ಬದುಕಾಗಿಸುವ ಬರಹ ಶಕ್ತಿ ಎಲ್ಲಾ ಬರಹಗಾರರಿಗೂ ಸಿದ್ದಿಸಲಾರದು. ಆದರೆ ಅಂತಹ ಸಿದ್ದಿ ಖಾಸನೀಸರಿಗೆ ಸಹಜವಾಗಿಯೇ ಸಿದ್ದಿಸಿದೆ. ಬದುಕನ್ನು ಕಟ್ಟುವ ಕೆಲಸ ಕಷ್ಟಕರವಾದುದು. ಆದರೆ ಖಾಸನೀಸರ ಕಥೆಗಳಲ್ಲಿನ ಸಹಜವಾದ ಬದುಕಿನ ನಿರೂಪಣೆ ಖಾಸನೀಸರ ಸಹಜ ನಿರೂಪಣಾ ಅಭಿವ್ಯಕ್ತಿಗೆ ಸಾಕ್ಷಿಯಾಗಿದೆ. ಇವರ ಕಥೆಗಳನ್ನು ಓದುವ ಓದುಗ ಪಾತ್ರದ ಬದುಕನ್ನು ದೂರದ, ಯಾವುದೋ ಕಾಲ್ಪನಿಕ ಪಾತ್ರದ ಬದುಕಾಗಿ ಪರಿಗಣಿಸಲು ಬರುವುದಿಲ್ಲ. ಬದಲಾಗಿ ಪಾತ್ರದ ಬದುಕಿನೊಂದಿಗೆ ಓದುಗನ ಬದುಕೂ ಬೆಸೆದುಕೊಂಡಿರುತ್ತದೆ. ಮನುಷ್ಯನ ಬದುಕಿನ ಚಿಕ್ಕ-ಚಿಕ್ಕ ಸೂಕ್ಷ್ಮ ಅನುಭವಗಳನ್ನೂ ಕಥೆಯಲ್ಲಿ ತರುವ ಖಾಸನೀಸರ ಕಥೆಗಳು ಬದುಕನ್ನು ತೀರಾ ಅಪ್ತಗೊಳಿಸಿವೆ. ಈ ಎಲ್ಲಾ ಗುಣಗಳಿಂದಾಗಿಯೇ ಖಾಸನೀಸರ ಕಥೆಗಳು ಕನ್ನಡದ ಶ್ರೇಷ್ಠ ಕಥೆಗಳ ಸಾಲಿನಲ್ಲಿ ಪ್ರಧಾನ ನೆಲೆಯಲ್ಲಿ ನಿಲ್ಲುತ್ತವೆ.

ಬದುಕನ್ನು ಕಥೆಯನ್ನಾಗಿಸುವ ಕ್ರಿಯೆ ಖಾಸನೀಸರ ಕಥೆಗಳ ಮೂಲಕ ಸಾಧಿಸಲ್ಪಟ್ಟಿದೆ ಎಂಬುದಕ್ಕೆ ಉತ್ತಮ ಉದಾಹರಣೆ ಅವರ ಕಥೆಯ ಪಾತ್ರಗಳು. ಇಲ್ಲಿನ ಹಲವು ಪಾತ್ರಗಳಿಗೆ ಹೆಸರೇ ಇಲ್ಲ. ತಂದೆ, ತಾಯಿ, ತಮ್ಮ, ತಂಗಿ, ಇಂತಹ ಸಂಬಂಧಗಳನ್ನೇ ನೇರವಾಗಿ ಪಾತ್ರವಾಗಿಸುವ ಇವರು ಬರಹ ಮತ್ತು ಬದುಕನ್ನು ಬೇರೆ-ಬೇರೆಯಾಗಿ ಕಾಣುತ್ತಿಲ್ಲ ಬದಲಾಗಿ ಎರಡನ್ನೂ ಮುಖಾಮುಖಿಗೊಳಿಸುವ ಪ್ರಯತ್ನವನ್ನು ಮಾಡಹೊರಟಿದ್ದಾರೆ. ಇಲ್ಲಿನ ತಂದೆ ಸಮಾಜದ ಪತ್ರಿಯೊಬ್ಬ ತಂದೆಯ ಪಾತ್ರ, ಹಾಗೇ ತಾಯಿ ಪ್ರತಿಯೊಂದು ಸಂಸಾರದ

ಪ್ರಧಾನ ಪಾತ್ರ. ಅವು ಕಥೆಗೆ ಮಾತ್ರ ಸೀಮಿತಗೊಳ್ಳದೇ ಬದುಕಿನುದ್ದಕ್ಕೂ ವಿಸ್ತರಿಸಿಕೊಳ್ಳುತ್ತವೆ. ಇಂತಹ ವಿಶಿಷ್ಟ ಅಭಿವ್ಯಕ್ತಿಯೇ ಅವರ ಕಥೆಗಳಲ್ಲಿ ಜೀವಂತಿಕೆಯನ್ನು ತುಂಬಿದೆ. ಆ ಜೀವಂತಿಕೆಯೇ ಅವರ ಕಥೆಗಳಲ್ಲಿನ ಪ್ರಧಾನ ಆಶಯ.

ಖಾಸನೀಸರ ಇಂತಹ ರಚನಾಶಕ್ತಿ ಮತ್ತು ಕಥೆಗಳಲ್ಲಿನ ಜೀವಂತಿಕೆಯೇ ಅವರನ್ನು ಕನ್ನಡದ ಶ್ರೇಷ್ಠಕಥೆಗಾರರ ಸಾಲಿನಲ್ಲಿ ತಂದುನಿಲ್ಲಿಸಿದೆ. ನೂರಾರು ಕಥೆಗಳನ್ನು ಬರೆಯಬಲ್ಲ ಕಥೆಗಾರರ ಮಧ್ಯೆ ಕಥೆಗಾರನಾಗಿ ಖಾಸನೀಸರು ಗುರುತಿಸಿಕೊಳ್ಳುವುದು ಸಾಧ್ಯವಾದದ್ದು ತಮ್ಮ ಸತ್ವಯುತ ಬರವಣಿಗೆಯಿಂದಲೇ. ಆದ್ದರಿಂದಲೇ ಕನ್ನಡದ ಶ್ರೇಷ್ಠ ಕಥೆಗಳು ಎಂಬ ಪಟ್ಟಿಯಲ್ಲಿ ಖಾಸನೀಸರ ಕಥೆಗಳು ಸಹಜವಾಗಿಯೇ ನಿಶ್ಚಿತ ಸ್ಥಾನ ಪಡೆಯುತ್ತವೆ. ಆಗಾಗಿ ಖಾಸನೀಸರ ಕಥೆಗಳನ್ನು ಬಿಟ್ಟು ಕನ್ನಡದ ಸಣ್ಣಕಥೆಗಳನ್ನು ದಾಟಿ ಹೋಗುವುದು ಸಾಧ್ಯವಿಲ್ಲ.

ಖಾಸನೀಸರು ಬರೆದದ್ದು ಕೆಲವೇ ಕಥೆಗಳಾದರೂ ನೂರಾರು ಕಥೆಗಳನ್ನು ಬರೆಯುವ ಒಬ್ಬ ಕಥೆಗಾರನ ಕಥೆಗಳಿಗೆ ಹೋಲಿಸಿದಾಗ ಖಾಸನೀಸರ ಕಥೆಗಳಲ್ಲಿ ಎಲ್ಲಿಯೂ ಅನುಭವದ ಕೊರತೆ ಕಾಣಿಸುವುದೇ ಇಲ್ಲ. ಅವರ ಪ್ರಾತಿನಿಧಿಕ ಕಥೆಗಳಲ್ಲಿಯೇ ಅಂತಹ ಅನುಭವದ ಗಾಢತೆ ಮನೆಮಾಡಿದೆ. ಆದ್ದರಿಂದಲೇ ಅವರು ಬರೆದದ್ದು ಕೆಲವೇ ಕಥೆಗಳಾದರೂ ಎಲ್ಲವೂ ಸತ್ವದಿಂದ ಗಟ್ಟಿಗಟ್ಟಿ. ಇದನ್ನು ಅವರ ಪ್ರತಿಯೊಂದು ಕಥೆಯ ಓದೂ ಕೂಡ ಸಾಬೀತುಪಡಿಸುತ್ತದೆ. ಆದ್ದರಿಂದಲೇ ಖಾಸನೀಸರ ಕಥೆಗಳು ಸಂಖ್ಯೆಯಲ್ಲಿ ಅಲ್ಪವಾದರೂ ಜನಪ್ರಿಯತೆಯಲ್ಲಿ ಅಪಾರತೆಯನ್ನು ಸಾಧಿಸಿವೆ.

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

'ತಬ್ಬಲಿಗಳು' ಕಥೆ ಕನ್ನಡ ಸಾಹಿತ್ಯ ಓದುಗರಿಗೆ ತಿಳಿದಿರದೇ ಇರಲಿಕ್ಕಿಲ್ಲ. ಆದರೆ ತಬ್ಬಲಿಗಳು ಕಥೆಯಾಚೆಗಿನ, ತಬ್ಬಲಿಗಳು ಕಥೆಯ ಕರ್ತೃವಿನ ಬಗೆಗೆ ತಿಳಿದಿರಲಾರದು ಎಂಬುದು ಕೂಡ ಸತ್ಯಕ್ಕೆ ಹತ್ತಿರವಾದ ಮಾತು. ಇದಕ್ಕೆ ಮುಖ್ಯ ಕಾರಣ ಖಾಸನೀಸರು ಕನ್ನಡ ಸಾಹಿತ್ಯದಲ್ಲಿ ಗುರುತಿಸಿಕೊಂಡಿರುವುದು ಬಹುಶಃ ಈ ಒಂದು ಕಥೆಯಿಂದಲೇ ಎಂದು ಹೇಳಬಹುದು. ತಬ್ಬಲಿಗಳು ಕಥೆ ವಿಮರ್ಶೆಗೆ ಸಂಬಂಧಿಸಿದಂತೆ ಪೂರಕವಾಗಿದೆ. ವಿಮರ್ಶೆಯ ಬಹುಮುಖ್ಯ ಗುಣ 'ಕೃತಿ ಮುಖ್ಯವೇ ವಿನಃ ಕರ್ತೃ ಮುಖ್ಯವಲ್ಲ' ಎಂಬುದು. ಅದಕ್ಕೆ ಉದಾಹರಣೆ ಎಂಬಂತಿದೆ ಈ ಕಥೆ. ಖಾಸನೀಸರ ಬಗೆಗಾಗಲೀ, ಅವರ ಉಳಿದ ಕಥೆಗಳ ಬಗೆಗಾಗಲೀ ಕನ್ನಡ ಓದುಗಲೋಕ ಗಮನಹರಿಸಿಲ್ಲ ಎಂಬುದು ಮೇಲ್ನೋಟಕ್ಕೆ ಗೋಚರಿಸಬಹುದಾದ ಸತ್ಯ. ಆದರೆ ಕೆಲವೊಂದು ಸೂಕ್ಷ್ಮ ಓದುಗಳು ಇಂತಹ ಮಾತಿಗೆ ಅಪವಾದ ವಾಗುತ್ತವೆ ಎನ್ನುವುದನ್ನು ಬಿಟ್ಟರೆ ಬಹುಪಾಲು ಮೊದಲ ವಾಕ್ಯವನ್ನೇ ಸಮರ್ಥಿಸುತ್ತದೆ.

ಖಾಸನೀಸರು ತಮ್ಮ ಜೀವಿತದ ಅವಧಿಯಲ್ಲಿ ೨೫ ಕಥೆಗಳನ್ನು ಬರೆದರು. ಈ ಮಾತನ್ನು ಕೇಳಿದಾಗ ಓದುಗರಲ್ಲಿ ತಟ್ಟನೆ ಏಳುವ ಪ್ರಶ್ನೆ ಉಳಿದ ಯಾವ ಸಾಹಿತ್ಯ ಪ್ರಕಾರದಲ್ಲಿ ಮತ್ತೇನನ್ನು ಬರೆದಿದ್ದಾರೆ? ಎಂಬುದು. ಆದರೆ ಆ ಪ್ರಶ್ನೆಗೆ ಮೌನವೇ ಉತ್ತರ ಖಾಸನೀಸ ಕಥೆಗಾರ ಮಾತ್ರ. ಕಥೆಯನ್ನೂರತಾಗಿ ಮತ್ತೇನನ್ನೂ ಬರೆಯಲಿಲ್ಲ. ಎಂಬುದು, ಇದಕ್ಕೆ ಹಲವು ಕಾರಣವಿರಬಹುದು. ಆದರೆ ಬರೆದಂತಹ ಅಲ್ಪ ಕಥೆಗಳಲ್ಲೇ ಅಪಾರ ಓದುಗರ ಪ್ರೀತಿಯನ್ನು ಗಳಿಸಿಕೊಂಡಿರುವ ಇವರ ಕಥೆಗಳು ಒಂದೋ, ಎರಡೋ, ಅಷ್ಟೆ. ಖಾಸನೀಸರ ಈ ಕಥೆಗಳ ಸಂಖ್ಯೆಯೇ ಮೊದಲು ಈ ಕಥೆಗಾರರ ಬಗೆಗೆ ಕುತೂಹಲವನ್ನು ಉಂಟುಮಾಡಿದ್ದು. ನವ್ಯದ ಶ್ರೇಷ್ಠ ಕಥೆಗಾರರು ಎಂದು ಯಾರನ್ನು ಕರೆಯುತ್ತೇವೆಯೋ ಅವರಲ್ಲಿ ಖಾಸನೀಸರೂ ಒಬ್ಬರಿರುವಾಗ ಉಳಿದವರ ಸಾಹಿತ್ಯದ ಪ್ರಮಾಣಕ್ಕಿಂತ ಖಾಸನೀಸರದು ತೀರಾಕಡಿಮೆ ಏಕೆ? ಎಂಬ ಮೊದಲ ಪ್ರಶ್ನೆ ಮೊದಲು ಖಾಸನೀಸರ ಬಗೆಗೆ ಆಸಕ್ತಿಯನ್ನುಂಟುಮಾಡಿತು. ಒಂದೇ ವರ್ಷದಲ್ಲಿ ೨೫ ಕಥೆಗಳನ್ನು ಬರೆಯಬಲ್ಲ ಕಥೆಗಾರರಲ್ಲಿ ಸುಮಾರು ೨೫ ವರ್ಷಗಳ ಅವಧಿಯಲ್ಲಿ ಕೇವಲ ೨೫ ಕಥೆಗಳನ್ನು ಬರೆದುದು ಆಶ್ಚರ್ಯದ

ಸಂಗತಿಯಾಗಿತ್ತು. ಅನುಭವದಲ್ಲಿ ಅಷ್ಟೊಂದು ಗಟ್ಟಿತನದಿಂದ ಕೂಡಿದ ಅವರ ಕಥೆಗಳನ್ನು ಓದಿದಾಗ ಅನುಭವದ ಕೊರತೆಯಂತೂ ಅವರ ಅಲ್ಪ ಬರಹಕ್ಕೆ ಕಾರಣವಾಗಿಲ್ಲ ಎಂಬುದು ಖಾಸನೀಸರ ಪರಿಚಯವಾಗುವ ಮೊದಲೇ ಸ್ಪಷ್ಟವಾಗಿತ್ತು. ಅವರ ಪರಿಚಯವಾದ ಮೇಲೆ ಆ ಕಾರಣಕ್ಕೆ ಉತ್ತರವೂ ಹೊಳೆಯುತ್ತಾ ಹೋಯಿತು. ಹಿಂದೆಯೇ ಹೇಳಿದಂತೆ ಇವರು ಸಾಹಿತ್ಯವನ್ನು ಅಭಿರುಚಿಯನ್ನಾಗಿ ಕಂಡವರು. ಸಾಹಿತ್ಯದ ಪ್ರಮಾಣದ ಬಗ್ಗೆ ಅವರಿಗೆ ಯಾವುದೇ ಆಸಕ್ತಿಯಿರಲಿಲ್ಲ. ತಾನೊಬ್ಬ ಸಾಹಿತಿ ಎಂಬ ಪ್ರಜ್ಞೆಯಿರದೇ ಬದುಕಿನ ಅನುಭವಗಳನ್ನು ಕಥೆಯಾಗಿಸಿದ ಕಥೆಗಾರ ಖಾಸನೀಸ. ಕಥಾಲೋಕ ಅವರಿಗೆ ಪ್ರಿಯವಾದುದಷ್ಟೇ.

ತಬ್ಬಲಿಗಳು ಕಥೆಯಷ್ಟೇ ಸತ್ವವುಳ್ಳ ಅವರ ಹಲವು ಕಥೆಗಳು ಕನ್ನಡ ಸಾಹಿತ್ಯದಲ್ಲಿ ಮೂಲೆ ಗುಂಪಾಗಿವೆ. ಎಂದು ಹೇಳಬಹುದು. ಮೊನಾಲಿಸಾ, ಅಲ್ಲಾವುದ್ದೀನನ ಅದ್ಭುತ ದೀಪದಂತಹ ಕಥೆಗಳನ್ನು ಬಿಟ್ಟರೆ ಉಳಿದ ಕಥೆಗಳು ಎಲ್ಲಿಯೂ ಚರ್ಚಿತವಾಗೇ ಇಲ್ಲದಿರುವುದು ವಿಪರ್ಯಾಸ. ಅಂತಹ ಹಲವು ಕಥೆಗಳನ್ನು ಚರ್ಚಿಸಿ, ಪರಿಚಯಿಸುವ ಪ್ರಧಾನ ಉದ್ದೇಶವೇ ಈ ಅಧ್ಯಯನದ ವಿಷಯದ ಆಯ್ಕೆಗೆ ಪ್ರಧಾನ ಕಾರಣ. ಇದರ ಜೊತೆಗೆ ಖಾಸನೀಸರ ಕಥೆಗಳನ್ನು ಕುರಿತಂತಹ ಅಧ್ಯಯನ ಸಮಗ್ರವಾಗಿ ನಡೆದಿಲ್ಲವೆಂದೇ ಹೇಳಬಹುದು. ಕೆಲವೊಂದು ಲೇಖನಗಳೋ. ತಬ್ಬಲಿಗಳಂತಹ ಕಥೆಯ ಚರ್ಚೆಯೋ ಒಂದೆರಡು ಪುಟದಲ್ಲಿ ನಡೆದಿದೆಯಾದರೂ ಅವರ ಒಟ್ಟು ಕಥೆಗಳನ್ನು ಅಧ್ಯಯನಕ್ಕೆ ಒಳಪಡಿಸಿರುವುದು ಎಲ್ಲಿಯೂ ಕಂಡುಬಂದಿಲ್ಲ. ಕೆಲವೊಂದು ಪುಸ್ತಕಗಳಲ್ಲಿ ಖಾಸನೀಸರ ತಬ್ಬಲಿಗಳು ಕಥೆಯನ್ನು ಮಾತ್ರ ಹೆಸರಿಸಿ ಅಷ್ಟಕ್ಕೆ ಕೈ ಬಿಟ್ಟಿರುವುದೂ ಉಂಟು. ಮತ್ತೆ ಕೆಲವು ಪುಸ್ತಕಗಳಲ್ಲಿ 'ಇತರ ನವ್ಯಕಥೆಗಾರರು' ಎಂಬ ಶೀರ್ಷಿಕೆಯಡಿಯಲ್ಲಿ ಕೇವಲ ಖಾಸನೀಸ ಎಂಬ ಹೆಸರು ಮಾತ್ರವಿದೆ. ಹೀಗೆ ಅವರ ಕಥೆಗಳ ಬಗೆಗೆ ಯಾವ ಪುಸ್ತಕಗಳು ವಿಮಾರ್ಶಕೃತಿಗಳಾಗಿ ಹೊರಬಂದಿಲ್ಲವೆನ್ನಬಹುದು. ಏಕೆಂದರೆ ಈ ನಿಬಂಧ ರಚನೆಗೆ ಪೂರಕಸಾಮಗ್ರಿಗಳಾಗಿ ಸಹಾಯಕವಾಗುವಂತಹ ಪುಸ್ತಕಗಳ, ಮಾಹಿತಿಗಳ, ಸಂಗ್ರಹಣೆಯಲ್ಲಿ ಉಂಟಾದ ವಿಫಲತೆಯೇ ಇದಕ್ಕೆ ಮುಖ್ಯ ಸಾಕ್ಷಿ. ಇಂತಹ ಮಾಹಿತಿಗಳ ಕೊರತೆಯೇ ನಿಬಂಧ ರಚನೆಯಲ್ಲಿ ಖಾಸನೀಸರ ಕಥೆಗಳ ಆಯ್ಕೆಯನ್ನು ಮತ್ತಷ್ಟು ಗಟ್ಟಿಗೊಳಿಸಿತು.

ಖಾಸನೀಸರ ಕಥೆಗಳನ್ನು ಈ ಪ್ರಬಂಧ ರಚನೆಗಾಗಿ ಆಯ್ದುಕೊಳ್ಳುವುದಕ್ಕೆ ಮತ್ತೊಂದು ಪ್ರಬಲವಾದ ಕಾರಣ, ಅವರ ಬರಹ ಮತ್ತು ಬದುಕಿನ ನಡುವಿನ ಅಂತರ. ಬರಹವನ್ನು ರೂಢಿಸಿಕೊಂಡ ವ್ಯಕ್ತಿ ಬರಹದೊಂದಿಗೆ ಬದುಕುವುದು ಬಹಳಷ್ಟು ಬರಹಗಾರರಿಗೆ ಅನ್ವಯವಾಗುವಂತಹುದು. ಆದರೆ ಈ ಮಾತು ಖಾಸನೀಸರಿಗೆ ಸಂಬಂಧಿಸಿದಂತೆ, ತೀರಾ ವಿರುದ್ಧವಾಗಿದೆ. ತಮ್ಮ ಜೀವನದ ಬಹುಪಾಲು ಸಮಯವನ್ನು ಅವರು ಗ್ರಂಥಪಾಲನೆ ಸೇವೆಯಲ್ಲೇ ಕಳೆದರು. ಬರಹಕ್ಕಾಗಿ ಅವರು ಮೀಸಲಿಟ್ಟುದು, ಅಲ್ಪಾವಧಿಯನ್ನು ಮಾತ್ರ. ಅವರು ಜೀವನದಲ್ಲಿ ಪ್ರವೃತಿಗಿಂತ ವೃತ್ತಿಗೆ ಬದುಕನ್ನು ಅರ್ಪಿಸಿದವರು. ಜೀವನದ ಅಭಿರುಚಿಗಿಂತ ಅವಶ್ಯಕತೆಗೆ ಬೆಲೆಯನ್ನು–ಕೊಟ್ಟು ಬದುಕಿದವರು. ಸಾಹಿತ್ಯ ಕ್ಷೇತ್ರಕ್ಕೆ ಅಂಟಿಯೂ ಅಂಟದಂತಿದ್ದ ಅವರ ವ್ಯಕ್ತಿತ್ವದ ಬಗೆಗಿನ ಕಾಳಜಿಯೂ ಸಹ ಈ ವಿಷಯದ ಆಯ್ಕಗೆ ಕಾರಣವಾಯಿತೆನ್ನಬಹುದು.

ಇಂತಹ ವಿಶೇಷ ವ್ಯಕ್ತಿತ್ವ ಮತ್ತು ಅದ್ಭುತ ಕಥಾಶಕ್ತಿ ಹೊಂದಿರುವಂತಹ ಮತ್ತು ಕನ್ನಡದ ವಿಶಿಷ್ಟಕತೆಗಾರ ಎಂಬ ಬಿರುದನ್ನು ಪಡೆದಂತಹ ಖಾಸನೀಸರು ನಮ್ಮ ಸಾಹಿತ್ಯ ಚರಿತ್ರೆಯಂತಹ ಪುಸ್ತಕಗಳಲ್ಲೂ ಗೌಣವಾಗಿರುವುದು ವಿಷಾಧನೀಯ ತಬ್ಬಲಿಗಳು ಕಥೆಗೆ ಸಿಕ್ಕ ಮಾನ್ಯತೆಯಾಗಲಿ, ಗುರುತಿಸುವಿಕೆಯಾಗಲಿ ಖಾಸನೀಸರಿಗಾಗಲೀ ಅವರ ಹಲವು ಬಲಿಷ್ಟಕಥೆಗಳಿಗಾಗಲೀ ದೊರೆಯದಿರುವುದು ಈ ಪ್ರಬಂಧ ವಿಷಯದ ಆಯ್ಕೆಗೆ ಸಹಕಾರಿಯಾಗಿತ್ತು. ತಬ್ಬಲಿಗಳು ಕಥೆಯ ಕತೃ, ಮತ್ತು ಆ ಕಥೆಯನ್ನೊರತಾದ ಉಳಿದ ಕಥೆಗಳ ಗಟ್ಟಿತನವನ್ನು ತಿಳಿಸಿ ಹೇಳುವ ಪುಟ್ಟ ಪ್ರಯತ್ನವಾಗಿ ಈ ಪ್ರಬಂಧ ರಚನೆಯಾಗಲಿ. ಆ ಮೂಲಕ ಖಾಸನೀಸರ ಹಲವು ಕಥೆಗಳ ಬಗೆಗೂ ಕನ್ನಡ ಓದುಗಲೋಕ ತೆರೆದುಕೊಳ್ಳಲಿ ಎಂಬ ಆಶಯದೊಂದಿಗೆ ಈ ಪ್ರಯತ್ನ ಶುರುವಾಯಿತೆನ್ನಬಹುದು.

ಖಾಸನೀಸರು ತಮ್ಮ ಜೀವಿತಾವಧಿಯಲ್ಲಿ ಬರೆದದ್ದು ೨೫ ಕಥೆಗಳಾದರೂ ಅವುಗಳಲ್ಲಿ ಪ್ರಕಟವಾಗಿರುವುದು ಹತ್ತರಷ್ಟು ಕಥೆಗಳು ಮಾತ್ರ. ಇವುಗಳಲ್ಲಿನ ವಿಶೇಷತೆಯೆಂದರೆ, ವಸ್ತುವಿನಲ್ಲಾಗಲೀ, ಘಟನೆಗಳಲ್ಲಾಗಲೀ, ಪಾತ್ರಗಳ ಜೋಡಣೆಯುಲ್ಲಾಗಲೀ, ನಿರೂಪಣೆಯಲ್ಲಾಗಲೀ ಒಂದಕ್ಕೊಂದು ಎಲ್ಲಿಯೂ ವೈವಿಧ್ಯತೆಯನ್ನು ಕಳೆದುಕೊಂಡಿಲ್ಲ. ಇದು ಖಾಸನೀಸರ ವಿಶಿಷ್ಟಬರವಣಿಗೆಯ ಶಕ್ತಿ. ಎಲ್ಲಾ ಕಥೆಗಳನ್ನು ಓದಿದ ಓದುಗನಿಗೆ ಅವು ವಿವಿಧ ಲೇಖಕರ ಆಯ್ದಕಥೆಗಳು ಎಂಬುದು ಅರಿವಾಗಬಲ್ಲುದೇ ವಿನಃ ಇದು ಒಬ್ಬನೇ ಲೇಖಕನ ಕಥೆಗಳು ಎಂದರೆ ಆಶ್ಚಯವಾಗದೇ ಇರದು. ಅಂತಹ ವೈವಿಧ್ಯತೆಯನ್ನು ಕಥೆಯಿಂದ

ಕಥೆಗೆ ಕಾಯ್ದುಕೊಂಡಿರುವ ಖಾಸನೀಸರ ಕಥೆಗಳ ಅಧ್ಯಯನ ಈ ನಿಬಂಧರಚನೆಗೆ ಮತ್ತೊಂದು ಕಾರಣಶಕ್ತಿಯಾಗಿ ಕೆಲಸಮಾಡಿದೆ.

ಈ ನಿಬಂಧದ ಶೀರ್ಷಿಕೆ "ಖಾಸನೀಸರ ಕಥೆಗಳಲ್ಲಿ ಸಂಬಂಧಗಳ ಸ್ವರೂಪ" ಎಂಬುದು. ಖಾಸನೀಸರ ಕಥೆಗಳ ಕೇಂದ್ರ ಕಾಳಜಿ ಮನುಷ್ಯ ಸಂಬಂಧಗಳು. ಮನುಷ್ಯನ ಬದುಕೇ ಕಥೆಯರೂಪ ಪಡೆದಿವೆ ಎನ್ನುವಷ್ಟರ ಮಟ್ಟಿಗೆ ನಿರೂಪಿತವಾಗುವ ಖಾಸನೀಸರ ಕಥೆಗಳು ಬದುಕಿನ ಪ್ರಧಾನ ಅಂಶವಾದ ಮನುಷ್ಯನ ಸಂಬಂಧಗಳನ್ನೇ ಮುಖ್ಯನೆಲೆಯಾಗಿ ಬಳಸಿಕೊಂಡಿವೆ. ಸಂಬಂಧಗಳನ್ನು ಹೊರತಾದ ಬದುಕನ್ನು ಊಹಿಸಲು ಸಾಧ್ಯವಿಲ್ಲ, ಅಂತಹ ಸಂಬಂಧಗಳೇ ಇಲ್ಲಿನ ಕಥೆಗಳನ್ನು ಜೀವಂತಗೊಳಿಸಿವೆ. ಒಬ್ಬ ವ್ಯಕ್ತಿ ತನ್ನ ಬದುಕಿನಲ್ಲಿ ಹೊಂದುವಂತಹ ಅತಿ ಸೂಕ್ಷ್ಮಸಂಬಂಧಗಳ ಸಾಧ್ಯತೆಗಳನ್ನೂ ಖಾಸನೀಸರು ಎಣೆದಿದ್ದಾರೆ. ರಕ್ತಸಂಬಂಧಗಳು, ಕೌಟುಂಬಿಕ ಸಂಬಂಧಗಳು, ಪ್ರೇಮಸಂಬಂಧಗಳು, ಸ್ನೇಹಸಂಬಂಧಗಳು, ಕಾಮಕೇಂದ್ರಿತಸಂಬಂಧಗಳು ಅನುಭವಾತೀತವಾದ ಜನ್ಮಾಂತರದ ಸಂಬಂಧಗಳು, ಅನಿವಾರ್ಯ ಸಂಬಂಧಗಳು, ಅನಿರೀಕ್ಷಿತ ಮತ್ತು ಆಕಸ್ಮಿಕ ಸಂಬಂಧಗಳು, ನೈತಿಕ ಮತ್ತು ಅನೈತಿಕಸಂಬಂಧಗಳು ಹೀಗೆ ಮನುಷ್ಯ ತನ್ನ ಜೀವನದಲ್ಲಿನ ಸಂಬಂಧಗಳನ್ನು ಹೊಂದಬಹುದಾದ ಹಲವು ಸಾಧ್ಯತೆಗಳನ್ನು ಹಲವು ಕಥೆಗಳಲ್ಲಿ, ಹಲವು ಪಾತ್ರಗಳ ಮೂಲಕ ಚಿತ್ರಿಸುತ್ತಾರೆ. ಅವರ ಎಲ್ಲಾ ಕಥೆಗಳು ಘಟನೆಗೆ ಮಹತ್ವಕೊಟ್ಟರೂ ಅಂತಹ ಘಟನೆಗಳು ನಡೆಯುವುದು ಇಂತಹ ಮನುಷ್ಯ ಸಂಬಂಧಗಳ ಸ್ವರೂಪದ ನಿರೂಪಣೆಗೆ ಪೂರಕವಾಗಿಯೇ ಎನ್ನುವುದು ಗಮನಿಸಬೇಕಾದ ಅಂಶ.

ಖಾಸನೀಸರ ಯಾವ ಕಥೆಯನ್ನೇ ಓದಿದರೂ ಕೂಡ ಅಲ್ಲಿ ಮುಖ್ಯವಾಗಿ ಗೋಚರಿಸುವುದು ಸಂಬಂಧಗಳ ವಿವಿಧ ಮಜಲುಗಳೇ. ಮತ್ತಾವ ವಿಷಯಗಳು ಕಂಡುಬಂದರೂ ಅವು ಪೂರಕವಾಗಿರುತ್ತವೆಯೇ ವಿನಃ ಪ್ರಧಾನವಲ್ಲ. ಸಂಬಂಧಗಳ ಅತಿ ಸೂಕ್ಷ್ಮತೆಗಳನ್ನು ಕಡೆಗಣಿಸದ ಖಾಸನೀಸರು ಮನುಷ್ಯ ಸಂಬಂಧಗಳನ್ನೊರತಾದ ಕಥೆಗಳನ್ನು ರಚಿಸಿಯೇ ಇಲ್ಲವೆನ್ನಬಹುದು. ಇವೆಲ್ಲವೂ ಈ ಪ್ರಬಂಧಕ್ಕೆ ಸಂಬಂಧಗಳ ಕೇಂದ್ರಿತವಾದ ಶೀರ್ಷಿಕೆಯನ್ನಿಡಲು ಮತ್ತು ಸಂಬಂಧಗಳ ಹಿನ್ನಲೆಯಲ್ಲಿಯೇ ಕಥೆಗಳ ಘಟನೆ, ಮತ್ತಿತರ ಅಂಶಗಳನ್ನು ಚರ್ಚಿಸಲು ಕಾರಣವಾದ ಅಂಶಗಳಾದವೆನ್ನಬಹುದು. ಈ ಪ್ರಬಂಧದಲ್ಲಿ ಖಾಸನೀಸರ ಕಥೆಗಳ ಹಲವು ವಿಚಾರಗಳನ್ನು ಅಧ್ಯಯನದ ವ್ಯಾಪಿಗೆ ತೆಗೆದುಕೊಳ್ಳಲಾಗಿದೆಯಾದರೂ ಅವುಗಳನ್ನು ಸಂಬಂಧಗಳ

ಸ್ವರೂಪದ ಚರ್ಚೆಗೆ ಪೂರಕವಾಗಿ ಬಳಸಿಕೊಂಡು ಚರ್ಚಿಸುವ ಉದ್ದೇಶವನ್ನು ಈ ಪ್ರಬಂಧ ಹೊಂದಿದೆ.

ಖಾಸನೀಸರ ಪ್ರಕಟಿತ ಹತ್ತು ಕಥೆಗಳಲ್ಲಿ 'ಬೇಡಿಕೊಂಡವರು.' ಎಂಬುದು ಒಂದು ನೀಳ್ಗಥೆ. ಅದು ತಬ್ಬಲಿಗಳು ಕಥೆಯ ಘಟನೆಯ ನಂತರದ ವಿವರಗಳನ್ನೇ ವಿಸ್ತರಿಸುತ್ತದೆನ್ನಬಹುದು. ಉಳಿದ ೯ ಕಥೆಗಳನ್ನು ಈ ಪ್ರಬಂಧ ರಚನೆಗಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಅವರ ಎಲ್ಲಾ ಕಥೆಗಳು ಸಣ್ಣ ಕಥೆ ಎಂಬ ಮಾತಿಗೆ ಕೊಂಚ ಮೀರಿಬೆಳೆದಿವೆ ಎಂದೇ ಹೇಳಬಹುದು. ಘಟನೆಗಳ ವಿವರಣೆಗಳಲ್ಲಿನ ಸಂಕುಚಿತತೆಗೆ ಆಸ್ಪದ ನೀಡದಿರುವುದೇ ಇವರ ಕಥೆಗಳ ಗುಣವಾದ್ದರಿಂದ ಈ ಕಥೆಗಳು ತುಸುವಿಸ್ತಾರತೆಯನ್ನು ಪಡೆದಿವೆ. ಆದ್ದರಿಂದ ಅವರ ಪ್ರಕಟಿತ ಕಥೆಗಳಲ್ಲಿನ ಈ ಕೆಳಗಿನ ೯ ಕಥೆಗಳನ್ನು ಪ್ರಬಂಧದ ರಚನೆಯ ವ್ಯಾಪ್ತಿಯಲ್ಲಿ ಚರ್ಚಿಸಲಾಗುತ್ತದೆ.

೧. ಮಂದಿಯ ರಹಸ್ಯ
೨. ಅಪಘಾತ
೩. ಹೀಗೂ ಇರಬಹುದು!
೪. ತಬ್ಬಲಿಗಳು
೫. ಮೊನಾಲಿಸಾ
೬. ಅಲ್ಲಾವುದ್ದೀನನ ಅದ್ಭುತ ದೀಪ!
೭. ಪುರುಷನ ಮುಂದೆ ಮಾಯೆ
೮. ಅನಿರೀಕ್ಷಿತ
೯. ಅಶ್ವಾರೋಹಿ

'ಖಾಸನೀಸರ ಕಥೆಗಳಲ್ಲಿ ಸಂಬಂಧಗಳ ಸ್ವರೂಪ" ಎಂಬ ಶೀರ್ಷಿಕೆಯಡಿಯಲ್ಲಿ ಮೇಲಿನ ೯ ಕಥೆಗಳನ್ನೂ ಸಮಗ್ರವಾಗಿ ಚರ್ಚಿಸುವ ಪುಟ್ಟ ಪ್ರಯತ್ನವನ್ನು ಈ ಪ್ರಬಂಧ ರಚನೆಯ ಮೂಲಕ ಮಾಡುತ್ತಿದ್ದೇನೆನ್ನಬಹುದು. ಮನುಷ್ಯ ಸಂಬಂಧಗಳ ಸೂಕ್ಷ್ಮ ಎಳೆಗಳನ್ನು ಸುಂದರವಾಗಿ ತಮ್ಮ ಕಥೆಗಳ ಮೂಲಕ ಹಿಡಿದಿಟ್ಟಿರುವ ಖಾಸನೀಸರಿಗೆ ಸಂಬಂಧಗಳ ಬಗೆಗಿನ ಆಳವಾದ ಅನುಭವವಿತ್ತೆಂದು ಹೇಳಬಹುದು. ಏಕೆಂದರೆ ಅಂತಹ ಅನುಭವದ ತೀವ್ರತೆ ಅವರ ಎಲ್ಲಾ ಕಥೆಗಳಲ್ಲೂ ಪ್ರಧಾನವಾಗಿ ಕಾಣಸಿಗುತ್ತದೆ.

ಈ ಅಧ್ಯಯನ ಪ್ರಬಂಧದ ರಚನೆಗಾಗಿ ಆಯ್ದುಕೊಂಡಿರುವ ಖಾಸನೀಸರ ಕಥೆಗಳಲ್ಲಿ ಪ್ರತಿಯೊಂದು ಘಟನೆಯೂ, ಪ್ರತಿಯೊಂದು ಪಾತ್ರವೂ, ಈ ಚರ್ಚೆಯ ಅಧ್ಯಯನದ ವ್ಯಾಪ್ತಿಗೆ ಬರುತ್ತವೆಂದು ಹೇಳುವುದು ಸಾಧ್ಯವಿಲ್ಲ. ಏಕೆಂದರೆ ಖಾಸನೀಸರ ಕಥೆಗಳಲ್ಲಿ ಸಂಬಂಧಗಳ ಸ್ವರೂಪವೇ ಪ್ರಧಾನವಾದರೂ ಇತರ ಅಂಶಗಳೂ ಇಲ್ಲದಿರುವುದಿಲ್ಲ. ಇಂತಹ ಸಂಬಂಧಗಳ ಚರ್ಚೆಗೆ ಪೂರಕವಲ್ಲದ, ಅವಶ್ಯಕತೆ ಇಲ್ಲದ, ಅನಿವಾರ್ಯವಲ್ಲದ ಘಟನೆಗಳು, ಈ ಪ್ರಬಂಧದ ಚರ್ಚೆಯ ವ್ಯಾಪ್ತಿಗೆ ಬರುವುದಿಲ್ಲ. ಇಲ್ಲಿ ಚರ್ಚಿತವಾಗಿರುವ ಪ್ರತಿಯೊಂದು ವಿಷಯವೂ, ಪಾತ್ರವೂ ಸಂಬಂಧಗಳ ಸ್ವರೂಪಕ್ಕೆ ಹಿನ್ನಲೆಯಾಗಿ ಅಥವಾ ಪೂರಕವಾಗಿ ಬರುವಂತಹವುಗಳಾಗಿ ಮಾತ್ರ ಇರುತ್ತವೆ.

ಉದಾ:- ಪುರುಷನ ಮುಂದೆ ಮಾಯೆ ! ಕಥೆಯಲ್ಲಿನ ಒಂದು ಬೆಣಚು ಕಲ್ಲಿನ ಘಟನೆ, ರಾಮಬಾಹುವಿನ ಬದುಕಿನಲ್ಲಿ ಪ್ರಮುಖ ಘಟನೆಯಾಗಿ ಘಟಿಸಿದರೂ ಕೂಡ ಆ ಘಟನೆ ಅವನ ಮತ್ತು ಅವನೊಂದಿಗಿನ ಸಂಬಂಧಗಳ ನಡುವೆ ಯಾವಪಾತ್ರವನ್ನೂ ವಹಿಸುವುದಿಲ್ಲ. ಮತ್ತು ಅಂತಹ ಸಂಬಂಧಗಳಿಗೆ ಪೂರಕವಾಗಿಯಾಗಲಿ, ಮತ್ತಾವುದೇ ಕಾರಣಗಳಿಗಾಗಲಿ, ಮುಖ್ಯವಾಗುವುದೇ ಇಲ್ಲ. ಅಂತಹ ವಿಷಯಗಳು ಈ ಪ್ರಬಂಧದಲ್ಲಿ ಬರಲಾರವೆನ್ನುವುದು ಸ್ಪಷ್ಟ.

ಒಟ್ಟಾರೆಯಾಗಿ ಈ ಪ್ರಬಂಧದ ಪ್ರಧಾನಉದ್ದೇಶ ಖಾಸನೀಸರು ಎಣೆದಿರುವ ಮನುಷ್ಯ ಸಂಬಂಧಗಳ ಸ್ವರೂಪದ ಎಳೆಗಳ ಸಮಗ್ರವಾದ ಚರ್ಚೆ ಮತ್ತು ಇದಕ್ಕೆ ಪೂರಕವಾಗಬಲ್ಲ ಹಲವು ವಸ್ತು-ವಿಷಯಗಳ ಸಹ ಅಧ್ಯಯನ ಎಂದು ಹೇಳಬಹುದು.

ಅಧ್ಯಾಯ – ೨

ಖಾಸನೀಸರ ಪರಿಚಯ

ಖಾಸನೀಸ ಎಂಬ ಹೆಸರಿನಿಂದ ಗುರುತಿಸಿಕೊಂಡಿರುವ ಕಥೆಗಾರ ಖಾಸನೀಸರ ಪೂರ್ಣ ಹೆಸರು ರಾಘವೇಂದ್ರ ನಾರಾಯಣ ಖಾಸನೀಸ. ಕನ್ನಡ ಕಥಾಸಾಹಿತ್ಯದ ನವ್ಯಕಾಲಘಟ್ಟದ ಕಥೆಗಾರರಲ್ಲಿ ಖಾಸನೀಸರು ಪ್ರಧಾನ ಕಥೆಗಾರರಾಗಿ ಕಾಣಸಿಗುತ್ತಾರೆ. ೧೯೩೩ರ ಮಾರ್ಚ್ ೨ರಂದು ಬಿಜಾಪುರ ಜಿಲ್ಲೆಯ ಇಂಡಿಗ್ರಾಮದಲ್ಲಿ ಜನಿಸಿದ ಖಾಸನೀಸರು ಪ್ರಾಥಮಿಕ ಮತ್ತು ಫ್ರೌಢಶಿಕ್ಷಣವನ್ನು ಬಿಜಾಪುರ ಜಿಲ್ಲೆಯಲ್ಲಿ ಮುಗಿಸಿ ಉನ್ನತ ವ್ಯಾಸಂಗವನ್ನು ಮುಂಬೈ ವಿಶ್ವವಿದ್ಯಾಲಯದಲ್ಲಿ ಮುಂದುವರೆಸಿದರು. ಮುಂಬೈ ವಿಶ್ವವಿದ್ಯಾಲಯದ ಇಂಗ್ಲೀಷ್ ಎಂ.ಎ. ಪದವಿ ಪಡೆದ ಖಾಸನೀಸರು 'ಡಿಪ್ಲೊಮಾ ಇನ್ ಲೈಬ್ರರಿಯನ್‌ಶಿಪ್' ಪದವಿಯನ್ನೂ ಸಹ ಪಡೆದರು.

ಬೆಂಗಳೂರು ವಿಶ್ವವಿದ್ಯಾಲಯದಲ್ಲೇ ಸುಮಾರು ೨೫ ವರ್ಷಗಳ ಕಾಲ ಗ್ರಂಥವಾಲಕರಾಗಿ ಸೇವೆಸಲ್ಲಿಸಿದ ಖಾಸನೀಸರು ಮುಂಬೈ. ಪುಣೆಗಳ ಗ್ರಂಥಾಲಯಗಳಲ್ಲೂ ಸೇವೆಸಲ್ಲಿಸಿದ್ದಾರೆ. ಈ ಎಲ್ಲಾ ವಿವರಗಳನ್ನು ನೋಡಿದಾಗ ಸಾಹಿತ್ಯ ಅವರ ಪ್ರವೃತ್ತಿಯಾಗಿತ್ತು ಎನ್ನುವುದು ತಿಳಿಯುತ್ತದೆ. ವೃತ್ತಿಯಲ್ಲಿ ಗ್ರಂಥಪಾಲಕರಾಗಿದ್ದ ಖಾಸನೀಸರಿಗೆ ಸಾಹಿತ್ಯ ಅಭಿರುಚಿಯ ಕ್ಷೇತ್ರವಾಗಿತ್ತು. ನೂರಾರು ಕಥೆಗಳನ್ನು ಬರೆಯಬಲ್ಲ ಕಥೆಗಾರರ ನಡುವೆ ಖಾಸನೀಸರು ತಮ್ಮ ಜೀವಿತದ ಅವಧಿಯಲ್ಲಿ ಬರೆದದ್ದು ಕೇವಲ ೨೫ ರಷ್ಟು ಕಥೆಗಳು ಮಾತ್ರ. ಬೇರೆಕಥೆಗಾರರಿಗೆ ಹೋಲಿಸಿದರೆ ಖಾಸನೀಸರ ಕಥೆಗಳ ಸಂಖ್ಯೆ ತೀರಾ ಅಲ್ಪ. ಆದರೆ ಕನ್ನಡದ ಶ್ರೇಷ್ಠ ಕಥೆಗಾರರ ಕಥೆಗಳ ಸಾಲಿನಲ್ಲಿ ಇವರ ಕಥೆಗಳು ಎಂದಿಗೂ ಹಿಂದೆ ಬೀಳುವುದಿಲ್ಲ. ಸಂಖ್ಯೆಯಲ್ಲಿ ಕಡಿಮೆ ಕಥೆಗಳಾದರೂ ಇವರ ಕಥೆಗಳು ಸತ್ವದಲ್ಲಿ ಹಿರಿಮೆಯನ್ನು ಸಾಧಿಸಿವೆ. ಬರೆದ ಅಲ್ಪ ಸಂಖ್ಯೆಯ ಕಥೆಗಳಲ್ಲೇ ಒಂದು ಕಥೆ ಹೊಂದಿರಬಹುದಾದ ಒಳಹುಗಳನ್ನೆಲ್ಲಾ ಇವರ ಕಥೆಗಳು ಹಿಡಿದಿಡುವಲ್ಲಿ ಸಫಲವಾಗಿವೆ.

ಖಾಸನೀಸ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಗುರುತಿಸಿಕೊಂಡಿರುವುದು ತಮ್ಮ ಕಥೆಗಳ ಮೂಲಕವೇ ವಿನಃ ಇತರ ಯಾವುದೇ ಸಾಹಿತ್ಯ ಚಟುವಟಿಕೆಗಳಿಂದಲೂ ಅಲ್ಲ. ಒಬ್ಬ ಬರಹಗಾರ ತನ್ನ ಬರಹಕ್ಕೆ ಪೂರಕವಾಗಿ ಸಾಹಿತ್ಯದ ಹಲವು ಚಟುವಟಿಕೆಗಳಲ್ಲಿ ತನ್ನನ್ನು ತಾನು ನಿರಂತರವಾಗಿ

ತೊಡಗಿಸಿಕೊಂಡಿರುತ್ತಾನೆ. ಆದರೆ ಇಂತಹ ಮಾತುಗಳಿಗೆ ಖಾಸನೀಸ ಅಪವಾದದಂತಿದ್ದಾರೆ. ಖಾಸನೀಸ ಮಹಾಮೌನಿ, ತಮ್ಮ ಕಥೆಗಳ ಮೂಲಕ ಅಲ್ಲದೇ ಮತ್ತೊಂದು ರೀತಿಯಲ್ಲಿ ಪ್ರಕಟಗೊಳ್ಳಲಾರೆ ಎಂದು ಪಟ್ಟುಹಿಡಿದು ಕೂತವರು ಖಾಸನೀಸ.

ಅಲ್ಪ ಸಾಹಿತ್ಯದಿಂದಲೇ ಅಪಾರ ಪ್ರಸದ್ಧಿಯನ್ನು ಪಡೆಯುವ ಸಲುವಾಗಿ ಪ್ರಚಾರಕ್ಕಿಳಿಯುವ ಬರಹಗಾರರ ನಡುವೆ ಖಾಸನೀಸ ಕಂಡೂ ಕಾಣದಂತಿರುವುದು ಅವರ ವ್ಯಕ್ತಿವೈಶಿಷ್ಟದ ಪ್ರಧಾನಲಕ್ಷಣ, ತಮ್ಮ ಕಥೆಗಳಲ್ಲಿನ ಏಕಾಂಗಿತನವನ್ನು ತನ್ನ ಜೀವನದಲ್ಲೂ ಅನುಭವಿಸಿ ಬದುಕುವ ಏಕಾಂಗಿ ಖಾಸನೀಸ. ಲೇಖಕನಾದವನಿಗೆ ಪ್ರಸಿದ್ದಿಗಿಂತ ಸಿದ್ದಿ ಮುಖ್ಯ ಎಂಬ ತತ್ವದಲ್ಲಿ ನಂಬಿಕೆಯಿಟ್ಟಿದ್ದ ಖಾಸನೀಸ ತಮ್ಮ ಜೀವಿತದ ಅವಧಿಯಲ್ಲಿ ಯಾವ ಸಾಹಿತ್ಯ ಗೋಷ್ಠಿಯಲ್ಲಾಗಲೀ ಸಮ್ಮೇಳನಗಳಲ್ಲಾಗಲೀ ಪಾಲ್ಗೊಂಡವರಲ್ಲ, ಸಾಹಿತ್ಯ ಭಾಷಣಗಳನ್ನು ಮಾಡಿದವರಲ್ಲ, ಆದ್ದರಿಂದಲೇ ಖಾಸನೀಸರ ವೈಯಕ್ತಿಕ ಬದುಕಿನ ಬಗ್ಗೆ ತಿಳಿದಿರುವ ಓದುಗರ ಸಂಖ್ಯೆ ತೀರಾ ಕಡಿಮೆ.

ಖಾಸನೀಸರು ಸಾಹಿತ್ಯವನ್ನು ಬದುಕಾಗಿಸಿಕೊಂಡವರಲ್ಲ ಬದಲಾಗಿ ಬದುಕಿನ ಒಂದು ಭಾಗವಾಗಿ ಸಾಹಿತ್ಯವನ್ನು ಕಂಡವರು. ಅವರು ಬರಹಕ್ಕಾಗಿ ಬರೆದವರಲ್ಲ, ಬದುಕಿಗಾಗಿ ಬರಹವನ್ನು ಬಳಸಿಕೊಂಡವರು. ಆದ್ದರಿಂದಾಗಿಯೇ ಅವರ ಬರಹ ಅಲ್ಪವಾದರೂ ಒಬ್ಬ ಅನುಭವರಹಿತ ಬರಹಗಾರನ ಬರಹದಲ್ಲಿ ಕಂಡುಬರುವ ಸಾತ್ವಿಕ ಕೊರತೆ ಇವರ ಕಥೆಗಳಲ್ಲಿ ಕಂಡು ಬರುವುದೇ ಇಲ್ಲ. ಅಂತಹ ಸತ್ವಗುಣದಿಂದಾಗಿಯೇ ಕನ್ನಡದ ಶ್ರೇಷ್ಠ ಕಥೆಗಾರರ ಕಥೆಗಳ ಸಾಲಿನಲ್ಲಿ ಇವರ ಕಥೆಗಳು ಸರಿಸಾಟಿಯಾಗಿ ನಿಲ್ಲುತ್ತವೆ. ಅವರ ಕಥೆಗಳ ಸತ್ವಗುಣಕ್ಕೆ ಸರಿಯಾಗಿ ಹೊಂದುತ್ತದೆ ವಿಶ್ವೇಶ್ವರ ಭಟ್ ಅವರ ಈ ಮಾತು.

"ಸುಮಾರು ೨೫ ವರ್ಷಗಳ ಸುಧೀರ್ಘಕಾಲದಲ್ಲಿ ಅವರು ಬರೆದಿದ್ದು ೨೫ ಕಥೆಗಳನ್ನು ಎಂದರೆ ಅಚ್ಚರಿಯಾಗುವುದು ಸಹಜ, ಆದರೆ ನೆನಪಿರಲಿ ಕನ್ನಡದ ೫೦ ಶ್ರೇಷ್ಠಕಥೆಗಳನ್ನು ಆಯ್ಕೆ ಮಾಡಲು ಕೂತರೆ, ಆಗ ಖಾಸನೀಸರ ಹತ್ತು ಕಥೆಗಳನ್ನು ಆಯ್ಕೆ ಮಾಡಲೇಬೇಕಾಗುತ್ತದೆ.ಅದು ಖಾಸನೀಸರ ಕಥೆಗಳ ತಾಕತ್ತು."[೧]

---

೧. * ರಾಘವೇಂದ್ರ ಖಾಸನೀಸರ ಸಮಗ್ರಕಥೆಗಳು: ಮುನ್ನುಡಿ: ವಿಶ್ವೇಶ್ವರ ಭಟ್.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಖಾಸನೀಸರು ಒಬ್ಬ ಪ್ರತಿಭಾವಂತ ಲೇಖಕರೇ? ಎಂಬ ಪ್ರಶ್ನೆಗೆ ಉತ್ತರಸಿಗುತ್ತದಾದರೂ ಇಂಥ ಪ್ರತಿಭಾವಂತ ಲೇಖಕ ಹೆಚ್ಚು ಏಕೆ ಬರೆಯಲಿಲ್ಲ? ಎಂಬ ಪ್ರಶ್ನೆ, ಪ್ರಶ್ನೆಯಾಗಿಯೇ ಉಳಿಯುತ್ತದೆ. ಖಾಸನೀಸರು ಕೆಲವೇ ಕಥೆಗಳನ್ನು ಬರೆದರೂ ಕೂಡ ಸಣ್ಣಕಥೆಯ ಸಾಧ್ಯತೆಗಳನ್ನೆಲ್ಲಾ ಸೂರೆಗೊಂಡಿದ್ದಾರಲ್ಲದೇ ಅವುಗಳನ್ನು ಆಶ್ಚರ್ಯಕರವಾಗಿ ವಿಸ್ತರಿಸಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿಯೇ ಕನ್ನಡದ ಶ್ರೇಷ್ಠ ಕಥೆಗಾರರ ಹೆಸರುಗಳಲ್ಲಿ ಮರೆಯದೇ ಸೇರಿಸಬಹುದಾದ ಹೆಸರು ಖಾಸನೀಸರದು.

ಖಾಸನೀಸರಂತೆಯೇ ಅಲ್ಪಬರವಣಿಗೆಯಿಂದ ಪ್ರಖ್ಯಾತಿಯಾದ ದೇವನೂರು ಮಹಾದೇವ ಇವರ ಕಥಾನೈಪುಣ್ಯದ ಬಗ್ಗೆ ಹೀಗೆ ಹೇಳುತ್ತಾರೆ.

"ಒಂದು ಕಥೆ ಹಿಗ್ಗಲು ಎಷ್ಟೆಲ್ಲಾ ಸೂರೆ ಮಾಡಬಹುದೋ ಅಷ್ಟೆಲ್ಲಾ ಸೂರೆ ಮಾಡಿದ ಕಥೆ...ತಬ್ಬಲಿಗಳು ಎಂಬ ಕಥೆ. ಅಂತೆಯೇ ಆಕೃತಿಗಳನ್ನು ಕಟ್ಟುವಲ್ಲಿ ಚಿತ್ತಾಲರು ತೋರುವ ನಿಪುಣತೆ ಹಾಗೂ ಅನಂತ ಮೂರ್ತಿಯವರ ಕಥೆಗಳ ವೈಶಿಷ್ಟ್ಯವಾದ ಚಿಂತನಶೀಲತೆ ಇವೆರಡೂ ಖಾಸನೀಸರ ಕಥೆಗಳಲ್ಲಿ ಹುರಿಗೊಂಡಿವೆ" ಎಂದಿದ್ದಾರೆ. ಇಂತಹ ಮಾತುಗಳು ಖಾಸನೀಸರ ಕಥೆಗಳ ಮಹತ್ವಕ್ಕೆ ಸಾಕ್ಷಿಯಾಗಿವೆ.[೨] [ಸಾಕ್ಷಿ ೧೮ ಜನವರಿ ೧೯೭೭ :೧೦]

ಖಾಸನೀಸರ ಕಥೆಗಳ ಸಂಖ್ಯೆ ಅಲ್ಪವಾದರೂ ಅವರಿಗೆ ಅಪಾರ ಸಂಖ್ಯೆಯ ಓದುಗರಿದ್ದಾರೆ. ಆ ಓದುಗರ ಪ್ರೀತಿಯೇ ಖಾಸನೀಸರಿಗೆ ಬರೆಯುವುದಕ್ಕೆ ಪ್ರೇರಣೆ ಕೊಟ್ಟಿರಬೇಕು. ಒಬ್ಬ ಬರಹಗಾರನ ಬರಹಕ್ಕೆ ಮೊದಲು ಕಾರಣವಾಗುವುದು ಸ್ಫೂರ್ತಿ. ನಂತರದಲ್ಲಿ ಓದುಗರ ಪ್ರೀತಿ, ಅದಾದ ನಂತರ ಸಾಹಿತ್ಯಕ ಪ್ರಶಸ್ತಿ ಇವು ಮೂರೂ ಕಾರಣವಾಗಬಹುದು, ಆದರೆ ಮೂರನೆಯ ಮಾತಿಗೆ ಖಾಸನೀಸರ ಬರಹ ಹೊಂದಾಣಿಕೆಯಾಗುವುದಿಲ್ಲ. ಹಿಂದೆಯೇ ಹೇಳಿದಂತೆ ಇದಕ್ಕೆ ಸಾಕ್ಷಿ ಅವರ ಬರಹದ ಮಿತಿ. ಅವರ ಬರಹದ ಶಕ್ತಿಗೆ ಹೋಲಿಸಿದರೆ ಅವರ ಕಥೆಗಳಗೆ ಸಿಕ್ಕ ಮಾನ್ಯತೆ ಕಡಿಮೆಯೇ. ಇದನ್ನು ಮೀರಿದ ನೋವಿನ ಸಂಗತಿ ಎಂದರೆ, ಅವರ ಕಥೆಗಳ ಪಾತ್ರಗಳಂತೆಯೇ ಅವರ ಬದುಕೂ ಕೂಡ ಜೀವನದ ಅಪಾರ ನೋವುಗಳೊಡನೆ ನೊಂದು ಬೆಂದೆದ್ದ ಪಾತ್ರ.

ಖಾಸನೀಸರ 'ತಬ್ಬಲಿಗಳು' ಕಥೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಲಭಿಸಿದ್ದು ಅವರ ಕಥೆಗಳನ್ನು ಮೆಚ್ಚುವ, ಓದುಗವರ್ಗಕ್ಕೆ ಒಂದು ಚಿಕ್ಕ ಸಮಾಧಾನ, ಆದರೂ ಅವರ ಬರಹಕ್ಕೆ ತಕ್ಕ ಮಾನ್ಯತೆ ಲಭಿಸಿಲ್ಲವೆಂಬುದೂ ವಿಷಾದಕರ ಸಂಗತಿ.

---

೨. * ಕನ್ನಡ ಕಥನ ಸಾಹಿತ್ಯ : ಸಣ್ಣಕಥೆ : ಪುಟ–೩೧೯

ಅಧ್ಯಾಯ – ೩

ಖಾಸನೀಸರ ಕಥೆಗಳ ವಸ್ತು ಮತ್ತು ವೈಶಿಷ್ಟ್ಯತೆ

"ಸಣ್ಣಕಥೆಗಳ ಅತಿ ಕೆಟ್ಟಗುಣವೆಂದರೆ ಅವು ಸಣ್ಣದಾಗಿರುವುದು" ಇದು 'ಗ್ರೇಟ್ ಇಂಗ್ಲೀಷ್ ಶಾರ್ಟ್ ಸ್ಟೋರೀಸ್' ಗ್ರಂಥವನ್ನು ಸಂಪಾದಿಸಿದ ಕ್ರಿಸ್ಟಫರ್ ಇಶರ್‌ವುಡ್‌ನ ಹೇಳಿಕೆ. ಆದರೆ ಈ ಹೇಳಿಕೆ ರಾಘವೇಂದ್ರ ಖಾಸನೀಸರ ಕಥೆಗಳಿಗೆ ಹೊಂದಿಕೆಯಾಗಲಾರದು. ಏಕೆಂದರೆ ಸಣ್ಣಕಥೆಗೆ ಅನಿವಾರ್ಯವಾದ ಮಿತವ್ಯಯದಿಂದಾಗಿ ಪಾತ್ರಗಳ ಬೆಳವಣಿಗೆ ಕುಂಠಿತವಾಗುತ್ತದೆ ಹಾಗೂ ಆವರಣ ತೆಳುವಾಗುತ್ತದೆ ಎಂಬ ಮಾತು ಖಾಸನೀಸರ ಕಥೆಗಳಿಗೆ ಅಪವಾದದಂತಿವೆ. ಖಾಸನೀಸರ ಕಥೆಗಳು ಇಂತಹ ಅನಿವಾರ್ಯವಾದ ಹಲವು ಮಿತಿಗಳನ್ನು ಮೀರಿ ಬೆಳೆದಿವೆ. ಎಲ್ಲಿಯೂ ಘಟನೆಗಳನ್ನಾಗಲೀ, ಪಾತ್ರಗಳ ಬೆಳವಣಿಗೆಯನ್ನಾಗಲೀ, ಅಸಹಜವೆಂಬಂತೆ ಮೊಟಕುಗೊಳಿಸದಿರುವುದು ಅವರ ಕಥಾನಿರೂಪಣಾ ಸಾಮರ್ಥ್ಯವನ್ನು ಪ್ರಕಟಿಸುತ್ತದೆ.[೩]

ಖಾಸನೀಸರು 'ವಿಶಿಷ್ಟ ಕಥೆಗಾರ' ಎಂಬ ಮಾನ್ಯತೆಗೆ ಪಾತ್ರವಾಗಲು ಅವರ ಕಥೆಗಳಲ್ಲಿನ ಈ ಮುಖ್ಯಗುಣವೇ ಪ್ರಧಾನಕಾರಣವೆನ್ನಬಹುದು. ಖಾಸನೀಸರ ಒಂದೊಂದು ಕಥೆಯ ಓದೂ ಸಹ ಒಂದೊಂದು ಹೊಸ ಅನುಭವವನ್ನು ನೀಡುವಂತಿದ್ದು ಎಲ್ಲಿಯೂ ಏಕತಾನತೆ ಮನೆಮಾಡಿಲ್ಲ. ಕಥೆಯಿಂದ ಕಥೆಗೆ ಭಿನ್ನತೆಯನ್ನು ಕಾಪಾಡಿಕೊಂಡಿರುವ ಖಾಸನೀಸರ ಕಥೆಗಳು ವಸ್ತುವಿನಲ್ಲಿ, ನಿರೂಪಣೆಯಲ್ಲಿ, ಬಹುರೀತಿಯ ಸಾಧ್ಯತೆಗಳನ್ನು ಒಳಗೊಂಡಿವೆ. ಒಂದೊಂದು ಕಥೆಯಲ್ಲೂ ಖಾಸನೀಸರು ಒಂದೊಂದು ಪ್ರಯೋಗವನ್ನು ಮಾಡಿದ್ದಾರೆನ್ನಬಹುದು. ಅವರ ಕಥೆಗಳಲ್ಲಿನ ಅನುಭವದ ತೀವ್ರತೆ ಕಥೆಯ ಟೊಳ್ಳುತನಕ್ಕೆ ಎಂದೂ ಅವಕಾಶಮಾಡಿಕೊಟ್ಟಿಲ್ಲ. ಅವರ ಕಥೆಗಳು ಪ್ರೇಮ, ಸ್ನೇಹ, ಕುಟುಂಬ ಇಂತಹ ಮನುಷ್ಯ ಸಂಬಂಧಗಳನ್ನು ಗುರಿಯಾಗಿಟ್ಟುಕೊಂಡು ರಚಿತವಾಗಿವೆಯೆನ್ನಿಸಿದರೂ ಅವುಗಳ ನಿರೂಪಣೆಗಾಗಿ ಅವರು ಆಯ್ದುಕೊಳ್ಳುವ ಘಟನಾತಂತ್ರ ಅದ್ಭುತವಾದುದು. ಮನುಷ್ಯ ಸಂಬಂಧಗಳ ಜಾಲದಲ್ಲಿ ಸಿಲುಕಿಕೊಳ್ಳುವ ವ್ಯಕ್ತಿಯೊಬ್ಬ ತನ್ನನ್ನು ತಾನು ಕಂಡುಕೊಳ್ಳುತ್ತಲೇ ತನಗರಿವಿಲ್ಲ ದಂತೆಯೇ ಸಂಬಂಧಗಳಲ್ಲಿ ಸಿಲುಕಿರುತ್ತಾನೆ. ಅವನ ಬದುಕಿನ ಕೆಲವು ಹಂತಗಳಲ್ಲಿ ಸಂಬಂಧಗಳು, ಹಲವು ಹಂತಗಳಲ್ಲಿ ಅವನು ಅನುಭವಿಸುವ ಏಕಾಂಗಿತನ, ಮನುಷ್ಯ ಹುಟ್ಟುತ್ತಲೂ ಒಂಟಿ, ಸಾಯುವಾಗಲೂ ಒಂಟಿ ಎಂಬ ಜೀವನದ ಕಟುವಾಸ್ತವವನ್ನು, ಹುಟ್ಟು–ಸಾವುಗಳ ನಡುವಿನ

---

೩. * ಕನ್ನಡ ಕಥನ ಸಾಹಿತ್ಯಸಣ್ಣಕಥೆ : ಪುಟ–೨೧

ಜೀವಿತದ ಅವಧಿಯಲ್ಲಿಯೇ ಕಂಡುಕೊಳ್ಳುವ ಅನುಭವಗಳನ್ನು ಖಾಸನೀಸರ ಕಥೆಗಳು ಕಥೆಗೆ ತಕ್ಕಂತೆ, ಘಟನೆಗೆ ತಕ್ಕಂತೆ ನಿರ್ಮಿಸುತ್ತವೆ.

ಖಾಸನೀಸರು ಬರೆದಂಥ ಕಥೆಗಳನ್ನು ಮತ್ಯಾರೂ ಬರೆಯಲಿಲ್ಲ ಎನ್ನುವುದೇ ಅವರ ವೈಶಿಷ್ಟ್ಯ. ಕನ್ನಡದ ಕಥೆಗಾರರಲ್ಲೇ ವಿಶಿಷ್ಟನೆಲೆಯಲ್ಲಿ ನಿಲ್ಲುವ ಖಾಸನೀಸರ ಕಥೆಗಳ ವಸ್ತು ಉಳಿದ ಕಥೆಗಾರರ ವಸ್ತುಗಳಿಗಿಂತ ಭಿನ್ನ ಮತ್ತು ವಿಶೇಷವಾಗಿರುತ್ತವೆ. ಖಾಸನೀಸರ ಕಥೆಗಳ ವಸ್ತು ಪ್ರಮುಖವಾಗಿ ಆಧುನಿಕ ಜಗತ್ತು. ಮನುಷ್ಯನ ಒಂಟಿತನ, ಬದುಕಿನ ದುರಂತದ ಬಗ್ಗೆ ಗಾಢಚಿಂತನೆ, ಯಂತ್ರನಾಗರೀಕತೆ, ಸಾವಿನ ಸ್ವರೂಪ, ಬದುಕಿನಬಗೆಗಿನ ಪ್ರೀತಿ, ದೈವೀ ಅನುಭವ, ಕಾಲದೇಶ ಮೀರಿದ ಕಾಲಾತೀತವಾದ ಪ್ರೀತಿಯನೆಲೆಗಳು, ಮನುಷ್ಯ ಸಂಬಂಧಗಳ ಮೌಲ್ಯದ ಬಗೆಗಿನ ಕಾಳಜಿ ಮತ್ತು ಅವುಗಳ ಅಧಃಪತನ ಇವೆಲ್ಲಾ ಇವರ ಕಥೆಗಳಲ್ಲಿ ವಸ್ತುಗಳಾಗಿವೆ.

ಖಾಸನೀಸರ ಕಥೆಗಳ ಕೇಂದ್ರ ವ್ಯಕ್ತಿ ಮತ್ತು ಅವನ ಸುತ್ತಲ ಸಮಾಜದಲ್ಲಿನ ಸಂಬಂಧಗಳು ನವ್ಯಕಥೆಗಳ ಮುಖ್ಯ ವಸ್ತುಗಳು ಸಹಜವಾಗಿಯೇ ಖಾಸನೀಸರ ಕಥೆಗಳಲ್ಲಿ ಅಸ್ತಿತ್ವವನ್ನು ಪಡೆದಿವೆ. ಅವರ ಕಥೆಗಳಲ್ಲಿನ ಬದುಕು ಆಧುನಿಕವಾದದ್ದು. ನಗರಜೀವನವನ್ನೇ ಹೆಚ್ಚಾಗಿ ಕಾಣಬಹುದಾದ ಖಾಸನೀಸರ ಕಥೆಗಳಲ್ಲಿ ಅಲ್ಲಿನ ಒತ್ತಡದ ಬದುಕು, ಸಂಬಂಧಗಳು ಯಾಂತ್ರಿಕವಾಗಿ ಹೋಗುವ ಭಯ, ಈ ಸಂಬಂಧಗಳ ಯಾಂತ್ರಿಕತೆಯಿಂದಾಗಿ ಒಂಟಿಯಾಗುವ ಮನುಷ್ಯ, ಆ ಒಂಟಿತನ ಸಹಜವಾಗಿಯೇ ಇವರ ಕಥೆಗಳಲ್ಲಿ ಸ್ಥಾನಪಡೆದಿವೆ. ನವ್ಯತೆಯ ಕೇಂದ್ರ ಕಾಳಜಿಯಾದ ವ್ಯಕ್ತಿಯ ಅಂತರಂಗವೇ ಖಾಸನೀಸರ ಕಥೆಗಳ ಕೇಂದ್ರ.

ಖಾಸನೀಸರ ಕಥೆಗಳ ಪ್ರಧಾನ ವಸ್ತು ಮನುಷ್ಯನ ಬದುಕಿನ ಯಾಂತ್ರಿಕತೆ. ಅವರ ಕಥೆಗಳಲ್ಲಿ ನಗರಜೀವನ ಸಾಮಾನ್ಯವಾಗಿರುವುದರಿಂದ ನಗರಬದುಕಿನ ಒತ್ತಡಗಳು ಮನುಷ್ಯ ಮತ್ತು ಅವನೊಂದಿಗಿನ ಸಂಬಂಧಗಳನ್ನು ಯಾಂತ್ರಿಕಗೊಳಿಸುತ್ತವೆ. ಸಂಬಂಧಗಳ ಮೌಲ್ಯ ನಗರದಲ್ಲಿ ದಿನೇ-ದಿನೇ ಕುಸಿಯುತ್ತಿರುವುದಕ್ಕೆ ಅಲ್ಲಿನ ಯಾಂತ್ರಿಕಬದುಕೇ ಬಹಳ ಮುಖ್ಯ ಕಾರಣ, ಇದನ್ನು ಅವರ ಅಲ್ಲಾವುದ್ದೀನನ ಅದ್ಭುತ ದೀಪ ಕಥೆ ಸುಂದರವಾಗಿ ಚಿತ್ರಿಸುತ್ತದೆ. **"ಗೋಡೆಯ ಮೇಲಿನ ಚಿತ್ರದಲ್ಲಿ ತುಂಬಿಕೊಂಡಿರುವ ಸಂಸಾರ ವಾಸ್ತವದಲ್ಲಿ ಖಾಲಿ-ಖಾಲಿಯಾಗಿರುವುದು"** ಇಂದಿನ ಸಂಬಂಧಗಳ ವಿಘಟನೆಗೆ ಮುಖ್ಯಸಾಕ್ಷಿಯಂಬಂತೆ ಗೋಚರವಾಗುತ್ತದೆ, ಮನುಷ್ಯನ ಶಿಕ್ಷಣ, ಉದ್ಯೋಗ, ಹಣಗಳಿಕೆಯ ಬಗೆಗಿನ ವ್ಯಾಮೋಹ,

ಸಾಮಾಜಿಕ ಸ್ಥಾನಮಾನಗಳಿಗಾಗಿ ನಡೆಸುವ ಹೋರಾಟ ಇವೆಲ್ಲವುಗಳ ನಡುವೆ ಅವನ ಸಂಬಂಧಗಳ ಕೊಂಡಿ ಕಳಚುತ್ತಿದೆ. ಇವುಗಳೆಲ್ಲದರ ಪರಿಣಾಮವಾಗಿ ಒಂಟಿತನ ಅವನನ್ನು ಆವರಿಸಿ, ಅವನ ಅನಾಥಪ್ರಜ್ಞೆ, ಅವನನ್ನು ಕಾಡುವ ತಬ್ಬಲಿತನಗಳು ಕ್ರಮೇಣ ಅವನನ್ನು ಮಾನಸಿಕವಾಗಿ ಪ್ರಪಾತಕ್ಕೆ ತಳ್ಳಿಬಿಡುವ ಆತಂಕಗಳಿಗೆ ಕಾರಣವಾಗಬಲ್ಲುದು.

ಖಾಸನೀಸರ ಕಥೆಗಳಲ್ಲಿನ ಒಂದು ಸಾಮಾನ್ಯ ವಸ್ತು ಬದುಕಿನ ದುರಂತತೆ. ಇಲ್ಲಿನ ಯಾವ ಕತೆಯಾದರೂ ಬದುಕಿನ ದುರಂತದಿಂದ ಪಾರಾಗುವ ಪ್ರಯತ್ನದಲ್ಲಿ ಸೋಲುತ್ತವೆಯೇ ವಿನಃ ದುರಂತಕ್ಕಿಂತ ಮೊದಲು ಎಚ್ಚೆತ್ತುಕೊಳ್ಳುವ ಪರಿವೆಗೆ ಹೋಗುವುದೇ ಇಲ್ಲ. ಈ ಮಾತಿಗೆ ಅವರ ಅಪಘಾತ ಕಥೆಯೊಂದು ಅಪವಾದವೆನ್ನಬಹುದು. ಆದರೂ ಈ ಕಥೆಯಲ್ಲಿ ಬದುಕಿನ ದುರಂತದಿಂದ ರಾಮನಾಥನನ್ನು ಕಾಪಾಡಿದುದು ಅವನ ಬದುಕಿನ ಮತ್ತೊಂದು ದುರಂತವೇ ವಿನಃ ಮತ್ತಾವುದೂ ಅಲ್ಲ. ಆಗಾಗಿ ಅಪಘಾತ ಎಂಬ ಶೀರ್ಷಿಕೆಯೇ ರಾಮನಾಥನ ಬದುಕಿನ ದುರಂತವನ್ನು ಬಿಂಬಿಸುವಂತಿದೆ.

ಖಾಸನೀಸರ ವಿಶಿಷ್ಟವಸ್ತುವಿನ ಆಯ್ಕೆ ಅವರ ಕಥೆಗಳನ್ನು ಉಳಿದೆಲ್ಲಾ ಕಥೆಗಳಿಗಿಂತ ಭಿನ್ನಸ್ತರಕ್ಕೆ ತಂದುನಿಲ್ಲಿಸುತ್ತದೆ. ಕಾಲದೇಶಗಳನ್ನು ಮೀರಿದ ಕಾಲಾತೀತವಾದ ಪ್ರೀತಿಯ ನೆಲೆಗಳು ಇವರ ಕಥೆಗಳಲ್ಲಿ ಸ್ಥಾನಪಡೆದಿರುವುದೇ ಇದಕ್ಕೆ ಬಹುಮುಖ್ಯ ಕಾರಣ ಮೊನಾಲಿಸಾ ಕಥೆಯವಸ್ತು ನಮ್ಮ ಹಿಡೀ ಕಥಾ ಸಾಹಿತ್ಯಕ್ಕೆ ಹೋಲಿಸಿದರೆ ಒಂದು ವಿಭಿನ್ನ ಕಥಾವಸ್ತುವಾಗಿ ನಿಲ್ಲುತ್ತದೆ. ಪುನರ್ಜನ್ಮದಂತಹ ಅನುಭವಾತೀತ ಸತ್ಯವನ್ನು ವಸ್ತುವಾಗುಳ್ಳ ಮೊನಾಲಿಸಾ ಕಥೆಯ ವಸ್ತು ಪ್ಯಾರಿಸ್‌ನಲ್ಲಿ ನಡೆದ ಒಂದು ಕಳುವಿನ ಘಟನೆಯ ಸುತ್ತ ಹೆಣೆಯಲ್ಪಟ್ಟಿದೆ. ಜಗತ್ಪ್ರಸಿದ್ಧ ತೈಲಚಿತ್ರ ಮೊನಾಲಿಸಾದ ಕಳುವಿಗಾಗಿ ಪೆರ್ರೂಗಿ ಎಂಬ ಮುದುಕ ನೀಡುವ ಪ್ರೇಮಸಮರ್ಥನೆ ಕಥೆಯನ್ನು ಒಂದು ಅಸಾಧಾರಣವಾದ ಪ್ರೇಮವಸ್ತುವನ್ನಾಗಿ ಬದಲಾಯಿಸುತ್ತದೆ. ಇಂತಹ ಕಥೆಯೊಳಗಿನ ಕಥೆಯನ್ನು ಕೇಂದ್ರಕ್ಕೆ ತಂದು ಅದರಸುತ್ತ ರಚಿಸಿರುವ ನಿರೂಪಣೆಯ ಆವರಣವನ್ನು ಸುಂದರವಾಗಿ ಕಟ್ಟಿದ್ದಾರೆ ಖಾಸನೀಸ.

ಅವರ ಕಥೆಗಳಲ್ಲಿನ ಮತ್ತೊಂದು ಪ್ರಮುಖವಾದ ವಸ್ತು ನವ್ಯದ ಪ್ರಧಾನ ಲಕ್ಷಣವಾದ ಕಾಮಕೇಂದ್ರಿತ ಕಾಳಜಿಗಳು. ಕಾಮದ ವಿವಿಧ ಮುಖಗಳನ್ನು ಅದು ಸಂಭವಿಸುವ ವಿವಿಧ ಸಂಬಂಧಗಳನ್ನು ಖಾಸನೀಸರು ಕಥೆಯಿಂದ ಕಥೆಗೆ ಭಿನ್ನಗೊಳಿಸಿದ್ದಾರೆ. ವಸ್ತು ಒಂದೇ ಆದರೂ ಅದನ್ನು ಕಾಣಿಸಿರುವ ವಿವಿಧ ನೆಲೆಗಳು ಖಾಸನೀಸರ ವಸ್ತುವೈವಿಧ್ಯತೆಯ ಪ್ರಧಾನ

ಲಕ್ಷಣ. ಅವರ ಮುಂಬೈ ಮತ್ತು ಪುಣೆಯಂತಹ ನಗರಜೀವನದ ಅನುಭವಗಳು ಕೂಡ ಖಾಸನೀಸರ ಕಥೆಗಳಲ್ಲಿ ಸಹಜವಾಗಿಯೇ ಮಾಡಿ ಬಂದಿವೆ. ತನ್ನ ಸುತ್ತಲ ಕಣ್ಣಮುಂದಿನ ಅನುಭವಗಳನ್ನು ಕಥೆ ಯಾಗಿಸುವ ಬುದ್ಧಿವಂತ ಕಲೆಗಾರಿಕೆ ಖಾಸನೀಸರಿಗೆ ಒಲಿದಿದೆ ಎನ್ನಬಹುದು. ಅವರ ಯಾವ ಕಥೆಗಳೂ–ಕೂಡ ಅನುಭವದ ಸರಳತೆಯನ್ನು ವ್ಯಕ್ತಪಡಿಸುವುದಿಲ್ಲ, ಬದಲಾಗಿ ಅನುಭವದ ಆಳವನ್ನು ಅವರ ಪ್ರತಿಯೊಂದು ಕಥೆಗಳ ಎಲ್ಲಾ ಪಾತ್ರಗಳಲ್ಲೂ ಕಾಣಬಹುದು, ಆ ನಿಟ್ಟಿನಲ್ಲಿ ಖಾಸನೀಸರನ್ನು ಅನುಭವೀ ಕಥೆಗಾರ ಎನ್ನಬಹುದು. ಆದ್ದರಿಂದಾಗಿಯೇ ಇವರ ಬರಹದ ಮಿತಿ ಇವರ ಕಥೆಗಳಲ್ಲಿ ಎಲ್ಲಿಯೂ ತೊಡಕನ್ನು ಉಂಟುಮಾಡಲೇ ಇಲ್ಲ. ಆಗಾಗಿ ನೂರಾರು ಕಥೆಗಳನ್ನು ಬರೆಯುವ ಕಥೆಗಾರರ ಕಥೆಗಳ ನಡುವೆ ಸರಿಸಾಟಿಯಾಗಿ ನಿಲ್ಲಬಲ್ಲಂತಹ ಸ್ಥೈರ್ಯ ಇವರ ಕಥೆಗಳಿಗಿದೆ,

ಮೇಲಿನ ಮಾತುಗಳು ಖಾಸನೀಸರ ಕಥೆಗಳ ವಸ್ತುವಿಗೆ ಸಂಬಂಧಿಸಿದಂತಹ ಮಾತುಗಳಾದರೂ ಆ ವಸ್ತುವಿನ ಆಯ್ಕೆಯಲ್ಲಿನ ವೈಶಿಷ್ಟ್ಯತೆಯನ್ನೂ ಒಳಗೊಂಡಿದೆ. ಏಕೆಂದರೆ ಒಬ್ಬ ಕಥೆಗಾರನನ್ನು ವಿಶಿಷ್ಟ ಕಥೆಗಾರ ಎನ್ನಬೇಕಾದರೆ ಏಕಮಾದರಿಯಿಂದ ಅವನ ಕಥೆಗಳನ್ನು ನೋಡಲು ಬರುವುದಿಲ್ಲ. ಅವನ ಕಥೆಗಳ ವಸ್ತು, ನಿರೂಪಣಾ ಶೈಲಿ, ಭಾಷೆ, ನಿರೂಪಣಾ ತಂತ್ರ, ಕಥೆಗಳ ಆಶಯ ಹೀಗೆ ಹತ್ತು–ಹಲವು ವಿಚಾರಗಳನ್ನು ಅವಲೋಕಿಸಬೇಕಾಗುತ್ತದೆ. ಇಂತಹ ಹತ್ತು–ಹಲವು ವಿಚಾರಗಳಲ್ಲೂ ಗಟ್ಟಿತನವನ್ನು ಉಳಿಸಿಕೊಂಡ ಕಥೆ–ವಿಶಿಷ್ಟ ಕಥೆ ಎನಿಸಿಕೊಳ್ಳುತ್ತದೆ. ಅಂತಹ ವಿಶಿಷ್ಟಕಥೆಗಳ ಸಾಲಿಗೆ ಸೇರುವಂತಹ ಖಾಸನೀಸರ ಕಥೆಗಳು ಮೇಲಿನ ಎಲ್ಲಾ ವಿಚಾರಗಳಲ್ಲೂ ಗಟ್ಟಿಯಾಗಿವೆ. ಜೊತೆಗೆ ಖಾಸನೀಸರು ವೈಯಕ್ತಿಕವಾಗಿಯೂ, ಕಥೆಗಾರರಾಗಿಯೂ, ವಿಶಿಷ್ಟತೆಯನ್ನು ಸಾಧಿಸಿದ ವ್ಯಕ್ತಿ ಎನ್ನಬಹುದು.

ಅಧ್ಯಾಯ – ೪

ಖಾಸನೀಸರ ಕಥೆಗಳಲ್ಲಿ ನವ್ಯತೆ

ಕನ್ನಡ ಸಾಹಿತ್ಯದಲ್ಲಿ 'ನವ್ಯಸಾಹಿತ್ಯ' ಎಂಬುದು ಪ್ರಮುಖ ಸಾಹಿತ್ಯ ಸಂಪ್ರದಾಯವಾಗಿ ಬೆಳೆದುನಿಂತಿದೆ. ನವ್ಯಸಾಹಿತ್ಯದ ಹುಟ್ಟು ಮೊದಲಿಗೆ ೧೯೧೭ ರಿಂದಲೇ ಇಂಗ್ಲೀಷ್ ಸಾಹಿತ್ಯದಲ್ಲಿ ಶುರುವಾದರೂ ಅದರ ಪರಿಣಾಮ ಭಾರತೀಯ ಸಾಹಿತ್ಯದ ಮೇಲೆ ಉಂಟಾಗಲು ಸುಮಾರು ೩೦ ವರ್ಷಗಳೇ ಹಿಡಿದವು. ಇದಕ್ಕೆ ಪ್ರಮುಖವಾದ ಕಾರಣ, ಇಂಗ್ಲೀಷ್ ಸಾಹಿತ್ಯದಲ್ಲಿನ ನವ್ಯತೆಗೆ ಕಾರಣವಾದ ವಿಶಿಷ್ಟಮನೋಧರ್ಮ, ವಿಶಿಷ್ಟ ಪ್ರಜ್ಞೆ–ಸಂವೇದನೆಗಳು ಭಾರತದಲ್ಲಿ ರೂಪುಗೊಂಡದ್ದು ಸ್ವಾತಂತ್ರ್ಯಾನಂತರದಲ್ಲಿ. ಅಂತೆಯೇ ಕನ್ನಡ ಸಾಹಿತ್ಯದಲ್ಲೂ ನವ್ಯತೆ ಬಂದದ್ದು ಹೊಸ ಮನೋಧರ್ಮದ ಫಲವಾಗಿ, ಹೊಸಪ್ರಜ್ಞೆಯ ಫಲವಾಗಿ.

ಇಲ್ಲಿ ಸಾಹಿತ್ಯ ಎಂಬುದನ್ನು ಸಮಗ್ರವಾಗಿ ಅರ್ಥೈಸಲಾಗಿದೆ. ಕಾವ್ಯ, ಕಥೆ, ಕಾದಂಬರಿ, ನಾಟಕ ಹೀಗೆ ಹಲವು ಪ್ರಕಾರಗಳನ್ನು ಕ್ರೋಢೀಕರಿಸಲಾಗಿದೆ. ಕನ್ನಡ ಕಥಾ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನವ್ಯತೆಯನ್ನು ಪ್ರತಿಪಾದಿಸುವುದಾದರೆ ಮೇಲೆ ಚರ್ಚಿಸಿದ ಅನ್ಯಸಾಹಿತ್ಯ ಪ್ರಭಾವದಿಂದ ರೂಪುತಳೆದ ಹಲವು ತಾತ್ವಿಕತೆಗಳು ನವ್ಯಕಥಾ ಸಾಹಿತ್ಯದ ಸೃಷ್ಟಿಗೆ ಕಾರಣವಾದವು ಎಂದು ಹೇಳಬಹುದು. ಅಂತಹ ಕೆಲವು ಮುಖ್ಯ ತತ್ವಗಳೆಂದರೆ ಅಸ್ತಿತ್ವವಾದ, ಮಾರ್ಕ್ಸವಾದ ಮತ್ತು ಸಮಾಜವಾದ ಜೊತೆಗೆ ಮನೋವಿಕಾಸ, ಎಂ.ಎನ್.ರಾಯ್, ಕಾಮು, ಕಾಫ್ಕಾ, ಲಾರೆನ್ಸ್. ಲೋಹಿಯಾ ಮುಂತಾದವರಸಿದ್ಧಾಂತಗಳು ಕನ್ನಡ ನವ್ಯಕಥಾಸಾಹಿತ್ಯಕ್ಕೆ ಹೊಸ ಪ್ರೇರೆಣೆ ಪ್ರಭಾವವನ್ನು ನೀಡಿ ಅದರ ನವ್ಯತೆ ಹಾಗೂ ವೈವಿಧ್ಯತೆಗೆ ಕಾರಣವಾಗಿವೆ.

ಮೇಲಿನ ಮಾತುಗಳು ನವ್ಯಸಾಹಿತ್ಯವನ್ನು ಅನ್ಯದೇಶೀಯ ಮತ್ತು ಅನ್ಯಸಾಹಿತ್ಯದ ಫಲ ಎಂದು ನಿಶ್ಚಯಿಸುವ ಸಾಧ್ಯತೆಯ ಮಧ್ಯೆಯೂ ನವ್ಯಸಾಹಿತ್ಯಕ್ಕೆ ದೇಶೀಯ ಮತ್ತು ಸ್ವದೇಶಿ ಸಾಹಿತ್ಯದ ಪ್ರಭಾವವೂ ಇದೆ ಎಂಬುದನ್ನು ನಿಸ್ಸಂಶಯವಾಗಿ ಹೇಳಬಹುದು. ಏಕೆಂದರೆ ಲೇಖಕ ಅನ್ಯಸಾಹಿತ್ಯದ ಪ್ರಭಾವವನ್ನು ಸ್ವೀಕರಿಸುವುದು ತಾನು ನಿಂತ ನೆಲದ ಹಿನ್ನಲೆಯಲ್ಲಿಯೇ. ಅಂದರೆ ಅನ್ಯದ್ದನ್ನು ಯತಾವತ್ತಾಗಿ ಸ್ವೀಕರಿಸುವುದು ಭಾಷಾಂತರವಾಗಬಲ್ಲುದೇ ವಿನಃ ಸೃಜನಶೀಲಸಾಹಿತ್ಯವಾಗಲಾರದು. ಅಂದಮೇಲೆ ನಮ್ಮ ನವ್ಯ ಕಥಾ ಸಾಹಿತ್ಯಕ್ಕೆ ನಮ್ಮ ನೆಲದ ಸ್ವಂತಿಕೆಯ ಅರಿವೂ ತೀಕ್ಷ್ಣವಾಗಿಯೇ ಪ್ರಭಾವಬೀರಿದೆ ಎಂದು ಹೇಳಬಹುದು, ಪ್ರಾಚೀನ

ಸಂಸ್ಕೃತಿ, ಸಾಹಿತ್ಯ, ಜೊತೆಗೆ ತಂತಮ್ಮ ಪರಿಸರ ನೀಡಿರುವ ಪ್ರೇರಣೆಗಳೂ ಅವರ ಸಾಹಿತ್ಯಸೃಜನಶೀಲತೆಗೆ ವಸ್ತುವಾಗುತ್ತವೆ. ಉದಾ:- ದೇವನೂರರ ಕಥೆಗಳಲ್ಲಿನ ಜನಪದರ ಬದುಕು ಅವರ ಸುತ್ತಲಿನ ಪರಿಸರದ ಪ್ರಭಾವವೇ.

ಅದೇರೀತಿ ಖಾಸನೀಸರ ಕಥೆಗಳಲ್ಲಿನ ನಗರ ಜೀವನ, ಅಲ್ಲಿನ ಬದುಕಿನ ಚಿತ್ರಣಕೂಡ ಅವರ ಮುಂಬೈ ಮತ್ತು ಪುಣೆಯ ಬದುಕಿನ ಅನುಭವದ ಪ್ರಭಾವವೇ.ವ್ಯಕ್ತಿಯೊಬ್ಬ ಯಾವುದನ್ನಾಗಲೀ ಸ್ವೀಕರಿಸುವಾಗ ತನ್ನ ನೆಲೆಯ ಹಿನ್ನಲೆ ಇದ್ದೇ ಇರುತ್ತದೆ ಎಂಬುದನ್ನು ಮೇಲಿನ ಮಾತುಗಳು ಸ್ಪಷ್ಟಪಡಿಸುತ್ತವೆ. ಹೀಗೆ ನವ್ಯಕಥಾಸಾಹಿತ್ಯಕ್ಕೆ ವಿವಿಧ ಬಗೆಯ ಪ್ರಭಾವ ಪ್ರೇರಣೆಗಳು ಹೊಸ ಆಯಾಮವನ್ನು ನೀಡುತ್ತಲೇ ಏಕಕಾಲಕ್ಕೆ ಅವು ಲೇಖಕರ ಭಾವಪ್ರಪಂಚಕ್ಕೆ ಬೌದ್ಧಿಕವಿಕಾಸಕ್ಕೆ. ವೈಚಾರಿಕ ಚಿಂತನೆಗಳಿಗೆ ಮುಖ್ಯ ಆಕೃತಿಗಳಾಗಿ ಪರಿಣಮಿಸುತ್ತವೆ. ಇಲ್ಲಿ ಅನ್ಯಪ್ರಭಾವಗಳು ಲೇಖಕನ ಸ್ವಂತಿಕೆಯ ಶೋಧಕ್ಕೆ ನೆರವಾಗಬಲ್ಲ ಬೆಳಕಿನಂತೆ ಸಹಾಯಕವಾಗಿದೆ ಎನ್ನಬಹುದು.

ಈ ಎಲ್ಲಾ ಪ್ರಭಾವಗಳನ್ನು ಮೈಗೂಡಿಸಿಕೊಂಡಿರುವ ಕನ್ನಡದ ನವ್ಯ ಕಥಾ ಸಾಹಿತ್ಯ ವಿಶಿಷ್ಟವಾದ ಮತ್ತು ಮಹತ್ವವಾದ ಕಥೆಗಳ ನಿರ್ಮಾಣಕ್ಕೆ ಕಾರಣವಾಗಿದೆ. ಅಂತಹ ಮಹತ್ವದ ಕಥೆಗಳನ್ನು ಕೊಟ್ಟವರ ಸಾಲಿನಲ್ಲಿ ಖಾಸನೀಸರೂ ಪ್ರಮುಖ ಕಥೆಗಾರ. ಮತ್ತು ನವ್ಯ ಕಥೆಗಾರರು ಎಂಬ ವಿಶಿಷ್ಟಲೇಖಕರಲ್ಲಿ ಮತ್ತಷ್ಟು ವಿಶಿಷ್ಟ ಲೇಖಕ ಖಾಸನೀಸ. ನವ್ಯ ಸಾಹಿತ್ಯವೆಂದು ಕರೆಯಲು ಇರಬಹುದಾದ ಎಲ್ಲಾ ಲಕ್ಷಣಗಳೂ ಖಾಸನೀಸರ ಕಥೆಗಳಲ್ಲಿ ನಿರೂಪಿತವಾಗಿವೆ ಎಂದು ನಿಸ್ಸಂಶಯವಾಗಿ ಹೇಳಬಹುದು.

ಖಾಸನೀಸರ ಕಥೆಗಳ ಕೇಂದ್ರ ಮನುಷ್ಯ. ಮನುಷ್ಯನ ಬದುಕಿನ ಪ್ರತಿಯೊಂದು ಘಟನೆಯೇ ಖಾಸನೀಸರ ಕಥೆಗಳಲ್ಲಿ ವಸ್ತುವಾಗಿವೆ, ಜೊತೆಗೆ ನವ್ಯದ ಪ್ರಧಾನ ಪರಿಕಲ್ಪನೆಯಾದ ಮನುಷ್ಯನ ಅಂತರಂಗದ ಅಭಿವ್ಯಕ್ತಿ ಖಾಸನೀಸರ ಕಥೆಗಳನ್ನು ನವ್ಯಕ್ಕೆ ಸೇರಿಸುತ್ತದೆ. ಅವನ ಸುತ್ತಲ ಪರಿಸರ ಮತ್ತು ಅಂತರಂಗದ ಅಕಾಂಕ್ಷೆಗಳ ನಡುವಣ ಬಿರುಕು, ವ್ಯಕ್ತಿಯ ಅಂತರಂಗದ ದ್ವಂದ್ವಗಳು, ತುಂಬಿದ ಜನಸಮುದಾಯದ ನಡುವೆಯೂ ತಾನು ಏಕಾಕಿ, ತಾನಿಲ್ಲಿ ಪರಕೀಯ ಎಂಬ ಅನಾಥಪ್ರಜ್ಞೆ, ಕುಟುಂಬದೊಳಗಿದ್ದೂ ಅವನನ್ನು ಕಾಡುವ ತಬ್ಬಲಿತನ, ಸಂಸ್ಕೃತಿಯ ಒತ್ತಡ ಹಾಗೂ ಕಾಮದ ನಡುವಿನ ಒಳತೋಟಿಗಳು 'ಬೆಸೆಯುವ ದೇಹಗಳೂ ಅನುಭವಿಸುವ ಅಗಾಧ ಅತೃಪ್ತಿ, ಬೆಸೆಯಲಾಗದ ಮನಸ್ಸುಗಳು ಇಂತಹ ಅವರ ಕಥೆಗಳಲ್ಲಿನ ಲಕ್ಷಣಗಳು

ಖಾಸನೀಸರನ್ನು ನವ್ಯಕಥೆಗಾರರ ಸಾಲಿಗೆ ತಂದುನಿಲ್ಲಿಸುತ್ತವೆ. ಜೊತೆಗೆ ಇದಕ್ಕೆ ಪೂರಕವಾಗಿಯೇ ಖಾಸನೀಸರ ಕಥೆಗಳ ಭಾಷೆ ಸಂಕೀರ್ಣವೂ, ಸಂಕೇತಪ್ರಧಾನವೂ, ಪ್ರತಿಮಾನಿಷ್ಠವೂ ಆಗಿರುವುದು ಭಾಷೆ ಮತ್ತು ತಂತ್ರಕ್ಕೆ ಸಂಬಂಧಿಸಿದಂತೆಯೂ ಇವರ ಕಥೆಗಳಲ್ಲಿ ನವ್ಯತೆಯ ಎಲ್ಲಾ ಲಕ್ಷಣಗಳು ಇವೆ ಎಂಬುದನ್ನು ಪ್ರತಿಪಾದಿಸುತ್ತದೆ.

ನವೋದಯಕ್ಕೂ ಮತ್ತು ನವ್ಯಕ್ಕೂ ಇರುವ ಪ್ರಧಾನ–ಅಂತರ ಮನುಷ್ಯ ಮತ್ತು ಅವನಸುತ್ತಲಿನ ಪರಿಸರಕ್ಕೆ ಅಥವಾ ಸಮಾಜಕ್ಕೆ ಸಂಬಂಧಿಸಿದ್ದು. ನವೋದಯದಲ್ಲಿ ಸಮಾಜದ ಸದಸ್ಯ ಮನುಷ್ಯನಾದರೆ ನವ್ಯದಲ್ಲಿ ಆತನೇ ಕೇಂದ್ರ. ಇಂತಹ ವ್ಯಕ್ತಿ ಕೇಂದ್ರಿತವಾದ ಅಭಿವ್ಯಕ್ತಿಯೇ ನವ್ಯಸಾಹಿತ್ಯದ ಪ್ರಧಾನ ಕಾಳಜಿ. ಖಾಸನೀಸರ ಕಥೆಗಳೂ ಇಂತಹ ವ್ಯಕ್ತಿ ಕೇಂದ್ರಿತವಾದ ನಿಲುವನ್ನೇ ಅಭಿವ್ಯಕ್ತಿಸುತ್ತವೆ ಎನ್ನಬಹುದು. ವ್ಯಕ್ತಿಯ ಅಂತರಂಗದ ಅಭಿವ್ಯಕ್ತಿ ಖಾಸನೀಸರ ಕಥೆಗಳಲ್ಲಿ ಕನಸಿನ ಮುಖಾಂತರವೋ ಅಥವಾ ನೆನಪಿನ ಮುಖಾಂತರವೋ ಅಭಿವ್ಯಕ್ತಗೊಳ್ಳುತ್ತದೆ. ಇದಕ್ಕೆ ಸ್ಪಷ್ಟ ಉದಾಹರಣೆ ಮಂದಿಯ ಪಾತ್ರ. [ಮಂದಿಯರಹಸ್ಯ] ಕಥೆಯ ಶೀರ್ಷಿಕೆಯಲ್ಲೇ ಮಂದಿಯ ಗುಪ್ತ ಅಂತರಂಗದ ಅನಾವರಣವಾಗುತ್ತದೆ. ಪುರುಷನ ಬಗೆಗಿನ ವಯಸ್ಸಿಗೆ ಸಹಜವಾದ ಕಾಮನೆಗಳು, ಸ್ಪರ್ಶಸುಖಕ್ಕಾಗಿ ಹಾತೊರೆಯುವ ದೇಹದ ಹಂಬಲ, ಪ್ರೀತಿ–ಪ್ರೇಮಕ್ಕಾಗಿ ಹಾತೊರೆಯುವ ಮನಸ್ಸು ಇವೆಲ್ಲವೂ ಅವಳನ್ನು ಕನಸಿನಲೋಕಕ್ಕೆ ಕರೆದೊಯ್ಯುತ್ತವೆ ರಖಮಾ ಮತ್ತು ಸಖಾರಾಮರ ದಾಂಪತ್ಯ ಇವಳಲ್ಲಿ ಹೊಸ ಆಸೆಯನ್ನು ಚಿಗುರಿಸುತ್ತದೆ.

"ರಖಮಾನಿಗೆ ಎಷ್ಟು ಬೇಗ ಗಂಡ ಸಿಕ್ಕದ್ದಾನೆ? ತನ್ನಂತೆ ಅವಳಿಗೂ ಹದಿನೈದು ವರ್ಷ" ಎಂಬ ಒಂದು ಸಾಲು ಅವಳ ಹಿಡೀ ಬಯಕೆಗಳ ಸಾಕಾರರೂಪದಂತಿದೆ. ಮಂದಿಯ ಅಂತರಂಗದ ಆಕಾಂಕ್ಷೆಗಳು ಕನಸಿನಲ್ಲಿ, ನೆನಪಿನಲ್ಲಿ ಮಾತ್ರ ಜೀವಪಡೆಯುತ್ತವೆ. ವಾಸುವನ್ನು ಅತಿಯಾಗಿ ಪ್ರೀತಿಸುವ ಅವಳು ಕೊನೆಯವರೆಗೂ ಅದನ್ನು ರಹಸ್ಯವಾಗಿಯೇ ಉಳಿಸುತ್ತಾಳೆ. ವಾಸುವಿನ ಸನಿಹಕ್ಕಾಗಿ ಹಾತೊರೆಯುವ ಅವಳ ಮನಸ್ಸು ಸಮಾಜದ ನಿಯಮಕ್ಕೋ, ತಂದೆ ತಾಯಿಗಳ ಭಯಕ್ಕೊ, ಸಂಪ್ರದಾಯಕೋ ಮಣಿದು ಮೌನತಾಳುತ್ತದೆ. ಆದರೆ ಅಂತರಂಗದ ಕನಸಿನಲ್ಲಿ ಮಾತ್ರ ಅವಳ ಆಸೆಗಳಿಗೆ ರೆಕ್ಕೆಮೂಡುತ್ತವೆ ಕನಸಿನಬಾಂದಳದಲ್ಲಿ ಸ್ವೇಚ್ಛೆಯಾಗಿ ಹಾರಾಡುವ ಮನಸ್ಸು ಬಾಹ್ಯ ಜಗತ್ತಿಗೆ ಕಾಣುವುದೇ ಇಲ್ಲ. ವ್ಯಕ್ತಿಯ ಅಂತರಂಗದ ತುಮುಲಗಳಿಗೆ ಮಂದಿಯ ಪಾತ್ರ ಜೀವತುಂಬಿದಂತಿದೆ.

ತನ್ನ ಅಂತರಂಗದ ಅಕಾಂಕ್ಷೆ ಮತ್ತು ಸುತ್ತಲ ಪರಿಸರದ ನಡುವಿನ ಬಿರುಕುಗಳು ಅವಳ ಅಂತರಂಗವನ್ನು ಮತ್ತ-ಮತ್ತೆ ಬಚ್ಚಿಡಲು ಪ್ರೇರೇಪಿಸುತ್ತವೆ. ದೈಹಿಕ ಸುಖಕ್ಕಾಗಿ ಹಾತೊರೆಯುವ ಅವಳ ದೇಹದ ಹಂಬಲ ಹಂಬಲವಾಗಿಯೇ ಉಳಿಯುವಲ್ಲಿ ಸಂಪ್ರದಾಯದ ನೀತಿ-ನಿಯಮಗಳು ಪ್ರಧಾನ ಪಾತ್ರವಹಿಸುತ್ತವೆ. ವ್ಯಕ್ತಿಯೊಬ್ಬನ ಅಂತರಂಗ ಹಲವು ಅಡೆತಡೆಗಳೊಂದಿಗೆ ಅಡಗಿಕೊಳ್ಳವಂತಹ ಸ್ಥಿತಿಯನ್ನು ತಲುಪುತ್ತದೆ ಮತ್ತು ಅದರ ಅಭಿವ್ಯಕ್ತಿಯಿಂದ ಉಂಟಾಗಬಹುದಾದ ಪರಿಣಾಮಕ್ಕಾಗಿ ಹೆದರುವ ವ್ಯಕ್ತಿಯ ಮನಸ್ಸು ಇಂತಹ ಗುಪ್ತತೆಯಲ್ಲಿಯೇ ಬದುಕುತ್ತದೆ ಎಂಬುದನ್ನು ಮಂದಿಯ ಪಾತ್ರದ ಅಂತರಂಗದ ತುಮುಲಗಳು ಸ್ಪಷ್ಟಪಡಿಸುತ್ತವೆ. ವ್ಯಕ್ತಿಯೊಬ್ಬ ಅಂತರಂಗ ಮತ್ತು ಬಹಿರಂಗ ಎಂಬ ಎರಡುಮೊಗವಾಡಗಳೊಂದಿಗೆ ಬದುಕುತ್ತಾನೆ. ಅಂತಹ ಅಂತರಂಗದ ಮೊಗವಾಡವನ್ನು ಮಂದಿಯ ರಹಸ್ಯ ಕಥೆ ಪ್ರತಿಬಿಂಬಿಸುತ್ತದೆ. ಖಾಸನೀಸರ ಎಲ್ಲಾ ಕಥೆಗಳಲ್ಲೂ ವ್ಯಕ್ತಿಯ ಅಂತರಂಗದ ಚಿತ್ರಣ ವಸ್ತುವಾಗಿದೆ.

ವ್ಯಕ್ತಿ ತಾನು ಬದುಕುತ್ತಿರುವ ಪರಿಸರ, ಸಮಾಜ ಮತ್ತು ತನ್ನ ಅಂತರಂಗದ ಆಕಾಂಕ್ಷೆಗಳ ನಡುವಿನಲ್ಲಿ ಅನೇಕ ದ್ವಂದ್ವಗಳನ್ನು ಎದುರಿಸಬೇಕಾಗುತ್ತದೆ. ತನ್ನ ಒಳಗಿನ ಆಸೆಗಳು ಪರಿಸರದ ನಿಯಮಕ್ಕೆ ವಿರುದ್ದವಾಗಿರಬಹುದು ಅಥವಾ ಸಮಾಜದ ನೈತಿಕತೆಯನ್ನು ಮೀರಿದ್ದಾಗಿರಬಹುದು ಆಗ ಅಲ್ಲಿ ಸಾಮಾನ್ಯವಾಗಿ ಇವೆರಡರ ನಡುವೆ ಬಿರುಕು ಉಂಟಾಗುತ್ತದೆ. ಪರಿಣಾಮವಾಗಿ ವ್ಯಕ್ತಿ ಮಾನಸಿಕದ್ವಂದ್ವಗಳಿಗೆ ಒಳಗಾಗುವನು. ಖಾಸನೀಸರ ಕಥೆಗಳಲ್ಲಿನ ಪಾತ್ರಗಳು ಇಂತಹ ಮಾನಸಿಕ ದ್ವಂದ್ವಗಳಿಗೆ ಸಹಜವಾಗಿಯೇ ಒಳಗಾಗುತ್ತವೆ. ಅಂತಹಪಾತ್ರಗಳಲ್ಲಿ ಒಂದು ಪುರುಷನಮುಂದೆ ಮಾಯೆ! ಕಥೆಯಲ್ಲಿನ ರಾಮಭಾವುವಿನ ಪಾತ್ರ. ತನ್ನ ಬದುಕಿನಲ್ಲಿ ಮಾಯೆಯಂತೆ ಬಂದ ಹೆಣ್ಣು [ಜ್ಯುಬೇದಾ] ನೀಡಿದ ದೈಹಿಕ ಸುಖ ಮತ್ತು ಮತ್ತಷ್ಟು ಆಗಾಧವಾದ ಲೈಂಗಿಕ ಅತೃಪ್ತಿ ಜೊತೆಗೆ ತನಗೂ ಮತ್ತು ಅವಳಿಗೂ ಇರಬಹುದಾದ ಸಂಬಂಧದ ಸ್ವರೂಪವಾದರೂ ಯಾವುದು? ಎಂಬ ಪ್ರಶ್ನೆ ಅವನಲ್ಲಿ ಮಾನಸಿಕ ಗೊಂದಲವಾಗಿ ಬೆಳೆಯುತ್ತದೆ.

ಸ್ನೇಹವೂ ಅಲ್ಲದ, ಪ್ರೀತಿಯೂ ಅಲ್ಲದ, ದಾಂಪತ್ಯವೂ ಅಲ್ಲದ ಹೆಣ್ಣು ಗಂಡಿನ ನಡುವಣ ಇಂತಹ ಸಂಬಂಧಕ್ಕೆ ಪ್ರಬಲವಾದ ಕಾರಣವಾದರೂ ಏನು? ದೈಹಿಕ ಸುಖವೇ, ತೃಪ್ತಿಯೇ ಕಾರಣವಾದರೆ, ಆ ಸುಖ ಮತ್ತಷ್ಟು ಅತೃಪ್ತಿಯೆಡೆಗೆ ಕೊಂಡೊಯ್ದದ್ದು ಏಕೆ? ದೇಹಗಳ ಸ್ಪರ್ಶ ಯಾಂತ್ರಿಕವಾಗಿ ಮಾರ್ಪಟ್ಟಿದ್ದರ ಕಾರಣವಾದರೂ ಏನು? ಅವಳ ಮತ್ತು

ತನ್ನ ನಡುವಿನ ಇಂತಹ ಸಂಬಂಧದ ಸ್ವರೂಪ ದಿನನಿತ್ಯ ಬದಲಾಗುವ ನಾಣ್ಯದ ವಿಕೃತ ರೂಪಗಳಂತೆ ಬದಲಾಗುವುದರ ಹಿಂದಿನ ಮರ್ಮದಾದರೂ ಏನು? ಇಂತಹ ಉತ್ತರಸಿಗದ ಹಲವು ಪ್ರಶ್ನೆಗಳು ರಾಮಭಾವುವನ್ನು ಮಾನಸಿಕವಾಗಿ ಗೊಂದಲಿಸುತ್ತವೆ. ಒಂದೊಮ್ಮೆ ದೈವಸ್ವರೂಪಳಾದ ಹೆಣ್ಣು ನಂತರದಲ್ಲಿ ಸರ್ವನಾಶದ ಅಸುರೀಶಕ್ತಿಯಾಗಿ ಪರಿವರ್ತಿತವಾದ ಬಗೆಯಲ್ಲಿನ ದ್ವಂದ್ವಗಳು ರಾಮಭಾವುವನ್ನು ದಿನೇ–ದಿನೇ ಮಾನಸಿಕವಾಗಿ ಕುಗ್ಗಿಸುತ್ತವೆ. ಈ ತರಹದ ಅಂತರಂಗದ ದ್ವಂದ್ವಗಳಿಗೆ ಖಾಸನೀಸರ ಕಥೆಗಳಲ್ಲಿನ ಪಾತ್ರಗಳು ನಿರಂತರವಾಗಿ ಬಳಗಾಗುವುದನ್ನು ಕಾಣಬಹುದು.

ನವ್ಯತೆಯ ಪ್ರಧಾನವಾದ ಗುರುತು ವ್ಯಕ್ತಿಯ ಏಕಾಂಗಿತನ. ಇದನ್ನು ವ್ಯಕ್ತಿಯ ಅನಾಥಪ್ರಜ್ಞೆ, ಎಂತಲೂ ಕರೆಯಬಹುದು. ವ್ಯಕ್ತಿ ಏಕಕಾಲದಲ್ಲಿ ತಾನು ಬದುಕುತ್ತಿರುವ ಸಮಾಜದಲ್ಲಿ ಏಕಾಂಗಿಯಾಗಿಯೂ, ಕುಟುಂಬದಲ್ಲಿ ತಬ್ಬಲಿಯಾಗಿಯೂ ಬದುಕುತ್ತಿರುವೇನೆಂಬ ಭಾವನೆಗಳಿಗೆ ಒಳಗಾಗುತ್ತಾನೆ. ಸಮೂಹದೊಳಗೂ ಕಾಡುವ ಇಂತಹ ಒಂಟಿತನಕ್ಕೆ ಹಲವು ಕಾರಣಗಳಿರಬಹುದು, ವ್ಯಕ್ತಿ ತಾನು ಬದುಕುತ್ತಿರುವ ಸಮಾಜದ ಬದುಕಿಗಿಂತ ಭಿನ್ನವಾದ ಬದುಕನ್ನು ಬದುಕುತ್ತಿರಬಹುದು, ಅಲ್ಲಿನ ಸಾಮಾಜಿಕ ಮೌಲ್ಯಗಳು ವ್ಯಕ್ತಿಯ ಮೇಲೆ ಬಲವಂತವಾಗಿ ಹೇರಲ್ಪಟ್ಟು ಅವುಗಳೊಂದಿಗೆ ವಿರೋಧಭಾವ ಸೃಷ್ಠಿಯಾಗಿರಬಹುದು. ಅಥವಾ ಸಹಜವಾಗಿಯೇ ಅವನ ಮನಸ್ಸು ಏಕಾಂಗಿತನಕ್ಕಾಗಿ ಹಾತೊರೆಯುತ್ತಿರಬಹುದು. ಇನ್ನಾವ ಕಾರಣವಾದರೂ ವ್ಯಕ್ತಿಯನ್ನು ಸಮಾಜದಿಂದ, ಸಮೂಹದಿಂದ, ಕುಟುಂಬದಿಂದ ದೂರಗೊಳಿಸುವ ಇಂತಹ ಅನಾಥಪ್ರಜ್ಞೆ ವ್ಯಕ್ತಿಯನ್ನು ಅಂತರ್ಮುಖಿಯನ್ನಾಗಿಸುತ್ತದೆ. ಸಮಾಜದೊಂದಿಗಿನ, ಕುಟುಂಬದೊಂದಿಗಿನ ಬದುಕು ಕೇವಲ ಯಾಂತ್ರಿಕ ಬದುಕಾಗಿ ಮಾರ್ಪಡುತ್ತದೆ. ಆಗ ವ್ಯಕ್ತಿ ತನ್ನ ಅಂತರಂಗದ ಭಾವನೆಗಳಿಗೆ ಸ್ಪಂದಿಸದೆ ಆಕಾಂಕ್ಷೆಗಳಿಗೆ ಆಹ್ವಾನನೀಡದ ಬಾಹ್ಯ ಜಗತ್ತನ್ನು ಸಹಜವಾಗಿಯೇ ದ್ವೇಷಿಸುತ್ತಾನೆ. ಸಾಧ್ಯವಾದಷ್ಟರ ಮಟ್ಟಿಗೆ ಸಮಾಜದಿಂದ, ಕುಟುಂಬದಿಂದ ತನ್ನ ಸಂಪರ್ಕವನ್ನು ಕಡಿದುಕೊಳ್ಳುವ ಪ್ರಯತ್ನವನ್ನು ಮುಂದುವರಿಸುತ್ತಾನೆ.

ಖಾಸನೀಸರ ಪ್ರತಿಯೊಂದು ಕಥೆಗಳು ಪಾತ್ರಗಳೂ ಕೂಡ ಮೇಲೆ ವಿವರಿಸಿದಂತೆ ಅಂತರ್ಮುಖಿಯೇ. ತಬ್ಬಲಿತನದ ಬದುಕಿನ ಲಕ್ಷಣ ಅವುಗಳ ಪ್ರಧಾನ ಲಕ್ಷಣವೇ. ಇಂತಹ ತಬ್ಬಲಿತನವನ್ನು ಖಾಸನೀಸರ 'ತಬ್ಬಲಿಗಳು' ಕಥೆಯಲ್ಲಿನ ಪಾತ್ರಗಳು ಅದ್ಭುತವಾಗಿ ಅಭಿವ್ಯಕ್ತಿಸುತ್ತವೆ.

ಮಂತ್ರಾಲಯದ ರಥೋತ್ಸವದ ಜನಜಂಗುಳಿಯ ನಡುವೆಯೂ ಪರಸ್ಪರ ಬೆರೆಯದ ಆ ಮನಸ್ಸುಗಳು ಕುಟುಂಬದೊಳಗೂ ಪರಕೀಯ ಸ್ಥಿತಿಯನ್ನೇ ಎದುರಿಸುತ್ತವೆ. ತಂದೆ–ತಾಯಿ–ತಮ್ಮ–ತಂಗಿ ಇಂತಹ ಸಂಬಂಧಗಳ ಸರಪಳಿಯ ಯಾವ ಕೊಂಡಿಗಳೂ ಬೆಸೆದಿರುವುದೇ ಇಲ್ಲ. ಒಂದೊಂದು ಪಾತ್ರವೂ ಒಂದೊಂದು ದಿಕ್ಕಿಗೆ ಚಲಿಸುವ ಚಲನೆ ಅವರಲ್ಲಿನ ಪರಸ್ಪರ ವಿಮುಖಮನಸ್ಸುಗಳಿಗೆ ಹಿಡಿದ ಕೈಗನ್ನಡಿ. ತಬ್ಬಲಿಗಳು ಕಥೆಯ ಶೀರ್ಷಿಕೆಯೇ ಕಥೆಯ ಸಾರವನ್ನು ಹಿಡಿದಿಟ್ಟಿದೆ. ಬಾಹ್ಯ ಸಮಾಜಕ್ಕೆ ಒಂದು ಕುಟುಂಬದ, ಸಂಸಾರದ ಸದಸ್ಯರು ಎಂದು ಪರಿಗಣಿಸಲ್ಪಡುವ ಪಾತ್ರಗಳು ಬದುಕುತ್ತಿರುವುದು ತೀರಾ ಯಾಂತ್ರಿಕವಾಗಿ. ಪರಸ್ಪರರ ನಡುವಿನ ಮನಸ್ತಾಪಗಳು, ವೈಮನಸ್ಸುಗಳು ಬಾಹ್ಯಕ್ಕೆ ಕಾಣಲಾರದ ಅವರ ಅಂತರಂಗದ ಮುಖಗಳು. ಕಥೆಯ ಆರಂಭದಲ್ಲಿಯೇ ಬರುವ ಬಸ್ಸಿನ ದೃಶ್ಯದಲ್ಲಿ ತಮ್ಮ "ಪ್ರಯತ್ನಪೂರ್ವಕವಾಗಿ" ಇವರನ್ನೆಲ್ಲ ತಪ್ಪಿಸಿ ಮುಂದಿನ ಸೀಟಿನಲ್ಲಿ ಹೋಗಿ ಕುಳಿತಿದ್ದ. ಎಂಬ ಸಾಲಿನ ಪ್ರಯತ್ನ ಪೂರ್ವಕವಾಗಿ ಎಂಬ ಒಂದೇ ಶಬ್ದ ತಮ್ಮ ಮತ್ತು ಅವನ ಕುಟುಂಬದ ನಡುವಿನ ಅಂತರವನ್ನು ಅಳೆಯುವಂತಿದೆ. ಅನಿವಾರ್ಯವಾಗಿ ಬೆಸೆದಿರುವ ಇಂತಹ ಸಂಬಂಧಗಳನ್ನು ಬೆಸೆದಿಟ್ಟಿರುವುದು ಪ್ರೀತಿಯಾಗಲೀ, ಮಮತೆಯಾಗಲೀ ಅಲ್ಲ ಬದಲಾಗಿ ಕುಟುಂಬವನ್ನೊರತಾಗಿ ಬದುಕಲಾರದ ಅಸಹಾಯಕ ಸ್ಥಿತಿ, ಮತ್ತು ಸಂಸಾರದಿಂದ ದೂರವಾಗಿ ಬದುಕಲಾರೆನೆಂಬ ಭಯ. ಈ ಎಲ್ಲಾ ಸಂಬಂಧಗಳನ್ನು ಕುಟುಂಬವೆಂಬ ಚೌಕಟ್ಟಿನೊಳಗೆ ಬಂಧಿಸಿದೆ. ರಥೋತ್ಸವದ ಜನಜಂಗುಳಿಯಲ್ಲಿ ಬಿಗಿಯಲ್ಪಟ್ಟ ಕೈಗಳು ಉದ್ದೇಶ ಪೂರ್ವಕವಾಗಿಯೇ ಕಳಚಿಕೊಂಡು ಬೇರೆ–ಬೇರೆಯಾಗುವ, ಒಂದೊಂದು ಪಾತ್ರ ಒಂದೊಂದು ದಿಕ್ಕಿಗೆ ಚಲಿಸುವ ಕ್ರಿಯೆ ಅವರಲ್ಲಿನ ಅನಾಥಪ್ರಜ್ಞೆಗೆ ಸಾಕ್ಷಿ. ಕುಟುಂಬದೊಳಗಿದ್ದೇ ಅವನಲ್ಲಿ ಉತ್ಕಟವಾಗಿ ಬೆಳೆಯುವ ಇಂತಹ ಪರಕೀಯ ಭಾವಕ್ಕೆ ಕಾರಣಗಳಾದರೂ ಏನು? ಅವರಲ್ಲಿನ ಪರಸ್ಪರ ಮಾನಸಿಕ ಬಿರುಕುಗಳು, ಕಥೆಯಲ್ಲಿ ತಾಯಿಯ ಗಯ್ಯಾಳಿತನವೇ ಹೆಂಡತಿಯ ಸಾವಿಗೆ ಕಾರಣ ಎಂಬ ಸತ್ಯ ತಮ್ಮ ಮತ್ತು ತಾಯಿಯ ಸಂಬಂಧಗಳ ನಡುವೆ ಗೋಡೆಯನ್ನು ನಿರ್ಮಿಸಿದರೆ ಹೆಂಡತಿಯ ವಾಚಾಳಿತನ, ಬಜಾರಿತನಗಳು ತಂದೆ ಮತ್ತು ತಾಯಿಯ ನಡುವಿನ ಕಂದಕಕ್ಕೆ ಕಾರಣವಾಗಿವೆ, ಇವೆಲ್ಲದರ ಪರಿಣಾಮವಾಗಿ ಮನುಷ್ಯ ಸಂಬಂಧಗಳು ಬದುಕುವ ತಬ್ಬಲಿತನದ ಸಂಕೇತಗಳಾಗಿ ಚಿತ್ರಿತವಾಗಿದೆ ತಬ್ಬಲಿಗಳು ಕಥೆಯ ಪಾತ್ರಗಳು.

ನವ್ಯ ಸಾಹಿತ್ಯದ ಮತ್ತೊಂದು ಪ್ರಧಾನವಾದ ವಸ್ತು ಕಾಮ ಮತ್ತು ಕಾಮದ ನಡುವಿನ ಒಳತೋಟಿಗಳು. ಮನುಷ್ಯನ ನೈಸರ್ಗಿಕ ದೈಹಿಕ ಕ್ರಿಯೆಗಳಲ್ಲೊಂದಾದ ಲೈಂಗಿಕತೆ ಕೂಡ ಖಾಸನೀಸರ ಕಥೆಗಳಲ್ಲಿ ಸಹಜವಾಗಿಯೇ ಸ್ಥಾನಪಡೆದಿದೆ. ಲೈಂಗಿಕತೆ ಮನುಷ್ಯನಿಗೆ ಅಸಿವಿನಷ್ಟೇ ಸಹಜವಾದ ದೈಹಿಕ ಅನಿವಾರ್ಯತೆ. ಇಂತಹ ಲೈಂಗಿಕತೆ ಸುತ್ತ ಸಮಾಜ, ಸಂಸ್ಕೃತಿ, ಸಂಪ್ರದಾಯಗಳು ನಿಯಮಗಳ ಕೋಟೆಯನ್ನು ನಿರ್ಮಿಸಿ ಅದನ್ನು ಗುಪ್ತವಾಗಿಡುವುದರ ಮೂಲಕ ಉಂಟಾಗುವ ವ್ಯಕ್ತಿಯ ಕುತೂಹಲ, ಆಕಾಂಕ್ಷೆಗಳು ಹೆಣ್ಣು ಮತ್ತು ಗಂಡಿನ ದೈಹಿಕ ಸಂಪರ್ಕವನ್ನು ತಾರಕಕ್ಕೆ ಕೊಂಡೊಯ್ದಿವೆ. ದಾಂಪತ್ಯದ ನಂತರದ ಲೈಂಗಿಕತೆಯನ್ನು ಸಮಾಜದ ಒಪ್ಪಿತಮೌಲ್ಯ ಎಂದು ಪರಿಗಣಿಸಿ ದಾಂಪತ್ಯವನ್ನೊರತಾದ ಯಾವುದೇ ಸ್ವರೂಪದ ಲೈಂಗಿಕತೆ ಸಾಮಾಜಿಕನಿಯಮಕ್ಕೆ ವಿರುದ್ಧವಾದ ಅಪರಾಧತ್ವವನ್ನು ಆರೋಪಿಸಿದೆ. ಇವು ಒಂದು ರೀತಿಯ ಸಂಸ್ಕೃತಿಯ ಒತ್ತಡಗಳು. ನೈತಿಕತೆ ಮತ್ತು ಅನೈತಿಕತೆ ಇಂತಹ ಪಟ್ಟಿಗಳು ಸಮಾಜದ ವ್ಯಕ್ತಿಗಳನಡುವಿನ ಸಂಬಂಧಗಳ ಮೌಲ್ಯಮಾಪಕಗಳಂತೆ ವರ್ತಿಸುವಾಗ ಸಹಜವಾಗಿಯೇ ವ್ಯಕ್ತಿಯ ಅಂತರಂಗದಲ್ಲಿ ಕಾಮದ ಒಳತೋಟಿಗಳು ಸೃಷ್ಟಿಯಾಗುತ್ತವೆ. ವಿವಾಹ ಪೂರ್ವದ ಲೈಂಗಿಕಭಾವನೆಗಳು, ದಾಂಪತ್ಯವನ್ನೊರತಾದ ಲೈಂಗಿಕ ಸಂಬಂಧಗಳು, ಅಪ್ರಾಪ್ತ ವಯಸ್ಸಿನ ಲೈಂಗಿಕ ಸಂಬಂಧಗಳು, ನಿಸರ್ಗಕ್ಕೆ ವಿರೋಧವಾದ ಲೈಂಗಿಕ ಕ್ರಿಯಗಳು ಇತ್ಯಾದಿಗಳು ವ್ಯಕ್ತಿಯನ್ನು ಮಾನಸಿಕವಾಗಿ ಗೊಂದಲಕ್ಕೆ ಹೀಡುಮಾಡುತ್ತವೆ.

ಧರ್ಮ, ಕುಟುಂಬ, ಸಮಾಜ, ಇಂತಹ ಸಂಸ್ಥೆಗಳು ಲೈಂಗಿಕತೆಯ ಮೇಲೆ ಹೇರಲ್ಪಟ್ಟಿರುವ ನಿರ್ಬಂಧಗಳು ವ್ಯಕ್ತಿಯಲ್ಲಿ ಒಂದು ರೀತಿಯ ಅಪರಾಧೀಮನೋಭಾವದ ಸೃಷ್ಟಿಗೆ ಕಾರಣವಾಗುತ್ತವೆ. ಇಂತಹ ಹಲವು ಒತ್ತಡಗಳಿಂದ ಭಯಕ್ಕೊಳಗಾಗುವ ವ್ಯಕ್ತಿ ತನ್ನ ಲೈಂಗಿಕತೆಯ ಆಕಾಂಕ್ಷೆಗಳನ್ನು ಗುಪ್ತವಾಗಿಯೇ ಉಳಿಸುತ್ತಾನೆ. ಮತ್ತು ರಹಸ್ಯವಾಗಿಯೇ ಅನುಭವಿಸುತ್ತಾನೆ. ಆದರೂ ಅವನಲ್ಲಿನ ಇಂತಹ ಗುಪ್ತಭಾವಗಳು ಅವನ ಮನಸ್ಸನ್ನು ದ್ವಂದ್ವಕ್ಕೆ ಗುರಿಮಾಡುತ್ತವೆ. ಇಂತಹ ಕಾಮಕೇಂದ್ರಿತ ದ್ವಂದ್ವಗಳಿಗೆ ಒಳಗಾಗುವ ಹಲವು ಪಾತ್ರಗಳು ಖಾಸನೀಸರ ಕತೆಗಳಲ್ಲಿ ಕಾಣಸಿಗುತ್ತವೆ. ಅಂತಹ ಹಲವು ಪಾತ್ರಗಳಲ್ಲಿ ಒಂದು ಅಲ್ಲಾವುದ್ದೀನನ ಅದ್ಭುತದೀಪ ಕಥೆಯಲ್ಲಿನ ಸತ್ಯಭೋಧನ ಪಾತ್ರ.

ಸತ್ಯಭೋಧ ಲೈಂಗಿಕತೆಗಾಗಿ ಹಾತೊರೆಯುವ ಮತ್ತು ಆ ಹಾತೊರೆಯುವಿಕೆಯಲ್ಲಿ ಮುಂದಿನ ಅಪಾಯಗಳನ್ನು ಮರೆತುಬಿಡುವ, ಜೊತೆಗೆ ಕಾಮದ ಮುಂದೆ ಅಜ್ಞಾನಿಯಂತೆ ವರ್ತಿಸುವ ಅವನ ಮನಸ್ಸು ಇಂತಹ ಉತ್ಕಟವಾದ ಕಾಮದ ಒಳತೋಟಿಗಳಿಂದ

ಜರ್ಜರಿತವಾದಂತಹ ವ್ಯಕ್ತಿಯ ಮನಸ್ಥಿತಿಯನ್ನು ಪಡೆಯುತ್ತದೆ. ತಾನು ಬದುಕುತ್ತಿರುವ ಸಂಪ್ರದಾಯಬದ್ಧ, ಧರ್ಮಾನುಸಾರಿಯಾದ, ಪಾಪ-ಪುಣ್ಯಗಳ ಬಗೆಗೆ ಅಪಾರ ಶ್ರದ್ಧೆಯಿರುವ ಕುಟುಂಬದ ಬಗೆಗಿನ ಅರಿವು ಅವನಿಗಿತ್ತಾದರೂ ಅಂಬಕ್ಕನ ಕಾಮದ ಬಲೆಗೆ ಸಿಕ್ಕಿ ನರಳುತ್ತಾನೆ. ಒಂದೆಡೆ ಮನೆತನದ ಮರ್ಯಾದೆ ಮತ್ತೊಂದೆಡೆ ವಯಸ್ಸಿಗೆ ಸಹಜವಾದ ದೇಹದ ಹಂಬಲ ಇವೆರಡರ ನಡುವಿನ ದ್ವಂದ್ವಗಳ ನಡುವೆ ಸತ್ಯಭೋಧ ತೊಳಲಾಡುತ್ತಾನೆ. ಅಂಬಕ್ಕನ ಸಂಚು ಅವನ ಕಾಮೋತ್ಕಟತೆಯಲ್ಲಿ ಕಾಣುವುದೇ ಇಲ್ಲ. ಯಾವುದನ್ನೂ ಆಳವಾಗಿ ಚಿಂತನೆಮಾಡುವ ತಾಳ್ಮೆಯಿರದ ವಯಸ್ಸಿನಲ್ಲಿ, ಯೌವ್ವನದ ಆಕಾಂಕ್ಷೆಗಳ ರಭಸದಲ್ಲಿ ಪಾಪದೆಡೆಗೆ ಸಾಗುವ ಅವನು ಪಾಪದ ಭಯವನ್ನು ಒಂದು ಕ್ಷಣ ಮರೆತಿದ್ದರಿಂದ ತನ್ನ ಹಿಡೀ ಬದುಕನ್ನೇ ಅಜ್ಞಾತವಾಸದಲ್ಲಿ ಕಳೆಯಬೇಕಾಗುತ್ತದೆ. ಅವನಲ್ಲಿನ ಕಾಮದ ಒಳತೋಟಿಗಳು ಅವನ ಬದುಕಿನ ದಿಕ್ಕನ್ನೇ ಬದಲಿಸುತ್ತವೆ. ವ್ಯಕ್ತಿಯೊಬ್ಬನ ಕಾಮನೆಗಳು ಕ್ಷಣಿಕಸುಖಕ್ಕಾಗಿ ಅವನನ್ನು ಕುರುಡಾಗಿಸುವ ಚಿತ್ರಣಕ್ಕೆ ಸತ್ಯಭೋಧ ಸಾಕ್ಷಿಯಂತಿದ್ದಾನೆ.

ವ್ಯಕ್ತಿಯ ಲೈಂಗಿಕತೆಗೆ ಸಂಬಂಧಿಸಿದಂತೆ ಖಾಸನೀಸರ ಕತೆಗಳಲ್ಲಿನ ಸೂಕ್ಷ್ಮ ಒಳಹುಗಳು ದೇಹ ಮತ್ತು ಮನಸ್ಸುಗಳ ನಡುವಿನ ದ್ವಂದ್ವತೆಯನ್ನು ಎತ್ತಿ ಹಿಡಿಯುತ್ತವೆ. ಅವರ ಕತೆಗಳಲ್ಲಿ ಅನೇಕವು ಬೆಸೆದುಕೊಳ್ಳುವ ದೇಹಗಳೇ ವಿನಃ ಮನಸ್ಸಲ್ಲ. ಗಂಡ ಮತ್ತು ಹೆಣ್ಣು ದೈಹಿಕವಾಗಿ ಮತ್ತು ಮಾನಸಿಕವಾಗಿ ಬೆಸೆಯುವ ಪ್ರಕ್ರಿಯ ದಾಂಪತ್ಯವೆಂದು ಪರಿಗಣಿಸುವುದಾದರೆ ಕೇವಲ ಮಾನಸಿಕವಾಗಿ ಒಂದಾಗುವುದು ಸ್ನೇಹವೋ, ಪ್ರೀತಿಯೋ ಇರಬಹುದು. ಆದರೆ ಕೇವಲ ದೇಹಗಳು ಮಾತ್ರ ಬೆಸೆದುಕೊಳ್ಳುವ ಕ್ರಿಯೆ ಕೇವಲ 'ಕಾಮ' ಎಂಬುದಾಗಿ ಪರಿಗಣಿಸಲ್ಪಡುತ್ತದೆ. ಇಂತಹ ಕಾಮಕೇಂದ್ರಿತ ಚಿತ್ರಣಗಳು ಖಾಸನೀಸರ ಹಲವು ಕತೆಗಳಲ್ಲಿ ಸ್ಥಾನಪಡೆದಿವೆ.

ಪುರುಷನ ಮುಂದೆ ಮಾಯೆ ! ಕತೆಯಲ್ಲಿನ ರಾಮಬಾವು ಮತ್ತು ಜ್ಯುಬೇದಾ ಇವರ ನಡುವಿನ ಸಂಬಂಧದ ಸ್ವರೂಪ ಕೇವಲ ಕಾಮಕೇಂದ್ರಿತವಾದದ್ದು. ರಾಮಬಾವುವಿನ ಬದುಕಿನಲ್ಲಿ ಬಂದ ಹೆಣ್ಣು, ಸ್ನೇಹಿತೆಯಾಗಲೀ, ಪ್ರೇಮಿಯಾಗಲೀ, ಅಥವಾ ಹೆಂಡತಿಯಾಗಲೀ ಅಲ್ಲ ಕೇವಲ ಅವನ ದೈಹಿಕ ಸುಖಕ್ಕಾಗಿ ಯಾಂತ್ರಿಕವಾಗಿ ಸಹಕರಿಸಿದ ಸ್ತ್ರೀ ಮಾತ್ರ. ಅಲ್ಲಿ ಅವರಿಬ್ಬರ ನಡುವೆ ಯಾವ ಭಾವನೆಗಳೂ ಇಲ್ಲ. ಪ್ರೀತಿ-ಸ್ನೇಹಕ್ಕೆ ಅವರಿಬ್ಬರ ನಡುವೆ ಯಾವ ಆಸ್ಪದವೂ ಇಲ್ಲ. ಯೌವ್ವನ, ದೇಹದ ಹಂಬಲಗಳು ಮಾತ್ರ ಅವರಿಬ್ಬರ ದೇಹಗಳನ್ನು ಒಂದು ಗೂಡಿಸಿದವೇ ವಿನಃ ಅದರಾಚೆಗಿನ ಯಾವ ಸಂಬಂಧಗಳು ಇವರಿಬ್ಬರ ನಡುವೆ

ಏರ್ಪಡುವುದಿಲ್ಲ. ಪರಸ್ಪರ ದೇಹಗಳು ಬೆಸೆದುಕೊಳ್ಳುವ ಈ ಕ್ರಿಯೆಯಲ್ಲಿ ಬೆಸೆದುಕೊಳ್ಳಲಾರದ ಮನಸ್ಸುಗಳ ವಿಫಲತೆಗೆ ಪ್ರಮುಖ ಕಾರಣ ಹೆಣ್ಣು-ಗಂಡುಗಳ ಸಂಬಂಧ ಕಾಮ ಕೇಂದ್ರಿತನೆಲೆಯಲ್ಲಿ ಒಂದಾಗುವ ಪ್ರಕ್ರಿಯೆ. ಕಾಮಕೇಂದ್ರಿತವಾದ ಇಂತಹ ಸಂಬಂಧಗಳು ಮನಸ್ಸು ಮತ್ತು ದೇಹದ ನಡುವಿನ ಅಂತರವನ್ನು ಒಂದಾಗಲಾರದಷ್ಟು ದೂರಕ್ಕೆ ತಳ್ಳುತ್ತವೆ. ಇದರ ಪರಿಣಾಮವಾಗಿ ಮನುಷ್ಯ ಸಂಬಂಧಗಳು ಕೇವಲ ಯಾಂತ್ರಿಕ ಸಂಬಂಧಗಳಾಗಿ ಮಾರ್ಪಡುತ್ತವೆ ಎನ್ನಬಹುದು.

ಇನ್ನೂ ನವ್ಯ ಸಾಹಿತ್ಯದ ಪ್ರಧಾನ ಲಕ್ಷಣಗಳಲ್ಲಿ ಪ್ರಮುಖವಾದದ್ದು ಅಲ್ಲಿನ ಭಾಷೆ ಮತ್ತು ತಂತ್ರ. ಉಳಿದೆಲ್ಲಾ ಸಾಹಿತ್ಯ ಘಟ್ಟಗಳಿಗಿಂತ ನವ್ಯದ ಭಾಷೆ ಹೆಚ್ಚು ಸಂಕೀರ್ಣವಾದುದು ಮತ್ತು ರೂಪನಿಷ್ಠವಾದುದು. ಏಕೆಂದರೆ ನವ್ಯದ ಮುಖ್ಯ ವಸ್ತು, ಆಧುನಿಕ ಜಗತ್ತು. ಅದರಲ್ಲೂ ನಗರಜೀವನ, ಅಕ್ಷರಸ್ಥಸಮುದಾಯದ ಅಂತರಂಗವೇ ನವ್ಯದ ಪ್ರಧಾನ ಕಾಳಜಿಯಾದ್ದರಿಂದ ಇಲ್ಲಿನ ಭಾಷೆ ನಗರಭಾಷೆ. ವಿದ್ಯಾವಂತ ಸಮುದಾಯದ ಶಿಷ್ಟಭಾಷೆ ನವ್ಯ ಕಥಾ ಸಾಹಿತ್ಯದ್ದು. ನವ್ಯಕಾವ್ಯದ ಭಾಷೆಗೆ ಹೋಲಿಸಿದರೆ ನವ್ಯ ಕಥಾಸಾಹಿತ್ಯದ ಭಾಷೆ ಸ್ವಲ್ಪಮಟ್ಟಿನ ಸಡಿಲತೆಯಿಂದ ಕೂಡಿದೆ ಎನ್ನಬಹುದು. ಕಾವ್ಯ ಭಾಷೆಯಷ್ಟು ಕ್ಲಿಷ್ಟಕರವಿಲ್ಲದ ಸರಳಭಾಷೆ ಕಥಾಸಾಹಿತ್ಯದ್ದಾದರೂ ಸಂಕೀರ್ಣತೆ ಮರೆಯಾಗಿಲ್ಲ. ಪಾಶ್ಚಾತ್ಯ ಶಿಕ್ಷಣದ ಪ್ರಭಾವದಿಂದ ಉಂಟಾದ ಇಂಗ್ಲೀಷ್ ಭಾಷೆಯ ಪ್ರಭಾವವೂ ಕನ್ನಡದ ನವ್ಯ ಸಾಹಿತ್ಯದ ಭಾಷೆಯ ಮೇಲೆ ಉಂಟಾಗಿದೆ ಎನ್ನಬಹುದು. ಇದಕ್ಕೆ ಪೂರಕವಾಗಿಯೇ ಖಾಸನೀಸರ ಕಥೆಗಳ ಭಾಷೆ ಸಂಕೀರ್ಣವೂ, ಸಂಕೇತಪ್ರಧಾನವೂ, ಪ್ರತಿಮಾನಿಷ್ಠವೂ ಆಗಿರುವುದು ಸಹಜವೆನಿಸುತ್ತದೆ.

ಖಾಸನೀಸರ ಕತೆಗಳ ವಸ್ತು ಪ್ರಮುಖವಾಗಿ ಆಧುನಿಕ ಜಗತ್ತು, ಅಂದ ಮೇಲೆ ಖಾಸನೀಸರ ಕತೆಗಳ ಭಾಷೆಯೂ ಆ ಆಧುನಿಕ ಜಗತ್ತಿನ ನವೀನ ಭಾಷೆಯೇ. ಅದರಲ್ಲೂ ಮುಂಬೈ, ಪುಣೆಯಂತಹ ನಗರ ಜೀವನವನ್ನು ಕೇಂದ್ರವಾಗುಳ್ಳ ಇವರ ಕಥೆಗಳ ಭಾಷೆ ನಗರಭಾಷೆ. ಜೊತೆಗೆ ಖಾಸನೀಸರ ಕತೆಯಲ್ಲಿನ ಮನೆತನಗಳೆಲ್ಲಾ ಮಧ್ಯಮವರ್ಗದ ಅಥವಾ ಉನ್ನತವರ್ಗದ ಮನೆತನಗಳಾದ್ದರಿಂದ ನಗರದ ಮಧ್ಯಮ ಮತ್ತು ಉನ್ನತವರ್ಗದ ಭಾಷೆ ಇವರ ಕತೆಗಳಲ್ಲಿ ಬಳಕೆಯಾಗಿದೆ. ನವ್ಯ ಸಾಹಿತ್ಯಭಾಷೆಯ ಮೇಲೆ ಉಂಟಾಗಿರುವ ಇಂಗ್ಲೀಷ್‌ನ ಪ್ರಭಾವ ಖಾಸನೀಸರ ಕತೆಗಳಲ್ಲೂ ಗೋಚರವಾಗುತ್ತದೆ.

ಮಂದಿಯ ರಹಸ್ಯ ಕಥೆಯಲ್ಲಿನ ವಾಸು, ಅಪಘಾತ ಕಥೆಯ ರಾಮನಾಥ, ಅನಿರೀಕ್ಷಿತ ಕಥೆಯ ದುರ್ಗಾ, ಅಶ್ವಾರೋಹಿ ಕಥೆಯ ಚಾರುಲತಾ ಈ ಎಲ್ಲಾ ಪಾತ್ರಗಳೂ ಉನ್ನತ ಶಿಕ್ಷಣವನ್ನು ಪಡೆದಂತಹ ಪಾತ್ರಗಳು, ಸಹಜವಾಗಿಯೇ ಅವರೆಲ್ಲರ ಭಾಷೆ ಉನ್ನತ ಮಟ್ಟದ ಇಂಗ್ಲೀಷ್‌ಮಯವಾದ ಕನ್ನಡ ಭಾಷೆ. ಖಾಸನೀಸರ ಯಾವ ಕಥೆಯಲ್ಲಿಯೂ ಗ್ರಾಮ್ಯ ಭಾಷೆ ಬಳಕೆಯಾಗಿಲ್ಲ. ಅವರ ಹೀಗೂ ಇರಬಹುದು ! ಮತ್ತು ಅಲ್ಲಾವುದ್ದೀನನ ಅದ್ಭುತ ದೀಪ ಕಥೆಯಲ್ಲಿನ ಕೆಲವು ಪಾತ್ರಗಳು ಗ್ರಾಮೀಣ ಪರಿಸರದಲ್ಲೇ ಬದುಕುತ್ತವಾದರೂ ಆ ಎಲ್ಲಾ ಪಾತ್ರಗಳೂ ಕೂಡ ಸುಶಿಕ್ಷಿತ, ಉನ್ನತವರ್ಗದ ಭಾಷೆಯನ್ನೇ ಬಳಸುವಂತಹ ಪಾತ್ರಗಳು. ಉದಾ:– ಹೀಗೂ ಇರಬಹುದು! ಕಥೆಯ ನಾಯಕರಪಾತ್ರ.

ಅಲ್ಲಾವುದ್ದೀನನ ಅದ್ಭುತದೀಪ! ಕಥೆಯ ವೃಂದಾ, ಅರ್ಚಕರ ಪಾತ್ರ, ಹೀಗೆ ಖಾಸನೀಸರ ಕಥೆಗಳ ಭಾಷೆ ಆಧುನಿಕ ಶಿಷ್ಟಭಾಷೆಯಾಗಿದ್ದು ಅದು ಸಂಕೇತ ಪ್ರಧಾನವಾದ ಭಾಷೆಯಾಗಿಯೂ ಬಳಕೆಯಾಗಿದೆ.

ಖಾಸನೀಸರ ಕಥೆಗಳ ವೈಶಿಷ್ಟ್ಯತೆಗೆ ಮತ್ತೊಂದು ಪ್ರಮುಖವಾದ ಕಾರಣ, ಅವರ ಕಥೆಗಳಲ್ಲಿಬರುವ ಸಂಕೇತ ಪ್ರಧಾನವಾದ, ಪ್ರತಿಮಾನಿಷ್ಠವಾದ ಕಥಾನಿರೂಪಣೆ. ವ್ಯಕ್ತಿಯ ಅಂತರಂಗದ ಭಾವನೆಗಳನ್ನು ಸಂಕೇತಗಳ ಮೂಲಕ ಅಭಿವ್ಯಕ್ತಿಸುವ ವಿಧಾನವನ್ನು ಖಾಸನೀಸರು ಸುಂದರವಾಗಿ ಚಿತ್ರಸಿದ್ದಾರೆ, ಮಂದಿಯರಹಸ್ಯ ಕಥೆಯಲ್ಲಿ ಮಂದಿಯ ಮನದ ಹಂಬಲಗಳಿಗೆ ಕಟ್ಟಿಕೊಟ್ಟ ಸಂಕೇತಗಳೇ ಇದಕ್ಕೆ ಉತ್ತಮಸಾಕ್ಷಿ.

ಖಾಸನೀಸರ ಪ್ರತಿಯೊಂದು ಕಥೆಯ ನಿರೂಪಣಾ ಕೇಂದ್ರ ಸಂಕೇತ ರೈಲು ಮತ್ತು ರೈಲಿನ ಕಂಬಿಗಳು. ರೈಲು ಜೀವನದ ಪ್ರಯಾಣದ ಸಂಕೇತ. ಅಲ್ಲಿನ ಹಳಿಗಳು ಮನುಷ್ಯ ಸಂಬಂಧಗಳಾದ ಹೆಣ್ಣು ಮತ್ತು ಗಂಡಿನ ಸಂಕೇತಗಳು. ದೂರಕ್ಕೆ ಪರಸ್ಪರ ಬೆಸೆದುಕೊಂಡಿರುವಂತೆ ಕಾಣುವ ರೈಲುಗಂಬಿಗಳು ಹತ್ತಿರಕ್ಕೆ ಸಮೀಪಿಸಿದಂತೆಲ್ಲಾ ಬೇರೆ–ಬೇರೆಯಾಗುವುದು ಸ್ಪಷ್ಟವಾಗುತ್ತದೆ. ಮನುಷ್ಯ ಸಂಬಂಧಗಳ ಬೆಸೆಯಲಾರದ ಮನಸ್ಸುಗಳ ಅಂತರವನ್ನು ಇಂತಹ ರೈಲುಕಂಬಿಗಳು ಪ್ರತಿನಿಧಿಸುತ್ತವೆ. ಖಾಸನೀಸರು ರೈಲಿನ ಬಗ್ಗೆ ನೀಡುವ ಪ್ರತಿಯೊಂದು ಚಿತ್ರಣವೂ ಕೂಡ ಅವರ ಅನುಭವದ ಸೂಕ್ಷ್ಮತೆಯನ್ನು ಪ್ರತಿಬಿಂಬಿಸುತ್ತದೆ.

ಮಂದಿಯರಹಸ್ಯ ಕಥೆಯಲ್ಲಿನ ಸಂಕೇತಗಳಂತೂ ಅವಳ ಅಂತರಂಗವನ್ನು ಅನಾವರಣಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಸಖಾರಾಮ ಮತ್ತು ರಖಮಾ ದಿನ್ನೆಯ

ಆಚೆಗೆ ಮರೆಯಾಗುವ ದೃಶ್ಯ ಅವಳಲ್ಲಿ ದಾಂಪತ್ಯದ ಬಗೆಗಿನ ಆಕಾಂಕ್ಷೆಗಳನ್ನು ಉತ್ಕಟಗೊಳಿಸುತ್ತದೆ. ಸಖಾರಾಮನ ಕೊಳಲು, ಕೊಳಲು ಬಾರಿಸುತ್ತಾ ದನಗಳನ್ನು ಹಿಂಬಾಲಿಸುವ ಅವನ ನಡಿಗೆ, ಅದಕ್ಕೆ ಸರಿಯಾಗಿ ರಖಮಾಳ ಜೊತೆ, ಇವೆಲ್ಲವೂ ಮಂದಿಯ ಮನಸ್ಸಿನಲ್ಲಿ ಗೋಕುಲದಲ್ಲಿ ವಿಹರಿಸುವ ಕೃಷ್ಣ ರಾಧೆಯನ್ನು ಚಿತ್ರಿಸುತ್ತವೆ. ಅವರಿಬ್ಬರ ಮರೆಯಾಚೆಗಿನ ದೃಶ್ಯಗಳನ್ನು ತನ್ನ ಮನಸ್ಸಿನಲ್ಲಿ ಸುಂದರವಾಗಿ ಕಲ್ಪಿಸಿಕೊಳ್ಳುವ ಅವಳ ಮನಸ್ಥಿತಿ ದಾಂಪತ್ಯಕ್ಕಾಕಿ ಹಾತೊರೆಯುವ ಹಂಬಲವನ್ನು ಅಭಿವ್ಯಕ್ತಿಸುತ್ತದೆ.

ಬಾವಿಯ ಹತ್ತಿರ ಪೋಟರನೊಬ್ಬ ಸ್ನಾನ ಮಾಡುವ ದೃಶ್ಯದಲ್ಲಿ ಮೈಮರೆಯುವ ಅವಳ ವರ್ತನೆ ಸಹಜವಾಗಿಯೇ ಇರುವ ಪುರುಷದೇಹದ ಬಗೆಗಿನ ಆಕರ್ಷಣೆಯನ್ನು ಅಭಿವ್ಯಕ್ತಿಸುತ್ತದೆ.

" ಉಕ್ಕಿನಂತೆ ಗಟ್ಟಿಯಾಗಿದ್ದ ಕಪ್ಪಾದ ಆ ದೇಹ, ರೇಲ್ವೆಯ ತಾರಕಂಬದಂತಿದ್ದ ಆ ತೊಡೆಗಳು, ತಪತಪನೆ ತೊಯ್ದು ಹೋಗಿದ್ದ ಎದೆ ಮತ್ತು ತಲೆ, ಡಬ್ಬಣದಂತೆ ಬಿರುಸಾದ ಅವನ ಕೂದಲು...."

ಮಂದಿಯ ಮನಸ್ಸು ಆ ದೇಹವನ್ನು ವೀಕ್ಷಿಸುವ ಬಗೆ ಸಹಜವಾಗಿಯೇ ಒಂದು ಹೆಣ್ಣಿಗೆ ಪುರುಷದೇಹದ ಬಗೆಗೆ ಇರುವ ಕುತೂಹಲ, ಜೊತೆಗೆ ಆ ದೇಹದ ಸ್ಪರ್ಶಕ್ಕಾಗಿ ಹಾತೊರೆಯುವ ಹಂಬಲ ಎರಡನ್ನೂ ವ್ಯಕ್ತಪಡಿಸುತ್ತದೆ.

" ಬಾವಿಯ ಕಲ್ಲುಫಡಿಯೊಂದರಲ್ಲಿ ಎರಡು ಪಾರಿವಾಳಗಳು 'ಗುಟುರ್' ಎಂದು ಸಪ್ಪಳ ಮಾಡುತ್ತಾ ಕುಳಿತಿದ್ದವು. ಚುಂಚಿಗೆ ಚುಂಚು ತಾಕುತ್ತಿತ್ತು....ರಖಮಾ, ಸಖಾರಾಮ ಇಬ್ಬರೇ ದಿನ್ನೆಯ ಹಿಂದೆ ಮರೆಯಾಗಿ ಹೋದರು..."

ಈ ಎಲ್ಲಾ ಸಾಲುಗಳೂ ಕೂಡ ಮಂದಿಯ ಮನಸ್ಸಿನ ರಹಸ್ಯದ ಶಾಬ್ದಿಕ ರೂಪ. ಹೆಣ್ಣು-ಗಂಡುಗಳ ನಡುವಿನ ದೈಹಿಕ ಸುಖಕ್ಕಾಗಿ ಹಾತೊರೆಯುವ ಯೌವ್ವನದ ಸಹಜ ಆಕಾಂಕ್ಷೆಯನ್ನು ಇಂತಹ ಸಾಲುಗಳು ಭಿತ್ತರಿಸುತ್ತವೆ. ಮಂದಿ ಸಂಪ್ರದಾಯಸ್ಥ ಮನೆಯ ಮಧ್ಯಮ ವರ್ಗದ ಹೆಣ್ಣು. ತನ್ನ ಕಾಮನೆಗಳನ್ನು ಬಾಹ್ಯವಾಗಿ ಅಭಿವ್ಯಕ್ತಿಸಲು ಅವಳಿಗೆ ಸಂಪ್ರದಾಯ ಸಾಮಾಜಿಕ ನೀತಿ ನಿಯಮಗಳು, ಪಾಪದ ಪರಿಕಲ್ಪನೆಗಳು ಅನುಮತಿ ನೀಡದ ಕಾರಣ ಇಂತಹ ಸಂಕೇತಗಳ ಮೂಲಕ ಅವಳ ಕಾಮನೆಗಳನ್ನು ಸಾಕಾರಗೊಳಿಸಿಕೊಳ್ಳುತ್ತಾಳೆ.

ಮಂದಿಗೆ ವಾಸುವಿನ ಬಗೆಗಿದ್ದ ಉತ್ಕಟವಾದ ಪ್ರೇಮದ ಭಾವನೆಗಳು ಕಥೆಯ ರೈಲು ಕಂಬಿಗಳ ಸಂಕೇತದೊಂದಿಗೆ ಸ್ಪಷ್ಟರೂಪ ಪಡೆಯುತ್ತವೆ.

" ಭಯಾನಕ ರಾತ್ರಿಯ ನೀರವತೆಯಲ್ಲಾದರೂ ಒಂದನ್ನೊಂದು ಕೂಡೋಣವೆಂದು ರೈಲು ಹಳಿಗಳೆರಡು ಒದ್ದಾಡಿದವು. ಫಿಶ್‌ಪ್ಲೇಟ್‌ಗಳು ಕಳಚಿದವು. ಆದರೆ ನಿಷ್ಕರುಣಿಯಾದ ಗ್ಯಾಂಗ್ಮನ್ ಅವುಗಳನ್ನು ಸುತ್ತಿಗೆಯಿಂದ ಹೊಡೆದು ಹೊಡೆದು ದೂರವಿರಿಸಿದ್ದ, ಹಸಿರು ದೀಪ ಕೆಂಪಾದವು. ಟೆಲಿಫೋನ್‌ಗಳು ಸಂದೇಶಗಳನ್ನು ಕಿರುಚಿ–ಕಿರುಚಿ ದಣಿದವು. ರೈಲು ಹಳಿಗಳು ಮಾತ್ರ ಬಿದ್ದಿಲಿಯೇ ಬಿದ್ದಿದ್ದವು"

ಮಂದಿ ಮತ್ತು ವಾಸುವಿನ ಪ್ರೇಮ ಸ್ವರೂಪದಂತಿದೆ ಈ ಚಿತ್ರಣ. ಪರಸ್ಪರ ಮಿಲನಕ್ಕೆ ಅಡ್ಡಿಪಡಿಸುವ ಬಾಹ್ಯಜಗತ್ತಿನಲ್ಲಿ ಬೆಸೆಯಲಾರದ ಸಂಬಂಧಗಳು ರಾತ್ರಿಯ ಕತ್ತಲಲ್ಲಾದರೂ ಗುಪ್ತವಾಗಿ ಬೆಸೆಯುವ ಆಸೆಯನ್ನು ವ್ಯಕ್ತಪಡಿಸುತ್ತವೆ. ಆದರೆ ಅಂತಹ ಬೆಸುಗೆಗೆ ನಿಷ್ಕರುಣಿಯಾದ ಸಾಮಾಜಿಕ ಸಂಪ್ರದಾಯಗಳು, ಕುಟುಂಬದ ನೀತಿ–ನಿಯಮಗಳು ಕ್ಷಣ–ಕ್ಷಣಕ್ಕೂ ಅಡ್ಡಿಪಡಿಸುತ್ತವೆ. ಇಲ್ಲಿ ಗ್ಯಾಂಗ್‌ಮನ್ ಇಂತಹ ಸಾಮಾಜಿಕ ಒತ್ತಡಗಳ ಪ್ರತಿನಿಧಿಯಾಗಿದ್ದಾನೆ. ಇಲ್ಲಿನ ಹಸಿರು ದೀಪ ಕೆಂಪಾದವು ಎಂಬುದು ಅವಳ ಆಸೆಗಳಿಗೆ ಒಡ್ಡಿದ ನಿಷೇದದ ಚಿಹ್ನೆಯಾಗಿದೆ. ಟೆಲಿಫೋನುಗಳ ಸಂದೇಶದ ಕಿರುಚುವಿಕೆ ಮಂದಿಯ ಪ್ರೇಮದ ಸಂದೇಶವೇ. ಆದರೆ ಅವಳ ಆ ಸಂದೇಶಕ್ಕೆ ಸ್ಪಂದಿಸುವ ಕಿವಿಗಳೇ ಇಲ್ಲ ಅವಳ ಕಿರುಚುವಿಕೆ ವ್ಯರ್ಥ ಪ್ರಯತ್ನವಾಗಿದೆಯೇ ವಿನಃ ಎಲ್ಲಿಯೂ ತನ್ನ ಪ್ರೇಮಭಿವ್ಯಕ್ತಿಗೆ ಸಹಾಯಕವಾಗಿಲ್ಲ. ಅವಳ ಅಂತರಂಗದ ಕೂಗನ್ನು ಅಲಿಸುವ ಯಾವ ಮನಸ್ಸುಗಳೂ ಇಲ್ಲವೆಂಬುದನ್ನು ರೈಲು ಹಳಿಗಳ ದೃಶ್ಯ ಚಿತ್ರಿಸುತ್ತದೆ. ಮಂದಿಯ ಈ ಎಲ್ಲಾ ಆಕಾಂಕ್ಷೆಗಳು ರೂಪತಾಳುವುದು ಕನಸಿನಲ್ಲಿ ಮಾತ್ರ. ಬಾಹ್ಯ ಜಗತ್ತಿನಲ್ಲಿ ರೆಕ್ಕೆ ಕಳೆದುಕೊಂಡ ಅವಳ ಆಸೆಗಳು ಕನಸಿನ ಲೋಕದಲ್ಲಿ ಸ್ವತಂತ್ರ್ಯವಾಗಿ ವಿಹರಿಸುವುದನ್ನು ಖಾಸನೀಸರು ಸುಂದರವಾಗಿ ನಿರೂಪಿಸಿದ್ದಾರೆ.

ಖಾಸನೀಸರ ಎಲ್ಲಾ ಕಥೆಗಳೂ ಇಂತಹ ಪ್ರತಿಮೆಗಳಿಂದ ಮತ್ತಷ್ಟು ಗಟ್ಟಿತನವನ್ನು ಪಡೆಯಲು ಸಾಧ್ಯವಾಗಿದೆ ಎನ್ನಬಹುದು. ಅಂತಹ ಗಟ್ಟಿತನವನ್ನು ಪ್ರದರ್ಶಿಸುವ ಮತ್ತೊಂದು ಕಥೆ ಅಲ್ಲಾವುದ್ದೀನನ ಅದ್ಭುತ ದೀಪ. ಕಥೆಯ ಶೀರ್ಷಿಕೆಯೇ ಸಂಕೇತ ಪ್ರಧಾನವಾದದ್ದು. ವಾಸು ತನ್ನ ಕಕ್ಕನಿಗಾಗಿ ನಡೆಸಿದ ಹುಡುಕಾಟದಲ್ಲಿ ತಾನು ಹೊಕ್ಕ ಮನೆಯ ಮೊದಲ ಕೋಣೆಯಲ್ಲಿರುವ ಗೋಡೆಯ ಮೇಲಿನ ಚಿತ್ರಗಳು ಅವರ ಕುಟುಂಬದ ಚಿತ್ರಣವಾಗುತ್ತವೆಯಾದರೂ ಚಿತ್ರದಲ್ಲಿದ್ದ ವ್ಯಕ್ತಿಗಳು ಮಾತ್ರ ನಾಪತ್ತೆ. ಭಾವಚಿತ್ರದಲ್ಲಿನ ದೊಡ್ಡ

ಕುಟುಂಬ ಕೇವಲ ಚಿತ್ರಕ್ಕೆ ಸೀಮಿತವಾಗಿ ವಾಸ್ತವದಲ್ಲಿ ಖಾಲಿ–ಖಾಲಿಯಾಗಿರುವುದು ಕುಟುಂಬದ ವಿಘಟನೆಯನ್ನು ಸಂಕೇತಿಸುತ್ತದೆ.

ಪುಣೆಯ ಬಸ್ಸಿನಲ್ಲಿ ಪ್ರಯಾಣಿಸುತ್ತಿರುವಾಗ ವಾಸುವಿನ ದೃಷ್ಟಿಯನ್ನು ತನ್ನತ್ತ ಸೆಳೆಯುವ ಜಾಹೀರಾತು ಫಲಕವೊಂದು ವಾಸುವಿನ ಕುಟುಂಬದ ದುರಂತಕ್ಕೆ ಹಿಡಿದ ಕನ್ನಡಿಯಂತೆ ಕಾಣಸಿಗುತ್ತದೆ.

" ಮೇಲಕ್ಕೆ ಕೈಮಾಡಿ, ತಲೆ ಕೆದರಿಕೊಂಡು ರೋದಿಸುತ್ತನಿಂತ ಒಬ್ಬ ಮಧ್ಯಮ ವಯಸ್ಸಿನ ಹೆಂಗಸಿನ ಚಿತ್ರವಿದೆ. ಪಕ್ಕಕ್ಕೆ ಚಿಕ್ಕ ಗಾತ್ರದಲ್ಲಿ ಇಬ್ಬರು ಬಡಿದಾಡುವ ಭಂಗಿಯಲ್ಲಿ ಬಾಗಿನಿಂತಿದ್ದಾರೆ. ಒಬ್ಬನ ಕೈಯಲ್ಲಿ ರಿವಾಲ್ವರಿದೆ. ಇನ್ನೊಬ್ಬನ ಕೈಯಲ್ಲಿ ಏನೂ ಇಲ್ಲ. ಹಿನ್ನಲೆಯಲ್ಲಿ ಮಸುಕು–ಮಸುಕಾಗಿ ತೆಗೆದ ಮನೆಯ ಚಿತ್ರ"

ಜಾಹೀರಾತು ನೋಡಿದ ಕೂಡಲೇ ವಾಸುವಿನ ಕಣ್ಣಮುಂದೆ ತನ್ನ ಮನೆ ಮತ್ತು ತನ್ನ ತಾಯಿ ಹೇಳಿದ ಮನೆಯ ದುರಂತಕ್ಕೆ ಕಾರಣವಾದ ಪಾಪದ ಕಥೆ ತಂತಾನೇ ಬಿಚ್ಚಿಕೊಳುತ್ತದೆ. ತಲೆಕೆದರಿಕೊಂಡು ರೋಧಿಸುತ್ತ ನಿಂತ ಹೆಂಗಸಿನ ಚಿತ್ರ ತನ್ನ ತಾಯಿಯ ಅಸಹಾಯಕ, ಶೋಚನೀಯ ಸ್ಥಿತಿಯನ್ನು ಚಿತ್ರಸಿದರೆ, ಇಬ್ಬರು ಬಡಿದಾಡುವ ಭಂಗಿ ಮನೆಯ, ಸಂಸಾರದೊಳಗಿನ, ಸಂಬಂಧಗಳ ನಡುವಿನ ಪರಸ್ಪರ ಘರ್ಷಣೆಯನ್ನು ಸಂಕೇತಿಸುತ್ತದೆ.

ರಿವಾಲ್ವಾರಿನ ವ್ಯಕ್ತಿಯ ಚಿತ್ರ ಅಂಬಕ್ಕನ ಕಿಡಿಗೇಡಿತನಕ್ಕೆ, ನಾಶದ ಕಿಡಿಯನ್ನೂದಲು ಸಿದ್ದವಾಗಿರುವ ಅಸ್ತ್ರದಂತೆ ಗೋಚರಿಸಿದರೆ ಖಾಲಿ ಕೈಯ ಚಿತ್ರ ಸತ್ಯಭೋಧನ ಅಸಹಾಯಕ ಸ್ಥಿತಿಯನ್ನು ಪ್ರತಿನಿಧಿಸುತ್ತದೆ. ತಾನು ನಿರಫರಾಧಿ ಎಂಬುದನ್ನು ಸಾಬೀತುಮಾಡಲಾಗದ ಅಸಾಧ್ಯತೆಯ ಕುರುಹಾಗಿ ಚಿತ್ರಿತವಾಗಿದೆ. ಮಸುಕು–ಮಸುಕಾಗಿರುವ ಮನೆಯ ಚಿತ್ರ ದುರಂತದಲ್ಲಿ ಮರೆಯಾಗುತ್ತಿರುವ ಕುಟುಂಬವೊಂದರ, ಸಂಸಾರವೊಂದರ ವಿನಾಶದ ಸಂಕೇತವಾಗಿ ನಿರೂಪಿತವಾಗಿದೆ.

ಮೇಲೆ ಚರ್ಚಿಸಿದ ಎಲ್ಲಾ ವಿವರಗಳೂ ನವ್ಯ ಸಾಹಿತ್ಯವೊಂದು ಒಳಗೊಂಡಿರುವ ಪ್ರಮುಖ ಲಕ್ಷಣಗಳನ್ನು ಚರ್ಚಿಸುತ್ತದೆ. ಅಂತಹ ನವ್ಯದ ಲಕ್ಷಣಗಳನ್ನು ಖಾಸನೀಸರ ಕಥೆಗಳೂ ಸಹಜವಾಗಿವೇ ಒಳಗೊಂಡಿರುವುದರಿಂದ ಖಾಸನೀಸರನ್ನು ನವ್ಯ ಕಥೆಗಾರ ಎಂತಲೂ ಅವರ ಕಥೆಗಳನ್ನು ನವ್ಯಕಥೆಗಳು ಎಂತಲೂ ಕರೆಯಬಹುದಾಗಿದೆ. ಅಂದ ಮೇಲೆ ಅವರ ಕಥೆಗಳಲ್ಲಿ ನವ್ಯತೆ ಸಹಜವಾಗಿಯೇ ಅಭಿವ್ಯಕ್ತಿಗೊಂಡಿದೆ. ಎನ್ನಬಹುದು.

ಅಧ್ಯಾಯ - ೫

ಖಾಸನೀಸರ ಕಥೆಗಳಲ್ಲಿ ಸಂಬಂಧಗಳ ಸ್ವರೂಪ

ಸಾಹಿತ್ಯ ಜೀವನದ ಪ್ರತಿಬಿಂಬ-ಗತಿಬಿಂಬ ಎಂಬ ಜಿ.ಎಸ್.ಎಸ್ ಮಾತು ಸಾಹಿತ್ಯಕ್ಕೂ ಮತ್ತು ಬದುಕಿಗೂ ಇರುವ ಅವಿನಾಭಾವ ಸಂಬಂಧದ ದ್ಯೋತಕದಂತಿದೆ. ಅದರಲ್ಲೂ ಕಥಾಸಾಹಿತ್ಯಕ್ಕಂತೂ ಈ ಮಾತು ಚಾಚುತಪ್ಪದೇ ಒಪ್ಪುತ್ತದೆ. ಏಕೆಂದರೆ ಕಾವ್ಯದಲ್ಲಾಗಲೀ ಇನ್ನಿತರ ಕೆಲವು ಸಾಹಿತ್ಯ ಪ್ರಕಾರಗಳಲ್ಲಾಗಲೀ ಜೀವನವನ್ನು ಹೊರತಾದ ವಸ್ತುಗಳು ಸಾಹಿತ್ಯವಾಗಬಲ್ಲವು ಆದರೆ ಕಥಾಸಾಹಿತ್ಯ [ಕಾದಂಬರಿಯೂ ಸೇರಿದಂತೆ]ದ ಜೀವಾಳ ಬದುಕು ಒಂದು ಕಥೆ ಯಾವ ಘಟನೆಯನ್ನೇ ಹೇಳಲಿ, ಯಾವ ಚಿತ್ರಣವನ್ನೇ ನಿರೂಪಿಸಲಿ, ಅದು ಬದುಕಿನ ಚೌಕಟ್ಟಿನ ಒಳಗೆ ರೂಪುಪಡೆಯುವಂತಹದು. ಅಂದಮೇಲೆ ಈ ಬದುಕಿನ ಕೇಂದ್ರ ಮನುಷ್ಯ. ಮನುಷ್ಯನೇ ಕೇಂದ್ರವಾದಾಗ ಅವನು ಬದುಕುತ್ತಿರುವ ಪರಿಸರ, ಸಮಾಜ, ಸಂಬಂಧಗಳು, ಕುಟುಂಬ, ಎಲ್ಲವೂ ಬದುಕಿನ ಅವಿಭಾಜ್ಯ ಅಂಗಗಳೇ. ಆದ್ದರಿಂದ ಕಥೆ ಬದುಕನ್ನು ಕಟ್ಟುವಾಗ ಇವುಗಳನ್ನೊರತಾದ ಬದುಕಿನ ಕಟ್ಟಡ ನಿರ್ಮಾಣವಾಗಲಾರದು ಇವೆಲ್ಲವುಗಳ ಮಿಶ್ರಣವೇ ಕಥೆಯಾದಾಗ ಅಲ್ಲಿ ನಿಜವಾದ ಬದುಕಿನ ಕಟ್ಟುವಿಕೆ ಸಾಧ್ಯವಾಗುತ್ತದೆ. ಅಂತಹ ಬದುಕನ್ನು ತಮ್ಮ ಕಥೆಗಳ ಮೂಲಕ ಕಟ್ಟುವ ಪ್ರಯತ್ನದಲ್ಲಿ ಖಾಸನೀಸರು ಸಫಲರಾಗಿದ್ದಾರೆ. ಮಾನವ ಬದುಕಿನ ಸಣ್ಣ-ಸಣ್ಣ ಸಂಗತಿಗಳು ಇಲ್ಲಿ ಸ್ಥಾನ ಪಡೆಯುತ್ತವೆ. ಇದು ಖಾಸನೀಸರು ಬದುಕನ್ನು ಅನುಭವಿಸಿ ಆ ಅನುಭವವನ್ನು ಬರಹವನ್ನಾಗಿಸಿದ್ದಕ್ಕೆ ನಿದರ್ಶನ ಎನ್ನಬಹುದು.

ಖಾಸನೀಸರ ಕಥೆಗಳು ಬದುಕಿನ ಎಲ್ಲಾ ಅಂಗಗಳನ್ನು, ಜೀವನದ ಸೂಕ್ಷ್ಮ ಒಳಹುಗಳನ್ನು ಹಿಡಿದಿಟ್ಟಿವೆ. ಅಂತಹ ಒಳಹುಗಳಲ್ಲಿ ಪ್ರಧಾನ ನೆಲೆಯಲ್ಲಿ ನಿಲ್ಲುವುದು ಅಲ್ಲಿನ ಮನುಷ್ಯ ಸಂಬಂಧಗಳ ಸ್ವರೂಪವೇ. ಮನುಷ್ಯ ಸಂಬಂಧಗಳ ನಡುವಿನ ಎಲ್ಲಾ ಸಾಧ್ಯತೆಗಳನ್ನು ಕಥೆಯಿಂದ ಕಥೆಗೆ ಭಿನ್ನನೆಲೆಯಲ್ಲಿ ಜೋಡಿಸುವ ಖಾಸನೀಸರು ಕನ್ನಡದ ಉಳಿದೆಲ್ಲಾ ಕಥೆಗಾರರು ಸಂಬಂಧಗಳಿಗೆ ನೀಡುವ ಪ್ರಾತಿನಿಧಿಕತೆಗಿಂತ ಕೊಂಚ ಹೆಚ್ಚಾಗಿಯೇ ನೀಡಿದ್ದಾರೆಂಬುದು ಅವರ ಕಥೆಗಳ ಓದಿನಿಂದ ಅರಿವಾಗುತ್ತದೆ. ಅಧ್ಯಯನದ ಪ್ರಧಾನ ಕಾಳಜಿ ಖಾಸನೀಸರ ಕಥೆಗಳಲ್ಲಿನ ಸಂಬಂಧಗಳ ಬಗ್ಗೆಗಾದರೂ ಅದನ್ನೊರತಾಗಿ ಮನುಷ್ಯ ಸಂಬಂಧಗಳ ಕುರಿತು ಕೆಲವು ವಿಚಾರಗಳನ್ನು ಅರ್ಥೈಸಿಕೊಳ್ಳುವುದು ಈ ಪ್ರಬಂಧ ರಚನೆಗೆ ಪೂರಕವಾಗಬಲ್ಲದು ಎಂಬ ದೃಷ್ಟಿಯಿಂದ ಈ ವಿಷಯವಾಗಿ ಚರ್ಚಿಸಲಾಗಿದೆ.

ಮನುಷ್ಯನ ಸಂಬಂಧಗಳು ಮತ್ತು ಆ ಸಂಬಂಧಗಳ ಒಳಹುಗಳು ಮೇಲ್ ನೋಟಕ್ಕೆ ನಮ್ಮ ದೃಷ್ಟಿಗೆ ಸಿಲುಕುವಷ್ಟು ಸೀಮಿತತೆಯಿಂದ ಕೂಡಿಲ್ಲ. ಅದು ಅನನ್ಯ ಮತ್ತು ಅಸೀಮಿತವಾದದ್ದು. ಅಂತಹ ಸಂಬಂಧಗಳ ಕೆಲವು ಒಳಹುಗಳನ್ನು ಮಾತ್ರ ಚರ್ಚಿಸಲಾಗಿದೆ ಎನ್ನಬಹುದು. ಮುಂದೆ ಇಂತಹ ಸಂಬಂಧಗಳ ಮತ್ತಷ್ಟು ಒಳಹುಗಳನ್ನು ಖಾಸನೀಸರ ಕಥೆಗಳ ಹಿನ್ನಲೆಯ ಆಧಾರದಲ್ಲಿ ಚರ್ಚಿಸುವ ಉದ್ದೇಶ ಈ ಪ್ರಬಂಧದ ಮಹತ್ವದ ಉದ್ದೇಶವಾಗಿದೆ. ಈ ಚರ್ಚೆಗೆ ಅನುಕೂಲವಾಗುವಂತೆ ಖಾಸನೀಸರ ಕಥೆಗಳಲ್ಲಿನ ಸಂಬಂಧಗಳ ಸ್ವರೂಪವನ್ನು ವಿವರಿಸಲು ಅಲ್ಲಿ ಬರುವ ಎಲ್ಲಾ ಸಂಬಂಧಗಳನ್ನು ಮುಖ್ಯವಾಗಿ ಈ ರೀತಿ ವಿಂಗಡಿಸಿಕೊಳ್ಳಲಾಗಿದೆ.

ಅ. ಪುರುಷ–ಸ್ತ್ರೀ ಸಂಬಂಧಗಳು.

ಆ. ಕೌಟುಂಬಿಕ ಸಂಬಂಧಗಳು.

ಇ. ಸ್ನೇಹ ಸಂಬಂಧಗಳು.

ಈ. ಜನ್ಮಾಂತರದ ಸಂಬಂಧಗಳು.

ಖಾಸನೀಸರ ಕಥೆಗಳಲ್ಲಿ ಬರುವ ಪಾತ್ರಗಳ ಮತ್ತು ಅವುಗಳು ಹೊಂದಿರುವ ಸಂಬಂಧಗಳ ಹಿನ್ನಲೆಯಲ್ಲಿ ಮೇಲ್ ಕಂಡ ಸಂಬಂಧಗಳನ್ನು ಚರ್ಚಿಸಲಾಗುತ್ತದೆ. ಈ ಪ್ರಬಂಧದಲ್ಲಿ ಕಥೆಯನ್ನು ಪ್ರಧಾನವಾಗಿಟ್ಟುಕೊಂಡು ಚರ್ಚಿಸದೇ ಸಂಬಂಧಗಳನ್ನು ಪ್ರಧಾನವಾಗಿಟ್ಟುಕೊಂಡಿದೆ. ಆದರೂ ಕೂಡ ಸಂಬಂಧದ ಮೂಲಕ ಕಥೆಯ ಚರ್ಚೆಯೇ ಮುಖ್ಯ ಎಂಬುದು ಸತ್ಯ. ಇಂತಹ ಸಂಬಂಧಗಳೇ ಪ್ರಧಾನವಾಗಿರುವುದಕ್ಕೆ ಮುಖ್ಯ ಕಾರಣ ಖಾಸನೀಸರು ಮನುಷ್ಯ ಸಂಬಂಧಗಳಿಗೆ ತಮ್ಮ ಕಥೆಗಳಲ್ಲಿ ನೀಡಿರುವ ಮಹತ್ವ ಮತ್ತು ತಮ್ಮ ಕಥೆಗಳ ಮೂಲಕ ಆ ಸಂಬಂಧಗಳ ಹಲವು ಸೂಕ್ಷ್ಮ ಒಳಸಂಬಂಧಗಳನ್ನು ತಮ್ಮ ಕಥೆಯಲ್ಲಿ ಎಲ್ಲಿಯೂ ಮರೆಮಾಚದೇ ಅಭಿವ್ಯಕ್ತಿಸಿರುವುದು.

ಮನುಷ್ಯ ಸಂಬಂಧಗಳು ಹೊಂದಿರಬಹುದಾದ ಹಲವು ಸಾಧ್ಯತೆಗಳನ್ನು ವಿಶಿಷ್ಟವಾಗಿ ಹೆಣೆದಿರುವ ಖಾಸನೀಸರ ಕಥೆಗಳ ಪ್ರಧಾನ ವಸ್ತು ಮನುಷ್ಯ ಸಂಬಂಧಗಳೇ ಆದ್ದರಿಂದ ಕಥೆಗೆ ನೇರವಾಗಿ ಪ್ರವೇಶಿಸದೇ ಸಂಬಂಧಗಳು ಎಂಬ ಕಿಟಕಿಯ ಮೂಲಕ ಪ್ರವೇಶಿಸುವ ಉದ್ದೇಶ ಈ ನಿಬಂಧದ್ದು. ಏಕೆಂದರೆ ಕಥೆಗಿರುವ ಬಾಗಿಲು ಒಂದೇ, ಆದರೆ ಕಿಟಕಿಗಳು ಹಲವು. ಅದೇ ರೀತಿ ಕಥೆಯನ್ನು ಪ್ರವೇಶಿಸಲು, ಅರ್ಥೈಸಲು ಒಂದು ಕಥೆಗೆ ಬಾಗಿಲಿಗಿಂತ ಕಿಟಕಿಗಳು ಮುಖ್ಯವಾಗಿರುತ್ತದೆ. ಇಂತಹ ಹಲವು ಕಿಟಕಿಗಳು ಅವರ ಕಥೆಗಳಲ್ಲಿ ಬರುವ ಮನುಷ್ಯ ಸಂಬಂಧಗಳಾಗಿದ್ದರಿಂದ ಆ ಸಂಬಂಧಗಳೇ ಈ ಪ್ರಬಂಧಕ್ಕೆ ಮುಖ್ಯ ಪ್ರವೇಶಿಕೆಗಳಾಗಿವೆ ಎನ್ನಬಹುದು.

ಅ) ಪುರುಷ - ಸ್ತ್ರೀ ಸಂಬಂಧಗಳು :

ಖಾಸಾನೀಸರ ಎಲ್ಲಾ ಕಥೆಗಳೂ ಪುರುಷ -ಸ್ತ್ರೀ ಸಂಬಂಧಗಳನ್ನು ಪ್ರಧಾನವಾಗಿ ಒಳಗೊಂಡ ಕತೆಗಳೇ. ಸಂಬಂಧಗಳೇ ಮುಖ್ಯವಾದ ಇವರ ಕಥೆಗಳಲ್ಲಿ ಪುರುಷ ಸ್ತ್ರೀ ಸಂಬಂಧಗಳ ಸ್ವರೂಪವನ್ನು ಎರಡು ನೆಲೆಯಲ್ಲಿ ಗುರುತಿಸಬಹುದು. ಒಂದು ದಾಂಪತ್ಯ ಸಂಬಂಧ, ಮತ್ತೊಂದು ಪ್ರೇಮಸಂಬಂಧ. ಇದನ್ನೊರತಾಗಿಯೂ ಕೆಲವು ಪುರುಷ-ಸ್ತ್ರೀ ಸಂಬಂಧಗಳು ಬರಬಹುದು. ಆದರೆ ಈ ಎರಡು ನೆಲೆಗಳನ್ನು ಮುಖ್ಯವಾಗಿ ಇಲ್ಲಿ ಚರ್ಚಿಸಲಾಗಿದೆ. ಅವರ ಎಲ್ಲಾ ಕತೆಗಳೂ ಈ ಪುರುಷ - ಸ್ತ್ರೀ ಸಂಬಂಧದ ನಿರೂಪಣೆಯನ್ನು ಹೊಂದಿರುವುದರಿಂದ ಅವೆಲ್ಲವೂ ಇಲ್ಲಿ ಚರ್ಚೆಗೊಳಗಾಗಿವೆ. ಒಂದೇ ಕಥೆಯಲ್ಲಿ ಹಲವು ಪುರುಷ-ಸ್ತ್ರೀ ಸಂಬಂಧಗಳಿರಬಹುದು. ಈ ಎಲ್ಲಾ ಸಂಬಂಧಗಳಲ್ಲಿ ಮುಖ್ಯವೆನಿಸುವ ಸಂಬಂಧಗಳ ವಿವರಣೆ ಇಲ್ಲಿ ನಡೆಯುತ್ತದೆ.

★ ಮಂದಿಯ ರಹಸ್ಯ ಕತೆಯಲ್ಲಿನ ಗಂಡು-ಹೆಣ್ಣಿನ ಸಂಬಂಧಗಳು ಖಾಸನೀಸರ ಸಂಬಂಧಗಳ ಹೆಣೆಯುವಿಕೆಗೆ ಉತ್ತಮ ನಿದರ್ಶನ. ಇಲ್ಲಿ ಬರುವ ಮಂದಾಕಿನಿ ಮತ್ತು ವಾಸು ಇವರಿಬ್ಬರ ನಡುವಿನ ಪ್ರೇಮ ಅವರ ನಡುವೆ ಸಂಬಂಧದ ಸೇತುವೆಯನ್ನು ನಿರ್ಮಿಸಿದೆ. ಆದರೆ ಆ ಸೇತುವೆಯ ನಿರ್ಮಾಣದಲ್ಲಿ ಪೂರ್ಣಶ್ರಮ ಮಂದಾಕಿನಿಯದೇ ವಿನಃ ವಾಸುವಿನದು ಕೊಂಚ ಪ್ರಯತ್ನವೂ ಇಲ್ಲ. ಮಂದಿಯಾದರೂ ತನ್ನ ಮತ್ತು ವಾಸುವಿನ ನಡುವಿನ ಸಂಬಂಧವನ್ನು ವಾಸ್ತವದಲ್ಲಿ ಜೋಡಿಸುವ ಪ್ರಯತ್ನವನ್ನು ಎಂದಿಗೂ ಮಾಡುವುದೇ ಇಲ್ಲ. ಬದಲಿಗೆ ಕನಸಿನಲ್ಲಿ ಕಲ್ಪನೆಯಲ್ಲಿ ನೆನಪುಗಳಲ್ಲಿ ಮಾತ್ರ ಸಂಬಂಧಗಳನ್ನು ಹೆಣೆಯುತ್ತಾಳೆ. ನಿಜವಾಗಿಯೂ ಈ ಸಂಬಂಧದ ಸ್ವರೂಪ ಯಾವುದೋ ಎಂಬ ಪ್ರಶ್ನೆ ಅವಳನ್ನೇ ಕಾಡುತ್ತಿರುತ್ತದೆ. ವಾಸು ತನಗೇನಾಗಬೇಕು ? ತಾನೇಕೆ ವಾಸುವನ್ನ ಪ್ರೀತಿಸುತ್ತೇನೆಂಬ ಗೊಂದಲ ಈ ಮಾತುಗಳಲ್ಲಿ ವ್ಯಕ್ತವಾಗುತ್ತದೆ.

''ವಾಸು ಕಲಿತು ಜಾಣನಾಗುವುದರಲ್ಲಿ ಅವ್ವನಿಗೆ ಎಷ್ಟು ಅಭಿಮಾನವಿದೆ. ಎಷ್ಟಾದರೂ ಅವನು ಅವಳ ತಮ್ಮ. ಹಾಗಾದರೆ ತನಗೇಕೆ ನಾನಿಯ ಬಗೆಗೆ ಅಭಿಮಾನವಿರಬಾರದು ? ಆದರೆ ತನಗೂ ಕೂಡ ಅವ್ವನಂತೆ ವಾಸೂನ ಬಗೆಗೇ ಹೆಚ್ಚು ಅಭಿಮಾನ. ಹಾಗೇಕೆ ? ವಾಸು ಅವ್ವನಿಗೆ ತಮ್ಮ ತನಗೇನಾಗಬೇಕು ?''...........

ವಾಸುಮಾಮಾ ಎಂದು ಕರೆಯುವ ಅವಳ ಸಂಭೋದನೆಯಲ್ಲಿ ವಾಸು ಮಂದಿಗೆ ಸೋದರ ಮಾವನೆಂಬುದು ತಿಳಿಯುತ್ತದಾದರೂ ಅವಳ ಪ್ರಶ್ನೆಗೆ ಇದು ಉತ್ತರವಾಗುವುದಿಲ್ಲ. ಕೇವಲ ತನ್ನ ತಾಯಿಯ ತಮ್ಮ ಎಂಬ ಸಂಬಂಧವಿದ್ದರೆ ಮಂದಿ ವಾಸುವಿನ ಬರುವಿಕೆಗಾಗಿ, ಅವನ ಒಂದೊಂದು ಮಾತಿಗಾಗಿ, ಅವನ ನಗುವಿಗಾಗಿ, ಅವನ ಸಾನ್ನಿಧ್ಯಕ್ಕಾಗಿ ಇಷ್ಟೊಂದು ಹಾತೊರೆಯುತ್ತಿರಲಿಲ್ಲ. ಅಲ್ಲಿ ಬಂಧುತ್ವವನ್ನು ಮೀರಿದ ಗಂಡು-ಹೆಣ್ಣಿನ ನಡುವೆ ಸಹಜವಾಗಿ ಹುಟ್ಟುವ ಪ್ರೇಮ ಅವಳಲ್ಲಿ ಅಂಕುರಿಸಿದೆ. ಆದ್ದರಿಂದ ವಾಸುವಿನಲ್ಲಿ ಅವಳು ಬಂಧುತ್ವವನ್ನು ಮೀರಿದ ಸಂಬಂಧವನ್ನು ಹೊಂದಿದ್ದಾಳೆ. ಅವ್ವನಿಗೆ ತನ್ನ ತಮ್ಮನ ಮೇಲೆ ಇರುವ ಅಭಿಮಾನ, ನನಗೆ ನನ್ನ ತಮ್ಮನ ಮೇಲೆ ಏಕೆ ಇಲ್ಲ. ಬದಲಾಗಿ ವಾಸುವಿನ ಮೇಲೇ ಏಕಿದೆ ಎಂಬ ಅವಳ ಪ್ರಶ್ನೆ ಆ ಅಭಿಮಾನಕ್ಕೆ ಪ್ರೇಮದ ಚೌಕಟ್ಟನ್ನು ನಿರ್ಮಿಸುತ್ತದೆ. ವಾಸು ತನ್ನ ಮನೆಯಲ್ಲಿದ್ದಷ್ಟು ಕಾಲ ಖುಷಿಯಿಂದಿರುವ ಮತ್ತು ಅವನಿಲ್ಲದಾಗ ತಳಮಳಿಸುವ ಅವಳ ಮನಸ್ಸು ವಾಸುವಿನೊಂದಿಗೆ ಅವಳೇ ಬೆಸೆದುಕೊಂಡಿರುವ ಸಂಬಂಧಧ ಗಾಢತೆಗೆ ಸಾಕ್ಷಿಯಾಗಿದೆ.

ಕಥೆಯ ಶೀರ್ಷಿಕೆಯೇ ಹೇಳುವಂತೆ ಮಂದಿಯದು ಪ್ರೇಮರಹಸ್ಯ. ತಾನು ವಾಸುವಿನಂತೆ ಸುಂದರಳಲ್ಲ. ಓದಿದವಳು ಅಲ್ಲ ಎಂಬುದನ್ನು ಅರಿತ ಮಂದಿ ವಾಸುವನ್ನು ಪ್ರೇಮಿಸುವಲ್ಲಿ ಪ್ರೇಮದ ಭಾವನೆಗಳು ಚಿಗುರಲು ಈ ಎಲ್ಲಾ ನ್ಯೂನತೆಗಳನ್ನು ಮೀರಿದ ಅವಳ ಒಲುಮೆಯೇ ಪ್ರಧಾನವೆಂಬ ಸತ್ಯಕ್ಕೆ ಗುರುತಾಗಿದೆ. ಪ್ರೇಮವೆಂಬ ಸಂಬಂಧ ದಾಂಪತ್ಯದಲ್ಲಿ ರೂಪ ಪಡೆಯಬೇಕೆಂಬ ಇಚ್ಛೆಯುಳ್ಳ ಮಂದಿ ಕೊನೆಗೂ ನಿರಾಸೆಯಲ್ಲಿ ಮೌನಿಯಾಗುವುದು ಕಥೆಯ ದುರಂತ.

ಮಂದಿಯದು ವಾಸುವಿನೊಂದಿಗೆ ಶುಭ್ರವಾದ ಪ್ರೇಮಸಂಬಂಧ. ಅದಕ್ಕೆ ವಾಸುವಿನ ಪ್ರತಿಕ್ರಿಯೆ ಇಲ್ಲದಿರಬಹುದು. ಆದರಲ್ಲಿ ವಾಸುವಿನದೂ ತಪ್ಪಿಲ್ಲ. ಏಕೆಂದರೆ ವಾಸು ಕೂಡ ಅವಳ ಪ್ರೇಮವನ್ನು ಕನಸಿನಲ್ಲಿಯೂ ಬಯಸಿದವನಲ್ಲ. ತನ್ನ ಓದು, ಸೌಂದರ್ಯಕ್ಕೆ ತಕ್ಕ ಹೆಣ್ಣನ್ನು ಮದುವೆಯಾಗುವ ವಾಸು ಎಲ್ಲಿಯೂ ಮಂದಿಯ ಮುಗ್ಧ ಪ್ರೀತಿಯನ್ನು ದುರುಪಯೋಗದ ಪಡಿಸಿಕೊಂಡವನಲ್ಲ. ಅವನ ಈ ಗುಣ ಮಂದಿಯ ಪ್ರೀತಿಯ ಅಣೆಕಟ್ಟು ಉಕ್ಕಿ ಹರಿಯಲು ಮತ್ತೊಂದು ಕಾರಣವಾಯಿತು.

ಮಂದಿಯನ್ನು ಕಾಮಿಸುವ ಪುರುಷ ಕಣ್ಣುಗಳಿಗೇನೂ ಕೊರತೆಯಿರಲಿಲ್ಲ. ಆದರೆ ಆ ಕಣ್ಣುಗಳಲ್ಲಿ ಪ್ರೇಮವೆಂಬ ಒಂದು ಸಣ್ಣ ಮಿಂಚೂ ಕಾಣುತ್ತಿರಲಿಲ್ಲ. ಆದರೆ ವಾಸುವಿನ ಕಣ್ಣುಗಳು ಮಾತ್ರ ಅವಳ ಪ್ರೇಮದಂತೆಯೇ ನಿರ್ಮಲವಾಗಿತ್ತು. ಆ ನಿರ್ಮಲತೆಯಲ್ಲಿ ಮಂದಿಯ ಪ್ರೇಮ ಎಲ್ಲಿಯೂ ವಾಸುವಿನ ಹೃದಯವನ್ನು ಕಲಕಲೇ ಇಲ್ಲ. ತನ್ನ ಶಾಲೆಯಲ್ಲಿ ಮಾಸ್ತರರ ಮತ್ತು ಮನೆಯ ಸುತ್ತಲಿನ ಕಾಮುಕ ಕಣ್ಣುಗಳ ನಡುವೆ ವಾಸುವಿನ ಕಣ್ಣುಗಳಲ್ಲಿ ಪ್ರೇಮವನ್ನು ಕಾಣಬಯಸುವ ಮಂದಿಯ ಬಯಕೆ, ಬಯಕೆಯಾಗಿಯೇ ಉಳಿಯುವ ಮೂಲಕ ಅವಳ ಮತ್ತು ವಾಸುವಿನ ಸಂಬಂಧ ಕನಸಿನಲ್ಲಿ ಕನಸಾಗಿ, ನೆನಪಿನಲ್ಲಿ ನೆನಪಾಗಿ ಮಾತ್ರ ಉಳಿಯುತ್ತದೆ.

ಈ ಕತೆಯಲ್ಲಿ ಬರುವ ಮತ್ತೊಂದು ಪುರುಷ-ಸ್ತ್ರೀ ಸಂಬಂಧ ಸಖಾರಾಮ ಮತ್ತು ರಖಮಾಳದ್ದು. ಈ ಸಂಬಂಧ ಒಂದು ಪ್ರೇಮ-ಕಾಮದ-ಸಂಕೇತವಾಗಿ ದಾಂಪತ್ಯ ಸಂಬಂಧದ ಸ್ವರೂಪದಲ್ಲಿ ಕತೆಯಲ್ಲಿ ನಿರೂಪಿತವಾಗುವುದು. ರಖಮಾ ಮತ್ತು ಸಖಾರಾಮರ ಸಂಬಂಧ ಅಪ್ರಾಪ್ತವಯಸ್ಸಿನಲ್ಲೇ ದಾಂಪತ್ಯದ ಸ್ವರೂಪವನ್ನು ಪಡೆದಿದೆ. ಈ ಸಂಬಂಧ ಕತೆಯಲ್ಲಿ ಒಂದು ಪ್ರತಿಮೆಯಂತೆ ಬಂದಿದೆ. ಅವರಿಬ್ಬರೂ ಮಂದಿಯ ಪ್ರೇಮವನ್ನು ಮತ್ತಷ್ಟು ಗಟ್ಟಿಗೊಳಿಸಲು ಸಹಕಾರಿಯಾಗುತ್ತಾರೆ. ರಖಮಾಳ ಗಂಡ ಸಖಾರಾಮಾನಂತೂ ಕೈಯಲ್ಲಿ ಕೊಳಲನ್ನಿಡಿದು ದನ ಕಾಯುವ ದೃಶ್ಯವಂತೂ ಅವಳಲ್ಲಿ ಪ್ರಮದ ಸ್ವರೂಪನಾದ ಕೃಷ್ಣನನ್ನು ನೆನೆಸುತ್ತದೆ. ಅವಳ ಮನಸ್ಸಿನ ಪ್ರೇಮಭಾವನೆಗಳಿಗೆ ಇವರ ಸಂಬಂಧ ಸಾಕಾರ ಸ್ವರೂಪವಾಗಿದೆ. ಆ ನವ ದಂಪತಿಗಳು ದಿನ್ನೆಯ ಹಿಂದೆ ಮರೆಯಾಗಿ ಹೋದ ದೃಶ್ಯ ಮಂದಿಯ ಪ್ರೇಮಭಾವದ ಸಂಕೇತವಾಗಿದೆ. ರುಮಾಳಿಗೂ ೧೫ ವರ್ಷ, ನನಗೂ ೧೫ ವರ್ಷ. ಆದರೆ ಅವಳಿಗೆ ಸಿಕ್ಕಿರುವ ಗಂಡ ನನಗೇಕಿಲ್ಲ ಎಂಬ ಪ್ರಶ್ನೆ ಅವಳಲ್ಲಿ ಉತ್ಕಟವಾಗಿರುವ ಪ್ರೇಮಾಕಾಂಕ್ಷೆಯನ್ನು ಚಿತ್ರಿಸುತ್ತದೆ.

ಮಂದಿಯ ರಹಸ್ಯ ಕತೆಯಲ್ಲಿನ ಇತರ ಸಂಬಂಧಗಳು ಮಂದಿ ಮತ್ತು ವಾಸುವಿನ ಸಂಬಂಧಕ್ಕೆ ಪೂರಕ ಸಂಬಂಧಗಳಾಗಿ ಬರುತ್ತವೇ ವಿನಃ ಎಲ್ಲಿಯೂ ಅಲ್ಲಿನ ಪಾತ್ರಗಳು ಸ್ವತಂತ್ರ ಪಾತ್ರಗಳಾಗಿ ರೂಪಿತವಾಗುವುದೇ ಇಲ್ಲ.

★ ಅಪಘಾತ ಕಥೆಯಂತೂ ಖಾಸನೀಸರ ಇತರೆಎಲ್ಲಾ ಕಥೆಗಳಿಗಿಂತ ಭಿನ್ನವಾಗಿದೆ. ಏಕೆಂದರೆ ಕೆಲವೇ ಸಮಯದಲ್ಲಿ ನಡೆದ ಒಂದು ಘಟನೆಯೇ ಇಲ್ಲಿ ಕಥೆಯ ರೂಪಪಡೆದಿದೆ. ಇಲ್ಲಿ ಘಟನೆಯೇ ಪ್ರಧಾನವಾದರೂ ಆ ಘಟನೆ ತಿರುವು ಪಡೆಯುವುದೇ ಒಂದು ಸ್ತ್ರೀಯಿಂದ. ಆದ್ದರಿಂದ ಅನಿರೀಕ್ಷಿತವಾಗಿ, ಆಕಸ್ಮಿಕವಾಗಿ ಬರುವ ಈ ಸ್ತ್ರೀ ಸಂಬಂಧ ಕಥೆಯ ಮುಖ್ಯ ಘಟನೆಗೆ ಕಾರಣವಾಗುತ್ತದಾದ್ದರಿಂದ ಆ ಸಂಬಂಧ ಸ್ವರೂಪವೂ ಇಲ್ಲಿ ಮುಖ್ಯವೆನಿಸುತ್ತದೆ.

ರಾಮನಾಥನ ಬದುಕು ಇಂತಹ ಆಕಸ್ಮಿಕ ಸ್ತ್ರೀಸಂಬಂಧಕ್ಕೆ ಎರಡು ಬಾರಿ ಸಿಲುಕುವುದಂತೂ ಖಾಸನೀಸರ ಪದಗಳಲ್ಲಿ ಸುಂದರವಾಗಿ ಸೆರೆಯಾಗಿದೆ. ಪರಿಚಯವಿಲ್ಲದ ಒಬ್ಬ ಸುಂದರ ಸ್ತ್ರೀ ತನ್ನ ಕಡೆಗೆ ತಿರುಗಿ ಎಷ್ಟೋ ವರ್ಷದ ಸಂಬಂಧಿಕಳಂತೆ ಮೋಹಕ ನಗೆ ಬೀರಿದಾಗ ಸಹಜವಾಗಿ ಒಬ್ಬ ಪುರುಷನ ಮನಸ್ಸಿನಲ್ಲುಂಟಾಗಬಹುದಾದ ತಳಮಳ ತಲ್ಲಣಗಳು ರಾಮನಾಥನನ್ನು ಒಂದು ಕ್ಷಣ ವಿಚಲಿತಗೊಳಿಸಿದರೂ ಅವನ ದೃಢಚಿತ್ತ ಮಾತ್ರ ಆ ವಿಚಲಿತ ಅಪಾಯದಿಂದ ಅವನನ್ನು ರಕ್ಷಿಸುತ್ತದೆ.

ಆ ಆಕರ್ಷಕ ನಗೆ ಅವನು ಮತ್ತು ಅವಳ ನಡುವಿನ ಯಾವ ಸಂಬಂಧದ ಗೆರೆಯೋ ಎಂದು ತಿಳಿಯಲು ಅವನ ಮನಸ್ಸು ಒಂದು ಕ್ಷಣ ಗೊಂದಲಸಿತು. ಅದು ಸ್ನೇಹವೂ ಅಲ್ಲದ ಪ್ರೇಮವೂ ಅಲ್ಲದ ಒಂದು ಪರಿಚಯಾತ್ಮಕ ನಗೆಯಂತಿದ್ದರೂ ಅವರಿಬ್ಬರ ನಡುವೆ ಅಂತಹ ಯಾವ ಪರಿಚಯವೂ ಇರಲಿಲ್ಲವೆನ್ನುವುದು ನಿಶ್ಚಯ. ಅಂಗಡಿಯೆದುರು ಎರಡೂ ಕೈಗಳಲ್ಲಿ ರಕ್ತದಂತೆ ಕೆಂಪಾದ ಎರಡು ಸೇಬುಹಣ್ಣುಗಳನ್ನಿಡಿದು ನಿಂತ ಭಂಗಿಯಂತೂ ರಾಮನಾಥನ ಮನಸಿನಾಳದಲ್ಲಿ ಸ್ತ್ರೀಯೊಬ್ಬಳು ತನ್ನ ಹೆಜ್ಜೆಗಳನ್ನಿಡುವ ಸದ್ದಿನಂತೆ ಪ್ರತಿಫಲಿಸಿ ಅವನೂ ಒಂದು ಕ್ಷಣ ತನ್ನ ಮನಸ್ಸನ್ನು ಅವಳಲ್ಲಿ ನೆಲೆಗೊಳಿಸುವಂತಹ ಭಾವನೆಗಳಿಗೆ ಒಳಗಾಗುವನು. ಆ ಸಂಬಂಧ ಅವನ ಜೀವನದ ಮೊದಲ ಮತ್ತು ತನ್ನ ನೆನಪಿನಲ್ಲಿ ಕೊನೆಯವರೆಗೂ ಉಳಿಯುವ ಸುಂದರ ಸಂಬಂಧವಾಗಿ ರೂಪುಪಡೆಯಿತಾದರೂ ಅದಕ್ಕೆ ನಿರ್ಧಿಷ್ಟ ಸ್ವರೂಪವಾದ ಯಾವ ಸಂಬಂಧದ ಚೌಕಟ್ಟು ಇಲ್ಲದೆ ನಿರಂತರವಾದ ಅವನ ಬದುಕಿನೊಂದಿಗೆ ನದಿಯಂತೆ ಹರಿದುದು ಅವನ ನೆನಪಿನ ಮಾತುಗಳ ಮೂಲಕ ವ್ಯಕ್ತಗೊಳ್ಳುತ್ತದೆ.

ಇದು ಕತೆಯಲ್ಲಿ ಬರುವ ಘಟನೆಗಿಂತ ಮೊದಲು ರಾಮನಾಥನ ನೆನಪಿನಲ್ಲಿ ಸುಳಿದುಹೋಗುವ ಸಂಬಂಧ. ಆದರೆ ಮತ್ತೊಂದು ಸಂಬಂಧ ಕತೆಯ ಘಟನೆಗೆ ಕಾರಣವಾಗುವಂತದ್ದು. ಎರಡೂ ಸ್ತ್ರೀ ಸಂಬಂಧಗಳೇ ಆದರೂ ಅವೆರಡರ ನಡುವೆ ಅಪಾರ ವ್ಯತ್ಯಾಸವಿದೆ. ಮೊದಲ ಸ್ತ್ರೀ ಸಂಬಂಧ ಯಾವುದೇ ಅಪೇಕ್ಷೆಯಿಲ್ಲದ, ದುರುದ್ದೇಶವಿಲ್ಲದ, ನಿರ್ಮಲವಾದ, ಸಂಬಂಧವಾದರೆ ರೈಲಿನಲ್ಲಿ ಉಂಟಾಗುವ ಸಂಬಂಧ ಪೂರ್ಣವಾಗಿ ದುರುದ್ದೇಶದಿಂದ ತುಂಬಿತ್ತು. ಅವಳ ಕಣ್ಣುಗಳಲ್ಲಿ ನಿಸ್ವಾರ್ಥದ ಸಹಜ ಸುಂದರತೆಯಿದ್ದರೆ ಇವಳ ಕಣ್ಣುಗಳು ಸ್ವಾರ್ಥತೆಯಿಂದ ಕೂಡಿದ ಕಾಮುಕತೆಯಿಂದ ಜ್ವಲಿಸುತ್ತಿದ್ದವು. ಎಂತಹ ಪುರುಷನನ್ನೂ ತನ್ನೆಡೆಗೆ ಸೆಳೆಯಬಲ್ಲ ಅವಳ ಮುಖದ ಆಕರ್ಷತೆಗೆ ರಾಮನಾಥ ಕೂಡ ಮನಸೋತುದು ವಿಪರ್ಯಾಸವೇನಲ್ಲ.

ಅಪಘಾತ ಕಥೆಯ ಶೀರ್ಷಿಕೆಯೇ ಅನಿರೀಕ್ಷಿತವಾದ ಆಕಸ್ಮಿಕವಾದ ಸಂಬಂಧದಿಂದ ಉಂಟಾದ ಅಪಾಯವನ್ನು ಧ್ವನಿಸುವಂತಿದೆ. ಹಿಂದೆ ಒಮ್ಮೆ ರೈಲು ಅಪಘಾತದಲ್ಲಿ ತನ್ನೆರಡು ಕೈಗಳನ್ನು ಕಳೆದುಕೊಂಡಿದ್ದ ರಾಮನಾಥನಿಗೆ ಇಂದಿನ ಅಪಘಾತದಿಂದ ಪಾರುಮಾಡಿದ್ದು ಆ ಕಳೆದುಕೊಂಡ ಕೈಗಳೇ. ಯುವತಿಯ ಮೋಹಕ ನಗೆ, ಇಂಪೋರ್ಟೆಡ್ ಸೆಂಟಿನ ಪರಿಮಳ, ಕಣ್ಣುಗಳ ಹೊಳಪು, ಮುಖದಲ್ಲಿನ ಕಾಮುಕ ಆಕರ್ಷಣೆ ಒಂದು ಕ್ಷಣ ರಾಮನಾಥನ ಮೈಯಲ್ಲಿ ವಿದ್ಯುತ್‌ಚಲನೆಯನ್ನುಂಟುಮಾಡಿದರೂ ಅದನ್ನು ಅಸಾಧ್ಯಗೊಳಿಸಿದುದು ಮಾತ್ರ ಅವನ ಮುರಿದ ಕೈಗಳಾದ್ದರಿಂದ ಇಂತಹ ಅಪಾಯಕರ ಸಂಬಂಧದಿಂದ ಅವನನ್ನು ರಕ್ಷಿಸಿದವು ಆ ಕೈಗಳು. ರಾಮನಾಥನ ಸ್ಥಿತಿಯಲ್ಲಿ ಬೇರೆ ಯಾವ ಪುರುಷನಿದ್ದರೂ ಆ ಸ್ತ್ರೀ ಸಂಬಂಧದ ಬಲೆಗೆ ಸಹಜವಾಗಿಯೇ ಸಿಕ್ಕಿ ನರಳುತ್ತಿದ್ದನು. ಆದರೆ ಈ ಬಲೆಯನ್ನು ಹೆಣೆದ ಸ್ತ್ರೀಗೆ ಮಾತ್ರ ರಾಮನಾಥನ ಸತ್ಯ ತಿಳಿಯದಿದ್ದುದು ಕಥೆಯ ಕೊನೆಯಲ್ಲಿನ ಅದ್ಭುತ ಮುಕ್ತಾಯಕ್ಕೆ ಕಾರಣವಾಗಿದೆ. ಪುರುಷ - ಸ್ತ್ರೀ ಸಂಬಂಧಗಳ ನಡುವಿನ ಇಂತಹ ದೈಹಿಕ ಆಕರ್ಷಣೆ, ಮಾನಸಿಕ ದುರ್ಬಲತೆ, ಕಾಮದ ಉತ್ಕಟತೆ ಇವು ಎಂತಹ ಅಪಾಯಕ್ಕೆ ತಳ್ಳಬಹುದೆಂಬುದರ ಎಚ್ಚರಿಕೆಯಂತೆ ಈ ಕಥೆ ಚಿತ್ರಿತವಾಗಿದೆ. ಸ್ವಾರ್ಥ, ಕಾಮುಕತನದ ಸಂಕೇತವಾಗಿ ಅಪಘಾತ ಕತೆಯ ಸ್ತ್ರೀ ಸಂಬಂಧ ರೂಪುಗೊಂಡಿದೆ. ಈ ಕಥೆಯಲ್ಲಿನ ಸಂಬಂಧ ಒಂದು ವ್ಯಾವಹಾರಿಕ ಸ್ವರೂಪದ್ದು. ಹಣಕ್ಕಾಗಿ ಹೆಣ್ಣು ತನ್ನ ಹೆಣ್ತನವನ್ನೇ ಮಾರಾಟಕ್ಕಿಡುವ ಅನೈತಿಕತೆಗೆ ಮುಂದಾಗಿ ಸಂಬಂಧವನ್ನು ಹಣದ ಸಂಪಾದನೆಗಾಗಿ ಬಳಸುವ ಸ್ಥಿತಿ ಮನುಷ್ಯ ಸಂಬಂಧಗಳ ಅತ್ಯಂತ

ಕೀಳುತನಕ್ಕೆ ಸಾಕ್ಷಿಯಾಗಿದೆ. ಇದಕ್ಕೆ ಪುರುಷ ಸ್ತ್ರೀ ಸಂಬಂಧ ದಾಂಪತ್ಯವನ್ನೊರತಾದ ಕಾಮುಕತನಕ್ಕೆ ಒಳಗಾಗುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ.

★ ಹೀಗೂ ಇರಬಹುದು ! ಕಥೆಯಲ್ಲಿನ ಪುರುಷ-ಸ್ತ್ರೀ ಸಂಬಂಧವಂತೂ ಸಂಬಂಧಗಳ ವಿಲಕ್ಷಣತೆಗೆ ಹೆಗ್ಗುರುತಿನಂತಿದೆ. ಯಾವುದನ್ನು ಅನೈತಿಕ, ಸಾಮಾಜಿಕ ನಿಯಮಕ್ಕೆ ವಿರುದ್ಧವಾದುದು ಎಂಬುದಾಗಿ ಕರೆಯಬಹುದೋ ಅಂತಹುದು ಇಲ್ಲಿಯಸಂಬಂಧ. ಸಾಮಾಜಿಕ ನಿಯಮ, ನಿರ್ಭಂಧ ಕಾರಣಗಳ ಮೂಲಕ ಜನಸಾಮಾನ್ಯರ ಜೀವನದಲ್ಲಿ ಹೆಣ್ಣು ಗಂಡು ಸಂಬಂಧಿ ವಿಷಯಕವಾದ ಹಲವು ತೊಡಕುಗಳು ತಲೆದೋರುವುವು. ಸಾಮಾಜಿಕ ಅಪರಾಧದ ಸತ್ಯ, ತೆರೆಯ ಮರೆಯಲ್ಲಿ ಹುದುಗಿಕೊಂಡೇ ಇದ್ದರೆ ಎಲ್ಲವೂ ಸರಿಹೋದೀತು. ಆದರೆ ಅದು ತೆರೆಯಿಂದ ಹೊರಗೆಬಂದರೆ ಎಂತಹ ಭೀಭತ್ಸ ದೃಶ್ಯವಿದು! ಇಂತಹ ಭೀಭತ್ಸ ದೃಶ್ಯದಂತಿದೆ ಇಲ್ಲಿನ ಸಂಂಬಧದ ಸ್ವರೂಪ ಮತ್ತು ಅಲ್ಲಿನ ವಿಲಕ್ಷಣತೆ.

ಇದೊಂದು ತ್ರಿಕೋನ ಸಂಬಂಧ. ಅಲ್ಲಿನ ಮೂರುಪಾತ್ರಗಳಾದ ವೆಂಕಟರಾಯ, ಅಂಬಕ್ಕ ಮತ್ತು ಶ್ಯಾಮನ ನಡುವಿನ ಸಂಬಂಧವೇ ಈ ಕಥೆಯ ಕೇಂದ್ರವಸ್ತು. ಈ ಸಂಬಂಧದ ವಿಶೇಷವೆಂದರೆ ಏಕಕಾಲಕ್ಕೆ ನೈತಿಕ ಮತ್ತು ಅನೈತಿಕ ಎಂಬಎರಡೂ ನೆಲೆಗಳಿಂದ ಕೂಡಿದ್ದು. ಅಂಬಕ್ಕ ಅನಿವಾರ್ಯವಾಗಿಯೂ, ಹಣದಾಸೆಗಾಗಿಯೂ ಮುದಕ ನಾಯಕರನ್ನು ಮದುವೆಯಾದಾಗ ನಾಯಕ ಮನೆತನದ ಗೌರವ, ಸ್ಥಾನಮಾನ, ಶ್ರೀಮಂತಿಕೆಗಳೆಲ್ಲವೂ ಅವಳಿಗೆ ಅದೊಂದು ನೈತಿಕ ಸಂಬಂಧವೆಂಬ ಮನ್ನಣೆಯನ್ನು ತರುತ್ತದಾದರೂ ಅದು ಗುಪ್ತವಾಗಿ ಅನೈತಿಕತೆಯತ್ತ ಸಾಗುವುದು ಕೊನೆಯಲ್ಲಿ ಬಯಲಾಗುತ್ತದೆ. ಒಂದು ಹೆಣ್ಣು ಹೆಂಡತಿಗಿಂತ ಮೊದಲು ಹೆಣ್ಣಾಗಿರುತ್ತಾಳಾದ್ದರಿಂದ ಹೆಣ್ಣಿನ ಸಹಜ ನೈಸರ್ಗಿಕ ಬಯಕೆಗಳು ಅವಳನ್ನು ಹೇಗೆ ಅನೈತಿಕತೆಯತ್ತ ನಡೆಸುತ್ತವೆಂಬುದಕ್ಕೆ ಉದಾಹರಣೆ ಅಂಬಕ್ಕನ ಪಾತ್ರ. ಸಮಾಜದ ದೃಷ್ಟಿಯಲ್ಲಿ ಆಕೆ ನಾಯಕ ಮನೆತನದ ಗೌರವಸ್ತ ಸ್ತ್ರೀ. ಆದರೆ ಆ ಗೌರವ ಅವರ ದೈಹಿಕ ಸುಖವನ್ನು ಮೀರಿದ್ದಲ್ಲ. ಹಣ, ಗೌರವ, ಸ್ಥಾನಮಾನ ಎಲ್ಲಕ್ಕಿಂತ ಮನುಷ್ಯನಿಗೆ ಬೇಕಾದುದು ಮೂಲಭೂತ ತೃಪ್ತಿಗಳು. ಅದರಲ್ಲಿ ಅವಳ ದೈಹಿಕ ತೃಪ್ತಿಯೂ ಒಂದು. ತನ್ನ ಗಂಡನಿಂದ ಅದು ಸಿಗುತ್ತಿಲ್ಲವೆಂದಾಗ ಅದನ್ನು ಮತ್ತೊಬ್ಬನಿಂದ ಬಯಸುವುದು ಸಮಾಜದ ದೃಷ್ಟಿಯಲ್ಲಿ ಹೇಯ ಕೃತ್ಯವಾದರೂ ಅಂಬಕ್ಕನ ವಯಸ್ಸಿಗೆ ಅದು ಮುಖ್ಯವಾಗುವುದೇ ಇಲ್ಲ.

ವೆಂಕಟ ನಾಯಕಪ್ಪನವರಿಗೆ ಇಳಿವಯಸ್ಸಿನಲ್ಲಿ ಮದುವೆಯಾಗುವ ಹಂಬಲ ಮೂಡಿದ್ದು ಈ ಎಲ್ಲಾ ಸಂಬಂಧಗಳು ದುರಂತದಲ್ಲಿ ಕೊನೆಯಾಗುವುದಕ್ಕೆ ಮೂಲಕಾರಣ. ನಾಯಕರ ಶ್ರೀಮಂತಿಕೆ, ಗೌರವ ಸ್ಥಾನಮಾನಗಳು ಒಂದು ಹೆಣ್ಣಿನ ದೈಹಿಕ ತೃಪ್ತಿಯ ಮುಂದೆ ಕರಗಿದುದು ಹೆಣ್ಣೊಬ್ಬಳ ನೈಸರ್ಗಿಕ ಬಯಕೆಯ ಮುಂದೆ ಶ್ರೀಮಂತಿಕೆಯ ಸೋಲಿನ ಪ್ರತೀಕದಂತಿದೆ.

ನಾಯಕರ ಮನೆಯಲ್ಲಿ ಕುಲಪುರೋಹಿತರಾಗಿದ್ದವರ (ಅಚ್ಚಂಭಟ್ಟ) ಮಗ ಶ್ಯಾಮ ತಂದೆಯ ಸಾವಿನ ಬಳಿಕ ಶಾಶ್ವತವಾಗಿ ವಾಸ್ತವ್ಯವನ್ನು ಹೂಡಿದ್ದ. ಶ್ಯಾಮ ಮತ್ತು ಅಂಬಕ್ಕನ ದೈಹಿಕ ಸಂಬಂಧ ಸಾಮಾಜಿಕ ನಿಯಮಕ್ಕೆ ವಿರುದ್ಧವಾದ್ದರಿಂದ ಅದು ಗುಪ್ತವಾಗಿತ್ತು. ಇದಕ್ಕೆ ಮನೆಯ ಹಿರಿಯಾಕೆ ರಂಗಕ್ಕನ ಸಹಕಾರವೂ ಇತ್ತಾದ್ದರಿಂದ ನಾಯಕರು ಈ ಸಂಬಂಧದೊಳಗೆ ಬಲಿಪಶುವಾಗತೊಡಗಿದರು. ನಾಯಕರು ಮತ್ತು ಅಂಬಕ್ಕನ ದಾಂಪತ್ಯ ಸಂಬಂಧ ಅಂಬಕ್ಕನನ್ನು ಗೌರವಸ್ಥ ಮನೆಯ ಸ್ತ್ರೀಯಾಗಿ ಮಾರ್ಪಡಿಸಿದ್ದು ಅವಳು ಅದರ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಹೆಣೆದ ತಂತ್ರ ಅವಳು ಮುಗ್ಧಳಾಗಿರಲಿಲ್ಲ ಎಂಬುದನ್ನು ಸಾಬೀತು ಮಾಡುತ್ತದೆ. ಶ್ಯಾಮನಿಂದ ಗರ್ಭವನ್ನು ಧರಿಸಿ ಅದನ್ನು ನಾಯಕರ ಹೆಸರಿನಲ್ಲಿ ಹಡೆದು ಲೋಕದ ಕಣ್ಣಿಗೆ ಪತಿವ್ರತೆಯಂತೆ ಬದುಕುವ ಉದ್ದೇಶವನ್ನುಳ್ಳ ಅವಳ ಜಾಣ್ಮೆ ಅವಳು ಏನನ್ನೂ ತಿಳಿಯದ ಅಪ್ರಾಪ್ತ ಹೆಣ್ಣು ಎಂಬುದನ್ನು ಸುಳ್ಳುಮಾಡುತ್ತದೆ.

ನಾಯಕರು ಮೊದಲ ಹೆಂಡತಿ ಪದ್ದಕ್ಕನ ಸಾವಿನ ನಂತರ ಎರಡನೇ ಲಗ್ನವಾಗುವುದಕ್ಕೆ ಬಲವಾದ ಕಾರಣವಾವುದೂ ಇರಲಿಲ್ಲ. ಇಳಿವಯಸ್ಸಿನಲ್ಲಿ ಸ್ತ್ರೀ ಸಹವಾಸವನ್ನು ಬಯಸಿದ ಅವರ ಬಯಕೆ ಸಹಜವಾದುದೇನೂ ಅಲ್ಲ. ಏಕೆಂದರೆ ಸುತ್ತಮುತ್ತಲ ಊರಿನಲ್ಲೆಲ್ಲಾ ಪ್ರಸಿದ್ಧ ವ್ಯಕ್ತಿಯಾಗಿದ್ದ ನಾಯಕರು ಬುದ್ಧಿ, ಅನುಭವ ಎಲ್ಲದರಲ್ಲೂ ಪರಿಣಿತರು. ಇವನ್ನೆಲ್ಲಾ ಗಮನಿಸಿದಾಗ ಮನುಷ್ಯ ಯಾವಮಟ್ಟದಲ್ಲಿಯೇ ಇರಲಿ, ಎಷ್ಟೇ ಬುದ್ಧಿ, ಅನುಭವವೇ ಇರಲಿ, ಪ್ರತಿಯೊಬ್ಬ ಮನುಷ್ಯನಿಗೂ ಒಂದಲ್ಲಾ ಒಂದು ದೌರ್ಬಲ್ಯ ಇದ್ದೇ ಇರುತ್ತದೆ ಎಂಬ ಸತ್ಯಕ್ಕೆ ನಿದರ್ಶನ ನಾಯಕರು. ಪದ್ದಕ್ಕನಿಂದ ಹತ್ತು ಮಕ್ಕಳನ್ನು ಪಡೆದು ಸಂಸಾರದ ಸುಖದುಃಖಗಳನ್ನು ಸಾಕಷ್ಟು ಕಾಲ ಅನುಭವಿಸಿದ್ದರೂ ಮತ್ತೆ ಹೆಂಡತಿಯನ್ನು ಬಯಸುವ ಬಯಕೆ ಅವರಲ್ಲಿದ್ದ ಒಂದೇ ದೌರ್ಬಲ್ಯ ಆ ದೌರ್ಬಲ್ಯವೇ ಅವರ ಆತ್ಮಹತ್ಯೆಗೆ ಪ್ರಮುಖ ಕಾರಣವಾಯಿತೆನ್ನಬಹುದು.

ಶ್ಯಾಮ ಮತ್ತು ಅಂಬಕ್ಕನ ಸಂಬಂಧ ಕಾಮಕ್ಕಾಗಿ ಹಾತೊರೆಯುವ ಎರಡು ದೇಹಗಳ ಸಂಬಂಧವೇ ವಿನಃ ಅದು ಪ್ರೇಮವೂ ಅಲ್ಲ, ದಾಂಪತ್ಯವೂ ಅಲ್ಲ. ಇಬ್ಬರ ವಯಸ್ಸಿನ ಉತ್ಕಟ ಬಯಕೆ ಮುಂದೊದಗಬಹುದಾದ ದುರಂತದ ಭಯವನ್ನು ಮೀರಿ ಬೆಳೆದಿತ್ತು. ಕುರುಡು ಕಾಮ ಅವರಿಬ್ಬರನ್ನು ಆವರಿಸಿತ್ತು. ಈ ಕುರುಡು ಕಾಮದಿಂದ ಉಂಟಾದ ಬೆಂಕಿಗೆ ಅಲ್ಲಿನ ಮೂರು ಪಾತ್ರಗಳು ಸಿಕ್ಕಿ ನರಳುವುದು ಮಾತ್ರ ನಿಶ್ಚಿತವಾಗಿತ್ತು. ಹೆಣ್ಣೆಂಬ ಮಾಯೆಗಾಗಿ ಸಾವನ್ನಪ್ಪಿದ ಎರಡು ಗಂಡು ಜೀವಗಳು ಮನುಷ್ಯನ ದೈಹಿಕ ದೌರ್ಬಲ್ಯಕ್ಕೆ ಸಂಕೇತವಾಗಿದೆ. ಈ ಮಾಯೆ ಗಂಡಿನಲ್ಲಿ ವಯಸ್ಸಿನ ಅಂತರವನ್ನು ಮೀರಿ ಆಕರ್ಷಿಸಬಲ್ಲದು ಎಂಬುದಕ್ಕೆ ನಾಯಕರ ದುರಂತ ಸಾಕ್ಷಿಯಾಗಿದೆ. ಇಲ್ಲಿನ ಅಂಬಕ್ಕ ಇಂತಹ ದೌರ್ಬಲ್ಯವನ್ನೇ ಅಸ್ತ್ರವನ್ನಾಗಿಸಿಕೊಂಡು ಏಕಕಾಲದಲ್ಲಿ ಎಲ್ಲವನ್ನೂ ಅನುಭವಿಸುವ, ಅತಿಯಾಸೆಗೆ ಒಳಗಾಗಿ ಕೊನೆಗೆ ಎಲ್ಲವನ್ನೂ ಕಳೆದುಕೊಳ್ಳುವ ದ್ರೋಹಿಯಂತೆ ಕಥೆಯಲ್ಲಿ ಕಾಣಸಿಗುತ್ತಾಳೆ. ಬೆಳಕಲ್ಲಿ ಹೆಂಡತಿಯಾಗಿ ಕತ್ತಲಲ್ಲಿ ಒಬ್ಬ ಕಾಮುಕ ಹೆಣ್ಣಾಗಿ ಪರಿವರ್ತನೆಯಾಗುವ ಆವಳ ಪಾತ್ರ ಅನೈತಿಕತೆಗೆ ಹೆಗ್ಗುರುತಾಗಿದೆ. ಒಟ್ಟಾರೆಯಾಗಿ ಒಬ್ಬ ವ್ಯಕ್ತಿಯ ದುರ್ಬಲತೆಯನ್ನು ಬಂಡವಾಳವನ್ನಾಗಿ ಬಳಸಿ ತಮ್ಮ ಬದುಕನ್ನು ಸಾಗಿಸುವ ಮನುಷ್ಯ ಸಂಬಂಧಗಳಿಗೆ ಉತ್ತಮ ಉದಾಹರಣೆಯಾಗಿದೆ. ಹೀಗೂ ಇರಬಹುದು ! ಕಥೆ.

★ ಖಾಸಾನೀಸರು ಮನುಷ್ಯ ಸಂಬಂಧಗಳನ್ನೇ ಬಿಂಬಿಸಹೊರಟರೂ ಕೂಡ ಅದಕ್ಕೆ ಘಟನೆಯೊಂದರ ಚೌಕಟ್ಟು ನೀಡುವುದು ಸಹಜ. ಅವರ ಅತ್ಯಂತ ಜನಪ್ರಿಯ ಕಥೆಯಲ್ಲೂ ಮಂತ್ರಾಲಯದ ಪ್ರವಾಸದ ಕಥೆಯನ್ನು ಹೇಳುವುದರ ಮೂಲಕ ಸಂಬಂಧಗಳನ್ನು ನಿರೂಪಿಸುವ ಕೆಲಸ ಮಾಡಿದ್ದಾರೆ. ಮನುಷ್ಯ ಎಷ್ಟೇ ಸಂಬಂಧಗಳ ಕೊಂಡಿಗಳ ಜೊತೆಗೆ ಬದುಕುತ್ತಿದ್ದಾಗಲೂ ತಬ್ಬಲಿತನವನ್ನು ಅನುಭವಿಸುತ್ತಾನೆ ಎಂಬುದನ್ನು ಅಲ್ಲಿನ ಎಲ್ಲಾ ಪಾತ್ರಗಳೂ ಸಾರಿ ಹೇಳುತ್ತವೆ. ಇಲ್ಲಿ ಎರಡು ಬಗೆಯ ಪುರುಷ -ಸ್ತ್ರೀ ಸಂಬಂಧಗಳಿವೆ. ಒಂದು ತಂದೆ, ತಾಯಿಯದು, ಮತ್ತೊಂದು ತಮ್ಮ ಮತ್ತು ಆತನ ಹೆಂಡತಿಯರದು. ಈ ಸಂಬಂಧಗಳು ಮಧ್ಯಮವರ್ಗದ ಕುಟುಂಬವೊಂದರ ಸಂಬಂಧದಂತೆಯೇ ಸಹಜ ಸ್ಥಿತಿಯಲ್ಲಿ ಬದುಕುವಂತಹ ಸಂಬಂಧಗಳು. ತಬ್ಬಲಿಗಳು ಕಥೆಯಲ್ಲಿ ಕುಟುಂಬೇತರ ಸಂಬಂಧಗಳು ಪ್ರಧಾನವಾಗಿ ಯಾವುವೂ ಬರುವುದಿಲ್ಲ. ಆದರೂ ಮಂತ್ರಾಲಯದಲ್ಲಿ ಮತ್ತು ಬಸ್ಸಿನಲ್ಲಿ ತಮ್ಮ ನಿಗೆತನ್ನ ಹೆಂಡತಿಯ ನೆನಪನ್ನು ತಂದುಕೊಡುವ ಒಂದೆರಡು ಹೆಣ್ಣುಗಳು

ಪ್ರವೇಶಪಡೆಯುತ್ತವಾದರೂ ಅವು ಕಥೆಯಲ್ಲಿ ನಿಲ್ಲುವುದಿಲ್ಲ. ಕೇವಲ ಕತೆಯನ್ನು ಇಣುಕಿನೋಡುವ ಪಾತ್ರಗಳಂತಿವೆ.

ಬಸ್ಸಿನಲ್ಲಿ ತನ್ನ ಮಗ್ಗುಲಿಗೆ ಕೂತ ಹೆಂಗಸರು ನಿದ್ರೆಯಿಂದ ಅವನ ಮೇಲೆ ಬಿದ್ದಿದ್ದರಿಂದ ಅವಳ ಸ್ಪರ್ಶ ಮತ್ತು ಅವಳು ಮುಡಿದಿದ್ದ ಮಲ್ಲಿಗೆಯ ವಾಸನೆ ಅವನನ್ನು ಯಾವುದೋ ಲೋಕಕ್ಕೆ ಕರೆದುಕೊಂಡು ಹೋಗಿದ್ದವು. ಎಷ್ಟೋ ದಿವಸಗಳ ನಂತರ ಹೆಣ್ಣಿನ ಮೈ ಅವನ ಮೈಗೆ ಅಷ್ಟು ರಭಸವಾಗಿ ತಾಕಿದ್ದರಿಂದ ತಮ್ಮನಿಗೆ ಅದೊಂದು ರೋಮಾಂಚನ ಅನುಭವವಾಯಿತು. ಆದರೆ ತಾಯಿ ಎಲ್ಲಿ ನೋಡಿಬಿಡಬಹುದೋ ಎಂಬ ಭಯ ಅವನ ಈ ಸ್ಪರ್ಶಸುಖಕ್ಕೆ ಅಡ್ಡಿಪಡಿಸುತ್ತಿತ್ತು. ಈ ಚಿತ್ರಣ ಒಂದು ಗಂಡು ಹೆಣ್ಣಿನ ಸ್ಪರ್ಶಕ್ಕಾಗಿ ಹಾತೊರೆಯುವ ಆತರವನ್ನು , ಜೊತೆಗೆ ಸಮಾಜದ ಕಣ್ಣಿಗೆ ಹೆದರಿ ಸಭ್ಯನಂತೆ ವರ್ತಿಸುವ, ಅವನ ಅಸಹಾಯಕತೆಯನ್ನು ಸುಂದರವಾಗಿ ಚಿತ್ರಿಸುತ್ತದೆ.

ಇದೇ ರೀತಿಯ ಮತ್ತೊಂದು ಹೆಣ್ಣು ಅವನಿಗೆ ಕಾಣುವುದು ನದಿಯ ದಂಡೆಯಲ್ಲಿ. ಹಸಿರು ಹಣೆಯುಳ್ಳ ಸರಳವಾದ ಹುಡುಗಿಯೊಬ್ಬಳನ್ನು ಅವನು ನೋಡಿದುದೇ ತಡ ತನ್ನ ಹೆಂಡತಿಯೇ ಮತ್ತೆ ಬಂದಿದ್ದಾಳೆನ್ನುವಷ್ಟರ ಮಟ್ಟಿಗೆ ಹೋಲಿಕೆ ಆ ಹುಡುಗಿಯಲ್ಲಿ ಕಾಣುತ್ತದೆ. ಅವಳ ನಗು, ಕೂರುವ ಭಂಗಿ ಎಲ್ಲವೂ ಮತ್ತೆ ಮತ್ತೆ ಅವಳ ಹೆಂಡತಿಯನ್ನು ನೆನಪಿಸುತ್ತವೆ. ಈ ಎರಡೂ ಪಾತ್ರಗಳು ತಮ್ಮ ತನ್ನ ಹೆಂಡತಿಯ ನೆನಪನ್ನು ಬಿಚ್ಚಿಡುವುದಕ್ಕೆ ಪೂರಕವಾಗಿ ಕಥೆಯನ್ನು ಪ್ರವೇಶಿಸಿ ಮಾಯಾಗಿದೆ ಎನ್ನಬಹುದು.

★ ಪುರುಷ-ಸ್ತ್ರೀ ಸಂಬಂಧಗಳಿಗೆ ಹೋಲಿಸಿ ನೋಡುವುದಾದರೆ ಖಾಸನೀಸರ ಹೀಗೂ ಇರಬಹುದು ! ಮತ್ತು ಅಲ್ಲಾವುದ್ದೀನನ ಅದ್ಭುತ ದೀಪ ಎರಡೂ ಕತೆಗಳಲ್ಲೂ ಸಾಮ್ಯತೆಯನ್ನು ಗುರುತಿಸಬಹುದು. ಸಂಬಂಧಗಳ ನೈತಿಕತೆ ಮತ್ತು ಅನೈತಿಕತೆಯ ಹಿನ್ನೆಲೆಯಲ್ಲಿ ಹೇಳುವುದಾದರೆ ಎರಡೂ ಕಥೆಯ ಪುರುಷ-ಸ್ತ್ರೀ ಸಂಬಂಧಗಳು ಅನೈತಿಕ ಸ್ವರೂಪದ ಸಂಬಂಧಗಳು ಆದರೆ ಎರಡರಲ್ಲೂ ಭಿನ್ನತೆಯೂ ಇದೆ. ಹೀಗೂ ಇರಬಹುದು ! ಕಥೆಯಲ್ಲಿನ ಅಂಬಕ್ಕ ಮತ್ತು ಶ್ಯಾಮನ ನಡುವೆ ದೈಹಿಕ ಸಂಬಂಧವಿತ್ತೆನ್ನುವುದಕ್ಕೆ ಸಾಕ್ಷ್ಯಾಧಾರಗಳಿದ್ದು ಅಂಬಕ್ಕ ಬಸುರಿಯಾಗಿರುವುದೇ ಇದಕ್ಕೆ ಮೂಲ ಆಧಾರ. ಆದರೆ ಅಲ್ಲಾವುದ್ದೀನನ ಅದ್ಭುತ ದೀಪಕತೆಯಲ್ಲಿನ ಸತ್ಯಬೋಧ ಮತ್ತು ಅಂಬಕ್ಕನ ನಡುವೆ ದೈಹಿಕ ಸಂಬಂಧವಿದೆಯೆಂಬುದು

ಕೇವಲ ಅಂಬಕ್ಕನ ಆರೋಪದ ಮೂಲಕ ನಿರೂಪಿತವಾಗುತ್ತದೆಯೇ ವಿನಃ ಎಲ್ಲಿಯೂ ಸಾಕ್ಷ್ಯಾಧಾರಗಳ ಮೂಲಕ ಸಾಬೀತಾಗುವುದಿಲ್ಲ. ಆದರೆ ಇಂತಹ ಸಂಬಂಧದ ಪರಿಣಾಮವಾಗಿ ಉಂಟಾಗುವ ದುರಂತ ಮಾತ್ರ ಎರಡೂ ಕತೆಗಳಲ್ಲಿ ಸಾಮಾನ್ಯವಾಗಿದೆ.

ಅದೇ ರೀತಿ ಎರಡು ಕಥೆಗಳ ಕುಟುಂಬ ಅಥವಾ ಮನೆತನ ಸುತ್ತಮುತ್ತಲೂ ಮರ್ಯಾದೆಗೆ ಮಾದರಿಯಾದ, ಶಿಸ್ತು, ನಿಯಮಗಳಿಗೆ ಹೆಸರುವಾಸಿಯಾದ ಸಂಪ್ರದಾಯಬದ್ಧ ಮನೆತನಗಳೇ. ಎರಡೂ ಕತೆಗಳಲ್ಲಿನ ಸ್ತ್ರೀ ಸಂಬಂಧದ ಹೆಸರು ಅಂಬಕ್ಕನೇ. ಆದರೂ ಕತೆಯ ಒಳವು ಮಾತ್ರ ಒಂದಕ್ಕಿಂತ ಒಂದು ತೀರಾ ಭಿನ್ನವಾದುದು. ಹೀಗೂ ಇರಬಹುದು ! ಕಥೆಯ ಅಂಬಕ್ಕನಿಗೆ ಶ್ಯಾಮನ ಸಂಬಂಧ ಒಂದು ಅನಿವಾರ್ಯ ಕಾರಣದಿಂದಾಗಿಯೇ ಉಂಟಾಗಿರಲು ಸಾಧ್ಯವಿರಬಹುದು. ಆದರೆ ಇಲ್ಲಿನ ಅಂಬಕ್ಕ ಮತ್ತು ಸತ್ಯಬೋಧನ ಸಂಬಂಧಕ್ಕೆ ಅಂತಹ ಯಾವ ಅನಿವಾರ್ಯತೆಯೂ ಇಲ್ಲ. ಇದೊಂದು ಪೂರ್ವನಿಯೋಜಿತ ಸಂಚಿನಂತೆ ಈ ಕಥೆಯಲ್ಲಿ ಘಟಿಸುತ್ತದೆ. ಆದರೆ ಈ ಘಟನೆಯ ಪರಿಣಾಮ ಮಾತ್ರ ತೀರಾ ಭೀಕರ.

ಶಿಷ್ಟ ಸಂಪ್ರದಾಯದ ಅರ್ಚಕರ ಮನೆಗೆ ಸಿಡಿಲು ಬಡಿದುದು ಈ ಸಂಬಂಧದಿಂದಲೇ. ಅರ್ಚಕರ ಇಬ್ಬರು ತಮ್ಮಂದಿರಲ್ಲಿ ಮೊದಲನೆಯವನಾದ ನಾನಿಯನ್ನು ಕೈಹಿಡಿದು ಬಂದವಳೇ ಅಂಬಕ್ಕ. ಆದರೆ ಆಕೆಯ ಪ್ರವೇಶ ಕೇವಲ ಪ್ರವೇಶವಾಗಿರದೆ ಮನೆತನದ ನಾಶಕ್ಕಾಗಿ ಸಿಡಿದ ಸರ್ವನಾಶದ ಕಿಡಿಯಂತಿತ್ತು. ಪಾಪ-ಪುಣ್ಯ, ಮಡಿ-ಮೈಲಿಗೆಯ ಕಲ್ಪನೆಯನ್ನು ಕಟ್ಟುನಿಟ್ಟಾಗಿ ಪರಂಪರೆಯಿಂದ ನಡೆಸಿಕೊಂಡು ಬರುತ್ತಿದ್ದ ಅರ್ಚಕರ ಕುಟುಂಬ ಇಂತಹ ಪಾಪಕೃತ್ಯದ ಆಘಾತಕ್ಕೊಳಗಾಗಿ ನಲುಗಿತು ಎನ್ನಬಹುದು. ಪಾಪದ ಬಗೆಗೆ ಅವರು ಹೊಂದಿದ್ದ ಭಯ ಎಷ್ಟರಮಟ್ಟಿನದ್ದು ಎಂಬುದು ಅರ್ಚಕರ ಮಾತಿನಿಂದಲೇ ತಿಳಿಯುತ್ತದೆ.

''ವೃಂದಾ ಮನೆಯಲ್ಲಿ ಪಾಪ ಹೆಚ್ಚಾಯಿತು. ಹೋಮ ಹವನದ ಕೋಣೆ ಇನ್ನು ಹೇಗೆ ಪವಿತ್ರವಾದೀತು. ಗಂಗೆಯೇ ಧುಮ್ಮಿಕ್ಕಿದರೂ ಇಲ್ಲಿಯ ಪಾಪ ತೊಳೆದು ಹೋಗಲಿಕ್ಕಿಲ್ಲ''.

ಇಂತಹ ಪಾಪದ ಭೀಕರತೆಯೇ ಅರ್ಚಕರ ಸಾವಿಗೂ ಕಾರಣವಾಯಿತು. ನಾನಿಯ ಹೆಂಡತಿಯಾಗಿ ಬಂದ ಅಂಬಕ್ಕ ಮೈದುನ ಸತ್ಯಭೋದನನ್ನು ಕಾಮಿಸಿದುದು ಸಹಜ ಕಾಮುಕಭಾವನೆಯಿಂದಲ್ಲ. ಸತ್ಯಭೋಧನನ್ನು ಅಪರಾಧಿಯನ್ನಾಗಿ ಮಾಡಿ ಎಲ್ಲಾ ಆಸ್ತಿಯನ್ನೂ

ತನ್ನದಾಗಿಸಿಕೊಳ್ಳುವ ಕುಯುಕ್ತಿಯಿಂದ ಅಂಬಕ್ಕ ಸತ್ಯಭೋದನ ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡಳೆನ್ನಬಹುದು.

ಈ ಕಥೆಯ ಪುರುಷ ಸ್ತ್ರೀ ಸಂಬಂಧ ಉಳಿದೆಲ್ಲಾ ಕಥೆಗಳಿಗಿಂತ ತೀರಾ ಭಿನ್ನಸ್ವರೂಪದ್ದು. ಇಲ್ಲಿನ ಸಂಬಂಧಗಳು ದೈಹಿಕ ಆಕರ್ಷಕತೆಯಿಂದಾಗಲೀ, ಕಾಮದ ಭಾವನೆಯಿಂದಾಗಲೀ ಅಥವಾ ಯಾವುದೇ ಸಾಮಾನ್ಯ ಕಾರಣಗಳಿಂದ ಉಂಟಾದುದಲ್ಲ. ಬದಲಾಗಿ ಇಂತಹ ಸಂಬಂಧದಿಂದ ಇಡೀ ಮನೆತನವನ್ನು ಒಡೆಯುವ ದುರುದ್ದೇಶ ಕಾರಣವಾಗಿದೆ. ಇದು ಅಂಬಕ್ಕನಿಂದ ರಚಿತವಾದ ಒಂದು ಸಂಬಂಧದ ಸುಳಿ. ಮುಗ್ಧನಾದ ಸತ್ಯಬೋಧ ಅದು ಸುಳಿಯೆಂಬುದನ್ನು ಅರಿಯದೇ ಅದರಲ್ಲಿ ಸಿಲುಕಿ ಮುಳುಗಿದ. ಯಾವುದನ್ನೂ ಯೋಚಿಸಲಾರದ ದುಡುಕು ಸ್ವಭಾವದ ವಯಸ್ಸಿನಲ್ಲಿ ಸತ್ಯಬೋಧ ಇಂತಹ ಸುಳಿಗೆ ಸಿಲುಕುವಲ್ಲಿ ಯಾವುದೇ ಆಶ್ಚರ್ಯವಿಲ್ಲ. ಆದರೆ ಕೊನೆಯವರೆಗೂ ಅವನು ಅರ್ಚಕರ ಹೆಂಡತಿ ಅಂದರೆ ತನ್ನನ್ನು ತಾಯಿಯಂತೆ ಸಾಕಿದ ಅತ್ತಿಗೆಗೆ ಹೇಳಿದ ಮಾತಿನಲ್ಲಿ ಅವನು ನಿರಪರಾಧಿ ಎಂಬ ಶಬ್ದ ಮತ್ತೆ ಮತ್ತೆ ಪ್ರತಿಧ್ವನಿಸುತ್ತಿತ್ತು.

'ಅತ್ತಿಗೆ..ಅತ್ತಿಗೆ...ದೇವರಾಣೆಯಾಗಿಯೂ ಇದರಲ್ಲಿ ನನ್ನದೇನೂ ತಪ್ಪಿಲ್ಲ'' ಆದರೆ ಸತ್ಯಭೋಧನ ಈ ಮಾತಿಗೆ ಯಾವುದೇ ಸಾಕ್ಷ್ಯಾಧಾರಗಳಿರಲಿಲ್ಲ. ಬದಲಾಗಿ ಅಂಬಕ್ಕನ ವಾಚಾಳಿತನ ಅವನ ಈ ಮಾತನ್ನು ಮುಚ್ಚಿಹಾಕಿದುವು. ಅರ್ಚಕರ ದೃಷ್ಟಿಯಲ್ಲಿ ಸತ್ಯಭೋಧ ಪಾಪಿಯಾದ. ಆದರೆ ಆ ಪಾಪದ ಬೆಂಕಿ ಅವನೊಬ್ಬನನ್ನೇ ಸುಡಲಿಲ್ಲ. ಕಿಡೀ ಕುಟುಂಬವನ್ನು ತನ್ನೊಳಗೆ ದಹಿಸಿತು.

''ಪಾಪ ಭಯಾನಕವಿರುತ್ತದೆ. ಅದರ ತಿರುಗಣೆ ಮಡುವಿನಲ್ಲಿ ಸಿಕ್ಕ ಮನುಷ್ಯನಿಗೆ ಅದರಿಂದ ಮುಕ್ತಿಯಿಲ್ಲ. ಸುತ್ತಿ ಸುತ್ತಿ ಬಹಳ ವೇಗದಿಂದ ಅವನು ಅಧಃಪತನಕ್ಕಿಳಿಯುತ್ತಾನೆ.'' ಸತ್ಯಭೋಧನಿಗೆ ಈ ಮಾತು ತದ್ವಿರುದ್ಧವಾಯಿತು. ಪಾಪ ಮಾಡಿದ ಅಂಬಕ್ಕ ಪಾಪಕ್ಕಂಜದೇ ಬದುಕುತ್ತಿರುವಾಗ ಪಾಪದ ಬಲೆಗೆ ಬಿದ್ದ ಸತ್ಯಭೋಧ ಮಾತ್ರ ಅಜ್ಞಾತವಾಸಿಯಾಗಿದ್ದಾನೆ. ಇದ್ದಾನೆ ಎನ್ನುವುದಕ್ಕಿಂತ ಇರಬಹುದು ಎನ್ನಬಹುದು.

ಸತ್ಯಭೋಧ ಇಂತಹ ಪಾಪದ ಬಲೆಗೆ ಬೀಳಲು ಬಲವಾದ ಕಾರಣವಿದ್ದುದು ಅಂಬಕ್ಕನೇ ಎಂಬ ಮಾತನ್ನು ವೃಂದಾ (ಅತ್ತಿಗೆ) ಹೀಗೆ ಹೇಳುತ್ತಾಳೆ. ''ಗಂಡಸಿನ ಮೇಲೆ

ಅಧಿಕಾರ ಸ್ಥಾಪಿಸುವ ರೂಪವನ್ನು ದೇವರು ಅವಳಿಗೆ ಖಂಡಿತವಾಗಿ ಕೊಟ್ಟಿದ್ದಾನೆ. ಅಂಥ ರೂಪವನ್ನು ಅಂಥವಳಿಗೆ ದೇವರು ಯಾಕೆ ಧಾರೆ ಎರೆದಿದ್ದಾನೆಯೋ ಯಾರಿಗೆ ಗೊತ್ತು ? ದೇವರ ರೀತಿಯೇ ವಿಚಿತ್ರದ್ದಾಗಿದೆ. ವಿಷಮಯ ನಾಗರಹಾವಿನ ಹೆಡೆಯಲ್ಲಿ ರತ್ನವನ್ನು ಇಟ್ಟುಬಿಡುತ್ತಾನೆ. ಕೈಗೆಟುಕದ ಆಕಾಶದಲ್ಲಿ ಯಾರೂ ನೋಡದಗ ಕಗ್ಗತ್ತಲೆಯಲ್ಲಿ ಚಿಕ್ಕೆಗಳನ್ನು ಚೆಲ್ಲಿಬಿಡುತ್ತಾನೆ.''

ಆ ಮಾತಿನಿಂದ ಸತ್ಯಭೋಧ ಎಷ್ಟು ಅಸಹಾಯಕನಾಗಿದ್ದ ಎಂಬುದರ ಅರಿವಾಗುತ್ತದೆ. ಯೌವ್ವನದ ಉತ್ಸುಕತೆ ಅವನಲ್ಲಿತ್ತೇ ವಿನಃ ಜೀವನದ ಅನುಭವವನ್ನು ಎಳ್ಳಷ್ಟೂ ಕ ಂಡವನಲ್ಲ. ಯಾವುದನ್ನಾದರೂ ಸಂಪೂರ್ಣವಾಗಿ ನಂಬಲಿಲ್ಲ. ವಯಸ್ಸಿನಲ್ಲಿ ಹಗ್ಗವೆಂದು ತಿಳಿದು ವಿಷಸರ್ಪವನ್ನಿಡಿದ ಸತ್ಯಭೋಧ ಆದರೆ ವಿಷ ಅವನನ್ನು ಒದೇ ಬಾರಿ ಕೊಲ್ಲದೆ ಜೀವನದುದ್ದಕ್ಕೂ ಕೊಲ್ಲುತ್ತಾ ಬಂದಿತು.

ಅಲ್ಲಾವುದ್ದೀನನ ಅದ್ಭುತ ದೀಪ ಕಥೆಯಲ್ಲಿ ಸತ್ಯಭೋಧ ಮತ್ತು ಅಂಬಕ್ಕಳ ಸಂಬಂಧ ಕಥೆಯ ಮುಖ್ಯ ವಸ್ತುವಾದರೂ ಅಲ್ಲೊಂದು ಇಲ್ಲೊಂದರಂತೆ ಇನ್ನಿತರ ಪುರುಷ ಸ್ತ್ರೀ ಸಂಬಂಧಗಳು ಹಣಕಿ ಹಾಕುತ್ತವೆ. ಇಲ್ಲಿನ ವಾಸು ಪುಣೆಯಲ್ಲಿ ತನ್ನ ಕಕ್ಕನ ವಿಳಾಸವನ್ನು ಶೋಧಿಸಲಾಗದ ಅವನ ಕಣ್ಣನೋಟಕ್ಕೆ ಸಿಕ್ಕಿ ಮರುಕ್ಷಣ ಇಲ್ಲವಾದ್ದಂತಹ ಕೆಲವು ಸಂಬಂಧಗಳು ಅವನನ್ನು ಸ್ಪರ್ಶಿಸುತ್ತವೆ. ಬಸ್ಸಿನಲ್ಲಿನ ಕಾಲೇಜಿನ ಹುಡುಗಿಯರು ತಮ್ಮ ತಮ್ಮ ಬಾಯ್‌ಫ್ರೆಂಡ್‌ಗಳ ಬಗ್ಗೆ ಮಾತಾಡಿಕೊಳ್ಳುವಾಗ ಆ ಮಾತುಗಳು ಪುರುಷ-ಸ್ತ್ರೀ ಸಂಬಂಧಗಳು ಇಷ್ಟು ಲಘುವೇ ಎಂದು ಅನಿಸುವಂತಿರುತ್ತದೆ. ಕೇವಲ ಮೋಜಿಗೋಸ್ಕರ. ಸಮಯ ಕಳೆಯುವುದಕ್ಕೋಸ್ಕರ ಸಂಬಂಧಗಳನ್ನು ನಿರ್ಮಿಸಿಕೊಳ್ಳುವ ಇಂತಹ ಸಂಬಂಧಗಳು ಪ್ರೇಮಕ್ಕಾಗಲೀ ದಾಂಪತ್ಯಕ್ಕಾಗಲೀ ದೂರವಾದ ಒಂದು ರೀತಿಯ ಯಾಂತ್ರೀಕತ ಸಂಬಂಧ ಎಂಬ ನಿರ್ಧಾರ ಸಹಜವಾಗಿಯೇ ಮೂಡುತ್ತದೆ.

ವಾಸು ತನ್ನ ಕಕ್ಕನನ್ನು ಹುಡುಕಹೊರಟಾಗ ಹೊಕ್ಕ ಮನೆಗಳಲ್ಲಿನ ಸಂಬಂಧಗಳು ಒದು ರೀತಿಯ ನಾಟಕದ ರೀತಿಯಲ್ಲಿ ಕಂಗೊಳಿಸುತ್ತವೆ ಅವನ ಕಣ್ಣಿಗೆ. ಅಂತಹ ನಾಟಕದ ಬದುಕಿನ ನಡುವೆಯೂ ವಾಸುವಿನ ಮನ ಹೊಕ್ಕವಳು ಒಬ್ಬಳೇ ಹದಿನಾರು - ಹದಿನೇಳರ ಹುಡುಗಿ ಬಾಗಿಲು ತೆಗೆದಾಗ ವಾಸುವಿನ ಮನದ ಬಾಗಿಲು ಅವಳನ್ನು ನೋಡಿದ ಒಂದು ನೋಟಕ್ಕೇ ತೆರೆದುಕೊಂಡದ್ದು ಆಶ್ಚರ್ಯವಾದರೂ ಅದು ವಾಸು ಮತ್ತು ಅವಳ ನಡುವಿನ

ಸಂಬಂಧದ ಗೆರೆಯಾಗಿದ್ದು ಮಾತ್ರ ಸತ್ಯ. ಆದರೆ ಇಂತಹ ಸಂಬಂಧ ಯಾವ ಸ್ವರೂಪದ್ದು ಎಂಬುದರ ಪ್ರಶ್ನೆ ? ವಾಸುವಿಗೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಅದು ಪ್ರೇಮವೂ ಅಲ್ಲದ ಕಾಮವೂ ಅಲ್ಲದ ಬಂಧುತ್ವವೂ ಅಲ್ಲದ ಒಂದು ಅನಾಮಿಕ ಸಂಬಂಧ ವಾಸುವಿಗೆ ಆ ಹೆಣ್ಣಿನೊಂದಿಗೆ ಬೆಸೆದುಕೊಳ್ಳುತ್ತದೆ. ಅವಳನ್ನು ಅವನು ಮಾನಸಿಕವಾಗಿ ಲಗ್ನವಾಗುತ್ತಿರುವ ಹೆಣ್ಣಿನ ಸಂಬಂಧವೆಂದು ಅವನು ಕಾಣುವ ಕನಸು ಚಿತ್ರಿಸುತ್ತದೆ.

''ಅರಿಶಿಣ ಪೂಸಿಕೊಂಡು ಮೈಯನ್ನು ಚಿನ್ನದ ಆಭರಣಗಳಿಂದ ಮುಚ್ಚಿ ಮದುವಣಗಿತ್ತಿಯಂತೆ ಲಜ್ಜಾವತಿಯಾಗಿ ಬಾಗುತ್ತ ಬಳುಕುತ್ತ ತಾಯಿಯ ಕಡೆಗೆ ಸಾಗಿ, ಅವಳ ಪಾದಮುಟ್ಟಿ ನಮಸ್ಕರಿಸಿದಳು''.

ಕನಸಿನ ಈ ದೃಶ್ಯದ ಅರ್ಥ ಮಾತ್ರ ವಾಸುವಿಗೆ ಬಗೆಹರಿಯುವುದೇ ಇಲ್ಲ. ಏಕೆಂದರೆ ಅದು ಕನಸೇ ವಿನಃ ವಾಸ್ತವದಲ್ಲಿ ಇಂತಹ ಕನಸಿನ ಸಂಬಂಧ ವಾಸುವನ್ನು ತಲ್ಲಣಗೊಳಿಸುವ ರೀತಿ ಮಾತ್ರ ಸಂಬಂಧಗಳ ಪ್ರಭಾವದ ಪ್ರಖರತೆಗೆ ಸಾಕ್ಷಿಯಂತಿತ್ತು. ಈ ಕತೆಯಲ್ಲಿನ ಎಲ್ಲಾ ಪುರುಷ - ಸ್ತ್ರೀ ಸಂಬಂಧಗಳೂ ಕೂಡ ಎಲ್ಲಿಯೂ ವಾಸ್ತವತೆಯನ್ನು ಪ್ರಕಟಿಸಲೇ ಇಲ್ಲ. ಸಂಬಂಧವಿದೆ ಎಂದು ಭಾವಿಸುವ ಪಾತ್ರಗಳೇ ಈ ಕಥೆಯ ವಿಶೇಷವಾಗಿದೆ. ಆದ್ದರಿಂದಲೇ ಈ ಕತೆ ಉಳಿದೆಲ್ಲ ಕತೆಗಳಿಗಿಂತ ತೀರಾ ಭಿನ್ನ ಸ್ವರೂಪದ ಪುರುಷ - ಸ್ತ್ರೀ ಸಂಬಂಧಗಳಿಂದ ರೂಪಿತವಾಗಿವೆ ಎನ್ನಬಹುದು.

★ ಖಾಸನೀಸರ ಮತ್ತೊಂದು ವಿಶಿಷ್ಟ ಕಥೆ ಮೋನಾಲೀಸಾ. ಇಲ್ಲಿನ ಸಂಬಂಧದ ಸ್ವರೂಪ ನಂಬಲಾರ್ಹವಾದುದ್ದಲ್ಲ. ಅದು ಪ್ರತಿಯೊಬ್ಬ ಮನುಷ್ಯನ ನಂಬಿಕೆಗನುಗುಣವಾಗಿ ಇಲ್ಲಿನ ಸಂಬಂಧಸ್ವರೂಪ ರೂಪುಗೊಳ್ಳುತ್ತದೆ. ಏಕೆಂದರೆ ಇದರ ಕಥಾವಸ್ತು. ಪುನರ್ಜನ್ಮದಂತಹ ಒಂದು ಅನುಭವಾತೀತ ಸತ್ಯ ಎಂದು ಹೇಳುವ ಒಬ್ಬ ವ್ಯಕ್ತಿಯ ನೆನಪುಗಳಷ್ಟೇ. ಅವನ ಮಾತುಗಳ ಸತ್ಯಾಸತ್ಯತೆ ಏನೇ ಆದರೂ ಕೂಡ ಅದು ವ್ಯಕ್ತಿಯ ವೈಯಕ್ತಿಕ ನೆಲೆಯಲ್ಲಿ ನಿರ್ಧಾರಗೊಳ್ಳುವಂತಹದು.

ಇಲ್ಲಿನ ಆ ಪುರುಷ-ಸ್ತ್ರೀ ಸಂಬಂಧಗಳು ಪ್ಯಾರಿಸ್‌ನ ಪೆರ್ರ್ಮೂಗಿ ಮತ್ತು ಮೊನಾಲಿಸಾ ಎಂಬ ತೈಲ ಚಿತ್ರದ ರೂಪದರ್ಶಿಯದ್ದು. ಮನುಷ್ಯ ಸಂಬಂಧಗಳು ಜನ್ಮಾಂತರ ಸಂಬಂಧವಾಗಬಲ್ಲದು. ಪುನರ್ಜನ್ಮ ಸತ್ಯವೆಂದು ನಂಬುವವರಿಗೆ ಈ ಕಥೆಯ ಪಾತ್ರಗಳು

ನೈಜ ಪಾತ್ರವಾಗಿ ಕಾಣಬಲ್ಲವೇ ವಿನಃ ಇದನ್ನು ನಂಬಲಾರದವರಿಗೆ ಇವು ಕೇವಲ ಕತೆಗೋಸ್ಕರ ನಿರ್ಮಿಸಲ್ಪಟ್ಟಿರುವ ಕಲ್ಪನಾ ಪಾತ್ರಗಳಾಗಿಯೇ ಉಳಿಯುತ್ತವೆ. ಮನುಷ್ಯ ಸಂಬಂಧಗಳು ಇಂತಹ ನಿರಂತತೆಯನ್ನು ಹಲವು ಜನ್ಮಗಳ ಮೂಲಕ ಪಡೆಯುತ್ತವೆ ಎಂಬುದನ್ನು ಪೆರ್ರೂಗಿ ಮಾತು ಸ್ಪಷ್ಟ ಮಾಡುತ್ತದೆ. ಪೆರ್ರೂರಿಗೆ ಸುಮಾರು 800 ವರ್ಷಗಳ ಹಿಂದೆ ನಾನು ಮೊನಾಲಿಸಾಳ ಜೊತೆ ಸಂಸಾರ ಮಾಡಿದ್ದೇನೆಂಬ ನೆನಪು ಬಲವಾಗಿ ಬಂದಂತೇ ಅವರ ಸಂಬಂಧ ೪೦೦ ವರ್ಷಗಳಷ್ಟು ಇತಿಹಾಸವನ್ನು ಸೃಷ್ಟಿಸಿತು. ಲೂವ್ಹ್ರ ಕಲಾಶಾಲೆಯಲ್ಲಿದ್ದ ಅಂತರಾಷ್ಟ್ರೀಯ ಖ್ಯಾತಿಯ ಮೊನಾಲಿಸಾ ತೈಲಚಿತ್ರ ಒಮ್ಮೆಲೆ ಪೆರ್ರೂಗಿಯ ನೆನಪನ್ನು ಸ್ಫೋಟಿಸಿದ್ದು ಮಾತ್ರ ವಿಚಿತ್ರ. ಏಕೆಂದರೆ ಮೊನಾಲಿಸಾ ರೂಪದರ್ಶಿಯೂ ಕೂಡ ಮತ್ತೊಂದು ಜನ್ಮದಲ್ಲಿ ಮೆಟಿಲ್ಡಾ ಎಂಬುವಳಾಗಿದ್ದು, ಪೆರ್ರುಗಿಯ ಜೊತೆಗಿದ್ದೂ ಮೊನಾಲಿಸಾಳ ಚಿತ್ರವನ್ನು ನೋಡಿಯೂ ಇದೊಂದು ಆಕಸ್ಮಿಕ ಎಂದು ತಿರಸ್ಕರಿಸಿದಳೇ ವಿನಃ ಪೆರ್ರೂಗಿಗೆ ಕಾಡಿದ ಜನ್ಮಾಂತರದ ನೆನಪುಗಳು ಇವಳನ್ನು ಎಂದಿಗೂ ಕಾಡಲೇ ಇಲ್ಲ.

ಮನುಷ್ಯ ಹಲವು ಜನ್ಮಗಳನ್ನು ತಳೆದರೂ ಪೂರ್ವಜನ್ಮದ ನೆನಪು ಕೆಲವೇ ಮಂದಿಗೆ ಮಾತ್ರ ಬರುತ್ತದೆ ಎಂಬ ಮಾತನ್ನು ಈ ಕತೆಗೆ ಸಂಬಂಧಿಸಿದಂತೆ ಸಮಾಧಾನಕ್ಕೆ ಬಳಸಬಹುದೇ ವಿನಃ ಪೆರ್ರೂಗಿಯ ಸಂಬಂಧದ ಬಗೆಗಿನ ಮಾತನ್ನು ಅವನ ಮೇಲಿನ ವಿಶ್ವಾಸದಿಂದ ಮಾತ್ರ ನಂಬುವಂತಿದ್ದು. ಅವನ ಮಾತಿನ ಆಧಾರದ ಮೇಲೆ ಈ ಸಂಬಂಧಗಳ ಬಗೆಗಿನ ಚರ್ಚೆ ನಡೆಯಲು ಸಾಧ್ಯ. ಆದರೆ ಪೆರ್ರೂಗಿಯ ಒಂದೊಂದು ಮಾತೂ ಸಹ ಅವರಿಬ್ಬರ ಗಾಢ ಸಂಬಂಧದ ಬಗೆಗೆ ಗಟ್ಟಿಯಾಗಿ ಹೇಳುತ್ತವೆ. ಜಗತ್ತು ಕೇವಲ ಮೊನಾಲಿಸಾಳನ್ನು ಒಂದು ಚಿತ್ರವಾಗಿ, ಒಂದು ಸುಂದರ ನಗುವಾಗಿ ಕಂಡಿದೆ ಅಷ್ಟೇ. ಆದರೆ ಅವಳ ನಗುವನ್ನೊರತಾದ ಎಲ್ಲವನ್ನೂ ನಾನು ಕಂಡಿದ್ದೇನೆ ಎಂಬುದು ಪೆರ್ರೂಗಿಯ ಮಾತಿನಲ್ಲಿ ಹೀಗೆ ನಿರೂಪಿತವಾಗಿದೆ.

'' ಬಾಹ್ಯ ಜಗತ್ತಿಗೆ ಬರೀ ಅವಳ ಮುಗುಳ್ನಗೆಯ ಪರಿಚಯವಿತ್ತು. ಆದರೆ ನನಗೋ ವೇದನೆ, ಉದ್ರೇಕ, ಕೋಪ ಮುಂತಾದ ವಿವಿಧ ಭಾವಗಳಿಂದ ವಿವಿಧ ಸಮಯಗಳಲ್ಲಿ ಉತ್ತೇಜಿತವಾದ ಆ ಮುಖದ ನಿಕಟವಾದ ಸಜೀವವಾದ ಪರಿಚಯವಿತ್ತು''

ಪೆರ್ರೂಗಿಯ ಈ ಮಾತುಗಳನ್ನು ನಂಬದಿರಲು ಸಾಧ್ಯವಿಲ್ಲದಂತಹ ತಥ್ಯತೆಯಿಂದ ತುಂಬಿವೆ. ಮೊನಾಲಿಸಾ ತೈಲಚಿತ್ರವನ್ನು ಲೂವ್ಹಾದಿಂದ ಅಪಹರಿಸಿದಾಗಲೂ ಕೂಡ

ನ್ಯಾಯಾಧೀಶರು ಅತೀ ಅಲ್ಪಾವಧಿ ಶಿಕ್ಷೆಯನ್ನು ಪೆರ್ರೂಗಿಗೆ ನೀಡಿದ್ದು ಅವನ ಇಂತಹ ಮಾತುಗಳು ಧ್ವನಿಸುವ ಸತ್ಯದಿಂದಲೇ. ಅವನ ಪ್ರತಿಯೊಂದು ಮಾತುಗಳೂ ಆ ಮಾತಿನಲ್ಲಿನ ನೈಜ ಭಾವನೆಗಳು ಅವರಿಬ್ಬರ ನಡುವಿನ ಗಾಢತೆಯನ್ನು ಬಿಂಬಿಸುತ್ತವೆ.

೪೦೦ ವರ್ಷಗಳ ಹಿಂದಿನ ಈ ಸಂಬಂಧ ಇಷ್ಟು ಗಾಢತೆಯಿಂದ ಕೂಡಿತ್ತಾದರೂ ಪೆರ್ರೂಗಿ ಮತ್ತು ಮೆಟಿಲ್ಡಾಳ ಮತ್ತೊಂದು ಜನ್ಮದ ಸಂಬಂಧಮಾತ್ರ. ಕೆಲವೇ ದಿನದಲ್ಲಿ ದುರಂತದ ಮೂಲಕ ಅಂತ್ಯ ಕಂಡಿತ್ತು. ಅವನ ನೆನಪುಗಳಿಗೆ ರೂಪಸಿಕ್ಕಂತೆ ಅವನ ಬಾಳಿನಲ್ಲಿ ಬಂದ ಮೆಟಿಲ್ಡಾ ಅವನಿಗೆ ಸಿಕ್ಕಷ್ಟು ವೇಗವಾಗಿ ಆ ರೂಪವನ್ನು ಅಳಿಸಿ ಹೋದವಳು. ಕೊನೆಗೂ ಆ ಚಿತ್ರವೇ ಅಲ್ಲಿನ ನಗುವೇ ಶಾಶ್ವತವಾಯಿತೇ ವಿನಃ ಆ ನಗುವನ್ನು ಸೂಸಿದ ರೂಪದರ್ಶಿಯಾಗಲೀ, ಮೆಟಿಲ್ಡಾಳಾಗಲೀ ಪೆರ್ರೂಗಿಗೆ ಮತ್ತೆ ದೊರೆಯಲೇ ಇಲ್ಲ.ಇದು ಮನುಷ್ಯ ಸಂಬಂಧಗಳ ನಿರ್ಜೀವತೆಯನ್ನು ನಿರೂಪಿಸುತ್ತದೆ. ಅವನ ಮತ್ತು ಅವಳ ಸಂಬಂಧ ನೆನಪುಗಳೆಲ್ಲ ಮಾತ್ರ ಉಳಿದಿದೆಯೇ ವಿನಃ ವಾಸ್ತವದಲ್ಲಿಲ್ಲ ಅದು ಆ ತೈಲಚಿತ್ರದಂತೆಯೇ ಸಜೀವತೆಯಿಂದ ಹೊರತಾಗಿದೆ ಎನ್ನಬಹುದು.

★ ಪುರುಷನ ಮುಂದೆ ಮಾಯೆ ! ಕತೆಯಂತೂ ಖಾಸಾನೀಸರ ಸಂಬಂಧಗಳ ಬಗೆಗಿನ ಆಳವಾದ ಚಿಂತನೆಗೆ ಕನ್ನಡಿ ಹಿಡಿದಂತಿದೆ. ಪುರುಷ ಮತ್ತು ಸ್ತ್ರೀ ಎಂಬ ಲಿಂಗಗಳಲ್ಲಿನ ಪರಸ್ಪರ ಆಕರ್ಷಣೆ, ನೈಸರ್ಗಿಕವಾಗಿ ಸಹಜವೇ ಆದರೂ ಅಲ್ಲಿಯೂ ಕೆಲವು ನಿಯಮಗಳು ಆ ನೈಸರ್ಗಿಕತೆಯನ್ನು ಮೀರಿ ನಿಯಮಿತಗೊಂಡಿವೆ ಎಂಬುದನ್ನು ಕತೆ ಧ್ವನಿಸುತ್ತದೆ.

ಸ್ತ್ರೀಯ ಮುಂದೆ ಮಾಯೆ, ಪುರುಷನೆಂಬ ಅಭಿದಾನವಾಗಿ
ಕಾಡಿತ್ತು ನೋಡಾ
ಪುರುಷನ ಮುಂದೆ ಮಾಯೆ, ಸ್ತ್ರೀಯೆಂಬ ಅಭಿಧಾನವಾಗಿ
ಕಾಡಿತ್ತು ನೋಡಾ

ಅಕ್ಕಮಹಾದೇವಿಯ ಈ ಸಾಲು ಹೆಣ್ಣುಮಾಯೆಯೆಂಬ ಅಲ್ಲಮನ ವಚನವನ್ನು ಹೊಡೆಯುತ್ತದೆ. ಮಾಯೆ ಎಂಬುದು ಯಾವುದೇ ಒಂದು ಲಿಂಗಕ್ಕೆ ಸೀಮಿತವಲ್ಲ. ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಎರಡೂ ಲಿಂಗಗಳೂ ಮಾಯೆಯೇ. 'ಮಾಯೆ' ಎಂಬ ಶಬ್ದದ ಅರ್ಥ ಬೃಹತ್‌ಸ್ವರೂಪದ್ದು. ಅದರ ಒಂದು ಅರ್ಥವನ್ನು ಆಸೆ' ಎಂಬುದಾಗಿ ಕರೆಯುವುದಾದರೆ

ಜಗತ್ತಿನಲ್ಲಿ ಆಸೆಗೊಳಗಾಗದ ಜೀವಿಯೇ ಇಲ್ಲ. ಅಂದಮೇಲೆ ಮಾಯೆ ಮನುಷ್ಯನನ್ನೂ ಒಳಗೊಂಡಂತೆ ಪ್ರಪಂಚದ ಎಲ್ಲಾ ಜೀವಿಗಳಲ್ಲಿಯೂ ಇರತಕ್ಕದ್ದೇ ಎಂಬುದು ಸತ್ಯವಾಗುತ್ತದೆ. ಅಂತಹ ಮಾಯೆಯಿಂದ ಹೊರಟ ಮನುಷ್ಯ ಸಂಬಂಧದ ಸ್ವರೂಪವೊಂದರ ಚಿತ್ರಣ ಈ ಕಥೆಯ ವಸ್ತು. ಪುರುಷನ ಮುಂದೆ ಮಾಯೆ ! ಕಥೆಯ ಕಥಾನಾಯಕ ರಾಮಭಾವು ರತ್ನಪಾರಖಿಯ ಜೀವನದಲ್ಲಿಯ ಯಾವ ಸಂಬಂಧಗಳೂ ಸ್ಥಿರವಾದುದಾಗಿರಲಿಲ್ಲ. ಬಾಲ್ಯದಲ್ಲೇ ಮನೆಯೊಂದಿಗೆ ತನ್ನ ಕುಟುಂಬದ ಸಂಬಂಧವನ್ನು ಕಡಿದುಕೊಂಡ ರಾಮಬಾವುವಿನ ಬದುಕಿನಲ್ಲಿ ಹಲವು ವ್ಯಕ್ತಿಗಳು ಪ್ರವೇಶಿಸುತ್ತಾದಾರೂ ಅವನ ಬಾಳಿನುದ್ದಕ್ಕೂ ಜೊತೆಯಾಗಿ ನ ಡೆದ ಸಂಬಂಧ ಮಾತ್ರ ಒಂದೂ ಇಲ್ಲ. ಜೀವನದ ಬಹುಪಾಲು ಸಮಯ ಅನಾಥಸ್ಥಿತಿಯಲ್ಲಿ ಕಳೆದ ರಾಮಬಾವು ಕೆಲವೇ ಸಮಯ ಮಾತ್ರ ಕೆಲವೊಂದು ಸಂಬಂಧಗಳೊಡನೆ ಜೀವಿಸಿದ್ದ. ಆದರೆ ಆ ಯಾವ ಸಂಬಂಧಗಳೂ ಸಹ ಸಂಪೂರ್ಣವಾಗಿ ಇವನಿಗಾಗಿಯೇ ಸೀಮಿತವಾದ ಸಂಬಂಧವಾಗಿಲ್ಲದಿರುವುದು ಮಾತ್ರ ಶೋಚನೀಯ. ತನ್ನೊಡನಿರುವ ವ್ಯಕ್ತಿಯ ಸಂಬಂಧಗಳ ಕೊಂಡಿಗಳಲ್ಲಿ ತಾನೂ ಒಬ್ಬ ಕೊಂಡಿಯಷ್ಟೇ ಎಂಬುದರ ಅರಿವು ಅವನಿಗೆ ಬರಲು ತಡವಾಗಲಿಲ್ಲ. ನದಿಯೊಂದು ಬೃಹದಾಕಾರವಾಗಿ, ಬೃಹತ್‌ದೂರದವರೆಗೂ ಹರಿದು ಮತ್ತೆ ಕೊನೆಗೆ ನದಿಯನ್ನೇ ಸೇರುವಂತೆ ರಾಮಬಾವು ಸಹ ಸಂಬಂಧಗಳನ್ನು ಹರಸುತ್ತಾ ಹರಿದು ಕೊನೆಗೂ ಏಕಾಂಗಿಯಾಗಿಯೇ ಉಳಿಯುವಲ್ಲಿ ಮನುಷ್ಯನ ಬದುಕು ಏಕಾಂಗಿ ಹೋರಾಟ ಎಂಬುದನ್ನು ಮತ್ತೆ ಮತ್ತೆ ನೆನಪಿಸುತ್ತದೆ.

ರಾಮಬಾವು ಸಂಪೂರ್ಣ ಜನನಿಬಿಡವಾದ ಮುಂಬೈನಂತಹ ನಗರದಲ್ಲೂ ಸಹ ಮನುಷ್ಯ ಏಕಾಂಗಿಯಾಗಿ ಅನಾಥಪ್ರಜ್ಞೆಯೊಂದಿಗೆ ಬದುಕುವೆನಿಸುತ್ತಾನೆಂಬುದು ಮನುಷ್ಯ ಸಂಬಂಧಗಳಲ್ಲಿ ಯಾಂತ್ರಿಕತೆಯ ಅಟ್ಟಹಾಸವನ್ನು ಪ್ರತಿಬಿಂಬಿಸುತ್ತದೆ. ರಾಮಭಾವು ಬಾಲ್ಯದಲ್ಲೇ ಮುಂಬೈ ಸೇರಿ ತನ್ನಲ್ಲಿರುವ ರತ್ನ ಪರೀಕ್ಷಕತೆಯ ಕುಶಲತೆಯಿಂದ ಕೆಲಸವನ್ನು ಸಂಪಾದಿಸುತ್ತಾನಾದರೂ ಅವನಿಗೆ ಸಿಕ್ಕ ಮೊದಲ ಕೆಲಸ ಸೀರೆಯಂಗಡಿಯ ಶೋಕೇಸಿನ ಹೆಣ್ಣುಗೊಂಬೆಗಳಿಗೆ ಸುಂದರವಾಗಿ ಸೀರೆಗಳನ್ನುಡಿಸುವುದು. ಅವನ ಬದುಕಿನಲ್ಲಿ ಮುಂದೆ ಬರಬಹುದಾದ ಹೆಣ್ಣಿನ ಮುನ್ಸೂಚನೆಯಂತೆ ಈ ಗೊಂಬೆಗಳು ಅವನ ಬದುಕಿನಲ್ಲಿ ಮೊದಲು ಪ್ರವೇಶ ಪಡೆದಿದ್ದವು. ಅವನ ಸೀರೆಯುಡಿಸುವ ಕಲೆಗೆ ಮನಸೋತು ಮೊದಲು ರಾಮಭಾವುವಿನ ಪರಿಚಯಕ್ಕೆ ಬಂದವಳು ಒಬ್ಬ ವಿದೇಶಿ ಮಹಿಳೆ. ಸೀರೆಯುಡುವ ಕಲೆಯನ್ನು

ಅವನಿಂದ ಕಲಿಯುವ ಸಲುವಾಗಿ ಅವನನ್ನು ಹೋಟೆಲೊಂದರ ರೂಮಿಗೆ ಕರೆದೊಯ್ದು ನಗ್ನತೆಯಲ್ಲಿ ನಿಂತಾಗ ಮೊದಲ ಬಾರಿಗೆ ರಾಮಬಾವುವಿನ ಮನಸ್ಸು ದುರ್ಬಲವಾಗಿತ್ತು. ಸ್ತ್ರೀ ಎಂಬ ಮಾಯೆ ಅವನ ಜೀವನದಲ್ಲಿ ಮೊದಲನೇ ಸಲ ತನ್ನ ಜಾಲವನ್ನು ಬೀಸಿತ್ತು. ಆದರೆ ಆ ಸ್ತ್ರೀಯದು ಜಾಲವಲ್ಲ ಅದು ರಾಮಭಾವುವಿನ ಮನಸ್ಸಿನ ಭ್ರಮೆಯಷ್ಟೇ. ಅವಳಿಗೆ ಅಂತಹ ಯಾವ ಭಾವನೆಗಳೂ ಇಲ್ಲದೇ ಅವಳ ಮನಸ್ಸು ಸ್ಪಟಿಕದಷ್ಟೇ ಪಾರದರ್ಶಕವಾಗಿತ್ತು. ಅವಳ ಮುಗುಳ್ನಗೆಯಲ್ಲಿ ಕಾಮುಕವಾದ ಯಾವ ಆಕರ್ಷಣೆಯೂ ಇರದೇ ಅವಳ ಸಹಜ ಮುಗ್ಧ ಸೌಂದರ್ಯದ ಕುರುಹಾಗಿತ್ತು. ಆದರೆ ಈ ಘಟನೆ ರಾಮಭಾವುವಿನ ಮನಸ್ಸನ್ನು ತಲ್ಲಣಗೊಳಿಸುವುದರ ಮೂಲಕ ಅವನ ಮಾನಸಿಕ ಸಮತೋಲನ ಆಯತಪ್ಪಿದ್ದು ಅದು ಮುಂದೆಂದೂ ಸಮವಾಗದಿರುವಷ್ಟು ಅಸಮತೋಲನಗೊಂಡಿತ್ತು. ಯಾವ ಪಾಪದ ಭಾವನೆಯೆ ಇಲ್ಲದ ಅವಳ ಮುಖದಲ್ಲಿನ ನಗು ರಾಮಭಾವುವಿಗೆ ಕಾಣಿಸದೇ ಅವಳ ನಗ್ನದೇಹ ಮಾತ್ರ ಅವನನ್ನು ಆಕರ್ಷಿಸಿದ್ದೇ ಅವನ ಈ ಮಾನಸಿಕ ಅಸಮತೋಲನಕ್ಕೆ ಕಾರಣವಾಯಿತು.

ಅವನ ಈ ಮಾನಸಿಕ ಅಸಮತೋಲನಕ್ಕೆ ಪೂರಕವೆಂಬಂತೆ ಅವನಿಗೆ ವಜ್ರಗಳ ಮೌಲ್ಯಮಾಪಕ ವೃತ್ತಿಯೂ ದೊರೆತದ್ದು ಹಲವು ಸ್ತ್ರೀಯರ ಸಹವಾಸ ಅವನಿಗೆ ಸನಿಹವಾಗಲು ಕಾರಣವಾಯಿತು. ವಜ್ರದ ಮಳಿಗೆಗೆ ಬರುವ ಸ್ತ್ರೀಯರು ಶ್ರೀಮಂತರು ಆಕರ್ಷಕ ರೂಪವುಳ್ಳವರಾಗಿದ್ದು ಜ್ಯುಬೇದಾ ಎನ್ನುವ ದೊರೆಸಾನಿ ಮಾತ್ರ ರಾಮಭಾವುವಿನ ಬದುಕಿನಲ್ಲಿ ಯಾವುದೇ ತೊಡಕಿಲ್ಲದೇ ಬಲುಬೇಗನೇ ಪ್ರವೇಶ ಪಡೆದಳು. ಸುಶಿಕ್ಷಿತರ ವೇಶ್ಯಾವಾಟಿಕೆಯ ಯಜಮಾನತಿಯಾದ ಅವಳು ನಗರದ ಪ್ರತಿಷ್ಠಿತರು. ಪ್ರಸಿದ್ಧ ಉದ್ಯೋಗಪತಿಗಳು, ರಾಜಕಾರಣಿಗಳು ಎಲ್ಲರನ್ನು ತನ್ನ ಮುಷ್ಠಿಯಲ್ಲಿಡಿದಿಟ್ಟಿದ್ದ ಅವಳು ರೂಪಕ್ಕಿಂತ ಲೈಂಗಿಕವಾಗಿ ಎಲ್ಲಾ ಪುರುಷರನ್ನು ಆಕರ್ಷಿಸುವ ಗಣಿಕೆಯರ ಕುಟಿಲತೆಯಲ್ಲಿ ತುಂಬಾ ನಿಷ್ಣಾತಳಾಗಿದ್ದಳು. ತನ್ನ ಕಾಮದ ಹಂಬಲತೆಗಾಗಿ ಅವಿವಾಹಿತ ತರುಣರನ್ನು ತನ್ನ ಬಲೆಗೆ ಹಾಕಿಕೊಳ್ಳುವ ಜಾಣ್ಮೆಗೆ ರಾಮಭಾವು ಕೂಡ ಹೊರತಾಗಲಿಲ್ಲ. ರಾಮಭಾವುವಿನ ಯೌವ್ವನವನ್ನು ಸೂರೆಮಾಡಿದ ಅವಳು ರಾಮಭಾವುವನ್ನು ಒಂದು ರೀತಿಯಲ್ಲಿ ಬಲಾತ್ಕರಿಸಿದ್ದಳು. ಹೆಣ್ಣಿನ ಸ್ಪರ್ಶವನ್ನರಿಯದ ರಾಮಭಾವುವಿಗೆ ಆ ಬಲಾತ್ಕಾರವೇ ಹಿತಸ್ಪರ್ಶವಾದದ್ದು. ಅವನ ವಯಸ್ಸಿನ ಕಾಮಾಕಾಂಕ್ಷೆಗೆ ಸಹಜವಾದದ್ದೇ ಆದರೂ ಕ್ರಮೇಣ ಅವಳೊಬ್ಬ ಯುವಕರ ಯೌವ್ವನವನ್ನು ಹೀರುವ ಮಾರಿ ಎಂದು ಅರಿವಿಗೆ ಬಂದಿತ್ತಾದರೂ ಅಷ್ಟರಲ್ಲಿ ಅವನು ಅಸಹಾಯಕನಾಗಿದ್ದ.

ಜ್ಯುಬೇದಾ ತನ್ನ ವೃತ್ತಿಗೆ ತಕ್ಕಂತೆ ಅವನನ್ನು ತಿರಸ್ಕರಿಸಿದರೂ ಜೊತೆಗೆ ತನ್ನಂತಹ ನವತರುಣರನ್ನು ಅವನ ಕಣ್ಣೆದುರಲ್ಲೇ ಶಯ್ಯಾಗೃಹಕ್ಕೆ ಕರೆದೊಯ್ದು ದೃಶ್ಯ ಹೆಣ್ಣು ಎಂಬ ಸಂಬಂಧದ ಬಗೆಗೆ ಅವನಲ್ಲಿ ಒದು ರೀತಿಯ ಅಸಹ್ಯತೆಯನ್ನು ಹುಟ್ಟುಹಾಕಿತು. ಇದರ ಜೊತೆಗೇ ವೇಶ್ಯಾವಾಟಿಕೆಯಲ್ಲಿ ಯಾರೂ ಪ್ರಿಯರೂ ಅಲ್ಲ ಅಪ್ರಿಯರೂ ಅಲ್ಲ. ದುಡ್ಡು, ತಾರುಣ್ಯ ಎರಡೇ ಅಲ್ಲಿ ನಿತ್ಯ ಚಲಾವಣೆಯಲ್ಲಿದ್ದ ನಾಣ್ಯಗಳು ಎಂಬ ಕಟುಸತ್ಯದ ಅರಿವಾಯಿತು. ಅವನ ಬದುಕಿನಲ್ಲಿ ಪ್ರವೇಶಿಸಿದ ಹೆಣ್ಣು ತನ್ನೊಡನೆ ಶಾಂತವಾಗದ ಭಯಂಕರ ಬಿರುಗಾಳಿಯನ್ನು ಎಬ್ಬಿಸಿ ತನ್ನನ್ನು ಪಾಪದ ಕೂಪಕ್ಕೆತಳ್ಳಿದಳೆಂಬ ಪಾಪಪ್ರಜ್ಞೆ ಅವನನ್ನು ಮದ್ಯ, ಜೂಜಿನ ಗುಲಾಮನ್ನಾಗಿ ಪರಿವರ್ತಿಸಿತು.

ಈ ಒಂದು ಸಂಬಂಧ ರಾಮಾಭಾವುವಿನ ಜೀವನದ ದಿಕ್ಕನ್ನೇ ಬದಲಿಸಿತ್ತು. ಚಿಕ್ಕಂದಿನಲ್ಲೇ ತಾಯಿಯಿಂದ ದೂರವಾದ ರಾಮಭಾವುವಿಗೆ ತಾಯ್ತನದ ಮಮತೆಯ ಅನುಭವ ಎಳ್ಳಷ್ಟು ಇರಲಿಲ್ಲ. ಅವನಿಗೆ ಸನಿಹವಾದ ಒಂದೇ ಒಂದು ಸ್ತ್ರೀ ಸಂಬಂಧಿಯಾದ ಜ್ಯುಬೇದಾ ಪತ್ನಿಯ ಪ್ರೀತಿಯನ್ನು ಕೂಡಲು ಎಲ್ಲಿಯೂ ಸಮರ್ಥಳಾಗಲೇ ಇಲ್ಲ. ಅವಳ ಲೈಂಗಿಕ ಅನುಭವವು ಕೂಡ ಬರೀ ದೈಹಿಕ ವ್ಯಾಪಾರವಾಗಿತ್ತೇ ವಿನಃ ಅದು ರಾಮಭಾವುವಿನ ಜೀವನಕ್ಕೆ ಎಂದಿಗೂ ಪುರುಷ ಸ್ತ್ರೀ ಸಂಬಂಧದ ಪರಿಪಕ್ವತೆಯನ್ನು ಉಂಟುಮಾಡಲೇ ಇಲ್ಲ. ಈ ಎಲ್ಲಾ ಅನುಭವಗಳಿಂದ ರಾಮಭಾವುವಿಗೆ ಹೆಣ್ಣು ಸರ್ವನಾಶದ ಅಸುರೀ ಶಕ್ತಿಯಾಗಿ ಕಂಡಿತ್ತು.

ದಾಂಪತ್ಯವೂ ಅಲ್ಲದ ಪ್ರೇಮವೂ ಅಲ್ಲದ ಮಮತೆಯೂ ಅಲ್ಲದ ಇಂತಹ ಸ್ತ್ರೀಸಂಬಂಧ ರಾಮಭಾವುವಿನ ಬದುಕನ್ನು ಛಿದ್ರಗೊಳಿಸಿತ್ತು. ತಾರುಣ್ಯವನ್ನು, ಬುದ್ದಿಬಲವನ್ನು ಸೂರೆ ಹೊಡೆದು ರಾಮಭಾವುವನ್ನು ನಿರುಪಯೋಗಿ ಸಿಪ್ಪೆಯಂತೆ ಸುಲಿದೊಗೆದ ಆ ಹೆಣ್ಣು ನಿರಂತರವಾಗಿ ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ಅಭಿದಾನವಾಗಿ ಕಾಡಿತ್ತು. ಅದರ ಜೊತೆಗೇ ಹೆಣ್ಣು-ಹೊನ್ನು ತಮ್ಮನ್ನು ಕೆಣಕಿ, ಕಾಡಿ ಹೋದವೇ ಹೊರತು ಯಾವುದೇ ತನ್ನೊಂದಿಗೆ ಸ್ಥಿರವಾಗಿ ಉಳಿಯಲಿಲ್ಲ ಎಂಬ ಘೋರಸತ್ಯವೂ ಸ್ಪಷ್ಟವಾಗಿತ್ತು.

ತನ್ನ ಬದುಕಿನಲ್ಲಿ ಹೆಣ್ಣು ಮಾಯೆಯಾಗಿ ಮಾತ್ರವಲ್ಲ. ಸಾವಾಗಿಯೂ ಪ್ರವೇಶಿಸುವವಳೆಂಬ ಕಲ್ಪನೆ ಕೂಡ ರಾಮಭಾವುವಿಗೆ ಇರಲಿಲ್ಲ. ಆದರೆ ಅವನ ಜೀವ ಕೂಡ ಒಂದು ಹೆಣ್ಣು ತಂದ ವಸ್ತುವಿನೊಂದಿಗೇ ಬೆರೆತದ್ದು ಆಶ್ಚರ್ಯವಾದರೂ ಸತ್ಯ. ರಂಗೋಲಿ ಮಾರುವವಳು ತಂದ ಬೆಣಚು ಕಲ್ಲೊಂದು ರಾಮಭಾವುವಿನ ಮೃತ್ಯುವಾಗಿ ಅದನ್ನು ತಂದ

ಅವಳು ಮೃತ್ಯುದೇವತೆಯಾಗಿ ಬಂದವಳಂತೆ ರಾಮಭಾವುವಿನ ಜೀವವನ್ನು ಸೆಳೆದೊಯ್ದಳು. ರಾಮಭಾವು ಈ ಎಲ್ಲಾ ಸ್ತ್ರೀ ಸಂಬಂಧಗಳನ್ನೂ ಅನಿರೀಕ್ಷಿತವಾಗಿಯೇ, ಆಕಸ್ಮಿಕವಾಗಿಯೇ ಬೆಸೆದುಕೊಂಡಿದ್ದ. ಹೆಣ್ಣು ಮಾಯೆಯಾಗಿ ಕೊನೆಗೆ ಸಾವಾಗಿ ತನ್ನ ಜೀವನವನ್ನು ಅಂತ್ಯಗೊಳಿಸುವುದೆಂಬ ಸತ್ಯದ ಮುನ್ಸೂಚನೆಯೊಂದಿಗೂ ಅಸಹಾಯಕನಂತೆ ಬದುಕಿದ ರಾಮಭಾವುವಿಗೆ ಸ್ತ್ರೀ ಎಂಬ ಮಾಯೆ ಕೊನೆಗೂ ಕಾಡಿದ್ದು ಸಾವಾಗಿ. ಆ ಸಾವು ಕೂಡ ಅವನ ಮತ್ತು ಅವರೆಲ್ಲರ ಸಂಬಂಧಗಳ ಗುಟ್ಟನ್ನು ತನ್ನಂತೆಯೇ ಗುಪ್ತವಾಗಿಟ್ಟುಕೊಂಡು ತನ್ನ ಒಡಲಿಗೆ ರಾಮಭಾವುವನ್ನು ಸೆಳೆದುಕೊಂಡಿತ್ತು.

★ 'ಅನಿರೀಕ್ಷಿತ' ಕಥೆಯ ಶೀರ್ಷಿಕೆ ಅಲ್ಲಿನ ಅನಿರೀಕ್ಷಿತ ಘಟನೆಗಳ ಸಂಭವಿಸುವಿಕೆಯನ್ನು ಸೂಚಿಸುವಂತದ್ದಾದರೂ ಸಹ ಕತೆಯಲ್ಲಿನ ಸಂಬಂಧಗಳುಕೂಡ ಇಂತಹ ಘಟನೆಗಳೊಂದಿಗೇ ಅನಿರೀಕ್ಷಿತವಾಗಿ ಆಹ್ವಾನಪಡೆಯುತ್ತವೆ. ಮತ್ತುಅಂತಹ ಅನಿರೀಕ್ಷಿತತೆಯೊಂದಿಗೇ ಅಂತ್ಯಗೊಳ್ಳುವುದು ಆಶ್ಚರ್ಯ. ಇಂತಹ ಅನಿರೀಕ್ಷಿತ ಸಂಬಂಧ ಬರುವಾಗಲೇ ಆಘಾತವನ್ನು ಕೂಡ ಹೊತ್ತು ತಂದಿತ್ತು. ಇಲ್ಲಿನ ಪುರುಷ-ಸ್ತ್ರೀ ಸಂಬಂಧದ ಪಾತ್ರಗಳು, ಪ್ರಸಿದ್ಧ ಜನಪ್ರಿಯ ಚಿತ್ರನಟ ಸೋಹಂ ಕುಮಾರ್ ಮತ್ತು ಸಾಮಾನ್ಯ ಮಧ್ಯಮವರ್ಗದ ಗೃಹಿಣಿ ಗಿರಿಜಮ್ಮ. ಸೋಹಂ ಕುಮಾರ ತನ್ನ ಬದುಕಿನಲ್ಲಿ ಮರೆಯಾದ ಭೂತಕಾಲ ಎಂದು ತಿಳಿದ ಗಿರಿಜಮ್ಮನಿಗೆ ಅವನ ಹಠಾತ್‌ಪ್ರವೇಶ ವಿಚಿತ್ರವಾದ ಆಘಾತವನ್ನುಂಟು ಮಾಡುತ್ತದೆ. ಆದರೆ ಗಿರಿಜಮ್ಮನ ಮಗಳು ಮತ್ತು ಗಂಡನಿಗೆ ಆಶ್ಚರ್ಯದ, ಪ್ರತಿಷ್ಠೆಯ ಗೌರವದ ವಿಷಯವಾಗುತ್ತದೆ.

ಗಿರಿಜಾ ಮತ್ತು ಸೋಹಂ ನಡುವಿನ ಸಂಬಂಧ ಅಷ್ಟೇನೂ ನಿಕಟವಾದುದಲ್ಲ. ಒಂದೇ ಊರಿನವರಾದ ಇವರನ್ನು ಮದುವೆಯ ಮೂಲಕ ಒಂದುಗೂಡಿಸಬೇಕೆಂಬ ಮಾತು ಹಿರಿಯರಿಂದ ನಡೆದಿತ್ತೇ ವಿನಃ ಇವರಿಬ್ಬರ ಮಧ್ಯೆ ನೆರೆಹೊರೆಯ ಪರಿಚಯದ ಸಂಬಂಧವನ್ನೊರತಾಗಿ ಪ್ರೇಮವಾಗಲೀ, ಸ್ನೇಹವಾಗಲೀ ಯಾವುದೂ ಇರಲಿಲ್ಲ. ಸೋಹಂ ಸತೀಶನಾಗಿದ್ದಾಗ ಇದ್ದ ಈ ಸಂಬಂಧ ಇಷ್ಟು ಸ್ವಪ್ರತಿಷ್ಠೆಯ ನಟನಾದಾಗ ಮತ್ತೆ ಮುಂದುವರೆಯಲು ಶುರುವಾದದ್ದು ಮಾತ್ರ ಗಿರಿಜಾಳಿಗೆ ಅಧೀರತೆಯನ್ನು ತಂದೊಡ್ಡಿತ್ತು ಎಂದೋ ಎಲ್ಲೋ ಮರೆಯಾಗಿ ಹೋದ ಈ ಪಾತ್ರಗಳು ಮತ್ತೆ ಒಂದಾಗುವ ಉದ್ದೇಶವಾದರೂ ಏನು ? ಎಂಬುವ ನಿಗೂಢ ಅನುಮಾನ ಗಿರಿಜಾಳನ್ನು ಮತ್ತೆ ಮತ್ತೆ ಗೊಂದಲಿಸಿತ್ತು.

ಇದು ಕೇವಲ ಗಿರಿಜಾಳಿಗೆ ಕಾಡುವ ಗೊಂದಲ ಮಾತ್ರವಲ್ಲ. ಆ ಗೊಂದಲ ಸೋಹಂನನ್ನೂ ಕಾಡಿದೆ. ಜೊತೆಗೆ ಕತೆಯನ್ನು ಓದುವ ಪ್ರತಿಯೊಬ್ಬ ಕಥೆಗಾರನನ್ನೂ ಕಾಡುತ್ತದೆ. ಹಣ, ಪ್ರತಿಷ್ಠೆ, ನೂರಾರು ಸುಂದರಿಯರು. ಹೀಗೆ ಯಾವುದನ್ನು ಯಾವ ಕ್ಷಣದಲ್ಲಾದರೂ ಪಡೆಯಬಹುದಾದಂತಹ ಸಾಮರ್ಥ್ಯವುಳ್ಳ ಒಬ್ಬ ನಟ ಇಂತಹ ಒಂದು ಸಾಮಾನ್ಯ ಹೆಣ್ಣಿನ ಸ್ನೇಹ-ವಿಶ್ವಾಸಗಳಿಗಾಗಿ ಹಾತೊರೆಯುವ ದೃಶ್ಯ ಎಂತಹವರನ್ನೂ ಗೊಂದಲಕ್ಕೊಳಪಡಿಸುತ್ತದೆ. ಆದರೆ ಈ ಗೊಂದಲಕ್ಕೆ ಪರಿಹಾರವಾಗಿ ಸೋಹಂನ ಮಾತುಗಳಲ್ಲೇ ಉತ್ತರ ಅಡಗಿದೆ.

''ಗಿರಿಜಾ ನನಗೆ ಏನು ಬೇಕಾಗಿದೆ ಎನ್ನುವುದು ನನಗೇ ಗೊತ್ತಿಲ್ಲ. ನನಗೆ ಬೇಕಾಗಿರುವುದು ಮುಖ್ಯವಾಗಿ ಮನಶ್ಯಾಂತಿ ಅದು ಎಲ್ಲೂ ಸಿಕ್ಕಲಿಲ್ಲ. ದುಡ್ಡುಗಳಿಸಿದಷ್ಟು ಖರ್ಚು ಮಾಡಿದ್ದೇನೆ. ಸಂಸ್ಥೆಗಳಿಗೆ, ದೇವಸ್ಥಾನಗಳಿಗೆ ಹಣ ಕೊಟ್ಟೆ. ಆದರೆ ಮನಶ್ಯಾಂತಿ ಸಿಕ್ಕಲಿಲ್ಲ. ಅದು ನಿಮ್ಮಲ್ಲಿ ಸಿಕ್ಕೀತೆಂದು ಬಂದೆ''. ಸೋಹಂ ಜೀವನದ ಅನುಭವದ ಮೊದಲ ಮೆಟ್ಟಿಲನ್ನೇರುವುದಕ್ಕಿಂತ ಮುಂಚೆಯೇ ಸತೀಶನಾಗಿದ್ದಾಗಲೇ ಸಂಬಂಧಗಳನ್ನು ತೊರೆದು ಚಲನಚಿತ್ರರಂಗದತ್ತ ಧಾವಿಸಿದ್ದ, ಹಣ, ಪ್ರತಿಷ್ಠೆ ಇದ್ದರೆ ಯಾವುದನ್ನಾದರೂ ಪಡೆದು ಸುಖಿಯಾಗಿರಬಹುದೆಂಬ ಎಣಿಕೆ ಅವನನ್ನು ಇಷ್ಟರಮಟ್ಟಿಗೆ ಪ್ರತಿಷ್ಠೆಯ ಶಿಖರಕ್ಕೇರಿಸಿತ್ತು. ಆದರೆ ಆ ಶಿಖರದಾಚೆಗಿನ ಅಪಾಯವನ್ನು ಅವನು ಎಂದೆಂದೂ ಊಹಿಸಿರಲಿಲ್ಲ. **'ಹಣದಿಂದ ಏನನ್ನಾದರೂ ಪಡೆಯಬಹುದ. ಆದರೆ ಎಲ್ಲವನ್ನೂ ಅಲ್ಲ'** ಎಂಬ ಸತ್ಯದ ಅರಿವು ಈಗ ಅವನಲ್ಲಿ ಚಿಗುರೊಡೆದಿತ್ತು.

ಚಲನಚಿತ್ರದ ನಟನೆ, ಅವನಲ್ಲಿನ ಸ್ವಯಂವ್ಯಕ್ತಿತ್ವವನ್ನು ಇಲ್ಲವಾಗಿಸಿತ್ತು. ಸತೀಶನ ಮುಗ್ಧತೆ, ಜೀವನದ ಸಹಜತೆ ಸೋಹಂನಲ್ಲಿ ಮಾಯವಾದವು. ನಟನೆಯಲ್ಲಿ ತನ್ನತನವನ್ನು ಕಳೆದುಕೊಂಡ ಸೋಹಂ ಮನಶ್ಯಾಂತಿಗಾಗಿ ಹಂಬಲಿಸಿದ. ಹಣದಿಂದ ಹೆಣ್ಣು ಸಿಗಬಹುದು ಆದರೆ ಹೆಂಡತಿಯಲ್ಲ. ಹಣದಿಂದ ಪ್ರಣಯ ಸಿಗಬಹುದು ಆದರೆ ಪ್ರೇಮಿಯಲ್ಲ. ಪ್ರತಿಷ್ಠೆಯಿಂದ ಕಾಮ ದೊರೆಯಬಹುದೇ ವಿನಃ ಪ್ರೀತಿಯಲ್ಲ ಎಂಬ ಕಟುಸತ್ಯ ಅವನಿಗೆ ಅರಿವಾದೊಡನೆ ಅವನ ಮನಸ್ಸು ನೈಜ ಪ್ರೀತಿಗಾಗಿ, ಆ ಪ್ರೀತಿಯನ್ನು ನೀಡುವ ವ್ಯಕ್ತಿಯ ಸಾನ್ನಿಧ್ಯಕ್ಕಾಗಿ ಹಾತೊರೆಯಿತು. ಯಾವುದಾದರೊಂದು ಸಂಬಂಧ ತನಗೆ ಇಂತಹ ಪ್ರೀತಿಯನ್ನು ನೀಡಬಹುದೇ ಎಂಬ ಶೋಧ ನಡೆಸಿದಾಗ ಅವನ ಕಣ್ಣೆದುರಿಗೆ ನಿಂತವಳೇ ಗಿರಿಜಾ. ಅವಳನ್ನು

ಮದುವೆಯಾಗಿದ್ದರೆ ಅತ್ಯಂತ ಸುಖಿಯಾಗಿರುತ್ತಿದ್ದೆನೆಂಬ ಭಾವನೆ ಅವನಲ್ಲಿ ಮೂಡಿ ಅವಳನ್ನು ವಿವಾಹವಾಗದಿದ್ದಕ್ಕಾಗಿ ತನ್ನನ್ನು ತಾನೇ ಅಳಿದುಕೊಂಡ. ಈಗ ಮತ್ತೆ ಅವಳ ಸಾನಿಧ್ಯಬಯಸುವಲ್ಲಿ ತನ್ನ ಹಣ ಪ್ರತಿಷ್ಠೆಗಳನ್ನು ಬಳಸಿ ಅವಳನ್ನು ಆಕರ್ಷಿಸಲು ಪ್ರಯತ್ನಿಸಿದ. ಆದರೆ ಗಿರಿಜಾ ಹಣ, ಪ್ರತಿಷ್ಠೆಗೆ ಸೋಲದ ಗಂಡನನ್ನೇ ದೈವವೆಂದುಕೊಂಡ ಸಂಪ್ರದಾಯಬದ್ಧ ಗೃಹಿಣಿಯಾದ್ದರಿಂದ ಸೋಹಂನನ್ನು ತಿರಸ್ಕರಿಸಲು ಸಾಧ್ಯವಾಯಿತು. ಅವಳಲ್ಲಿಯ ಪಾರದರ್ಶಕತೆಗೆ ಕೊಂಚವೂ ಮಲಿನತೆ ಇರಲಿಲ್ಲ. ಅದನ್ನು ನೇರವಾಗಿಯೇ ಹೇಳಿದಳು.

''ನಮ್ಮ ಮನೆಯವರು ತಮ್ಮದೆಲ್ಲವನ್ನು ನನಗೆ ಧಾರೆಯೆರೆದಿದ್ದಾರೆ. ಪ್ರೇಮ, ವಿಶ್ವಾಸ, ತ್ಯಾಗ ಏನೆಲ್ಲವನ್ನೂ'' ಎಂಬ ಅವಳ ಮಾತುಗಳು ಅವಳಲ್ಲಿದ್ದ ನೈಜ ಪ್ರೀತಿಗೆ ನಿದರ್ಶನ, ಹಣದ ಪ್ರತಿಷ್ಠೆಯ ಮೋಹಕ್ಕೆ ಬಿದ್ದು ಸಂಬಂಧಗಳನ್ನು ಕಳೆದುಕೊಂಡು ಒಂಟಿಯಾದ ಸೋಹಂ ಮಾಡಿದ ತಪ್ಪನ್ನು ಗಿರಿಜಾ ಮಾಡಲಿಲ್ಲ. ನೈಜವಾದ ಪ್ರೀತಿ, ಹಣ, ಅಂತಸ್ತು, ಸೌಂದರ್ಯ, ಪ್ರತಿಷ್ಠೆ ಇವೆಲ್ಲವುಗಳನ್ನು ಮೀರಿ ನಿಲ್ಲುವಂತದ್ದು ಎಂಬ ಸತ್ಯವನ್ನು ಅವಳು ಕಂಡುಕೊಂಡಿದ್ದಳು. ತನ್ನನ್ನು ನಂಬಿದ ಪತಿ, ಮಗಳಿಗೆ ಮೋಸವೆಸಗಿ ಹಣದ ಹಿಂದೆ ಓಡುವ ದ್ರೋಹಕ್ಕೆ ಅವಳ ಮನಸ್ಸಿನಲ್ಲಿ ಎಳ್ಳಷ್ಟೂ ಆಸ್ಪದವಿರಲಿಲ್ಲ.

ಸೋಹಂನ ಪ್ರತಿಯೊಂದು ಮಾತಿಗೂ ವಜ್ರದಂತೆ ಕಠಿಣವಾದ ನೇರವಾದ ಮಾತುಗಳಲ್ಲಿ ಉತ್ತರಿಸಿದ್ದ ಗಿರಿಜಾ ಅವರಿಬ್ಬರ ನಡುವಿನ ಸಂಬಂಧಕ್ಕೆ ಪಾಪದಲೇಪವನ್ನು ಬಳಿಯಲಿಲ್ಲ. ಸೋಹಂನ ಅಸಂಖ್ಯ ಪ್ರಣಯಿಗಳ, ಹೆಣ್ಣುಗಳ ಮಾಲಿಕೆಯಲ್ಲಿ ತನ್ನ ಹೆಸರನ್ನು ಸೇರಿಸಲು ಹವಣಿಸಿದ ಸೋಹಂನ ಪ್ರಯತ್ನವನ್ನು ನಾಶಪಡಿಸುವುದರ ಮೂಲಕ ಸೋಹಂ ಮತ್ತು ಗಿರಿಜಾಳ ಸಂಬಂಧ ಪರಿಚಯದ ಗಡಿಯನ್ನು ದಾಟಲೇ ಇಲ್ಲ. ಅವಳ ಸಂಸಾರ, ಅವಳ ದೃಢಚಿತ್ತ, ಅವಳ ನೈಜ ಪ್ರೀತಿಯೇ ಭದ್ರಕೋಟೆಯಾಗಿ ಸೋಹಂನ ಅತಿಕ್ರಮಪ್ರವೇಶವನ್ನು ವಿಫಲವಾಗಿಸಿದ್ದವು.

ಈ ನಿಟ್ಟಿನಲ್ಲಿ ಈ ಕತೆಯ ಪುರುಷ-ಸ್ತ್ರೀ ಸಂಬಂಧ ಉಳಿದೆಲ್ಲಾ ಕಥೆಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ. ಇಲ್ಲಿ ಪ್ರೇಮವಾಗಲೀ, ಕಾಮವಾಗಲೀ ಪ್ರವೇಶಿಸುವುದಿಲ್ಲ. ಹಿರಿಯರ ಮಾತುಗಳಷ್ಟೆ ಇವರಿಬ್ಬರ ನಡುವೆ ಸಂಬಂಧವನ್ನು ಸೃಷ್ಟಿಸಿದವೇ ವಿನಃ ಅವು ಕೇವಲ ಮಾತಿನಸಂಬಂಧವೇ ವಿನಃ ಎಂದೂ ಭಾವನೆಯಿಂದ ತುಂಬಲಿಲ್ಲ. ಮನುಷ್ಯ ಸಂಬಂಧಗಳು ಭಾವನೆಗೆ ಸಂಬಂಧಿಸಿದವು. ವ್ಯಕ್ತಿಗಳ ನಡುವಿನ ಪರಸ್ಪರ ಭಾವನೆರಹಿತ ಸಂಬಂಧಕ್ಕೆ ಅರ್ಥವೇ

ಇಲ್ಲ. ಅಂತಹ ಭಾವನಾರಹಿತ ಪರಿಚಯಾತ್ಮಕ ಸಂಬಂಧವನ್ನೇ ಈ ಪುರುಷ ಸ್ತ್ರೀ ಪಾತ್ರಗಳದ್ದು ಎನ್ನಬಹುದು.

ಸೋಹಂನಲ್ಲಿ ಇಂತಹ ಭಾವನೆಗಳು ಚಿಗುರಿತ್ತಾದರೂ ಅದು ಅವನ ಯಾಂತ್ರಿಕ ಜೀವನಕ್ಕೆ ಅನಿವಾರ್ಯವಾದ ಒಂದು ಸಂಬಂಧದ ಅವಶ್ಯಕತೆಯಿಂದ ಉಂಟಾಗಿದ್ದೇ ವಿನಃ ಗಿರಿಜಾಳ ಬಗೆಗಿನ ಪ್ರೀತಿಯಿಂದಲ್ಲ. ಅವನೇ ಕಟ್ಟಿಕೊಂಡಿದ್ದ ಯಾಂತ್ರಿಕ ಕೋಟೆಯಲ್ಲಿ ಅವನನ್ನು ಕಿತ್ತು ತಿನ್ನುತ್ತಿದ್ದ, ಏಕಾಕಿತನವನ್ನು ದೂರ ಮಾಡಲು ಒಂದು ಆತ್ಮೀಯ ಸಂಬಂಧದ ಅವಶ್ಯಕತೆಗಾಗಿ ಸೋಹಂ ಗಿರಿಜಾಳನ್ನು ಅಪೇಕ್ಷಿಸಿದನೇ ವಿನಃ ಅವನ ಅಂತರಾಳದಲ್ಲಿ ಗಿರಿಜಾಳ ಬಗೆಗೆ ಅಂತಹ ಯಾವ ಪ್ರೀತಿಯ ಭಾವನೆಗಳೂ ಅವನಲ್ಲಿಲ್ಲ. ಅವನು ಗಿರಿಜಾಳ ಬಗೆಗೆ ಅಂತಹ ಯಾವ ಪ್ರೀತಿಯ ಭಾವನೆಗಳೂ ಅವನಲ್ಲಿಲ್ಲ. ಅವನು ಗಿರಿಜಾಳ ಸಹವಾಸವನ್ನು, ಬಯಸಿದುದು ತನ್ನ ಸ್ವಾರ್ಥಕ್ಕಾಗಿಯೇ ವಿನಃ ನಿಸ್ವಾರ್ಥಪ್ರೇಮದಿಂದಲ್ಲ. ಅಂದಮೇಲೆ ಸೋಹಂದೂ ಕೂಡ ಯಾಂತ್ರಿಕ ಪ್ರೀತಿ ಅವನ ಬಾಳಿನುದ್ದದ ಹೆಣ್ಣುಗಳ ಸಾಲಿನಲ್ಲಿ ಗಿರಿಜಾಳು ಒಬ್ಬಳು ಅಷ್ಟೇ ಎಂಬುದು ಅವನ ದೃಷ್ಟಿ ಆದರೆ ಗಿರಿಜಾ ಈ ಸಾಲಿನಲ್ಲಿ ಸೇರ್ಪಡೆಯಾಗದ ಹೆಣ್ಣಾಗಿ ಪುರುಷ - ಸ್ತ್ರೀ ಸಂಬಂಧದ ನಡುವಿನ ಯಾಂತ್ರಿಕತೆಗೆ ತನ್ನ ತಿರಸ್ಕಾರದ ಮೂಲಕ ಧಿಕ್ಕಾರವನ್ನು ಸೂಚಿಸಿದಳೆನ್ನಬಹುದು.

ಈ ಕಥೆಯ ಮತ್ತೊಂದು ಪುರುಷ ಸ್ತ್ರೀಸಂಬಂಧ ಸೋಹಂ ಮತ್ತು ಮಾಲವಿಕಾಳದ್ದು. ಇದು ಗಿರಿಜಾಳ ಸಂಬಂಧದಿಂದ ತೀರಾ ಭಿನ್ನ. ಇವರದ್ದು ಸಹನಟನಾ ಸಂಬಂಧ. ಚಲನಚಿತ್ರರಂಗದ ನಟಾ-ನಟಿಯ ಸಂಬಂಧಗಳು ಯಾವಾಗಲೂ ಪತ್ರಿಕೋದ್ಯಮಕ್ಕೆ ವಸ್ತುವಾಗಿ ಜನಗಳ ಬಾಯಿಯಲ್ಲಿ ನುಚ್ಚುಗುಚ್ಚಾಗುವುದು ಸಾಮಾನ್ಯ. ಅಂತಹ ಸಂಬಂಧಗಳ ಸತ್ಯಾಸತ್ಯತೆ ಆಯಾ ಸಂಬಂಧಗಳ ಪಾತ್ರಗಳಿಗೆ ಮಾತ್ರ ತಿಳಿದಿರುತ್ತವೆಯೇ ವಿನಃ ಉಳಿದವರಿಗೆ ಕೇವಲ ಊಹಾಪೂಹ ಸತ್ಯವಷ್ಟೇ. ಆದರೆಇಲ್ಲಿನ ಈ ಸಂಬಂಧ ಪುರುಷ - ಸ್ತ್ರೀ ಸಂಬಂಧದ ದೈಹಿಕತೆಗೆ ಸಂಬಂಧಿಸಿದ್ದು. ಸೋಹಂನ ಜೀವನದ ಅಸಂಖ್ಯ ಪ್ರಣಯಿಗಳಲ್ಲಿ ಮಾಲವಿಕಾ ಕೂಡ ಒಬ್ಬಳಾದ್ದರಿಂದ ಕತೆಯಲ್ಲಿ ಮಾಲವಿಕಾ ಪಾತ್ರಕ್ಕೆ ಒಂದು ಹೆಣ್ಣು ಎಂಬ ಗುರುತು ಇದೆಯೇ ವಿನಃ ಪ್ರೇಮಿಯೆಂದಾಗಲೀ, ಹೆಂಡತಿಯಂತಾಗಲೀ, ಹೆಂಗಸೆಂದಾಗಲೀ ಯಾವ ಸ್ಥಾನಮಾನವೂ ಇಲ್ಲ. ಈ ನಿಟ್ಟಿನಲ್ಲಿ ಕತೆಯಲ್ಲಿನ ಗಿರಿಜಾ ಮತ್ತು ಮಾಲವಿಕಾ ಪಾತ್ರಗಳೆರಡೂ ಪರಸ್ಪರ ವಿರುದ್ಧ ಸ್ವರೂಪದಲ್ಲಿ ಸ್ಥಾನ ಪಡೆದಿವೆ ಎನ್ನಬಹುದು.

★ ಅಶ್ವಾರೋಹಿ ಕಥೆಯ ಚಾರುಲತಾ ಮತ್ತು ಸಖಾರಾಮ ಕಾಂಬಳೆ ಪಾತ್ರಗಳ ನಡುವಿನ ಸಂಬಂಧ ವಿವಾಹದ ಮೂಲಕ ಒಂದುಗೂಡಿದರೂ ಅದು ಸಮಾಜದ ಕಣ್ಣಿನಲ್ಲಿ ಮಾತ್ರ. ದಾಂಪತ್ಯ ಎಂಬುದನ್ನು ಅರ್ಥೈಸುವಂತಹ ಯಾವ ಸಂಬಂಧವೂ ಪರಸ್ಪರ ಇವರಿಬ್ಬರಲ್ಲಿರಲಿಲ್ಲ ಎನ್ನಬಹುದು. ಕಥೆಯಲ್ಲಿ ಚಾರುಲತಾ ಪಾತ್ರವನ್ನು ಹಲವು ಕಡೆ ಚಾರುಮತಿ ಎಂಬುದಾಗಿ ಬಳಸಲಾಗಿದೆ. ಇದು ತಪ್ಪುಬರವಣಿಗೆಯಿಂದ ಆದುದಲ್ಲ. ಉದ್ದೇಶಪೂರ್ವಕವಾಗಿಯೇ ಅವಳನ್ನು ಚಾರುಮತಿ ಎಂದು ಕರೆಯಲಾಗಿದೆ.

ಇಲ್ಲಿನ ಚಾರುಲತಾ ಮದುವೆಯನ್ನು ತನ್ನ ಒಳಿತಿಗಾಗಿ ಮಾಡಿಕೊಂಡವಳು ಎರಡು ವ್ಯಕ್ತಿಗಳ ನಡುವಿನ ಪ್ರೇಮವಾಗಲೀ ಆಕರ್ಷಣೆಯಾಗಲೀ ಇವರಿಬ್ಬರನ್ನು ಒಂದುಗೂಡಿಸಲಿಲ್ಲ. ಈ ಮಾತು ಸಖಾರಾಮನಿಗೆ ಅನ್ವಯವಾಗುವುದಿಲ್ಲ. ಚಾರುಲತಾ ತನ್ನ ವೈಯಕ್ತಿಕ ಬೆಳವಣಿಗೆಗಾಗಿ ಸಖಾರಾಮ ಕಾಂಬಳೆಯವರನ್ನು ಅಸ್ತ್ರವನ್ನಾಗಿ ಬಳಸಿದಳು. ಅವಳದು ವಿನಾಶ ಕಾಲದ ವಿಪರೀತ ಬುದ್ಧಿ. ಅವರ ಸ್ಥಾನ, ಸಮಾಜದಲ್ಲಿ ಅವರ ಪ್ರಭಾವ, ಪ್ರತಿಷ್ಠೆ ಇವುಗಳನ್ನು ಬಳಸಿ ಅವರಿಗಿದ್ದ ಎಲ್ಲಾ ಅನುಕೂಲಗಳು ಹಾಗೂ ಸಂಪರ್ಕಗಳ ಪೂರ್ಣ ಲಾಭ ಪಡೆದು ಅಮೇರಿಕೆಗೆ ಹೋಗುವ ಅವಕಾಶವನ್ನು ಪಡೆದಳು. ತನ್ನ ಜೀವನ ಸುಭದ್ರವಾಗಿ ನೆಲೆನಿಲ್ಲಲು ಕಾಂಬಳೆಯವರನ್ನು ಭದ್ರವಾದ ತಳಪಾಯವನ್ನಾಗಿ ಬಳಸಿದಳು. ಚಾರುಲತಾಳ ಕುಯುಕ್ತಿಯ ಮುಂದೆ ಸಖಾರಾಮರ ಮುಗ್ಧತೆ ಸೋತಿತು. ತನ್ನ ಭವಿಷ್ಯಕ್ಕಾಗಿ ಮತ್ತೊಬ್ಬರ ಜೀವನವನ್ನು ಬಲಿಕೊಡಲು ಸಿದ್ಧವಿದ್ದ ಅವಳ ಮನಸ್ಥಿತಿ ಅವಳಿಗೋಸ್ಕರ ಎಂತಹ ಘೋರ ಕೆಲಸವನ್ನಾದರೂ ಅವಳುಮಾಡಲು ತಯಾರು ಎನ್ನುವುದನ್ನು ಸಾರಿ-ಸಾರಿ ಹೇಳುತ್ತಿತ್ತು. ನಂಬಿದವರ ಹೆಗಲ ಮೇಲೆ ಕಾಲಿಟ್ಟು ಮೇಲೇರಿ, ಕೆಳಗಿದ್ದವರನ್ನು ಒದ್ದು ಕೆಡವಿ, ಮೇಲೇರುವ ರೀತಿ ಅವಳದು. ಅವಳ ಈ ಕುಯುಕ್ತಿಗೆ ಬಲಿಪಶುವಾದದ್ದು ಕಾಂಬಳೆಯವರು.

ಸಂಬಂಧಗಳ ಮೌಲ್ಯವನ್ನು ತಿಳಿಯದ ಬುದ್ಧಿಗೇಡಿ ಚಾರುಲತಾ ಅಮೇರಿಕೆಯ ಬಂಜೆತನದ ಜೀವನವನ್ನು ಮೊದಮೊದಲು ಸುಖವೆಂದು ಭಾವಿಸಿದರೂ ಆ ಜೀವನದ ಯಾಂತ್ರಿಕತೆ ಕೊನೆಯ ಅವಳ ನಿರ್ಧಾರಕ್ಕೆ ತೀವ್ರಬದಲಾವಣೆಯನ್ನು ತಂದೊಡ್ಡಿತು. ವಿವಾಹ ವಿಚ್ಛೇಧನಕ್ಕಾಗಿ ಒತ್ತಾಯಿಸಿದ ಅವಳ ತೀರ್ಪಿನ ದಿವಸ ಕೈಗೊಂಡ ನಿರ್ಧಾರ ಎಲ್ಲರನ್ನೂ ದಂಗುಬಡಿಸಿತ್ತು. ತೀರ್ಪಿನ ಕೊನೆಯ ಗಳಿಗೆವರೆಗೂ ವಿಚ್ಛೇಧನಕ್ಕಾಗಿ ಹಾತೊರೆಯುತ್ತಿದ್ದ ಚಾರುಲತಾ ಕೊನೇಗಳಿಗೆಗೆ ಅವಳ ಆ ನಿರ್ಧಾರವನ್ನು ಕೈಬಿಟ್ಟು ಮತ್ತೆ ಸಖಾರಾಮರೊಂದಿಗೆ

ಬದುಕುವ ನಿರ್ಧಾರ ಕೈಗೊಂಡದ್ದು ಕೂಡ ತನ್ನ ಸಲುವಾಗಿಯೇ. ಇದಕ್ಕೆ ಪೂರಕವಾಗಿ ಇಷ್ಟುವರ್ಷಗಳ ಕಾಲ ತಾನು ತಿರಸ್ಕರಿಸಿದರೂ ತನ್ನನ್ನು ಕಾಯುತ್ತಾ, ಸಹನೆಯಿಂದ ಕಾಯ್ದು ಇಂದಿಗೂ ತನ್ನನ್ನೇ ಪ್ರೀತಿಸುತ್ತಿರುವ ಸಖಾರಾಮರ ಗುಣ, ಅವರ ಸ್ವಾರ್ಥರಹಿತ ಪ್ರೀತಿಯೂ ಕಾರಣವಾಯಿತೆನ್ನಬಹುದು. ತಾನು ಪ್ರತಿಷ್ಠತೆಗೋಸ್ಕರ ಬದುಕಿದ ಇಷ್ಟು ದಿವಸಗಳ ಒಂಟಿತನದ ಜೀವನದ ಅರ್ಥವೇನು ? ಅದರಿಂದ ಸಾಧಿಸಿದ್ದಾದರೂ ಏನು ? ಎಂಬ ಪ್ರಶ್ನೆ ಅವಳನ್ನು ಕಾಡಿತು. ಕೊನೆಗೆ ತನ್ನ ಬಾಳು ಬರಡಾಗುತ್ತೆಂಬುದರ ಅರಿವು ಬಂದಾಗ ಅವಳ ಮತಿ ಮತ್ತೆ ಕೆಲಸಮಾಡಿತು. ಸಂಬಂಧದ ಉಳಿವಿನಿಂದ ತನ್ನ ಬದುಕಿನ ಉಳಿವೂ ಸಾಧ್ಯ. ಇವೆರಡೂ ಪರಸ್ಪರ ಬೆಸೆದುಕೊಂಡಿವೆ ಎಂಬ ಸತ್ಯ ತಿಳಿದಾಕ್ಷಣ ಅವಳು ಸಖಾರಾಮನೊಂದಿಗೆ ಬದುಕುವ ನಿರ್ಧಾರವನ್ನು ಕೈಗೊಂಡಳು.

ಕತೆಯಲ್ಲಿನ ಈ ಪಾತ್ರ ಮನುಷ್ಯ ಸಂಬಂಧಗಳನ್ನು ತನ್ನ ಭವಿಷ್ಯದ ಸ್ವಾರ್ಥಕ್ಕಾಗಿ ಬಳಸುವ, ಕೆಲವೊಮ್ಮೆ ಮದುವೆ ಎಂಬುದು ಇಂತಹ ಒಂದು ಸ್ವಾರ್ಥದ ಸಂಕೇತವಾಗಿ ಆಚರಿಸುವ ಆಚರಣೆಯಂತೆ ನಡೆಯುವ ಒಂದು ಕ್ರಿಯೆಯಾಗಿ ಮಾತ್ರ ಕಾಣಸಿಗುತ್ತದೆ. ಇಂತಹ ಪಾತ್ರಗಳು ಮನುಷ್ಯ ಸಂಬಂಧಗಳಲ್ಲಿ ನಿರಂತರವಾಗಿ ಬದುಕುತ್ತಲೇ ಇರುತ್ತವೆ. ಮುಗ್ಧ ಮತ್ತು ಸ್ವಾರ್ಥ ಪ್ರೀತಿಗಳೆರಡೂ ಮನುಷ್ಯ ಸಂಬಂಧಗಳಲ್ಲಿ ಅಡಗಿರುತ್ತದೆ. ದಾಂಪತ್ಯವನ್ನು ಕೇವಲ ಸಾಮಾಜಿಕ, ಆರ್ಥಿಕ, ಧಾರ್ಮಿಕ ಭದ್ರತೆಗಾಗಿ ಮಾತ್ರ ಬಳಸುವ ಎಲ್ಲಾ ಪಾತ್ರಗಳು ವಾಸ್ತವ ಜೀವನದಲ್ಲೂ ಇರುವ ವಾಸ್ತವ ಚಿತ್ರಣಕ್ಕೆ ಸಾಕ್ಷಿಯಾಗಿದೆ. ಪುರುಷ -ಸ್ತ್ರೀ ಸಂಬಂಧಗಳಲ್ಲಿ ಪ್ರೇಮ ಕಾಮವನ್ನೊರತಾದ ಇಂತಹ ಉದ್ದೇಶಗಳು ಅಡಗಿರುವುದು ಸಂಬಂಧ ಸ್ವರೂಪದ ಮತ್ತೊಂದು ವೈಚಿತ್ರ್ಯತೆಗೆ ಉತ್ತಮ ಉದಾಹರಣೆ. ಚಾರುಲತಾಳ ಈ ತಂತ್ರ ಮನುಷ್ಯ ಸಂಬಂಧಗಳ ನಡುವಿನ ಒಂದು ಬದುಕಿನ ತಂತ್ರವೇ ಸರಿ.

ಜೀವನದಲ್ಲಿ ಸಂಬಂಧಗಳಿಂದ ದೂರವಾಗಿ ಅಪಾರವಾದುದನ್ನು ಸಾಧಿಸುತ್ತವೆಂದು ನಂಬಿ ಬದುಕುವವರು ಸಾಧಿಸುವುದು ಕೇವಲ ಒರಟತನದ, ಪಾಪಪ್ರಜ್ಞೆಯ ಅನಾಥಪ್ರಜ್ಞೆಯ ಬದುಕನ್ನು ಮಾತ್ರ. ಸಂಬಂಧಗಳನ್ನು ತನ್ನ ಬೆಳವಣಿಗೆಗೆ ಏಣಿಯನ್ನಾಗಿ ಬಳಸಿಕೊಂಡ ವ್ಯಕ್ತಿ. ತುಟ್ಟತುದಿಯನ್ನು ಮುಟ್ಟಿ ತಾನು ಆಶ್ರಯ ಪಡೆದ ಏಣಿಯನ್ನು ಒದೆಯುವುದು ಬುದ್ಧಿಗೇಡಿತನ. ಏಕೆಂದರೆ ಸಖಾರಾಮನಂತಹ ಸಹನಾಶೀಲರು ಎಲ್ಲೆಡೆಯಲ್ಲೂ ಇರಲಾರರು. ಇದು ಚಾರುಲತಾಳ ಅದೃಷ್ಟವೇ. ಕ್ಷಮಿಸಲಾರದ ತಪ್ಪನ್ನು ಕ್ಷಮಿಸುವ ಸಂಬಂಧದಿಂದಾಗಿ

ನಶಿಸಿಹೋಗಬೇಕಾಗಿದ್ದ ಇಲ್ಲಿನ ಪುರುಷ-ಸ್ತ್ರೀ ಸಂಬಂಧ ಚಿರಂತನ ಸಂಬಂಧವಾಗಿ ಮುಂದುವರೆಯಿತು. ಇಂತಹ ಪುರುಷ ಸ್ತ್ರೀ ಸಂಬಂಧಗಳು ಖಾಸಾನೀಸರ ಕಥೆಗಳಂತೆಯೇ ವಾಸ್ತವ ಜಗತ್ತಿನಲ್ಲಿ ಅಪರೂಪದಲ್ಲಿ ಅಪರೂಪ.

ಮೇಲಿನ ಎಲ್ಲಾಪುರುಷ ಸ್ತ್ರೀ ಸಂಬಂಧಗಳು ಖಾಸಾನೀಸರ ಎಲ್ಲಾ ಕಥೆಗಳ ಪ್ರಧಾನ ವಸ್ತು. ಇಲ್ಲಿ ಹೆಚ್ಚಾಗಿ ಕುಟುಂಬೇತರ ಅಂದರೆ ತಾಯಿ-ತಂದೆ, ದಾಂಪತ್ಯ, ಅಣ್ಣ-ತಂಗಿ ಇತ್ಯಾದಿ ಕೌಟುಂಬಿಕ ಸಂಬಂಧಗಳಿಂದ ಹೊರತಾದ ಪುರುಷ - ಸ್ತ್ರೀ ಸಂಬಂಧಗಳನ್ನು ಚರ್ಚಿಸಲಾಗಿದೆ. ಆದರೆ ಪುರುಷ. ಸ್ತ್ರೀ ಸಂಬಂಧ ಎಂದಾಗ ಕುಟುಂಬದ ಗಂಡು-ಹೆಣ್ಣಿನ ಸಂಬಂಧಗಳೂ ಸೇರ್ಪಡೆಯಾಗುತ್ತವೆ. ಅವುಗಳ ಚರ್ಚೆಯನ್ನು ಕೌಟುಂಬಿಕ ಸಂಬಂಧಗಳ ಬಗೆಗಿನ ಅಧ್ಯಾಯದಲ್ಲಿ ಚರ್ಚಿಸಲಾಗುತ್ತದೆ. ಈ ಪ್ರಬಂಧದ ಪ್ರಧಾನ ಕಾಳಜಿ ಮನುಷ್ಯ ಸಂಬಂಧಗಳು. ಆದ್ದರಿಂದ ಆ ಎಲ್ಲಾ ಸಂಬಂಧಗಳನ್ನು ಒಟ್ಟಾರೆಯಾಗಿ ಚರ್ಚಿಸುವುದಕ್ಕಿಂತ ಹಲವು ವಿಭಜನೆಗಳ ಮೂಲಕ ವಿಭಾಗಿಸಿ ಚರ್ಚಿಸುವ ಉದ್ದೇಶವೇ. ಇಂತಹ ಅಧ್ಯಾಯಗಳು, ಯಾವ ಅಧ್ಯಯನವಾಗಲೀ ಅದರ ಚರ್ಚೆ ಇಂತಹ ಮನುಷ್ಯ ಸಂಬಂಧಗಳೇ ವಿನಃ ಅದನ್ನೊರತಾದುದಲ್ಲ. ಅಲ್ಲಿ ಬರುವ ಇತರೆ ಘಟನೆ, ಕ್ರಿಯೆ, ಎಲ್ಲವೂ ಪೂರಕವೇ ವಿನಃ ಪ್ರಧಾನವಲ್ಲ.

ಆ) ಕೌಟುಂಬಿಕ ಸಂಬಂಧಗಳು

ಖಾಸನೀಸರ ಸಮಗ್ರ ಕಥೆಗಳನ್ನು ವಿಶ್ಲೇಷಿಸಿದಾಗ ಅಲ್ಲಿನ ಮುಖ್ಯವಾದ ವಸ್ತು ಮನುಷ್ಯ ಸಂಬಂಧಗಳೇ. ಇಂತಹ ಮನುಷ್ಯ ಸಂಬಂಧದ ಮೊದಲ ಉಗಮಸ್ಥಾನ ಕುಟುಂಬ. ಮಗುವೊಂದು ಗರ್ಭದಲ್ಲಿರುವಾಗಲೇ ಏಕಕಾಲಕ್ಕೆ ತಾಯಿ ಮತ್ತು ತಂದೆಯ ಸಂಬಂಧಗಳೆರಡನ್ನು ತನ್ನ ಜನ್ಮಕ್ಕೆ ಕಾರಣಕರ್ತರಾದ ಜನನಪೂರ್ವದಲ್ಲಿಯೇ ಪಡೆಯುತ್ತದೆ. ಹುಟ್ಟಿನೊಂದಿಗೆ ತಾನು ಜನಿಸುವ ಮನೆಯ ಆ ಮೂಲಕ ಕುಟುಂಬದ ಸಂಬಂಧಕ್ಕೆ ಒಳಪಡುತ್ತದೆ. ಬೆಳೆಯುತ್ತಾ ತನ್ನ ನೆರೆಹೊರೆಯ ಸುತ್ತಲ ಪರಿಸರದ ಮತ್ತು ಬಾಹ್ಯ ಸಮಾಜದ ಇತರ ಎಲ್ಲಾ ಮನುಷ್ಯ ಸಂಬಂಧಗಳೊಂದಿಗೆ ಬದುಕುತ್ತದೆ. ಅಂದಮೇಲೆ ಕುಟುಂಬ ಎಂಬುದು ಮನುಷ್ಯನ ಸಂಬಂಧ ಸೃಷ್ಟಿಗೆ ಕಾರಣವಾದ ಪ್ರಾಥಮಿಕ ಘಟಕ ಮತ್ತು ಕೌಟುಂಬಿಕ ಸಂಬಂಧಗಳು ಒಬ್ಬ ವ್ಯಕ್ತಿಯ ಪ್ರಾಥಮಿಕ ಸಂಬಂಧಗಳು ಎಂದು ಪರಿಗಣಿಸಬಹುದು.

ಕುಟುಂಬ ಮತ್ತು ಸಂಬಂಧ ಎಂಬೆರಡು ಪದಗಳೂ ತೀರಾ ಸಾದೃಶ್ಯವನ್ನುಳ್ಳ ಏಕಾರ್ಥದಿಂದ ಕೂಡಿರುವ ಪದಗಳು ಸಂಬಂಧವನ್ನು ಅರ್ಥೈಸುವ ಹಲವು ಅರ್ಥಗಳಲ್ಲಿ ಕುಟುಂಬ ಎಂಬುದು ಪ್ರಧಾನ ಅರ್ಥವೇ. ಕುಟುಂಬದ ಸದಸ್ಯರನ್ನು ಸಂಬಂಧಿಕರು ಎಂದು ಕರೆಯುವ ಮತ್ತೊಂದು ನೆಲೆಯಲ್ಲಿ ಸಂಬಂಧಗಳು ಮತ್ತು ಕುಟುಂಬ ಒಂದೇ ನಾಣ್ಯದ ಎರಡು ಮುಖಗಳೆಂದು ಕರೆಯಬಹುದು. ಆದರೂ ಕುಟುಂಬ ಎಂದರೆ ಒಂದೇ ಮನೆಯ ಅಥವಾ ಮನೆತನಕ್ಕೆ ಸೇರಿದ ಸದಸ್ಯರ ಸಮೂಹ ಎಂದು ಕರೆಯುವುದು ಸೂಕ್ತ ಎನ್ನುವುದಾದರೆ ಉಳಿದ ಸಂಬಂಧಗಳ ಕುಟುಂಬದಿಂದ ಹೊರಗುಳಿಯುತ್ತವೆ. ಹಾಗಾದರೆ ಅಂತಹ ಸಂಬಂಧಗಳನ್ನು ಕುಟುಂಬೇತರ ಸಂಬಂಧಗಳು ಎಂದು ಕರೆಯಬಹುದು. ಉದಾ: ಸ್ನೇಹಸಂಬಂಧಗಳು.

ಕೌಟುಂಬಿಕ ಸಂಬಂಧಗಳನ್ನು ರಕ್ತ ಸಂಬಂಧಗಳು ಎಂತಲೂ ಕರೆಯುತ್ತಾರೆ. ಇಲ್ಲಿ ಒಂದೇ ಜನಾಂಗದ, ಒಂದೇ ಧರ್ಮದ, ಒಂದೇ ಜಾತಿಯ।, ಒಂದೇ ಜೀವನಕ್ರಮದ ಹೀಗೆ ಎಲ್ಲದರಲ್ಲೂ ಸಮಾನತೆಯನ್ನುಳ್ಳ ಸದಸ್ಯರ ಒಟ್ಟು ಮೊತ್ತವನ್ನು ಒಂದು ಕುಟುಂಬ ಎಂದು ಕರೆಯಲಾಗುತ್ತದೆ. ಒಂದು ಕುಟುಂಬ ಎಂದರೆ ಇಷ್ಟೇ ಸದಸ್ಯರ ಸಂಖ್ಯೆ ಇರಬೇಕೆಂಬ ನಿಯಮವೇನೂ ಇಲ್ಲ. ಅದು ಹಲವು ಕಾರಣಗಳಿಗಾಗಿ ಭಿನ್ನ-ಭಿನ್ನ ಸಂಖ್ಯೆಯ ಸದಸ್ಯರುಗಳಿಂದ ಕೂಡಿರಬಹುದು. ಉದಾ : ವಿಭಕ್ತ ಮತ್ತು ಅವಿಭಕ್ತ ಕುಟುಂಬ ವ್ಯಕ್ತಿಯೊಬ್ಬ ಹುಟ್ಟುನೊಂದಿಗೆ

ಕುಟುಂಬದ ಸದಸ್ಯನಾಗಿ ಬೆಳವಣಿಗೆಯಲ್ಲಿ ಸಮಾಜದ ಸದಸ್ಯನಾಗಿ ಕುಟುಂಬ ಮತ್ತು ಕುಟುಂಬೇತರ ಸಂಬಂಧಗಳೊಡನೆ ಜೀವಿಸುತ್ತಾನೆ. ಅವನಿಗೆ ಈ ಎರಡೂ ಸಂಬಂಧಗಳು ಅನಿವಾರ್ಯ. ಅಂತಹ ಎರಡೂ ಸಂಬಂಧಗಳು ಮನುಷ್ಯ ಸಂಬಂಧಗಳ ಎರಡು ಪ್ರಧಾನ ವಿಭಾಗಗಳೂ ಹೌದು. ಆದ್ದರಿಂದ ಇಂತಹ ಮನುಷ್ಯ ಸಂಬಂಧಗಳನ್ನು ಪ್ರಧಾನವಸ್ತುವಾಗಿಟ್ಟುಕೊಂಡ ಖಾಸನೀಸರ ಕತೆಗಳಲ್ಲಿ ಕುಟುಂಬ ಮತ್ತು ಕುಟುಂಬೇತರ ಎಂದು ಕರೆಯುವ ಎರಡೂ ನೆಲೆಯ ಸಂಬಂಧಗಳ ಸ್ವರೂಪವನ್ನು ಗುರುತಿಸಬಹುದಾಗಿದೆ. ಅವರ ಕತೆಗಳ ಮುಖ್ಯ ಕೇಂದ್ರ ಕುಟುಂಬವೇ ಆದ್ದರಿಂದ ಅಲ್ಲಿ ಕೌಟುಂಬಿಕ ಸಂಬಂಧಗಳು ಸಹಜವಾಗಿಯೇ ಪ್ರವೇಶ ಪಡೆಯುತ್ತವೆ.

★ ಮಂದಿಯ ರಹಸ್ಯ ಕತೆಯ ಕೌಟುಂಬಿಕ ಸಂಬಂಧಗಳು ಮಧ್ಯಮವರ್ಗದ ಸಾಮಾಜಿಕ ಸಂಪ್ರದಾಯ-ನಿಯಮಗಳಿಗೆ ಬದ್ಧವಾಗಿ ಬದುಕುತ್ತಿರುವಂತಹವುಗಳು. ತಂದೆ-ತಾಯಿ, ಮಗ-ಮಗಳು ಇರುವ ಕುಟುಂಬದಲ್ಲಿ ತಾಯಿಯ ತಮ್ಮನೂ ಸ್ಥಾನ ಪಡೆದಿರುವುದರಿಂದ ವಾಸು ಈ ಕುಟುಂಬದ ಮತ್ತೊಂದು ಸಂಬಂಧವೇ. ಸಂಪ್ರದಾಯನಿಷ್ಠ ಕುಟುಂಬವೊಂದು ಪರಂಪರೆಯಿಂದ ರೂಢಿಸಿಕೊಂಡು ಬರುತ್ತಿರುವ ಸಾಮಾಜಿಕ, ಧಾರ್ಮಿಕ ಮೌಲ್ಯಗಳು ಇಲ್ಲಿಯೂ ನಿರಂತರವಾಗಿ ಸ್ಥಾನ ಪಡೆದಿವೆ. ಇಂತಹ ಸಾಮಾಜಿಕ ಮೌಲ್ಯಗಳೇ ಈ ಸಂಬಂಧಗಳನ್ನು ಹಿಡಿದಿಟ್ಟಿರುವ ಸಾಧನ ಎನ್ನಬಹುದು. ಏಕೆಂದರೆ ಮಂದಾಕಿನಿಯ ಮನಸ್ಸು ಪುರುಷನೊಬ್ಬನ ಸಾನಿಧ್ಯಕ್ಕಾಗಿ ಕ್ಷಣ-ಕ್ಷಣಕ್ಕೂ ಹಾತೊರೆಯುತ್ತಿದ್ದರೂ ತನ್ನ ಮಾನಸಿಕ ತಳಮಳಗಳನ್ನೆಲ್ಲಾ ಬಿಚ್ಚಿಟ್ಟು ಸಾಮಾಜಿಕ ನಿಯಮದಂತೆ ಬದುಕುತ್ತಾಳೆ. ಸೋದರಮಾವ ವಾಸುವನ್ನು ಪ್ರೀತಿಸುವ ಅವಳ ರಹಸ್ಯ ಕೊನೆಯವರೆಗೂ ಕುಟುಂಬದಲ್ಲಿ ಯಾರಿಗೂ ತಿಳಿಯದಿದ್ದುದು ಇಂತಹ ಮಧ್ಯಮವರ್ಗದ ಸಾಮಾಜಿಕ ನಿಯಮ ನಿಷ್ಠತೆಗೆ ನಿದರ್ಶನವಾಗಿದೆ.

ಮದುವೆ ಎಂಬುದು ಕುಟುಂಬ ನಿರ್ಧಾರಿತ ಒಪ್ಪಂದ ಎಂಬುದನ್ನು ಮಂದಿ ಎಲ್ಲಿಯೂ ಅಲ್ಲಗಳೆಯುವುದಿಲ್ಲ. ತನ್ನ ಪ್ರೀತಿಯನ್ನು ಎಂದೂ ಯಾರಲ್ಲೂ ವ್ಯಕ್ತಪಡಿಸದ ಅವಳ ಮನಸ್ಸು ಮಧ್ಯಮವರ್ಗದ ಕುಟುಂಬಕ್ಕೆ ಸೇರಿದ ಹೆಣ್ಣೊಬ್ಬಳ ಮನಸ್ಥಿತಿಗೆ ಉತ್ತಮ ಉದಾಹರಣೆ. ಬಾವಿ ಕಟ್ಟೆಯಲ್ಲಿನ ಪಾರಿವಾಳಗಳ ಜೋಡಿ, ದನಕಾಯುವ ರಖಮಾ ಮತ್ತು ಸಖಾರಾಮರ ಜೋಡಿ ಇವೆಲ್ಲವೂ ಅವಳನ್ನು ಪ್ರೇಮದ ಭಾವನೆಗಳನ್ನು ಉತ್ಕಟಗೊಳಿಸಿದರೂ ಆ ಭಾವನೆಗಳಿಗಿಂತ ಪ್ರಧಾನ ಕುಟುಂಬನಂಬಿಕೊಂಡು ಬಂದಿರುವ ಮೌಲ್ಯಗಳು. ಹೆಣ್ಣೊಬ್ಬಳು

ಕುಟುಂಬದಲ್ಲಿ ಬದುಕಬೇಕಾದ ರೀತಿ-ನೀತಿಗಳು ಅವಳ ಆಸೆ-ಹಂಬಲಗಳಿಗೆ ಬೇಲಿಹಾಕುತ್ತವೆ. ಮಗನಿಗಿರುವಷ್ಟು ಸ್ವಾತಂತ್ರ್ಯ ಸಹಜತೆಗಳು ಮಗಳಿಗಿಲ್ಲ. ಇದಕ್ಕೆ ಕಥೆಯಲ್ಲಿನ ಉದಾಹರಣೆ ಹೀಗಿದೆ.

''ಸ್ಟೇಶನ್ನಿನಿಂದ ಎರಡು ಮೈಲು ದೂರದಲ್ಲಿದ್ದ 'ಉರುಳಿ' ಊರಿನ ಶಾಲೆಗೆ ದಿನಾಲು ಅವನು ನಡೆಯುತ್ತ ಹೋಗಿ ನಡೆಯುತ್ತಲೇ ಬರಬೇಕು. ಅವನು ಚಿಕ್ಕವನಾದರೂ ಗಂಡಸಲ್ಲವೇನು ? ಅದೇ ತಾನು ಹೇಗೆ ಹೋಗಲು ಸಾಧ್ಯ ? ಬೆಳೆದ ಹೆಣ್ಣುಹುಡುಗಿ. ಅವ್ವನಿಗೆ ಅದೆಲ್ಲ ಬಗೆಹರಿಯುವುದಿಲ್ಲ. ಅಂತೇ ತಾನು ಅಶಿಕ್ಷಿತಳಾಗಿ ರಖಮಾನಂತೆಯೇ ಉಳಿಯಬೇಕು''.

ಮಂದಿಯ ಈ ಭಾವನೆಗಳು ಶಿಕ್ಷಣದ ಬಗೆಗೆ ಅವಳಿಗಿರುವ ಆಸೆಯನ್ನೂ ಮತ್ತು ಅದರ ಅಸಾಧ್ಯತೆಗಳನ್ನೂ ಏಕಕಾಲಕ್ಕೆ ಹೊರಹಾಕುತ್ತಿವೆ. ಅಲ್ಲದೆ ತಾನು ಬೆಳೆದ ಹುಡುಗಿಯಾಗಿದ್ದರಿಂದ ಶಾಲೆಗೆ ಹೋಗಲು ಅನರ್ಹಳು ಎಂಬ ಕೌಟುಂಬಿಕ ನಿಯಮದ ಏರುವಿಕೆಯನ್ನು ಅವಳು ಸಹಜವಾಗಿಯೇ ಸ್ವೀಕರಿಸಿದ್ದಾಳೆ. ಇದೊಂದು ಹೆಣ್ಣಿನ ಶೋಷಣೆ ಎಂಬ ಭಾವನೆಯಾಗಲೀ ಕುಟುಂಬದ ದೌರ್ಜನ್ಯವೆಂಬ ಭಾವನೆಯಾಗಲೀ ಅವಳಲ್ಲಿಲ್ಲ. ಅದು ಕುಟುಂಬದ ನಿಯಮ ಅದನ್ನು ಪರಿಪಾಲಿಸಬೇಕಾದುದು ನನ್ನ ಕರ್ತವ್ಯ ಎಂಬ ಭಾವನೆಯನ್ನು ಕುಟುಂಬ ನಿರಂತರವಾಗಿ ಅವಳಿಗೆ ಮನದಟ್ಟು ಮಾಡುತ್ತಾ ಬಂದಿದೆ. ಆದ್ದರಿಂದಲೇ ಶಿಕ್ಷಣದಂತೆಯೇ, ಮದುವೆಯು ಕೂಡ ಕುಟುಂಬ ನಿರ್ಧಾರಿತವಾದದ್ದು ಎಂಬುದನ್ನೂ ಅವಳು ಎಂದೂ ಪ್ರತಿಭಟಿಸುವುದಿಲ್ಲ. ಇಂತಹ ಕೌಟುಂಬಿಕ ನಿಯಮಗಳನ್ನು ಮೀರುವುದು ಅಪರಾಧ ಎಂಬ ಮನೋಭಾವ ಇಂತಹ ಹೆಣ್ಣು ಮಕ್ಕಳೆಲ್ಲರಲ್ಲಿ ಸಹಜವಾಗಿಯೇ ಬೇರೂರಿರುವುದರಿಂದ ಮಂದಿಯೇ ಅಂತಹ ಹೆಣ್ಣುಮಗಳ ಪಾತ್ರವಾಗಿ ತನ್ನ ಅಂತರಂಗವನ್ನು ರಹಸ್ಯವನ್ನಾಗಿಸುತ್ತಾಳೆ.

ಅಂತೆಯೇ ಕಮಲಮ್ಮನವರ ಪಾತ್ರಕೂಡ ಇಂತಹ ಕುಟುಂಬ ನಿಯಮಗಳೊಂದಿಗೆ ಬದುಕುವ ಸ್ತ್ರೀಪಾತ್ರ. ಗಂಡ ದುಡಿದು ತಂದಾಕುವುದನ್ನು ಬೇಯಿಸಿ, ಪೂಜೆ, ಮನೆಕೆಲಸಗಳು, ಮಕ್ಕಳ ಪಾಲನೆ, ಪೋಷಣೆಯಲ್ಲಿ ತೊಡಗುವುದೇ ಇಂತಹ ಕುಟುಂಬವೊಂದರ ಸ್ತ್ರೀಯ ಕರ್ತವ್ಯ. ಇಂತಹ ಕರ್ತವ್ಯಪಾಲನಾ ಸ್ತ್ರೀಯಾಗಿ ಕಮಲಮ್ಮ ಕತೆಯಲ್ಲಿ ಕಾಣಸಿಗುತ್ತಾರೆ. ಗಂಡ ವಾರಕ್ಕೊಮ್ಮೆ ತರಕಾರಿಯ ನೆಪಕ್ಕಾಗಿ, ಪೇಟೆಗೋಗಿ ಸಿನಿಮಾ ನೋಡಿಕೊಂಡು ಬರುವುದನ್ನು

ಕಂಡರೂ ಪ್ರಶ್ನಿಸದ ಅವಳ ಮನಸ್ಥಿತಿ ಸ್ತ್ರೀಯರು ಇಂತಹ ಸಿನಿಮಾ, ಪೇಟೆಯಿಂದ ದೂರವಿರಬೇಕೆಂಬ ನಿಯಮಕ್ಕೆ ಬದ್ಧರಾಗಿರಬೇಕೆಂಬುದನ್ನು ತೋರಿಸುತ್ತದೆ. ಹೆಂಡತಿಯೊಬ್ಬಳ ಕರ್ತವ್ಯ ಮನೆಯ ಒಳಗಿನ ವಿಚಾರಗಳ ನಿರ್ವಹಣೆಯೇ ವಿನಃ ಮನೆಯನ್ನೊರತಾದ ವಿಚಾರಗಳಲ್ಲಿ ಅವಳದು ಯಾವ ಪಾತ್ರವೂ ಇಲ್ಲ, ಎಂಬ ಪರಂಪಾರಗತ ಸಿದ್ಧಮೌಲ್ಯವನ್ನು ಚಾಚೂತಪ್ಪದೆ ಪರಿಪಾಲಿಸುವುದೇ ಅವಳ ನಂಬಿಕೆ. ಅಂತಹ ಪರಂಪಾರಗತ ನಂಬಿಕೆಯನ್ನು ಮಗಳು ಮಂದಿಯಲ್ಲೂ ಅಚ್ಚೊತ್ತಿದ್ದಂತೆ ಬೆಳೆಸುವ ತಾಯಿ ಪಾತ್ರವಾಗಿ ಕಮಲಮ್ಮ ಕಂಡುಬರುತ್ತಾರೆ. ತಮ್ಮ ನಾನಿ ......ಮನೆಯ ಹೊರಗಡೆ ಸ್ವತಂತ್ರ್ಯವಾಗಿ ಆಟವಾಡುವ, ಮಂದಿ ನಾಲ್ಕು ಗೋಡೆಗಳ ಮಧ್ಯೆ ಸದಾ ಮನೆಗೆಲಸಗಳಲ್ಲಿ ತೊಡಗಿರುವ ದೃಶ್ಯ ಮಧ್ಯಮವರ್ಗವೊಂದರ ಚಿತ್ರಣವನ್ನು ಕಣ್ಣಮುಂದೆ ತರುತ್ತದೆ. ಮಂದಿಯ ದೇಹ ಕೋಣೆಯೊಳಗಿದ್ದರೂ ಅವಳ ಮನಸ್ಸು ಮನೆಯ ಹೊರಗಡೆ ಸ್ವಚ್ಛಂದವಾಗಿ ವಿಹರಿಸುವುದನ್ನು ಚಿತ್ರಿಸುವ ಅವಳ ಭಾವನೆಗಳು ಇಂತಹ ಕುಟುಂಬದ ಸದಸ್ಯಳೊಬ್ಬಳ ಮನಸ್ಸಿನ ಕನ್ನಡಿಯಂತೆ ಪ್ರತಿಬಿಂಬಿಸುತ್ತವೆ. ಒಟ್ಟಾರೆಯಾಗಿ ಈ ಕಥೆಯ ಕೌಟುಂಬಿಕ ಸಂಬಂಧಗಳು ಮತ್ತು ಅಲ್ಲಿನ ಪಾತ್ರಗಳು ಬದುಕುತ್ತಿರುವ ರೀತಿ ಮಧ್ಯಮ ಕುಟುಂಬವೊಂದರ ಮತ್ತು ಅವರು ಪರಿಪಾಲಿಸಿಕೊಂಡು ಬರುತ್ತಿರುವ ಸಾಂಪ್ರದಾಯಿಕ ಮೌಲ್ಯಗಳ ಯಥಾವತ್ತಾದ ಚಿತ್ರಪಟಗಳಂತಿವೆ.

★ ಅಪಘಾತ ಕತೆಯ ಮುಖ್ಯವಸ್ತು ಕೆಲವೇ ಘಂಟೆಗಳು ನಡೆದ ಒಂದು ಆಕಸ್ಮಿಕ ಘಟನೆಯಾದ್ದರಿಂದ ಇಲ್ಲಿ ಘಟನೆಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಲಾಗಿದ್ದು ಇಲ್ಲಿನ ಮನುಷ್ಯ ಸಂಬಂಧಗಳು ಕತೆಗೆ ಪೂರಕವಾಗಿ ಪ್ರವೇಶಪಡೆಯುತ್ತವಷ್ಟೇ. ಅದರಲ್ಲೂ ಕುಟುಂಬ ಸಂಬಂಧದ ಮೊದಲ ಸಂಬಂಧವಾದ ತಾಯಿಯ ಪಾತ್ರದ ಬಗೆಗಿನ ಮಾತು ಕತೆಯ ಪ್ರಾರಂಭದ ಒಂದೇ ಒಂದು ಮಾತಾಗಿ ವ್ಯಕ್ತವಾಗುತ್ತದೆ. ತಾಯಿ ಮತ್ತು ಮಕ್ಕಳ ನಡುವಿನ ಸಂಬಂಧದ ಅಗಾಧತೆಗೆ ಆ ಒಂದು ಮಾತೇ ಅಪಾರತೆಯನ್ನು ತಂದುಕೊಟ್ಟಿದೆ.

''ತಾನು ಹೊರಬಿದ್ದಾಗಲೆಲ್ಲಾ ತಾಯಿ ಆ ಹುಡುಗನ ಆಶ್ರಯಕಲ್ಪಿಸಿ ಕಳಿಸುತ್ತಿದ್ದಳು. ಅವನಿಗೆ ಒಮ್ಮೊಮ್ಮೆ ತಾಯಿಯ ಬಗೆಗೆ ಸಿಟ್ಟು ಬರುತ್ತಿತ್ತು. ಒಮ್ಮೊಮ್ಮೆ ಅವಳ ಮುಗ್ಧ ಅಪಾರ ಕರುಣೆಯನ್ನು ನೆನೆದಾಗ ಮನಸ್ಸು ವಿಷಣ್ಣವಾಗುತ್ತಿತ್ತು''

ಮಕ್ಕಳ ಬೆಳವಣಿಗೆ, ಪ್ರೌಢತೆ ತಾಯಿಯ ಪ್ರೀತಿ, ಕಾಳಜಿಯಲ್ಲಿ ವ್ಯತ್ಯಾಸ ತರಲಾರರು ಎಂಬುದಕ್ಕೆ ಸಾಕ್ಷಿಯಾದಂತಿದೆ. ಮೇಲಿನ ಮಾತು. ರಾಮನಾಥನ ತಾಯಿಯ ಈ ಕಾಳಜಿ ಅವನಿಗೆ ಸಿಟ್ಟು ಬರಿಸುವಷ್ಟಿದ್ದದ್ದು ತನ್ನ ವಯಸ್ಸಿನ ತನ್ನ ದೌರ್ಬಲ್ಯದ ದೃಷ್ಟಿಯಿಂದಲೇ ವಿನಃ ತಾಯಿಯ ಬಗೆಗಿನ ಕೋಪದಿಂದಲ್ಲ. ಸ್ವಾರ್ಥರಹಿತವಾದ, ನಿರ್ಮಲವಾದ ಅವಳ ಮುಗ್ಧ ಕರುಣಾಭರಿತ ವಾತ್ಸಲ್ಯದ ಮುಂದೆ ಅವನ ಸಿಟ್ಟಿಗೆ ಎಳ್ಳಷ್ಟು ಸ್ಥಾನವಿಲ್ಲ. ಮಗನ ಬಗೆಗಿನ ತಾಯಿಯ ಕಾಳಜಿ, ಪ್ರೀತಿ, ಮಮತೆಗಳು ವ್ಯಕ್ತಿಯ ಒಂದು ಹಂತದಲ್ಲಿ ಅವನಿಗೆ ಬೇಸರವನ್ನುಂಟುಮಾಡಿದರೂ, ನಂತರ ಅವಳ ಮುಗ್ಧ ಮಮತೆಗೆ ಶರಣಾಗಿಯೇ ಆಗುತ್ತಾನೆ ಎಂಬ ಸತ್ಯವನ್ನು ಈ ಒಂದೇ ಒಂದು ಮಾತು ಅದ್ಭುತವಾಗಿ ಧ್ವನಿಸುತ್ತದೆ. ತಾಯಿ ಮತ್ತು ಮಗನ ಸ್ವಾರ್ಥರಹಿತ, ಅವಿನಾಭಾವ, ಸಂಬಂಧ ಇಂತಹ ಕೋಪ -ತಾಪಗಳನ್ನು ಕ್ಷಣಮಾತ್ರದಲ್ಲಿ ಕರಗಿಸಬಲ್ಲದು. ಈ ಶಕ್ತಿ ತಾಯಿಯ ಆ ನಿಸ್ವಾರ್ಥ ಪ್ರೀತಿಯಲ್ಲಿದೆ ಎಂಬುದನ್ನು ಕತೆ ಒಂದೇ ಸಾಲಿನ ಮಾತಿನಲ್ಲಿ ಸುಂದರವಾಗಿ ಹಿಡಿದಿಟ್ಟಿದೆ.

★ ಮನುಷ್ಯ ಸಂಬಂಧಗಳ ಅಂತರಿಕ ಘರ್ಷಣೆಗಳು ಕುಟುಂಬವೊಂದರ ವಿಘಟನೆಗೆ ಹೇಗೆ ಕಾರಣವಾಗಬಲ್ಲವೆಂಬುದಕ್ಕೆ ಹೀಗೂ ಇರಬಹುದು ! ಕತೆಯಲ್ಲಿನ ಕೌಟುಂಬಿಕ ಸಂಬಂಧಗಳು ಉತ್ತಮ ನಿದರ್ಶನ. ಸಾಮಾಜಿಕ ನಿಯಮ-ನಿರ್ಬಂಧಗಳನ್ನು ಆದರ್ಶರೀತಿಯಲ್ಲಿ ಪರಿಪಾಲಿಸುತ್ತಾ ಬಂದ ಸಂಪ್ರದಾಯನಿಷ್ಠ ಕುಟುಂಬದಲ್ಲಿನ ಜನಸಾಮಾನ್ಯರ ಜೀವನದಲ್ಲಿ ಹೆಣ್ಣು-ಗಂಡು ಸಂಬಂಧ ವಿಷಯಕವಾದ ಹಲವು ತೊಡಕುಗಳು ದುರಂತದೆಡೆಗೆ ಆ ಸಂಬಂಧವನ್ನು ಕೊಂಡೊಯ್ಯುಬಹುದಾದ ಸಾಧ್ಯತೆಗಳನ್ನು ಕತೆ ಚಿತ್ರಿಸುತ್ತದೆ.

ಸುತ್ತಮುತ್ತಲ ಹಳ್ಳಿಗಳಲ್ಲಿ ಅತ್ಯಂತ ಗೌರವಾಸ್ಪದ ಮನೆತನವೆನಿಸಿಕೊಂಡಿದ್ದ ನಾಯಕರ ಕುಟುಂಬದಲ್ಲಿ ಅನಾಹುತದ ಅಲೆಗಳು ಶುರುವಾದದ್ದು ಮಕ್ಕಳಿಂದಲೇ. ಮಗ ರಾಮ ಉನ್ನತ-ಶಿಕ್ಷಣಕ್ಕಾಗಿ ಅಮೇರಿಕೆಗೆ ಹೋಗಿ ವಿದೇಶಿ ಹುಡುಗಿಯೊಡನೆ ವಿವಾಹವಾಗಿ ವಿದೇಶಿಯನಾಗಿ ಶಾಶ್ವತವಾಗಿ ಉಳಿದದ್ದು ಕುಟುಂಬಕ್ಕೆ ಅರಗಿಸಿಕೊಳ್ಳದ ಆಘಾತವಾಗಿ ಪರಿಣಮಿಸಿತ್ತು. ಈ ಆಘಾತದಿಂದ ನಾಯಕರು ಲಕ್ಷ್ಮಣನನ್ನು ಶಿಕ್ಷಣದಿಂದ ದೂರಮಾಡುವ ಪ್ರಯತ್ನ ನಡೆಸಿದ್ದೂ ಲಕ್ಷ್ಮಣ ಕುಟುಂಬದಿಂದ ಹೊರಗುಳಿಯಲು ಕಾರಣವಾಯಿತು. ಇವೆಲ್ಲದರ ಹಿಂದೆಯೇ ಹೆಂಡತಿಯ ಸಾವು ನಾಯಕರ ಮರುಮದುವೆಯ ಅನಿವಾರ್ಯತೆಯನ್ನು ಸೃಷ್ಟಿಸಿ ಆ ಮೂಲಕ ಇಡೀ ಕುಟುಂಬನಾಶಕ್ಕೆ ನಾಂದಿ ಹಾಡಿತು. ಮದುವೆ

ಎರಡು ವ್ಯಕ್ತಿಗಳ ಎರಡು ಕುಟುಂಬಗಳ ನಡುವಿನ ಪರಸ್ಪರ ಸಂಬಂಧ ಸೇತುವೆಯಾಗದೇ ಕುಟುಂಬದ ವಿನಾಶದ ಮೊದಲನೆಯ ಮೆಟ್ಟಲಾಗಿ ಪರಿಣಮಿಸಿದ್ದು ವಿಷಾಧನೀಯ.

ಒಂದರ್ಥದಲ್ಲಿ ನಾಯಕರ ಮದುವೆ ಅವರ ಕುಟುಂಬ ನಾಶದ ಬೀಜವಾಯಿತು. ಮಕ್ಕಳ ಅಗಲಿಕೆ, ಪತ್ನಿಯ ಸಾವು ನಾಯಕರನ್ನು ಒಂಟಿಯಾಗಿಸಿತು. ಕುಟುಂಬಕ್ಕೆ ಹೊಸದಾಗಿ ಪ್ರವೇಶಿಸಿದ ಅಂಬಕ್ಕ ಸಮಾಜದ ದೃಷ್ಟಿಯಲ್ಲಿ ನಾಯಕರ ಪತ್ನಿಯಾಗಿ ತನ್ನ ದೈಹಿಕ ಸಂಬಂಧವನ್ನು ಶ್ಯಾಮನೊಂದಿಗಿಟ್ಟುಕೊಂಡ ವಿಷಯ ನಾಯಕರನ್ನು ಜರ್ಜರಿತಗೊಳಿಸಿದ್ದರ ಪರಿಣಾಮ ನಾಯಕರು ಶ್ಯಾಮನ ಸಾವಿಗೆ ಕಾರಣರಾಗಿ ತ ನ್ನ ಸಾವನ್ನು ತಂದುಕೊಂಡಿದ್ದರ ಫಲವಾಗಿ ಇಡೀ ಕುಟುಂಬವೇ ಛಿದ್ರಗೊಂಡಿತು. ಸುತ್ತಲ ಹಳ್ಳಿಗಳಿಗೆಲ್ಲಾ ಪ್ರಸಿದ್ಧವಾದ ಮನೆತನ ಇಂತಹ ದುರಂತದಲ್ಲಿ ಅಂತ್ಯಕಂಡಿದ್ದು ಕುಟುಂಬ ಸಂಬಂಧಗಳಲ್ಲಿನ ಅನೇಕ ಮನಸ್ತಾಪಗಳಿಂದಲೇ ಎನ್ನಬಹುದು.

ಒಂದೇ ವಿಷಯದ ಬಗೆಗೆ ಏಕಮತವಿಲ್ಲದ ಭಿನ್ನಾಭಿಪ್ರಾಯಗಳು ಕುಟುಂಬ ಸದಸ್ಯರ ಪರಸ್ಪರ ಸಂಬಂಧಗಳನ್ನು ಸಡಿಲಗೊಳಿಸುತ್ತವೆ. ಕುಟುಂಬದ ಹಿತಾಸಕ್ತಿಗಿಂತ ವೈಯಕ್ತಿಕ ಹಿತಾಸಕ್ತಿ ಹೆಚ್ಚಾದಾಗ ಸಹಜವಾಗಿ ಪರಸ್ಪರರಲ್ಲಿ ದ್ವೇಷ, ಮನಸ್ತಾಪಗಳು ಸೃಷ್ಟಿಯಾಗಿ ಕ್ರಮೇಣ ಪ್ರೀತಿ, ಮಮತೆ, ವಾತ್ಸಲ್ಯದ ಭಾವನೆಗಳು ಮರೆಯಾಗುತ್ತವೆ. ನಾಯಕರ ಕುಟುಂಬ ನಾಶಕ್ಕೆ, ಅಲ್ಲಿನ ಸಂಬಂಧಗಳ ವಿಘಟನೆಗೂ ಇದೇ ಬಲವಾದ ಕಾರಣ ನಾಯಕರ ಸಂಪ್ರದಾಯನಿಷ್ಠ, ಆಲೋಚನೆ, ಮಕ್ಕಳ ಸ್ವತಂತ್ರ, ವೈಯಕ್ತಿಕ ಆಲೋಚನೆಗಳ ನಡುವಿನ ಘರ್ಷಣೆಗಳಿಂದಾಗಿ ಅಲ್ಲಿನ ಸಂಬಂಧಗಳಲ್ಲಿ ಬಿರುಕುಂಟಾಗಿ ಮತ್ತೆ ಒಂದಾಗಲು ಸಾಧ್ಯವಾಗದಂತಹ ಅಂತರ ಅಲ್ಲಿ ಏರ್ಪಟ್ಟಿದ್ದೇ ಕೌಟುಂಬಿಕ ಸಂಬಂಧಗಳ ವಿನಾಶಕ್ಕೆ ಮುಖ್ಯ ಕಾರಣವೆನ್ನಬಹುದು.

ಕತೆಯಲ್ಲಿನ ಎಲ್ಲಾ ಪಾತ್ರಗಳೂ ತಮ್ಮ ತಮ್ಮ ವ್ಯಕ್ತಿಗತ ನೆಲೆಯಲ್ಲಿ ಚಿಂತಿಸಿದ್ದರಿಂದ ಒಬ್ಬರ ಆಲೋಚನೆ, ಅಭಿಪ್ರಾಯಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಸಂಭವಿಸಲೇ ಇಲ್ಲ. ಬಲವಂತದ ನಿರ್ಬಂಧಗಳು, ಹಠಮಾರಿತನದ ನಿರ್ಧಾರಗಳು ಒಂದೊಂದು ಸಂಬಂಧವೂ ಒಂದೊಂದು ದಿಕ್ಕಿನಲ್ಲಿ ಚಲಿಸಲು ಕಾರಣವಾದವು. ಮುಂದೆ ಇವೆಲ್ಲದರ ಪರಿಣಾಮದ ಭೀಕರತೆಯ ಅರಿವು ಉಂಟಾಗುವುದರ ವೇಳೆಗೆ ಅಲ್ಲಿನ ಸಂಬಂಧಗಳು ಮತ್ತೆ ಒಂದುಗೂಡಿಸಲಾಗದ ಸ್ಥಿತಿಯನ್ನು ತಲುಪಿದ್ದದ್ದು ಶೋಚನೀಯ.

★ 'ತಬ್ಬಲಿಗಳು' ಕತೆಯಲ್ಲಿನ ಪ್ರತಿಯೊಂದು ಪಾತ್ರವೂ ಕೂಡ ಸಂಕೇತಿಸುತ್ತಿರುವುದು ಕುಟುಂಬದ ವಿಘಟಿತ ಸ್ವರೂಪವನ್ನೇ. ಬಾಹ್ಯದೃಷ್ಟಿಗೆ ಸಂಘಟಿತ ಕುಟುಂಬದಂತಿರುವ ಆಂತರಿಕವಾಗಿ ವಿಘಟಿತಗೊಂಡಿರುವ ಮನುಷ್ಯ ಸಂಬಂಧಗಳು ಯಾವುದೇ ಒಂದು ಬಂಧನಕ್ಕೆ ಸಿಲುಕಿರುವಂತಹ ಅನಿವಾರ್ಯತೆಯ ಧ್ಯೋತಕದಂತಿದೆ ಈ ಕಥೆ. ಕಥೆಯ ಶೀರ್ಷಿಕೆಯೇ ಅಲ್ಲಿನ ಸಂಬಂಧಗಳ ಅನಾಥಸ್ಥಿತಿಯನ್ನು ಸಾರಿ - ಸಾರಿ ಹೇಳುವಂತಿದೆ. ನವ್ಯದ ಪ್ರಮುಖ ಲಕ್ಷಣವಾದ ಅನಾಥಪ್ರಜ್ಞೆ. ಸಮೂಹದೊಳಗೂ ಏಕಾಂಗಿ ಎನ್ನುವ ನೋವು, ಕುಟುಂಬದೊಳಗೂ ತಬ್ಬಲಿ ಎನ್ನುವ ವಿಷಾದಕರ ಮನಸ್ಥಿತಿಗೆ ಇಲ್ಲಿನ ಎಲ್ಲಾ ಸಂಬಂಧಗಳು ಒಳಪಟ್ಟಿವೆ.

ಮನುಷ್ಯನಿಗೆ ಸಂಸಾರ, ಕುಟುಂಬ, ಅಲ್ಲಿನ ಸಹಜತೆ, ಮಾಮೂಲಿನ ಜೀವನಪದ್ಧತಿ, ಬದಲಾವಣೆಗೆ ಹಾತೊರೆಯುವ ಮನಸ್ಥಿತಿಯಲ್ಲಿನ ದ್ವಂದ್ವಗಳು, ಸಾಮಾಜಿಕ ಕಟ್ಟುಪಾಡುಗಳು ಇವೆಲ್ಲವೂ ಒಮ್ಮೆಯಾದರೂ ಅವನನ್ನು ಈ ಸಂಸಾರದಿಂದ ವಿಮುಖವಾಗಿ ಚಿಂತಿಸಲು ಪ್ರೇರೇಪಿಸುತ್ತದೆ. ಕುಟುಂಬವೆಂದರೆ ಹಲವು ಸಂಬಂಧಗಳ ಕೂಡುಬಾಳುವಿಕೆ ಎಂಬ ವ್ಯಾಖ್ಯಾನ ಕೇವಲ ಪರಂಪರೆಯಿಂದ ಸಮಾಜದ ನಿಯಮವಾಗಿ ಬೆಳೆದುಬಂದಿದೆಯೇ ವಿನಃ ಇಂತಹ ನಿಯಮಗಳು ಸ ದಾಕಾಲಕ್ಕೂ ರುಚಿಸಲಾರವು. ಸಂಸಾರದಲ್ಲಿನ ನೋವು, ಜಿಗುಪ್ಸೆಗಳು ಅವನನ್ನು ಸ್ವಾತಂತ್ರ್ಯಕ್ಕಾಗಿ ಉತ್ತೇಜಿಸುತ್ತವೆ ಸಂಸಾರ. ಕುಟುಂಬದ ಬಗೆಗಿನ ಅವನ ಕನಸುಗಳು ಕನಸಾಗಿಯೇ ಉಳಿಯುವಂತಹ ಅಸಹಾಯಕ ಸ್ಥಿತಿಯಲ್ಲಿ ಅವನನ್ನು ಕಾಡುವ ಮಾನಸಿಕ ದ್ವಂದ್ವಗಳು ಕುಟುಂಬವನ್ನೊರತಾದ ಬದುಕಿನ ಸ್ವಾತಂತ್ರತೆಗಾಗಿ ಹಂಬಲಿಸುವುದನ್ನು ಕಾಣಬಹುದು.

ಕಥೆಯಲ್ಲಿ ತಂದೆಗೆ ಮೂಡುವ ಪ್ರಶ್ನೆಗಳು ಅವನ ಈ ದ್ವಂದ್ವತೆಗೆ ನಿದರ್ಶನ. ''ಪ್ರದಕ್ಷಿಣೆ ಹಾಕುತ್ತಿರುವ ತಾಯಿ-ತಂಗಿಯರನ್ನು ನೋಡಿದಾಗ ತಂದೆಗೆ ಎಂದೂ ಇಲ್ಲದ ವಿಚಿತ್ರ ಭಾವನೆ ಬಂತು. ಅವರಿಬ್ಬರು ಪೂರ್ಣ ಅಪರಿಚಿತರಂತೆ, ಜನಜಂಗುಳಿಯಲ್ಲಿಯ ಎರಡು ಕಣಗಳಂತೆ ಅವರಿಗೆ ಕಂಡರು. ಯಾರು ಅವರು ? ಇಷ್ಟು ದಿವಸ ನಾವು ಕೂಡಿ ಇರದಿದ್ದರೆ ಅವರಿಬ್ಬರಿಗೂ ನನಗೂ ಏನು ಸಂಬಂಧವಿಲ್ಲ ಎಂದು ನಾನು ಅನ್ನಬಹುದಿತ್ತೇ ಇಷ್ಟು ದಿವಸ ನಾವು ಯಾಕೆ ಕೂಡಿದ್ದೆವು ? ಹೇಗೆ ಕೂಡಿದ್ದೆವು ? ತಂದೆಗೆ ಯಾವ ಪ್ರಶ್ನೆಯ ಉತ್ತರವೂ ಹೊಳೆಯಲಿಲ್ಲ.''

ತಬ್ಬಲಿಗಳು ಕಥೆಯಲ್ಲಿನ ಪಾತ್ರಗಳಲ್ಲಿನ ವೈಶಿಷ್ಟ್ಯತೆ ಎಂದರೆ ಇಲ್ಲಿನ ಪಾತ್ರಗಳಿಗೆ ಪ್ರತ್ಯೇಕ ಹೆಸರುಗಳಿಲ್ಲ. ಅವರ ಪರಸ್ಪರ ಸಂಬಂಧಗಳೇ ಹೆಸರಾಗಿರುವುದು. ಅಂದರೆ ಇಲ್ಲಿನ ಯಾವ ಪಾತ್ರವೂ ಕಥೆಗೆ ಮಾತ್ರ ಸೀಮಿತವಲ್ಲ. ಅದು ಕಥೆಯಾಚೆಗೆ ಪ್ರತಿಯೊಂದು ಕುಟುಂಬದ ಸಂಸಾರದ ಪಾತ್ರವಾಗುವಂತಹ ಜೀವಂತಿಕೆಯನ್ನು ಹೊಂದಿದೆ. ಅದು ನಮ್ಮ ಬದುಕಿನ ಜೊತೆಗೆ ವಿಸ್ತರಿಸಿಕೊಳ್ಳುವ ರೀತಿ ಕಥೆಯ ಮತ್ತು ಸಂಬಂಧಗಳ ಎಲ್ಲಾ ಮಿತಿಗಳನ್ನು ಮೀರಿ ಬೆಳೆದಿದೆ ಎಂದು ಹೇಳಬಹುದು. ಮೇಲಿನ ಸಾಲುಗಳಲ್ಲಿ ತಂದೆಯನ್ನು ಕಾಡುವ ಈ ಪ್ರಶ್ನೆಗಳು ಸಂಬಂಧಗಳ ನಡುವಿನ ಆಂತರಿಕ, ಮಾನಸಿಕ ಅಂತರವನ್ನು ಸೂಚಿಸುತ್ತವೆ. ಮನುಷ್ಯ ತನ್ನ ಬದುಕಿನಲ್ಲಿ ಬೆಸೆದುಕೊಂಡಿರುವ ಹಲವು ಸಂಬಂಧಗಳು ಯಾವುದೋ ಒಂದು ನೆಲೆಯಿಂದ ಕಟ್ಟಲ್ಪಟ್ಟಿರುತ್ತವೆ. ಇಂತಹ ಸಂಬಂಧಗಳನ್ನು ಬಂಧಿಸಿರುವ ಕೊಂಡಿ ಯಾವುದೆನ್ನುವ ಪ್ರಶ್ನೆ ಅವನನ್ನು ಹಲವು ಹಂತಗಳಲ್ಲಿ ಕಾಡುತ್ತದೆ. ಅದಕ್ಕೆ ಸಂಕೇತವಾಗಿದೆ ಕಥೆಯಲ್ಲಿ ತಂದೆಯ ಪಾತ್ರ.

ಒಂದು ಕುಟುಂಬದಲ್ಲಿನ ಸಂಬಂಧಗಳ ನಡುವೆ ಹಲವು ಮನಸ್ತಾಪಗಳಿರಬಹುದು. ಹಲವು ಭಿನ್ನಾಭಿಪ್ರಾಯಗಳಿಂದ ಹೊಂದಾಣಿಕೆಗಳಿಲ್ಲದಿರಬಹುದು. ಆದರೂ ದೈಹಿಕವಾಗಿ ಒಟ್ಟಿಗೆ ಬದುಕಬೇಕಾದ ಅನಿವಾರ್ಯತೆಯಿಂದ ಈ ಸಂಬಂಧಗಳು ಬೆಸೆಯಲ್ಪಟ್ಟಿವೆ. ಇಲ್ಲಿ ತಂದೆ - ತಾಯಿಯರ ನಡುವಿನ ಸಂಬಂಧದಲ್ಲಿ ಅನ್ಯೋನ್ಯತೆ ಎಂಬ ಪದಕ್ಕೆ ಆಸ್ಪದವೇ ಇಲ್ಲ. ತಾಯಿಯ ಸಿಟ್ಟು, ಸೆಡವು, ರಂದಿ, ರಸಿಕಸಿ ಸಹಿಸಿಕೊಳ್ಳದಷ್ಟಿದ್ದರೂ ಸಹಿಸಿಕೊಂಡು ಬದುಕಬೇಕಾದ ಅನಿವಾರ್ಯತೆ ತಂದೆಯ ಮನಸ್ಸಿನಲ್ಲಿ ಏಳುವ ಇಂತಹ ಪ್ರಶ್ನೆಗಳಿಗೆ ಮೂಲ ಕಾರಣ.

ತಬ್ಬಲಿಗಳು ಕಥೆಯ ಪ್ರತಿಯೊಂದು ಪಾತ್ರವೂ ಒಂದಲ್ಲಾ ಒಂದು ನೆಲೆಯಲ್ಲಿ ತಬ್ಬಲಿಗಳೇ. ಕಥೆಯ ಆರಂಭದಲ್ಲೇ 'ತಮ್ಮ' ಪ್ರಯತ್ನಪೂರ್ವಕವಾಗಿ ಇವರನ್ನೆಲ್ಲ ತಪ್ಪಿಸಿ ಮುಂದಿನ ಸೀಟಿನಲ್ಲಿ ಹೋಗಿ ಕುಳಿತಿದ್ದ'' ಎಂಬ ಸಾಲಿನ 'ಪ್ರಯತ್ನಪೂರ್ವಕವಾಗಿ' ಎಂಬ ಪದ ಅವರಲ್ಲಿ ಪರಸ್ಪರ ಪ್ರೀತಿಯಾಗಲೀ, ವಾತ್ಸಲ್ಯ-ಮಮತೆಯಾಗಲೀ ಅವರನ್ನು ಕೌಟುಂಬಿಕ ಚೌಕಟ್ಟಿನಲ್ಲಿ ಹಿಡಿದಿಟ್ಟಿಲ್ಲ. ಬದಲಾಗಿ ಅಲ್ಲೊಂದು ರೀತಿಯ ಸಾಮಾಜಿಕ ಪರಂಪರಾಗತ ಮೌಲ್ಯ ಅವರನ್ನು ಅಲ್ಲಿ ತಂದು ನಿಲ್ಲಿಸಿದೆ. ಆದರೆ ಅದು ದೈಹಿಕವಾಗಿ ಮಾತ್ರ. ಮಾನಸಿಕವಾಗಿ ಅವರೆಲ್ಲರೂ ಸ್ವತಂತ್ರರು. ಸದಾ ಆ ಕುಟುಂಬದ, ಸಂಸಾರದಾಚೆಗಿನ ಜಗತ್ತಿನಲ್ಲಿ ಬದುಕುತ್ತಿರುವ ಅವರ ಮನಸ್ಸುಗಳು ಅವರ ಆಂತರ್ಯದ ಭಾವನೆಗಳಲ್ಲಿ ವ್ಯಕ್ತಗೊಳ್ಳುತ್ತವೆ.

ಕುಟುಂಬದ ನಾಲ್ಕು ಪಾತ್ರಗಳಲ್ಲಿ ಎಲ್ಲಿಯೂ ಪರಸ್ಪರ ಸಾಮ್ಯತೆ ಕಂಡುಬರುವುದೇ ಇಲ್ಲ. ಸದಾ ಕುಟುಂಬದಿಂದ ಹೊರನಡೆಯುವ ಪ್ರಯತ್ನದಲ್ಲಿಯೇ ಪ್ರತಿಯೊಂದು ಪಾತ್ರವೂ ಕಾರ್ಯಮುಖವಾಗಿರುತ್ತದೆ. ಅಲ್ಲಿ ತಾಯಿಯ ಪಾತ್ರ ಸಂಸಾರದ ಬಂಧನದ ಪ್ರತೀಕದಂತಿದೆ ಸದಾ ತಂಗಿಯನ್ನು ಕೈಯಲ್ಲಿಡಿದಿರುವ ಉಳಿದವರಿಗೆ ನಿರ್ದೇಶಿಸುತ್ತಿರುವ ಅವಳದು ಚದುರುತ್ತಿರುವ ಸಂಬಂಧಗಳನ್ನು ಕ್ರೋಢೀಕರಿಸುವ ವ್ಯರ್ಥ ಪ್ರಯತ್ನ ಎಂದು ಕರೆಯಬಹುದು. ತಂಗಿ ಅವಳ ಕೈಯಿಂದ ತಪ್ಪಿಸಿಕೊಂಡು ಕಳುವಾದ ಘಟನೆ ಅವಳ ಈ ವ್ಯರ್ಥ ಪ್ರಯತ್ನಕ್ಕೆ ಸಾಕ್ಷಿಯಂತಿದೆ.

ಕುಟುಂಬದಲ್ಲಿ ಪರಸ್ಪರರ ಬಗೆಗಿನ ಮನಸ್ತಾಪಗಳು ಸಾಮಾನ್ಯವಾದರೂ ಅವುಗಳನ್ನು ತೋರಿಸಲಾರದ ನಟನಾಬದುಕನ್ನು ಇಲ್ಲಿನ ಪಾತ್ರಗಳು ನಿರ್ಧರಿಸುತ್ತವೆ. ಭಾರತೀಯ ಸಾಮಾಜಿಕ ನಿಯಮದ ಪರಿಪಾಲನೆಗೋಸ್ಕರ ಇಂತಹ ವಿವಿಧಾಭಿಪ್ರಾಯದ, ವಿವಿಧ ಮನಸ್ಥಿತಿಯುಳ್ಳ ಪಾತ್ರಗಳು ಸಂಬಂಧಗಳ ಬೆಸುಗೆಯಲ್ಲಿ ಸಿಲುಕಿವೆಯೇ ವಿನಃ ಇಲ್ಲಿನ ಬೆಸುಗೆಗೆ ಪ್ರೀತಿ - ವಾತ್ಸಲ್ಯದ ಯಾವ ಗುರುತುಗಳೂ ಇಲ್ಲ. ಆದರೂ ಯಾವ ನಂಬಿಕೆಯ ಮೇಲೆ ಒಟ್ಟಿಗೆ ಬದುಕುತ್ತಿದ್ದೇವೆ ಎಂಬುದು ಕಥೆಯ ಪಾತ್ರಗಳನ್ನು ಪ್ರಶ್ನೆಗೊಳಪಡಿಸುತ್ತದೆ. ಮನುಷ್ಯ ಪರಸ್ಪರ ಅವಲಂಬಿಸಿ ಬದುಕುವ ಅವಲಂಬನೆಯ ಅನಿವಾರ್ಯತೆಯೇ ಇಂತಹ ಸಂಬಂಧಗಳ ಬೆಸುಗೆಗೆ ಮುಖ್ಯ ಕಾರಣವಿರಬಹುದೆಂಬುದು ತಮ್ಮನ ಮನೋಭಾವದಿಂದ ರೂಪುಗೊಳ್ಳುತ್ತದೆ.

''ತಂದೆ -ತಾಯಿ, ತಂಗಿ ಹಾಗೂ ನಾನು ಇವರಲ್ಲಿ ಯಾರಿಗೂ ಪರಸ್ಪರ ಸಂಬಂಧವೇ ಇಲ್ಲ. ಅನಿವಾರ್ಯವಾಗಿ ಒಬ್ಬರು ಇನ್ನೊಬ್ಬರನ್ನು ನಂಬಿ ಅವಲಂಬಿಸಿ ಒಟ್ಟೊಟ್ಟಿಗೆ ಇದ್ದೇವೆ. ಅವನ ಅಂತರಾಳದಲ್ಲಿ ಸರ್ಕಸ್ಸಿನಲ್ಲಿ ತೂಗಾಡುವ, ಜೋಕಾಲಿಯಿಂದ ಜೋಕಾಲಿಗೆ ಜಿಗಿಯುವ ಆಟಗಾರರ ಗುಂಪು ನೆನಪಾಯಿತು. ಒಬ್ಬರ ಬದುಕು ಇನ್ನೊಬ್ಬರ ಮೇಲೆ ಹಾಗೂ ಎಲ್ಲರ ಬದುಕು ಒಬ್ಬರ ಮೇಲೆ ಅವಲಂಬಿಸಿದೆ. ಈ ಸೂಕ್ಷ್ಮವನ್ನು ನಿರ್ಲಕ್ಷಿಸಿ ಒಂದು ಕ್ಷಣ ಸ್ವತಂತ್ರಳಾಗಬಯಸಿದ ಹೆಂಡತಿ ಜೋಲಿ ತಪ್ಪಿ ಕೆಳಗೆ ಬಿದ್ದುಬಿಟ್ಟಳು. ಈಗ ತಂಗಿ ಜೋತಾಡುತ್ತಿದ್ದಾಳೆ. ಅವಳೂ ಕೈಬಿಟ್ಟು ಬಿಟ್ಟರೆ ಒಬ್ಬೊಬ್ಬರಾಗಿ ಎಲ್ಲರೂ ನೆಲಕ್ಕಪ್ಪಳಿಸುತ್ತೇವೆ.''

ಇಂತಹ ಸಂಬಂಧಗಳ ಬಗೆಗಿನ ಮಾತುಗಳು ಮನುಷ್ಯ ಸಂಬಂಧಗಳ ಪರಸ್ಪರ ಅವಲಂಬನೆಯನ್ನು ಒತ್ತಿಹೇಳುತ್ತವೆ. ಸಂಬಂಧಗಳ ಸರಪಳಿಯಲ್ಲಿನ ಕೊಂಡಿಗಳು ಸಡಿಲವಾದಾಗ ಕಳಚಿಬೀಳುವ ಅಪಾಯವೂ ಉಂಟು ಕಥೆಯಲ್ಲಿ ಈಗಾಗಲೇ ಕಳಚಿಬಿದ್ದ ತಮ್ಮನ ಹೆಂಡತಿ ಮತ್ತು ಬೀಳುತ್ತಿರುವ ತಂಗಿ ಹೀಗೆ ಒದೊಂದಾಗಿ ಕುಟುಂಬದ ಕೊಂಡಿಗಳು ಕಳಚುತ್ತಿವೆ ಎಂಬ ವಾಸ್ತವ ತಮ್ಮನನ್ನು ಆವರಿಸಿದೆ. ಅಂತಹ ಅಪಾಯವೇ ಈ ಸಂಬಂದಗಳನ್ನು ಅನಿವಾರ್ಯವಾಗಿ ಹಿಡಿದಿಡಲು ಪ್ರಯತ್ನಿಸಿದಂತೆ ಗೋಚರಿಸುತ್ತದೆ.

ಒಂದು ಕುಟುಂಬವನ್ನು ಅಲ್ಲಿನ ಸಂಬಂಧಗಳನ್ನು ಬೆಸೆಯುವುದು ಪರಸ್ಪರರ ನಡುವಿನ ಪ್ರೀತಿ, ವಾತ್ಸಲ್ಯ, ಅನ್ಯೋನ್ಯತೆ ಆದರೆ ತಬ್ಬಲಿಗಳು ಕಥೆಯ ಪಾತ್ರಗಳು ಬದುಕುತ್ತಿರುವುದು ಯಾಂತ್ರಿಕವಾಗಿ ಮಾತ್ರ. ಇಂತಹ ಯಾಂತ್ರಿಕತೆ ಅವರಲ್ಲಿನ ತಬ್ಬಲಿತನಕ್ಕೆ ಅನಾಥಪ್ರಜ್ಞೆಗೆ ದಾರಿಮಾಡಿಕೊಟ್ಟಿದೆ. ಇಲ್ಲಿನ ಕುಟುಂಬದ ಚಿತ್ರಣ ಸಮಾಜದ ಕೌಟುಂಬಿಕ ಸಂಬಂಧಗಳ ಚಿತ್ರಣಕ್ಕೆ ತೀರಾ ಸಮೀಪವಾದುದಾಗಿದೆ ಎನ್ನಬಹುದು. ಒಬ್ಬರು - ಮತ್ತೊಬ್ಬರ ಬಗೆಗೆ ತೀರಾ ಅಸಹನೆಯ ಭಾವವನ್ನೊಂದಿದ್ದರೂ ಅದನ್ನು ತೋರ್ಪಡಿಸದೇ ಸಹನೀಯವಾಗಿ ಬದುಕುತ್ತಿರುವ ಅವರ ತಾಳ್ಮೆ ನಿಜವಾದ ತಾಳ್ಮೆಯಲ್ಲ. ಬದಲಾಗಿ ಆ ತಾಳ್ಮೆಯಲ್ಲೂ ಅವರವರ ಸ್ವಾರ್ಥವೂ ಅಡಗಿದೆ ಎನ್ನಬಹುದು. ಕುಟುಂಬವನ್ನು ಹೊರತುಪಡಿಸಿ ಬಾಳಲಾರದ ಅಸಹಾಯಕತೆಯೇ ಅವರನ್ನು ಬದುಕಿನ ಬಂಧನಕ್ಕೆ ಸಿಲುಕಿಸಿದೆ ಎನ್ನಬಹುದು.

ಒಂದೆಡೆ ಹೆಂಡತಿಯ ಸಾವು, ತಾಯಿಯ ಸಿಡುಕುತನ, ರಾಕ್ಷಸೀತನವೇ ಅವಳ ಸಾವಿಗೆ ಕಾರಣ ಎಂಬ ಸತ್ಯ. ತಂದೆಯ ಎಲ್ಲವನ್ನು ಕಂಡು ಕಾಣದಂತೆ ಮೌನವಾಗಿರುವ ಸ್ಥಿತಿ, ತಂಗಿಯ ಭೀಕರ ಹುಚ್ಚು. ಇವೆಲ್ಲವೂ ತಮ್ಮನನ್ನು ನಿರಂತರವಾಗಿ ಕಾಡುತ್ತಿರುವ ಹಿಂಸೆಗಳಾದರೂ, ತಾಯಿಯನ್ನು ಪ್ರಶ್ನಿಸದ ಕುಟುಂಬವನ್ನು ತಿರಸ್ಕರಿಸಿದ ಅವನ ಮನೋಭಾವ ಬದುಕಿನ ಆಳದ ಗಂಭೀರಚಿಂತನೆಯ ಗುರುತಾಗಿದೆ. ಎಲ್ಲರನ್ನೂ ಬಿಟ್ಟು ಪಲಾಯನ ಮಾಡುವ ಮನಸ್ಸು ಹಲವು ಬಾರಿ ಪ್ರವೇಶ ಪಡೆಯುತ್ತದಾದರೂ ಅದಕ್ಕೆ ಅಲ್ಲಿ ನೆಲೆಯೇ ಇಲ್ಲದೆ ಬಂದಷ್ಟೇ ವೇಗವಾಗಿ ಮರೆಯಾಗುತ್ತದೆ. ಮಂತ್ರಾಲಯದಲ್ಲಿ ಒಂದೊಂದು ಪಾತ್ರಗಳು ಒಂದೊಂದು ದಿಕ್ಕಾಗಿ ಚಲಿಸುವ ದೃಶ್ಯವೇ ಅವರ ಮನಸ್ಥಿತಿಯ ವಿಕ್ಷಿಪ್ತತೆಗೆ ಸಾಕ್ಷಿಯಾಗಿದೆ. ಇಂತಹ ವಿಕ್ಷಿಪ್ತತೆಗೆ ಅವರ ಕುಟುಂಬದಲ್ಲಿನ ಅಸ್ವಸ್ತತೆಯೇ ಕಾರಣ ಎಂಬುದನ್ನು ಇವರ ಕುಟುಂಬದ ಬಗೆಗೆ ತಿಳಿದಿದ್ದ ಮುದುಕರೊಬ್ಬರ ಮಾತು ವ್ಯಕ್ತಪಡಿಸುತ್ತದೆ.

''ಒಂದು ಲಕ್ಷಣದ ಕುಳ ಅಪಾ ಇದು. ಗುಡ್ಸಮಾಸ್ತರಾಗಿ ರಿಟೈರ್ ಆದರು. ಬಹಳ ರೊಕ್ಕ ಮಾಡ್ಯಾರ. ಆದರೇನು ಬರೀ ರೊಕ್ಕಾದ ಸುಖ ಸುರೀಲಿಕ್ಕೆ ಆಗತದ ? ಇವರ ಹೆಂಡತಿ ರಾಕ್ಷಸಿ ಇದ್ದಾಂಗ ಇದ್ದಾಳ. ಅವರಿಬ್ಬರದೂ ಕಡೆಯವರೆಗೂ ಕೂಡಿ ನಡೀಲಿಲ್ಲ. ಮಾಸ್ತರನ ಮನಸ್ಸಿನ ವಿರುದ್ಧ ತೌರುಮನೀ ಕಡೀದು ಬಂದು ಹುಡಿಗಿನ್ನ ತಂದು ಮಗನಿಗೆ ಲಗ್ನಾ ಮಾಡಿದಳು. ಆ ಹುಡುಗಿನ್ನ ಸಹಿತ ಒಳ್ಳೆ ರೀತಿಯಿಂದ ಇಟ್ಟುಕೊಳ್ಳಿಕ್ಕೆ ಆಗಲಿಲ್ಲ. ಆಕಿ ಕಡಿಂದ ಕಾಟ ತಾಳೋಲಾರದಕ್ಕೆ ಹುಡುಗಿ ಗಾಡೀ ತೆಳಗ ಬಿದ್ದು ಪ್ರಾಣ ಕೊಟ್ಟಿತು. ಮೊನ್ನೆ ಮೊನ್ನೆಯ ಕಥೀ ಇದು. ಮುಂದೆ ಮೂರೇ ತಿಂಗಳಾದಾಗ ಮಗಳಿಗೆ ಹುಚ್ಚು ಹಿಡೀತು. ಸೊಸೇನೇ ಬಡಕೊಂಡಾಳ ಅಂತ ಮಂದಿ ಆಡಕೋತಾರ. ವಿಸ್ಮೃತಿ - ಗಿಸ್ಮೃತಿ ಎಲ್ಲಾ ಸುಳ್ಳು. ಆ ಹುಡುಗಿಗೆ ಹುಚ್ಚೇ ಹಿಡಿದದ''.

ಅನ್ಯವ್ಯಕ್ತಿಯೊಬ್ಬನ ಇಂತಹ ಮಾತುಗಳು ಅವರ ಕುಟುಂಬದ ತಬ್ಬಲಿತನದ ಪ್ರತೀಕದಂತಿದೆ. ಮನುಷ್ಯ ಸಂಬಂಧಗಳಲ್ಲಿ ಎಲ್ಲಕ್ಕಿಂತ ಮುಖ್ಯವಾದುದು ಪರಸ್ಪರ ಪ್ರೀತಿ. ಅನ್ಯೋನ್ಯತೆಯೇ ವಿನಾ ಹಣ ಅಧಿಕಾರವಲ್ಲ. ಅತ್ತೆ-ತಾಯಿಯಂತೆ ಸೊಸೆ - ಮಗಳಂತೆ. ಹೀಗೆ ಸಂಬಂಧಗಳಿಗೆ ಪಟ್ಟಿಯನ್ನು ಕಟ್ಟಿಬದುಕುವ ಬದಲು ಮಾನವೀಯ ಸಂಬಂಧಗಳ ಅರಿವಿನಲ್ಲಿ ಬದುಕುವುದು ಮುಖ್ಯ. ಇಂತಹ ಮಾನವೀಯ ಸಂಬಂಧಗಳು ಕುಟುಂಬದೊಳಗಿದ್ದಾಗ, ಕುಟುಂಬದ ಹೊರಗೂ ಅವು ಸ್ಥಾನಪಡೆಯಬಲ್ಲವು. ಆ ಮೂಲಕ ಸಾಮಾಜಿಕ ಸಂಬಂಧಗಳೂ ಮಾನವೀಯ ನೆಲೆಯಲ್ಲಿಯೇ ಬದುಕಬಲ್ಲವು. ಇದೆಲ್ಲಾ ಅಸಾಧ್ಯವಾದಾಗ ವ್ಯಕ್ತಿ ಕುಟುಂಬದೊಳಗೂ ಏಕಾಂಗಿಯಾಗಿ, ಸಮಾಜದಲ್ಲಿ ತಬ್ಬಲಿಯಾಗಿ ಬದುಕುವನು. ಕಥೆಯ ಕೇಂದ್ರ ಪ್ರಜ್ಞೆ ಇಂತಹ ಮಾನವೀಯತೆಯಲ್ಲಿದೆ. ಮಂತ್ರಾಲಯದಂತಹ ಜನನಿಬಿಡತೆಯಲ್ಲಿ ಈ ಕುಟುಂಬದ ವಿಘಟನೆ ಅದರಲ್ಲೂ ಕುಟುಂಬದ ಪ್ರತಿಯೊಂದು ಸಂಬಂಧಗಳ ವಿಘಟನೆ, ಮನುಷ್ಯ - ಮನುಷ್ಯರ ನಡುವಿನ ತಬ್ಬಲಿತನವನ್ನು ಸಾರುವಂತಿದೆ. ಮನುಷ್ಯ ಏಕಕಾಲಕ್ಕೆ ಕುಟುಂಬ ಮತ್ತು ಸಮಾಜ ಎರಡೂ ಘಟಕಗಳಲ್ಲಿ ತಬ್ಬಲಿಯಾಗಿ ಬದುಕುವ ಅನಿವಾರ್ಯತೆ ಕಥೆಯ ಮೂಲಕ ಆಕಾರ ಪಡೆಯುತ್ತದೆ ಎನ್ನಬಹುದು. ರಥದ ಪ್ರದಕ್ಷಿಣೆಯಲ್ಲಿ ತಾಯಿ, ತಂಗಿ, ತಂದೆ-ತಮ್ಮರ ಕೈಗಳು ಬಿಗಿಯಾಗಿ ಹಿಡಿದಿರುವ ದೃಶ್ಯ ಸಂಸಾರದ ಬಿಗಿ ಬಂಧನವನ್ನು ಸಂಕೇತಿಸುತ್ತದೆ. ಸಂಸಾರ ಜೋಕಾಲಿಯಲ್ಲಿ ಎಲ್ಲಿ ಜೋಲಿ ತಪ್ಪಿ ನೆಲಕ್ಕಪ್ಪಳಿಸುವೆವೋ ಎಂಬ ಭಯ ಅವರ ಸಂಬಂಧಗಳನ್ನು ಇಂತಹ ಬಿಗಿಬಂಧನಕ್ಕೆ ಒಳಪಡಿಸಿದ್ದರೂ ಕೊನೆಗೊಮ್ಮೆ ಚೆಲ್ಲಾಪಿಲ್ಲಿಯಾಗುವ ಅವರ ಸಂಬಂಧಗಳು

ಕೇವಲ ದೈಹಿಕ ಬಂಧನಕ್ಕಿಂತ ಮನಸ್ಸುಗಳ ಬಂಧನ ಕೌಟುಂಬಿಕ ಸಂಬಂಧಗಳಲ್ಲಿ ಒಗ್ಗೂಡುವಿಕೆಗೆ ಪ್ರಬಲ ಕಾರಣ ಎಂಬುದನ್ನು ಪ್ರಬಲವಾಗಿ ಪ್ರತಿಪಾದಿಸುತ್ತದೆ. ಇಂತಹ ಮಾನಸಿಕ ಒಗ್ಗೂಡುವಿಕೆಯಿಲ್ಲದ ಕೇವಲ ದೈಹಿಕ ಬಂಧನವೇ ತಬ್ಬಲಿಗಳ ಕಥೆಯ ಸಂಬಂಧಗಳ ಚದುರುವಿಕೆಗೆ ಪ್ರಮುಖ ಕಾರಣವಾಗಿದೆ.

ಆ ರಥದ ಪ್ರದಕ್ಷಿಣೆಯಲ್ಲಿ ಒಬ್ಬರಿಗೊಬ್ಬರು ಸಮೀಪವಾಗಿ ತೀರಾ ಸನಿಹದಿಂದ ಮೈಗೆ ಮೈ ಹಚ್ಚಿಕೊಂಡು ನಿಂತ ದೃಶ್ಯ ಒಂದು ಕ್ಷಣ ಅವರಲ್ಲಿನ ಅನ್ಯೋನ್ಯತೆಗೆ ಬಾಹ್ಯಸಂಕೇತವಾಗಿ ಕಾಣುತ್ತದೆ. ಆ ಸಂದರ್ಭದಲ್ಲಿ 'ನಾವೆಲ್ಲರೂ ಬದುಕಿನಲ್ಲಿ ಹೀಗೆ ಕೂಡಿದ್ದರೆ ನಮ್ಮೆಲ್ಲರ ಬಾಳು ಹೇಗಾಗಬಹುದಿತ್ತು?'' ಎಂಬ ಪ್ರಶ್ನೆ ತಂದೆಯನ್ನು ಒಂದು ಕ್ಷಣ ಕನಸಿನಲೋಕಕ್ಕೆ ಕೊಂಡೊಯ್ಯುತ್ತದಾದರೂ ಮರುಕ್ಷಣ ವಾಸ್ತವದಲ್ಲಿ ಒತ್ತಟ್ಟಿಗಿದ್ದ ಆ ಸಂಬಂಧಗಳು ಸುಳಿವೂ ಇರದಂತೆ ಮರೆಯಾದ ದೃಶ್ಯ ಬದುಕಿನ ನೈಜ ಚಿತ್ರಣವನ್ನು ಕಣ್ಣಮುಂದೆ ತರುತ್ತದೆ. ಒಂದು ಕ್ಷಣ ಒಂದಾದ ಈ ಕುಟುಂಬದ ಸಂಬಂಧಗಳು ಜೀವನ ಪರ್ಯಂತ ಶಾಶ್ವತವಾಗಿ ದೂರ ಉಳಿಯಬಲ್ಲ ಸುಳಿವನ್ನು ಕಾಣಿಸಲು ಈ ರೀತಿ ಒಂದಾದವೋ ಎನ್ನುವಂತೆ ಕ್ಷಣದಲ್ಲಿ ಒಂದಾಗಿ ತತ್‌ಕ್ಷಣ ಕಣ್ಮರೆಯಾಗುತ್ತವೆ.

★ ಖಾಸನೀಸರ ಅಲ್ಲಾವುದ್ದೀನನ ಅದ್ಭುತ ದೀಪ ಕಥೆಯಲ್ಲಿನ ಕೌಟಂಬಿಕ ಸಂಬಂಧಗಳು ಸಂಬಂಧಗಳ ನಡುವಿನ ಅನ್ಯೋನ್ಯತೆ ಮತ್ತು ಅನ್ಯೋನ್ಯತೆಯ ವಿಫಲತೆ ಎರಡನ್ನೂ ಒಳಗೊಳ್ಳುವಂತಹ ಸಂಬಂಧಗಳು, ಕುಟುಂಬವೊಂದರ ಸಂಬಂಧಗಳಲ್ಲಿ ಹಲವು ಸಂಬಂಧಗಳು ವಿಮುಖತೆಯಿಂದ ಬದುಕುತ್ತಿದ್ದರೂ ಕೆಲವು ಸಂಬಂಧಗಳಾದರೂ ಏಕಮುಖ ಬದುಕನ್ನು ತಮ್ಮದಾಗಿಸಿಕೊಂಡಿರುತ್ತವೆಂಬುದಕ್ಕೆ ಈ ಕಥೆಯ ಅರ್ಚಕರು ಮತ್ತವರ ಪತ್ನಿ ವೃಂದಾಳ ಪಾತ್ರಗಳು ಉದಾಹರಣೆಗಳಾಗಿವೆ.

ಹೀಗೂ ಇರಬಹುದು ! ಮತ್ತು ಅಲ್ಲಾವುದ್ದೀನನ ಅದ್ಭುತ ದೀಪ ಎರಡೂ ಕತೆಗಳ ಕುಟುಂಬ ಚಿತ್ರಣ ಹಲವು ಸಾದೃಶ್ಯಗಳನ್ನು ಹೊಂದಿದೆ ಎನ್ನಬಹುದು. ಅಲ್ಲಿನ ಪುರುಷ - ಸ್ತ್ರೀ ಸಂಬಂಧಗಳಲ್ಲಿನ ಅನೈತಿಕತೆ ಎರಡೂ ಕಥೆಗಳಲ್ಲೂ ಸಾಮಾನ್ಯವಾಗಿದೆ. ಎರಡೂ ಕಥೆಗಳ ಮನೆತನಗಳ ಸ್ಥಾನಮಾನ ಮರ್ಯಾದೆಗಾಗಿ ಪ್ರಾಣವನ್ನು ತ್ಯಜಿಸಬಲ್ಲ ಪಾತ್ರಗಳು ಎರಡೂ ಕಥೆಗಳಲ್ಲಿನ ಸಾಮೀಪ್ಯತೆಗೆ ಕಾರಣವಾಗಿವೆ. ಕುಟುಂಬವೊಂದರ ವಿನಾಶಕ್ಕೆ ಆ ಕುಟಂಬಕ್ಕೆ ಸೇರ್ಪಡೆಯಾದ ಹೊಸ ಪಾತ್ರವೊಂದರ ಕುಯುಕ್ತಿ ಇಡೀ ಕುಟುಂಬವನ್ನು ಛಿದ್ರಗೊಳಿಸುವ

ಅವಳ ಅನೈತಿಕ ಸಂಬಂಧಗಳು ಆ ಪಾತ್ರದ ಮೂಲಕ ಹೇಗೆ ಪರಿಣಾಮಗೊಳ್ಳುತ್ತದೆ ಎಂಬುದಕ್ಕೆ ನಿದರ್ಶನದಂತಿದೆ ಇಲ್ಲಿನ ಅಂಬಕ್ಕನ ಪಾತ್ರ.

ಪರಂಪರೆಯಿಂದ ಪಾಪ-ಪುಣ್ಯದ ಪರಿಕಲ್ಪನೆಗಳನ್ನು ಬಲವಾಗಿ ನಂಬಿ, ಪಾಪದ ಭಯವನ್ನು ಎದುರಿಸಲಾರದ ಪಾಪಪ್ರಜ್ಞೆಗೆ ವಿಪರೀತ ಭಯಪಡವ ಕಥೆಯಲ್ಲಿನ ಪಾತ್ರಗಳು ಇಂತಹ ಪಾಪಜ್ರಜ್ಞೆಯಿಂದಲೇ ದುರಂತಕ್ಕೀಡಾಗುವ ವಿಷಾದಕರ ಸನ್ನಿವೇಶ ಕಥೆಯಲ್ಲಿ ಅದ್ಭುತವಾಗಿ ಮೂಡಿಬಂದಿದೆ. ಮಾನವನ್ನೇ ಪ್ರಾಣವೆಂದು ನಂಬಿ ಬದುಕುವ ಪಾತ್ರಗಳ ಬದುಕಲ್ಲಿ ಅಂತಹ ಮಾನಕ್ಕೆ ಚ್ಯುತಿ ಒದಗಿದಾಗ ಪ್ರಾಣ ತಂತಾನೇ ಮರೆಯಾಗುತ್ತದೆ ಎಂಬುದಕ್ಕೆ ಪ್ರತೀಕವಾಗಿದೆ. ಇಲ್ಲಿನ ಅರ್ಚಕರ ಪಾತ್ರ ಇಲ್ಲಿ ಪಾಪದ ಸತ್ಯ। ಎಸಗಬಹುದಾದ ಕೇಡು ಕೇವಲ ಪಾಪಕ್ಕೊಳಗಾದ ಸಂಬಂಧಗಳಿಗೆ ಮಾತ್ರ ಪರಿಣಮಿಸದೇ ಇಡೀ ಕುಟಂಬವನ್ನೇ ಆಹುತಿಗೆ ತೆಗೆದುಕೊಂಡಿದ್ದು ಅಂತಹ ಪಾಪದ ರಾಕ್ಷಸತನದ ಭೀಕರತೆಯನ್ನು ಸೂಚಿಸುತ್ತದೆ. ಆದರೆ ಕಥೆಯಲ್ಲಿನ ಅನೈತಿಕ ಸಂಬಂಧದಲ್ಲಿ ಅಂಬಕ್ಕನ ಕುಯುಕ್ತಿ ಕೆಲಸ ಮಾಡಿದೆ ಎಂಬುದನ್ನು ಸತ್ಯಬೋಧನ ಮಾತು ಮತ್ತೆ ಮತ್ತೆ ಪ್ರತಿಪಾದಿಸುವಂತಿದೆ. ಸತ್ಯಬೋಧನ ವಯಸ್ಸು, ಆಳವಾದ ಆಲೋಚನಾ ರಹಿತವಾದ ಬುದ್ಧಿ, ಎಲ್ಲವನ್ನೂ ಸಹಜವಾಗಿ ನಂಬಿಬಿಡುವ ಅವನ ಮುಗ್ಧತೆ ಇವೆಲ್ಲವನ್ನು ಅಸ್ತ್ರವಾಗಿ ಬಳಸಿಕೊಂಡ ಅಂಬಕ್ಕನ ಉದ್ದೇಶ ಸತ್ಯಬೋಧನನ್ನು ಕುಟುಂಬದಾಚೆಗೆ ತಂತಾನೇ ಪಲಾಯನ ಮಾಡುವ ಅನಿವಾರ್ಯತೆಗೆ ಒಳಪಡಿಸಿ ಕುಟುಂಬದ ಸ್ವತ್ತನ್ನು ತನ್ನದಾಗಿಸಿಕೊಳ್ಳುವ ಸಂಪತ್ತಿನ ದಾಹವಾಗಿದೆ.

ಕಥೆಯಲ್ಲಿನ ಸತ್ಯಬೋಧನ ಪಾತ್ರ ಇಂತಹ ಪಾಪಕ್ಕೆ ಬಲಿಪಶುವಾದ ಪಾತ್ರ. ಪಾಪದ ಕೂಪದಲ್ಲಿ ಕಣ್ಣುಕಾಣದೆ ಬಿದ್ದ ತಪ್ಪಿಗಾಗಿ ಎಲ್ಲಾ ಸಂಬಂಧಗಳನ್ನು ದೂರಮಾಡಿ ಹೋದ ಅವನಿಗೆ ಜೀವನದಲ್ಲಿ ಅಪಾರಶ್ರದ್ಧೆಯಿತ್ತು. ಆ ಶ್ರದ್ಧೆಯೇ ಅವನನ್ನು ಆತ್ಮಹತ್ಯೆಯಿಂದ ದೂರತಳ್ಳಿ ಬದುಕಿಸಿರಬಹುದೆಂಬ ಊಹೆಯಿಂದಲೇ ಅವನ ಶೋಧಕ್ಕಾಗಿ ವಾಸುವಿನ ಪಯಣ ಶುರುವಾಗುತ್ತದೆ. ಆದರೆ ಆ ಪಯಣಕ್ಕೆ ಯಾವುದೇ ನಿರ್ದಿಷ್ಟ ಆಧಾರವಿಲ್ಲ ಎಂದೋ, ಯಾರೋ ಹೇಳಿದ ವಿಳಾಸ ಸತ್ಯಬೋಧನನ್ನು ಹುಡಕಿಕೊಡಬಹುದೆಂಬ ಬಲವಾದ ನಂಬಿಕೆ ವಾಸುವನ್ನು ಪುಣೆಗೆ ತಂದುಬಿಡುತ್ತದೆ. ಆ ಚಿಕ್ಕವಯಸ್ಸಿನಲ್ಲಿ ಅವನಲ್ಲಿ ಮೂಡುವ ಕುಟುಂಬದ ಪರಿಕಲ್ಪನೆ, ಅದರ ಸ್ವರೂಪ ವಯಸ್ಸಿಗೆ ಮೀರಿದ ಅನುಭವವು ಅವನಿಗೆ ಕಲಿಸಿದ ಪಾಠದಂತಿದೆ. ಪುಣೆಯ ಬಸ್ಸಿನಿಂದಲೇ ಅವನಿಗೆ ಎದುರಾಗುವ ಒಂದು ಜಾಹೀರಾತು ಚಿತ್ರ, ಅವನಲ್ಲಿ

ಮೂಡಿಸುವ ಭಾವನೆಗಳು ಕುಟುಂಬದ ಬಗೆಗಿರುವ ಅವನ ಅಭಿಪ್ರಾಯಗಳಿಗೆ ರೂಪಕೊಟ್ಟಂತಿದೆ.

''ತುಟ್ಟತುದಿಗಿದ್ದ ಪ್ರಕಟಣೆಯೊಂದರಲ್ಲಿ ಒಂದು ಕುಟುಂಬದ ಚಿತ್ರವಿದೆ. ಒಂದು ತ್ರಿಕೋನ ಹಾಗೂ ಕೆಲವು ಅಕ್ಷರಗಳು. ಆದರೆ ಕೆಳಗಿದ್ದ ಅಕ್ಷರಗಳನ್ನು ಅಲ್ಲಲ್ಲಿ ನಡುನಡುವೆ ಕೆದರಿ ತೆಗೆದಂತಿದೆ. ಕುಟುಂಬದಲ್ಲಿ ನಡುನಡುವೆ ಹುಟ್ಟಿ ಸತ್ತುಹೋದ ಮಕ್ಕಳ ನೆನಪನ್ನು ಅರೆಮರಿಸಿ ಅಲ್ಲೊಂದು ಇಲ್ಲೊಂದು ಉಳಿದ ಮಕ್ಕಳಂತೆ ಅಕ್ಷರಗಳು ಅಲ್ಲೊಂದು ಇಲ್ಲೊಂದು ಉಳಿದು ಅಪಾರ್ಥಕ್ಕೆ ದಾರಿ ಮಾಡಿಕೊಟ್ಟಿವೆ.''

ಚಿತ್ರವು ವಾಸುವಿನಲ್ಲಿ ಮೂಡಿಸುವ ಈ ಭಾವನೆಗಳು ಕುಟುಂಬವೊಂದರ ಚದುರಿದ ಸ್ವರೂಪವನ್ನು ಕಣ್ಣಿನಲ್ಲಿ ತುಂಬುತ್ತದೆ. ಆ ಚಿತ್ರಕ್ಕೂ ವಾಸುವಿನ ಕುಟುಂಬಕ್ಕೂ ತೀರಾ ನಿಕಟಸಾಮಿಪ್ಯವಿದೆ ಎಂಬ ಸತ್ಯ ವಾಸುವಿಗೆ ಹೊಳೆಯುತ್ತದೆ. ತನ್ನ ಪ್ರಯತ್ನ ಇಂತಹ ಚದುರಿದ ಕುಟುಂಬವನ್ನು ಮತ್ತೆ ಒಂದುಗೂಡಿಸುವ ಪ್ರಯತ್ನವಲ್ಲದಿದ್ದರೂ ಅಳಿದುಳಿದ ಕೆಲವು ಸಂಬಂಧಗಳನ್ನಾದರೂ ಮತ್ತೆ ಸಮೀಪಕ್ಕೆ ತರುವ ಪ್ರಯತ್ನವಾಗಲೀ ಎಂಬುದನ್ನು ವಾಸು ದೃಢವಾಗಿ ಸಂಕಲ್ಪಿಸುತ್ತಾನೆ. ಅಂಬಕ್ಕ ಸತ್ಯಬೋಧನ ಮೇಲೆ ಎಸಗಿದ ಅತ್ಯಾಚಾರದ ಆಪಾದನೆಯಲ್ಲಿ ಸತ್ಯಭೋಧ ನಿರಪರಾಧಿ ಎಂಬುದನ್ನು ನಂಬಿದ್ದ ವಾಸುವಿಗೆ ತನ್ನ ಕುಟುಂಬದ ಉಳಿವು ಮತ್ತೆ ಸತ್ಯಬೋಧನಿಂದ ಮಾತ್ರ ಸಾಧ್ಯವೆಂಬ ವಾಸ್ತವ ತಾಯಿಯಿಂದ ಅವನನ್ನು ಪ್ರೇರೇಪಿಸಿತ್ತು. ಕಕ್ಕನ ಬಗೆಗೆ ವಾಸುವಿಗಿದ್ದ ಆ ಬಲವಾದ ನಂಬಿಕೆಯೇ ಇಷ್ಟು ವರ್ಷಗಳ ನಂತರ ಅವನು ಸಿಗುವುದು ದುಸ್ತರವೆನ್ನುವುದು ತಿಳಿದಿದ್ದರೂ ಛಲಬಿಡದ ಹುಡಕಾಟಕ್ಕೆ ಮುಂದಾಗಿದ್ದನು.

ವಾಸುವಿನ ಮನಸ್ಸಿನಲ್ಲಿ ಮೂಡುವ ವಿಧ-ವಿಧದ ಕುಟುಂಬದ ಚಿತ್ರಣಗಳು ಕೌಟುಂಬಿಕ ಸಂಬಂಧಗಳ ಬಗೆಗೆ ಅವನಿಗಿದ್ದ ನಿಲುವು ಮತ್ತು ತನ್ನ ಕುಟುಂಬದ ಬಗೆಗಿನ ಅಪಾರ ಕಾಳಜಿಯನ್ನು ಅಭಿವ್ಯಕ್ತಿಸುತ್ತವೆ. ಪುಣೆಯಲ್ಲಿ ಅವನು ವಿಚಾರಿಸಿದ ಮನೆಗಳಲ್ಲಿನ ದೃಶ್ಯಗಳು ಒಂದು ರೀತಿಯ ನಾಟಕೀಯತೆಯನ್ನು ಪ್ರದರ್ಶಿಸುತ್ತವೆ. ಒಂದೊಂದು ಮನೆಯ ಗೋಡೆಮೇಲಿದ್ದ ಭಾವಚಿತ್ರಗಳ ಚೌಕಟ್ಟು ಅವರ ಕುಟುಂಬದ ಪ್ರತಿಬಿಂಬಕದಂತೆ ವಾಸುವಿನ ಕಣ್ಣುಗಳನ್ನು ತುಂಬುತ್ತಿತ್ತು.

''ಗೋಡೆಯ ಮೇಲಿನ ಚಿತ್ರವನ್ನು ನೋಡಿದರೆ ಅವರದು ಬಹಳ ದೊಡ್ಡ ಕುಟುಂಬವಿರಬೇಕು. ಅಷ್ಟು ಚಿಕ್ಕ ಮನೆಯಲ್ಲಿ ಅವರೆಲ್ಲರೂ ಒಂದೇ ಕಡೆಗೆ ಕೂಡಿದ್ದಾರೆಯೇ? ಭಾವಚಿತ್ರದಲ್ಲಿಯಂತೆ ಮನೆತುಂಬಿಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತದೆ? ''

ಕುಟುಂಬದ ಚಿತ್ರವೊಂದು ವಾಸುವಿನ ಮನಸ್ಸಿನಲ್ಲಿ ಇಂತಹ ಪ್ರಶ್ನೆಗಳನ್ನು ಏಳಿಸುತ್ತಿರುವುದು ಚಿತ್ರದ ಅವಾಸ್ತವತೆಗೆ ಸಂಕೇತವಾಗಿದೆ. ಮನೆಯ ಫೋಟೋನಲ್ಲಿನ ಸಂಬಂಧಗಳು ಮನೆಯೊಳಗೆ ಖಾಲಿ - ಖಾಲಿಯಾಗಿರುವುದು ಅಲ್ಲಿನ ಕೌಟುಂಬಿಕ ಸಂಬಂಧಗಳ ವಿಘಟನೆಯನ್ನು ಸಾರುತ್ತದೆ. ಮನುಷ್ಯನಲ್ಲಿ ಸ್ವಾರ್ಥ ಹೆಚ್ಚಾಗಿ ವೈಯಕ್ತಿಕ ನೆಲೆಯಲ್ಲಿ ವೈಯಕ್ತಿಕ ಅಭಿವೃದ್ಧಿಗಾಗಿ ಚಿಂತಿಸಿದ ಫಲ ಇಂತಹ ಸಂಬಂಧಗಳ ವಿಘಟನೆ. ಇದಕ್ಕೆ ನಗರೀಕರಣ, ಕೈಗಾರೀಕರಣಗಳು, ಶಿಕ್ಷಣ ಇವೆಲ್ಲವೂ ಬಲವಾದ ಕಾರಣಗಳೂ ಹೌದು. ಇವು ಕುಟುಂಬ ವಿಭಜನೆಗೆ ಕೆಲವೊಂದು ಅನಿವಾರ್ಯ ಕಾರಣಗಳು ಆದರೆ ವಾಸುವಿನ ಕುಟುಂಬದ ವಿನಾಶಕ್ಕೆ ಇಂತಹ ಯಾವುದೇ ಅನಿವಾರ್ಯತೆ ಇರಲಿಲ್ಲ. ಅದೊಂದು ಉದ್ದೇಶಪೂರ್ವಕ, ಪೂರ್ವಯೋಜಿತ ಕುಟುಂಬ ನಾಶದ ಕಿಡಿ ಎಂಬುದನ್ನು ಸತ್ಯಶೋಧನ ಮಾತುಗಳು ಸಾರಿ ಸಾರಿ ಹೇಳುತ್ತಿದ್ದವು.

''ಅತ್ತಿಗೆ.....ಅತ್ತಿಗೆ ದೇವರಾಣೆಯಾಗಿಯೂ ಇದರಲ್ಲಿ ನನ್ನದೇನೂ ತಪ್ಪಿಲ್ಲ.''

ವಾಸು ಕಕ್ಕನಿಗಾಗಿ ಪುಣೆಯಲ್ಲಿ ಹೊಕ್ಕಪ್ರತಿಯೊಂದು ಮನೆಯ ಚಿತ್ರಣ ಅದರಲ್ಲಿ ಬದುಕುತ್ತಿರುವ ಮನುಷ್ಯ ಸಂಬಂಧಗಳು ಕುರುಹಾಗಿತ್ತು. ಇದೊಂದು ಯಾಂತ್ರಿಕ ಬದುಕು ಎಂಬುದು ಆ ಮನೆಗಳ ನೋಟದಿಂದಲೇ ಸ್ಪಷ್ಟವಾಗುತ್ತಿತ್ತು. ಹೊರಗಿನ ಕೋಣೆಗಳಲ್ಲಿ ಇಲ್ಲದ ಆಡಂಬರ ತೋರಿಸುವ ಸುಖವಸ್ತುಗಳ ಪ್ರದರ್ಶನವಿದ್ದರೆ ಒಳಕೋಣೆಯಲ್ಲಿದ್ದ ಮೇಲ್ಭಾಗದಲ್ಲಿ ಹಳೆಯ ಮುರುಕಲ ವಸ್ತುಗಳನ್ನೆಲ್ಲ ಅಸ್ತವ್ಯಸ್ತವಾಗಿ ಇಟ್ಟ ದೃಶ್ಯ ಮನುಷ್ಯನ ಬಾಹ್ಯ ಮತ್ತು ಅಂತರಂಗದ ವರ್ತನೆಗಳಿಗೆ ಹಿಡಿದ ಕನ್ನಡಿಯಂತಿತ್ತು. ಕುಟುಂಬದಲ್ಲಿನ ಸಂಬಂಧಗಳು ಮೇಲು ನೋಟಕ್ಕೆ ನಗೆಯಮೂಲಕ ಪರಸ್ಪರರಲ್ಲಿ ಅಪಾರ ಪ್ರೀತಿಯಿರುವಂತೆ ನಟಿಸುವುದನ್ನು ಹೊರಗಿನ ಕೋಣೆಯ ಸುಖವಸ್ತುಗಳ ಪ್ರದರ್ಶನ ಪ್ರತಿನಿಧಿಸಿದರೆ, ಒಳಗಿನ ಕೋಣೆಯ ಮುರುಕಲು ವಸ್ತುಗಳು ಆ ನಗೆಯ ಹಿಂದೆ ಮರೆಯಲ್ಲಿ ಅಡಗಿದ್ದ ದ್ವೇಷ, ಅಸೂಯೆಗಳನ್ನು ಪ್ರತಿನಿಧಿಸುತ್ತಿತ್ತು. ಕೆಲವೊಂದು ಸಂಬಂಧಗಳು ಅನಿವಾರ್ಯವಾಗಿ

ಬದುಕುತ್ತಿದ್ದರೆ ಮತ್ತೆ ಕೆಲವೊಂದು ಸಂಬಂಧಗಳು ಸ್ವಾರ್ಥಕ್ಕಾಗಿ ಬದುಕುತ್ತಿದ್ದವು. ಪ್ರತಿಯೊಂದು ಮನೆಯ ಕೌಟುಂಬಿಕ ಜೀವನ ಮತ್ತೊಂದು ಮನೆಗಿಂತ ಭಿನ್ನವಾಗಿದ್ದುದು ಮಾತ್ರ ಆಶ್ಚರ್ಯ. ಅಂತಹ ಭಿನ್ನತೆಯು ಸಾಮಾನ್ಯವಾಗಿದ್ದು ಅಲ್ಲಿನ ನಟನೆಯ ಜೀವನವೊಂದೇ. ಅದು ಕಥೆಯ।ಲ್ಲಿ ಹೀಗೆ ವ್ಯಕ್ತಗೊಳ್ಳುತ್ತದೆ.

'' ಕುಲುಕುಲು ನಗುತ್ತಿರುವ ಚಿಕ್ಕಮಕ್ಕಳ ಸುಖವಸ್ತುಗಳಂತೆ ನಟಿಸುವ ಹೆಣ್ಣುಮಕ್ಕಳ ಹಾಗೂ ಮ್ಲಾನಮುಖದಿಂದ ಶತಪಥ ಹಾಕುವ ವೃದ್ಧರ ಸುಖದುಃಖಗಳ ವಿವಿಧ ಸ್ತರಗಳ ಆಚೆಗಿದ್ದ ಚಿರಪರಿಚಿತ ವೇದನೆ.ಹೋದಲ್ಲೆಲ್ಲ ಒಂದೇ ರೀತಿಯಲ್ಲಿ ವ್ಯಕ್ತವಾಗುತ್ತಿತ್ತು. ಅವರು ಸುಖಿಯಾಗಿಯೂ ಇರಲಿಲ್ಲ. ದುಃಖಿಯಾಗಿಯೂ ಇರಲಿಲ್ಲ. ಚಿತ್ರೀಕರಣಕ್ಕೆ ಸಿದ್ಧವಾಗಿದ್ದ ನಟನಟಿಯರಂತೆ ಸನ್ನಿವೇಶಕ್ಕೆ ತಕ್ಕಂತೆ ಶೃಂಗಾರ ಮಾಡುತ್ತಿದ್ದರು. ಯಾರೋ ನಿರ್ಧರಿಸಿಟ್ಟ ಸಂಭಾಷಣೆಗಳನ್ನು ತಮ್ಮವಿದ್ದಂತೆ ನಾಟಕೀಯವಾಗಿ ನುಡಿಯುತ್ತಿದ್ದರು. ಅವರದು ತಮ್ಮದೆನ್ನುವುದು ಏನೂ ಇರಲಿಲ್ಲ.''

ಮಾನವೀಯ ಸಂಬಂಧಗಳು ಎಂಬ ಪದದ ಅರ್ಥ ಇಂತಹ ನಟನೆಯಲ್ಲಿದೆಯೇ ? ಎಂಬ ಪ್ರಶ್ನೆ ಇಂತಹ ದೃಶ್ಯಗಳನ್ನು ನೋಡಿದಾಗ ಉದ್ಭವಿಸುತ್ತದೆ. ಮನುಷ್ಯನ ಸಂಬಂಧಗಳಲ್ಲಿನ ಕೃತಕತೆಯಾದರೂ ಎಂತಹುದು ? ಅದು ಮನುಷ್ಯ ಸಹಿಸಿಕೊಳ್ಳುತ್ತಿರುವ ಕೃತ್ರಿಮ ಜಗತ್ತು. ಅಲ್ಲಿ ಮನುಷ್ಯನ ಸ್ವಂತಿಕೆ ಎಂಬುದು ಯಾವುದೂ ಇಲ್ಲ. ಅಂದಮೇಲೆ ಮನುಷ್ಯ ಸಂಬಂಧಗಳಿಗೆ ಈ ಅಸ್ತಿತ್ವವೇ ಇಲ್ಲ. ಮಾನವ ಯಂತ್ರಮಾನವನಂತೆ ಬದುಕಲು ಶುರುವಾದೊಡನೇ ಅವನ ಸಂಬಂಧಗಳಲ್ಲೂ ಯಾಂತ್ರಿಕತೆ ಪ್ರವೇಶಿಸಿತು. ಪರಿಣಾಮ ಮನುಷ್ಯ ಸಂಬಂಧಗಳೆಲ್ಲವೂ ಯಾಂತ್ರಿಕ ಸಂಬಂಧಗಳಾಗಿ ಮಾರ್ಪಟ್ಟವು. ಇಂತಹ ಯಾಂತ್ರಿಕತೆ ಮನುಷ್ಯನನ್ನು ಮನುಷ್ಯನಿಂದ ಬೇರ್ಪಡಿಸುವ ಸಂಬಂಧಗಳನ್ನು ಒಡೆಯುವ ಕ್ರಿಯೆಗೆ ಚಾಲನೆ ನೀಡಿದ್ದರ ಫಲವಾಗಿ ಕುಟುಂಬ, ಕೌಟುಂಬಿಕ ಸಂಬಂಧಗಳು ಇಂದು ಕೃತಕ ಸಂಬಂಧಗಳಾಗಿವೆ.

ಕೊನೆಗೊಮ್ಮೆ ವಾಸುವಿಗೆ ಸತ್ಯಬೋಧ ಸಿಕ್ಕಿದ್ದ. ಅದರೊಡನೆ ವಾಸುವಿನ ಕುಟುಂಬ. ಅವನ ತಾಯಿ ಎಲ್ಲರೂ ಮತ್ತೆ ಒಂದಾಗುವ ಆಶಾದಾಯಕ ಚಿತ್ರಣ ಅವನ ಕಣ್ಣಮುಂದೆ ಸ್ಥಿರವಾಗಿ ನಿಲ್ಲುವುದಕ್ಕಿಂತ ಮೊದಲೇ ಮಾಯವಾಗಿದ್ದು ವಾಸುವನ್ನು ಕನಸಿನಲೋಕದಿಂದ ತಳ್ಳಲ್ಪಟ್ಟಿತ್ತು. ತನ್ನ ಕುಟುಂಬದ ಪಾತ್ರಗಳ ಒಂದಾಗುವಿಕೆ ಆ ಮೂಲಕತ ಕೌಟುಂಬಿಕ

ಸಂಬಂಧಗಳ ಪುನರ್‌ಸ್ಥಾಪನೆ ಕೇವಲ ಕನಸೆಂಬ ಅರಿವು ಬರುವಷ್ಟರ ಹೊತ್ತಿಗೆ ವಾಸು ತನ್ನ ಕಣ್ಣುಗಳನ್ನು ಆಕಾಶದಲ್ಲಿ ನೆಟ್ಟಿದ್ದ. ಅಸ್ತಿತ್ವವಿಲ್ಲದ ಆಕಾಶದಂತೆ ತನ್ನ ಕುಟುಂಬಕ್ಕೂ ಅಸ್ತಿತ್ವವಿಲ್ಲವೆಂಬ ಸತ್ಯ ಅವನನ್ನು ಮೂಕವಾಗಿಸಿತ್ತು.

★ ಪುರುಷನ ಮುಂದೆ ಮಾಯೆ.....ಕಥೆಯಲ್ಲಿ ಪ್ರಧಾನವಾದುದು ಪುರುಷ - ಸ್ತ್ರೀ ಸಂಬಂಧವೇ ಆದರೂ ಅಲ್ಲಿನ ಕೌಟುಂಬಿಕ ಸಂಬಂಧಗಳೂ ಕಥೆಗೆ ಪೂರಕವಾಗಿ ನಿಲ್ಲುತ್ತವೆ. ಕತೆಯ ನಾಯಕ ರಾಮಭಾವು ರತ್ನಪಾರಖಿಯ ಮನಸ್ಸು ಕೌಟುಂಬಿಕ ಸಂಬಂಧಗಳಿಗಾಗಿ ಹಾತೊರೆದರೂ ತನ್ನದೇ ಆದ ಕುಟುಂಬವೊಂದರ ಸಂಬಂಧ ರಾಮಭಾವುವಿಗೆ ಜೀವನದ ಕೊನೆಯವರೆಗೂ ಲಭಿಸದೇ ಕೊನೆಗೂ ಒಂಟಿಯಾಗಿಯೇ ಸಾಯುವ ಆತನ ಸಾವು ಮನುಷ್ಯ ಮತ್ತು ಕುಟುಂಬದ ನಡುವಿನ ಮೌಲ್ಯಯುತವಾದ ಸಂಬಂಧಕ್ಕೆ ಪ್ರತೀಕವಾಗಿದೆ. ಕುಟುಂಬವನ್ನೊರತಾದ ವ್ಯಕ್ತಿಯ ಬದುಕು ಆಧಾರವಿಲ್ಲದ, ಅಸ್ತಿತ್ವವಿಲ್ಲದ ನೆಲೆಯಿಲ್ಲದ ಅಲೆಮಾರಿತನದ್ದು, ರಾಮಭಾವು ಅನಿವಾರ್ಯವಾಗಿ ಬಾಲ್ಯದಲ್ಲೇ ತನ್ನ ಕುಟುಂಬವನ್ನು ತೊರೆದು ಮುಂಬೈಗೆ ಹೋದದ್ದು ಎಲ್ಲವನ್ನೂ ಹರಸಿ, ಆದರೆ ಲಭ್ಯವಾದದ್ದು ಸಾಕಷ್ಟಾದರೂ ಕೊನೆಗೆ ಉಳಿದದ್ದು ಶೂನ್ಯ. ಬದುಕಿನಲ್ಲಿಬಂದು ಮರೆಯಾಗುವ ಸಂಬಂಧಗಳಿಗೂ ಕೌಟುಂಬಿಕ ಸಂಬಂಧಗಳಿಗೂ ನಡುವಿನ ವ್ಯತ್ಯಾಸ ರಾಮಭಾವುವಿಗೆ ಅರಿವಿಗೆ ಬಂದದ್ದು ತೀರಾ ತಡವಾದ ಅವನ ಅಸಹಾಯಕ ಸ್ಥಿತಿಯಲ್ಲಿ. ರಾಮಭಾವುವಿನ ಬದುಕಿನಲ್ಲಿ ಬಂದ ಜ್ಯುಬೇದಾ ಕೇವಲ ಹೆಣ್ಣಾಗಿ ಬಂದಳೇ ವಿನಃ ಹೆಂಡತಿಯಾಗಲ್ಲ. ಲೈಂಗಿಕತೆಗೂ ದಾಂಪತ್ಯಕ್ಕೂ ಇರುವ ವ್ಯತ್ಯಾಸ ತಿಳಿವ ವೇಳೆಗೆ ರಾಮಭಾವು ತನ್ನ ಹುಟ್ಟೂರಾದ ರತ್ನಗಿರಿಯಲ್ಲಿ ಅವರ ಅಣ್ಣನ ಮಗಳು ಛಬಿ ಹಾಗೂ ಅವಳ ಸಂಸಾರದಲ್ಲಿ ತಾನು ಒಬ್ಬನಾಗಲು ಪ್ರಯತ್ನಿಸಿದ್ದ. ಆದರೆ ರಾಮಭಾವುವಿನ ಸಂಬಂಧ ಅಂತಹ ಯಾವುದೇ ಕೌಟುಂಬಿಕ ನೆಲೆಗೆ ಒಳಪಟ್ಟಿರಲಿಲ್ಲ.

ರತ್ನಗಿರಿಯ ಪಿತ್ರಾರ್ಜಿತ ಮನೆಯಲ್ಲಿ ವಾಸವಿದ್ದ ಛಬಿಯ ಸಂಸಾರವನ್ನು ಪ್ರವೇಶಿಸಿದ ರಾಮಭಾವುವಿಗೆ ಆ ಕುಟುಂಬ ತನ್ನ ಸ್ವಂತದ್ದೆಂಬ ಅನುಭವ ಎಂದಿಗೂ ಉಂಟಾಗಲಿಲ್ಲ. ಏಕೆಂದರೆ ಪ್ರೀತಿಯಿಂದಾಗಲೀ, ಹಿರಿಯರೆಂಬ ಗೌರವದಿಂದಾಗಲೀ ಛಬಿ ರಾಮಭಾವುವನ್ನು ತನ್ನ ಸಂಸಾರದಲ್ಲಿ ಒಬ್ಬರನ್ನಾಗಿ ಸ್ವೀಕರಿಸಲಿಲ್ಲ. ಸಂಪ್ರದಾಯಸ್ಥ ಮನೆತನದ ಮರ್ಯಾದೆ ಬೀದಿ ಪಾಲಾಗಬಾರದೆಂಬ ಒಂದೇ ಒಂದು ಕಾರಣಕ್ಕಾಗಿ ತನ್ನ ಮನೆಯಲ್ಲಿ ಆಶ್ರಯ ನೀಡಿದ್ದಳು. ಮನುಷ್ಯ ವಯಸ್ಸಾದಂತೆಲ್ಲಾ ಏಕಾಂಗಿತನವನ್ನು ಶಾಪದಂತೆ

ಸ್ವೀಕರಿಸುತ್ತಾನೆಂಬುದನ್ನು ರಾಮಭಾವುವಿನ ನೋವಿನ ಆಳದ ಮಾತುಗಳು ವ್ಯಕ್ತಪಡಿಸುತ್ತವೆ.

''ಮುದಿತನದ ಶಾಪವೇ ಅಂಥದು. ತಾರುಣ್ಯದಲ್ಲಿದ್ದಾಗ ಇದ್ದ ಮನೆಯವರ ಪ್ರೀತಿ ಕ್ರಮೇಣ ತಾತ್ಸಾರಕ್ಕೆ ತಿರುಗುತ್ತದೆ. ಚಿಕ್ಕವರಿದ್ದಾಗ ನಿಮ್ಮನ್ನು ಪ್ರೀತಿಸುವ ನಿಮ್ಮ ಮಕ್ಕಳೆಲ್ಲ ವಾರ್ಧಕ್ಯದಲ್ಲಿ ನಿಮ್ಮನ್ನು ನಿರ್ಣಯಿಸತೊಡಗುತ್ತಾರೆ. ಹಳೆ-ಹೊಸ ಜೀವನಮೌಲ್ಯಗಳ ಸಂಘರ್ಷದಲ್ಲಿ ಹಳೆಯದು ಯಾವಾಗಲೂ ಹಾಸ್ಯಾಸ್ಪದವೆಂದೇ ನಿರ್ಣಯಿಸಲ್ಪಡುತ್ತದೆ.''

ರಾಮಭಾವುವಿನ ಈ ಮಾತುಗಳು ಅವನ ಅನುಭವದಿಂದ ಮಾತಿನ ರೂಪವನ್ನು ಪಡೆದಿದ್ದವು. ಕುಟುಂಬದಲ್ಲಿ ಒಬ್ಬ ತಂದೆಗಾಗಲೀ, ಹಿರಿಯ ವ್ಯಕ್ತಿಗಾಗಲೀ ಸಹಜವಾಗಿ ಸಿಗುವ ಪ್ರೀತಿ, ಗೌರವಗಳು ರಾಮಭಾವುವಿಗೆ ಎಂದೂ ಲಭಿಸಲಿಲ್ಲ. ಅದಕ್ಕಾಗಿ ತನ್ನನ್ನು ತಾನೇ ಹಳಿದುಕೊಳ್ಳುತ್ತಿದ್ದ ರಾಮಭಾವು ತನ್ನ ಬದುಕಿಗಾಗಿ ಎಂದೂ ಯಾರನ್ನೂ ದೂಷಿಸಿದವನಲ್ಲ. ಮನೆಯಲ್ಲಿ ಒಬ್ಬ ಮುದಿಕೆಲಸಗಾರನಂತಿದ್ದ ರಾಮಭಾವು ತಾನು - ತನ್ನ ಕುಟುಂಬ ಎಂಬ ಭಾವನೆಯೊಂದಿಗೆ ಬದುಕಲು ಏನೆಲ್ಲಾ ಪ್ರಯತ್ನಿಸಿದ್ದರೂ ಅವನಿಗೆ ಸಿಕ್ಕಪಟ್ಟ' ಮುದಿ ಹುಚ್ಚ'' ಎಂಬುದೇ ವಿನಃ ಮತ್ತಾವ ಸಂಬಂಧವೂ ಅಲ್ಲ.

ಮನುಷ್ಯನ ಬದುಕು ಸಂಬಂಧಗಳಿಲ್ಲದ ನಿರರ್ಥಕತೆಯಲ್ಲಿ ತಲುಪುವ ದುರಂತಕ್ಕೆ ರಾಮಭಾವುವಿನ ಬದುಕೇ ನಿದರ್ಶನವಾಗಿತ್ತು. ಅವರ ಬದುಕಿನಲ್ಲಿ ಬಂದ ಹೆಣ್ಣು - ಹೊನ್ನು ಎಲ್ಲವೂ ಕೆಣಕಿ ಹೋದವೇ ವಿನಃ ಯಾವುದೂ ಸ್ಥಿರವಾಗಿ ಉಳಿಯಲಿಲ್ಲ. ಇಂತಹ ಸಂಬಂಧಗಳ ಅಸ್ಥಿರತೆಯೇ ರಾಮಭಾವುವಿನ ಬದುಕನ್ನು ಒಂದು ಕಡೆ ನೆಲೆನಿಲ್ಲಿಸದೆ ಅಲೆಮಾರಿ ಬದುಕನ್ನಾಗಿ ಪರಿವರ್ತಿಸಿ ಕೊನೆಗೂ ಅಸ್ಥಿರತೆಯಲ್ಲಿಯೇ ಸಾವನ್ನಪ್ಪುವಂತೆ ಮಾಡಿತು.

★ ಅನಿರೀಕ್ಷಿತ ಕಥೆಯ ಕೌಟುಂಬಿಕ ಸಂಬಂಧಗಳು ಉಳಿದ ಕಥೆಗೆ ಹೋಲಿಸಿದರೆ ಕೌಟುಂಬಿಕ ಬಿರುಕಿಗೆ ಒಳಗಾಗದ, ಒಳಗಾಗುವ ಅಪಾಯದಿಂದ ಪಾರಾದ ಪಾತ್ರಗಳು ಕುಟುಂಬವೊಂದರ ಬಿರುಕಿಗೆ ಹೊರಗಿನ ಯಾವುದೇ ಅಂಶಗಳು ಕಾರಣವಾಗಬಹುದು. ಆದರೆ ಕುಟುಂಬದೊಳಗಿನ ನೈಜಪ್ರೀತಿ, ನಂಬಿಕೆಗಳು ಅಂತಹ ಯಾವುದೇ ಕಾರಣಗಳಿಂದಲೂ ವಿಚಲಿತವಾಗುವುದಿಲ್ಲ ಎಂಬುದನ್ನು ಅನಿರೀಕ್ಷಿತ ಕಥೆಯ ಸಂಬಂಧಗಳು ಮನಗಾಣಿಸುತ್ತವೆ. ಗಿರಿಜಾ ಅಂತಹ ದೃಢಚಿತ್ತದ ಪಾತ್ರವಾಗಿ ಕಾಣಸಿಗುತ್ತಾಳೆ. ಪುಟ್ಟ ಸಂಸಾರವೊಂದು

ಅನ್ಯೋನ್ಯವಾಗಿ ಬದುಕುತ್ತಿರುವ ಸಮಯದಲ್ಲಿ ಉಂಟಾದ ಹೊರಗಿನ ಆಕ್ರಮಣ ಅವಳ ಮನಸ್ಸನ್ನು ಚಂಚಲಗೊಳಿಸಿದ್ದರೆ ಅವಳ ಇಡೀ ಕುಟುಂಬ ಛಿದ್ರಗೊಳ್ಳುವ ಅಪಾಯದೆಡೆಗೆ ಚಲಿಸಬೇಕಾಗಿತ್ತು. ಗಂಡ ಗಂಗಾಧರಯ್ಯ ಮತ್ತು ಮಗಳು ದುರ್ಗಾಳ ಬದುಕು ಗಿರಿಜಾಳ ನಿರ್ಧಾರದ ಮೇಲೆ ನಿಂತಿದ್ದ ಅಪಾಯಕರ ಸನ್ನಿವೇಶದಲ್ಲಿ ಗಿರಿಜಾಳ ಸರಿಯಾದ ದಿಟ್ಟ ನಿರ್ಧಾರ ಅವರ ಬದುಕನ್ನು ಅಂತಹ ಅಪಾಯದಿಂದ ಪಾರುಮಾಡಿತ್ತು.

ಸತೀಶನಾಗಿ ತನಗೆ ಪರಿಚಿತವಾದ ವ್ಯಕ್ತಿ, ಇಂದು ಸೋಹಂ ಎಂಬ ಪ್ರಖ್ಯಾತ ನಟನಾಗಿ ಗಿರಿಜಾಳ ಮುಂದೆ ಬಂದುನಿಂತಾಗ ಗಿರಿಜಾಳಿಗೆ ಆಶ್ಚರ್ಯಕ್ಕಿಂತ ಹೆಚ್ಚಾಗಿದ್ದು ಆಘಾತವೇ. ಮದುವೆಯಾದ ತನ್ನನ್ನು ಅಪೇಕ್ಷಿಸುವ ಸೋಹಂನ ಮನಸ್ಥಿತಿಯನ್ನು ಖಡಾಖಂಡಿತವಾಗಿ ತಿರಸ್ಕರಿಸುವ ಅವಳ ಮಾನಸಿಕ ದೃಢತೆಗೆ ತಕ್ಕದ್ದಾಗಿದೆ. ಹೆಂಡತಿಯಾಗಿ, ತಾಯಿಯಾಗಿ ತಾನು ತೆಗೆದುಕೊಂಡಿರುವ ನಿರ್ಧಾರದಲ್ಲಿ ಅವಳಿಗೆ ಸಂಪೂರ್ಣ ನಂಬಿಕೆಯಿದೆ. ಏಕೆಂದರೆ ಸೋಹಂ ಮತ್ತು ತನ್ನ ನಡುವಿನ ಸಂಬಂಧದ ಸ್ವರೂಪವಾದರೂ ಏನು ? ಎಂಬ ಪ್ರಶ್ನೆಗೆ ಅವಳಲ್ಲಿನ ಉತ್ತರ ಸ್ಪಷ್ಟವಾಗಿತ್ತು. ಅದು ಸ್ನೇಹವೂ ಅಲ್ಲ. ಪ್ರೇಮವೂ ಅಲ್ಲ. ಕೇವಲ ಪರಿಚಯದಲ್ಲಿ ಶುರುವಾಗಿ ಪರಿಚಯದಲ್ಲೇ ಅಂತ್ಯವಾದ ಸಂಬಂಧಕ್ಕಾಗಿ ಹೆಂಡತಿಯ, ತಾಯಿಯ ಸಂಬಂಧವನ್ನು ಬಿಟ್ಟುಕೊಡುವುದು ಯಾವುದರ ಸಲುವಾಗಿ? ಹಣಕ್ಕಾಗಿಯೋ ಅಥವಾ ಪ್ರಸಿದ್ಧಿಗಾಗಿಯೋ ಸಂಬಂಧಗಳನ್ನು ಇವೆರಡರ ಸಲುವಾಗಿ ತೊರೆಯುವುದಾದರೆ ಹೆಂಡತಿಗೂ, ವೇಶ್ಯೆಗೂ ಏನು ವ್ಯತ್ಯಾಸವಿರುತ್ತದೆಂಬ ಅವಳ ಮಾತಿನ ಅರ್ಥ ಅವಳಲ್ಲಿನ ಸಚ್ಚಾರಿತ್ರ್ಯಕ್ಕೆ ಸಾಕ್ಷಿಯಾಗುತ್ತದೆ.

ಸೋಹಂನ ಬದುಕಿನಲ್ಲಿ ಬಂದ ಹೆಣ್ಣುಗಳ ಸಾಲಿನಲ್ಲಿ ಕೊನೆಯವಳಾಗಿ ಮುಂದೆ ಆ ಸಾಲಿನಲ್ಲಿ ಒಂದು ಹೆಣ್ಣಾಗಿ ಬದುಕುವುದಕ್ಕಿಂತ ಗಂಗಾಧರಯ್ಯನ ಬದುಕಿನಲ್ಲಿ ಎಲ್ಲವೂ ತಾನೇ ಆಗಿರುವುದು ಶ್ರೇಷ್ಠ ಎಂಬುದನ್ನು ಅವಳ ಮಾತುಗಳು ಯಾವ ಅಳುಕೂ ಇಲ್ಲದೇ ಸ್ಪಷ್ಟವಾಗಿ ವ್ಯಕ್ತಪಡಿಸುವಂತಿದ್ದವು.

''ಈಗ ಇಲ್ಲಿ ನೀವು ನಿಜವಾಗಿಯೂ ಸುಖವಾಗಿದ್ದೀರಾ ? '' ಎಂಬ ಸೋಹಂನ ಪ್ರಶ್ನೆ ಅವಳನ್ನು ಕೆರಳಿಸುತ್ತದೆ. ಇದಕ್ಕೆ ಉತ್ತರವಾಗಿ ಬರುವ ಅವಳ ಪ್ರತಿಯೊಂದು ಮಾತೂ ಸೋಹಂನ ಕೆನ್ನೆಗೆ ಬಲವಾದ ಪೆಟ್ಟಿನಂತಹ ಚುರುಕನ್ನು ನೀಡುತ್ತವೆ. ಅವಳ ಧ್ವನಿ ಕಠೋರವಾಗಿ ಕಣ್ಣುಗಳು ನಿಗಿನಿಗಿ ಕೆಂಡದಂತೆ ಉರಿಯುತ್ತಿರುವಾಗಲೇ ಅವಳಾಡುವ ಪ್ರತಿಯೊಂದು ಮಾತೂ

ಕೂಡ ಸೋಹಂನ ಭೋಗತನವನ್ನು, ಸ್ತ್ರೀಯ ಬಗೆಗೆ ಅವನಿಗಿದ್ದ ತೆಳುವಾದ ಅಭಿಪ್ರಾಯವನ್ನು ತೀವ್ರವಾಗಿ ಖಂಡಿಸುವ ಧ್ವನಿಯಿತ್ತು ಅವಳ ಮಾತುಗಳಲ್ಲಿ.

''ಲಗ್ನವಾಗಿ ಸಂಸಾರಮಾಡುತ್ತಿರುವ ಸುಮಂಗಲಿ ನಾನು. ನಮ್ಮ ಮನೆಯವರು ತಮ್ಮದೆಲ್ಲವನ್ನು ನನಗೆ ಧಾರೆಯೆರೆದಿದ್ದಾರೆ. ಪ್ರೇಮ- ವಿಶ್ವಾಸ, ತ್ಯಾಗ ಏನೆಲ್ಲವನ್ನೂ ದುರ್ಗಾಳನ್ನು ಗಂಡು ಹುಡುಗನಂತೆ ಬೆಳೆಸಿದ್ದೇವೆ. ಅವಳನ್ನು ಕಂಡರೆ ಯಾವ ತಾಯಿ-ತಂದೆಗಳೂ ಅಸೂಯೆಪಟ್ಟಾರು''.

ಗಿರಿಜಾಳ ಮಾತುಗಳು ಸೋಹಂನ ಆಸೆಗೆ ಕ್ಷಣಮಾತ್ರದಲ್ಲಿ ತಣ್ಣೀರೆರಚಿದವು. ಹೆಣ್ಣು ಹಣಕ್ಕಾಗಿ, ಎಲ್ಲವನ್ನೂ ಮಾರಿಕೊಳ್ಳುವ ಜಾರಿಣಿಯಲ್ಲವೆಂಬ ಸತ್ಯವನ್ನು ಮತ್ತೆ ಮತ್ತೆ ಪ್ರತಿಪಾದಿಸುವಂತಿದ್ದವು ಅವಳ ಮಾತುಗಳು. ಹಣಕ್ಕಾಗಿ ಕ್ಷಣಮಾತ್ರದಲ್ಲಿ ಅಷ್ಟು ಸುಲಭವಾಗಿ ಸಂಬಂಧಗಳನ್ನು ದೂರಮಾಡಲು ಸಂಬಂಧಗಳ ಮೌಲ್ಯ ಅಷ್ಟು ಕನಿಷ್ಠವಾದುದಲ್ಲ. ದಾಂಪತ್ಯ, ತಾಯ್ತನ ಎಂಬುದು ಉಳಿದೆಲ್ಲಾ ಸಂಬಂಧಗಳಿಗಿಂತ ಶ್ರೇಷ್ಠತಮಯವಾದದ್ದು ಎಂಬುದನ್ನು ಅರ್ಥಮಾಡಿಕೊಂಡಿದ್ದ ಗಿರಿಜಾ ನಿಜವಾದ ಪ್ರೀತಿ, ಪ್ರೇಮಭರಿತ ಕೌಟುಂಬಿಕ ಸಂಬಂಧಗಳ ಮುಂದೆ ಹಣ ಕಸಕ್ಕೆ ಸಮಾನ ಎಂಬುದನ್ನು ದೃಢವಾಗಿ ನಿರ್ಧರಿಸಿದ್ದಳು. ಕ್ಷಣಕ್ಕೊಮ್ಮೆ ಬಣ್ಣಬದಲಾಯಿಸಿ ಸಿನಿಮಾದಿಂದ ಸಿನಿಮಾಕ್ಕೆ ಹೆಣ್ಣನ್ನು ಬದಲಾಯಿಸುವ ಸೋಹಂನ ನಟನೆ, ತೆರೆಯ ಹಿಂದೆ ಮಾತ್ರ ಇರದೇ ತೆರೆಯಾಚೆಗೂ ವ್ಯಕ್ತಗೊಳ್ಳುವುದನ್ನು ಅವಳು ತನ್ನ ನೇರವರ್ತನೆಯಿಂದ ವಿರೋಧಿಸುತ್ತಾಳೆ. ಅವಳ ಈ ವಿರೋಧವೇ ಅವಳ ಕೌಟುಂಬಿಕ ಸಂಬಂಧಗಳನ್ನು ಅಪಾಯದಿಂದ ರಕ್ಷಿಸುತ್ತದೆ.

ಅನಿರೀಕ್ಷಿತ ಕಥೆಯಲ್ಲಿನ ಸೋಹಂನ ಪ್ರವೇಶ ಒಂದು ನೆಮ್ಮದಿಯ ಕುಟುಂಬಕ್ಕೆ ಅನಿರೀಕ್ಷಿತವಾದ ಆಘಾತವನ್ನು ತಂದೊಡ್ಡಿದರೂ ಗಿರಿಜಾಳ ದೃಢ ನಿಶ್ಚಯ, ಸಂಬಂಧಗಳ ಮೌಲ್ಯದ ಬಗ್ಗೆ ಅವಳಿಗಿದ್ದ ಪ್ರಜ್ಞೆ, ಅವಳ ಒಂದು ನಿರ್ಧಾರದಲ್ಲಿ ಅಡಗಿದ್ದ ಕುಟುಂಬದ ಭವಿಷ್ಯದ ಬಗೆಗಿನ ಕಾಳಜಿ, ಸಂಸಾರದ ಬಗೆಗಿನ ಅವಳ ಸಂಯಮ, ಹಣಕ್ಕಿಂತ ಪ್ರೀತಿ, ವಾತ್ಸಲ್ಯ ಮುಖ್ಯ ಎಂಬ ಸತ್ಯದ ಬಗೆಗಿನ ಅರಿವು, ಅವಳನ್ನು ಮತ್ತು ಅವಳ ಕುಟುಂಬವನ್ನು ಇಂತಹ ಆಘಾತದಿಂದ ಮುಕ್ತವಾಗಿಸುತ್ತದೆ. ಕೌಟುಂಬಿಕ ಸಂಬಂಧಗಳಲ್ಲಿನ ಗಟ್ಟಿತನ ಎಂದಿಗೂ ಬಾಹ್ಯಕಾರಣಗಳಾಗಿ ಸಡಿಲವಾಗುವುದಿಲ್ಲ ಎಂಬ ಸತ್ಯ ಕಥೆಯ ಕೇಂದ್ರಭಾವವಾಗಿದೆ.

★ ಖಾಸನೀಸರ ಕಥೆಗಳ ಕೇಂದ್ರ ಮನುಷ್ಯ ಸಂಬಂಧಗಳೇ ಎಂಬುದಕ್ಕೆ ಅವರ ಪ್ರತಿಯೊಂದು ಕಥೆಗಳೂ ಉದಾಹರಣೆ ಎಂಬುದರಲ್ಲಿ ಸಂಶಯವಿಲ್ಲ. ಅವರ ಅಶ್ವಾರೋಹಿ ಕಥೆಯಂತೂ ಅಲ್ಲಿನ ಮನುಷ್ಯ ಸಂಬಂಧಗಳ ಅದರಲ್ಲೂ ಕೌಟುಂಬಿಕ ಸಂಬಂಧಗಳನ್ನೇ ಕೇಂದ್ರವನ್ನಾಗುಳ್ಳ ಕಥೆಯಾಗಿದೆ. ಖಾಸನೀಸರು ಉಳಿದ ಕಥೆಗಳಿಗಿಂತ ಈ ಕಥೆಯನ್ನು ಹಲವು ಕಾರಣಗಳಿಂದಾಗಿ ಭಿನ್ನಗೊಳಿಸಿದ್ದಾರೆ. ಇಲ್ಲಿ ಕಥೆಯನ್ನು ನಿರೂಪಕ ನಿರೂಪಿಸುವುದಿಲ್ಲ. ಪಾತ್ರಗಳೇ ಕಥೆಯನ್ನು ನಿರೂಪಿಸುತ್ತವೆ. ಒಂದು ಪಾತ್ರದ ಪರಿಚಯವನ್ನು ಮತ್ತೊಂದು ಪಾತ್ರ . ಹೀಗೆ ಪರಸ್ಪರರ ಪರಿಚಯವನ್ನು ಮಾಡಿಕೊಳ್ಳುವ ಪಾತ್ರಗಳು ಅವರವರ ನಡುವಿನ ಸಂಬಂಧದ ಕಂದಕವನ್ನು ಅಳೆಯುವಂತೆ ಮಾತನಾಡುತ್ತಾರೆ. ಪರಸ್ಪರರ ಬಗೆಗಿನ ದೋಷಾರೋಪಣೆಯಂತೂ ಒಂದು ಕುಟುಂಬದಲ್ಲಿನ ಸಹಜ ಆಕ್ಷೇಪಣೆಗೆ ಉತ್ತಮ ನಿದರ್ಶನವಾಗಿದೆ.

ಮನುಷ್ಯನಿಗೆ ತನ್ನ ವರ್ತನೆ ತನಗೆ ಮಾತ್ರ ಸರಿಯೆನ್ನಿಸುತ್ತದೆ. ಅದನ್ನು ಬೇರೆಯವರು ಆಕ್ಷೇಪಿಸಿದಾಗ ಅದನ್ನು ಸ್ವೀಕರಿಸುವ ಮನೋಭಾವ ಇರುವುದಿಲ್ಲ. ತನ್ನ ವರ್ತನೆಯನ್ನೇ ತನ್ನ ಗುಣವನ್ನೇ ಸಮರ್ಥಿಸಿಕೊಳ್ಳುವ ಅವನಿಗೆ ಮತ್ತೊಬ್ಬರ ವರ್ತನೆ ಮಾತ್ರ ತಪ್ಪು ಎಂದು ಟೀಕಿಸುವ ಗುಣ ಮಾತ್ರ ಇದ್ದೇ ಇರುತ್ತದೆ. ಈ ಕಥೆಯಲ್ಲಿನ ಎಲ್ಲಾ ಪಾತ್ರಗಳೂ ಈ ರೀತಿಯ ಆರೋಪ, ಪ್ರತ್ಯಾರೋಪಗಳ ಮೂಲಕವೇ ಕಥೆಯನ್ನು ಭಿತ್ತರಗೊಳಿಸುತ್ತವೆ. ಈ ಎಲ್ಲಾ ಗುಣಗಳು ಕತೆಯನ್ನು ಯಾವುದೋ ದೂರದ ಒಂದು ಘಟನೆಯನ್ನಾಗಿಸದೇ ನಮ್ಮ ಬದುಕಿನ ಕತೆಗೆ ಸಮೀಪವಾಗುವಂತೆ ಹತ್ತಿರಕ್ಕೆ ತರುತ್ತವೆ.

ನಮ್ಮ ಭಾರತೀಯ ಸಾಮಾಜಿಕ ಸಂಪ್ರದಾಯದ ಪ್ರಕಾರ ಒಂದು ಸಂಸಾರದಲ್ಲಿ ಏನೇ ಭಿನ್ನಾಭಿಪ್ರಾಯವಿದ್ದರೂ ಅದನ್ನು ಸಹಿಸಿ ಸಂಸಾರ ಒಡೆಯದಂತೆ ಮತ್ತು ಸಂಬಂಧಗಳು ಛಿದ್ರವಾಗದಂತೆ ಕಾಪಾಡುವುದೂ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪರಂಪರಾಗತ ಕರ್ತವ್ಯ. ಇಂತಹ ಪರಂಪರಾಗತ ಸಾಮಾಜಿಕ ಮೌಲ್ಯದ ಸುತ್ತ ಕಥೆ ಹೆಣೆದಿದೆಯಾದರೂ ಇಲ್ಲಿ ಪರಂಪರೆ ಮತ್ತು ಆಧುನಿಕತೆ ಎರಡರ ಸ್ಪರ್ಶವೂ ಎದ್ದು ಕಾಣುತ್ತದೆ. ಇಲ್ಲಿನ ತಾಯಿಯ ಪಾತ್ರ ಪರಂಪರೆಯನ್ನು ಪ್ರತಿನಿಧಿಸಿದರೆ ಮಗಳು ಚಾರುಮತಿಯ ಪಾತ್ರ ಆಧುನಿಕತೆಯನ್ನು ಪ್ರತಿನಿಧಿಸುತ್ತದೆ. ಕಾಲ, ಶಿಕ್ಷಣ, ತಲೆಮಾರು ಮನುಷ್ಯನ ಚಿಂತನೆಯನ್ನು ಹೇಗೆ ಬದಲಿಸಬಲ್ಲರು ಎಂಬುದಕ್ಕೆ ಚಾರುಮತಿಯ ಪಾತ್ರ ಸಾಕ್ಷಿಯಾಗಿದ್ದರೂ ಕೊನೆಯಲ್ಲಿನ

ಘಟನೆ ಮಾತ್ರ ಕಾಲ, ಶಿಕ್ಷಣ, ತಲೆಮಾರುಗಳು ಮನುಷ್ಯನ ಚಿಂತನೆಯನ್ನು ಬದಲಿಸಬಲ್ಲುದೇ ವಿನಃ ಮನುಷ್ಯ ಸಂಬಂಧಗಳ ಮೌಲ್ಯವನ್ನು ಬದಲಿಸಬಾರದೆಂಬ ಸತ್ಯವನ್ನು ಪ್ರತಿಪಾದಿಸುತ್ತದೆ. ಸ್ವಾರ್ಥರಹಿತ ಮತ್ತು ನೈಜಪ್ರೀತಿಗೆ ಗೆಲುವು ಖಂಡಿತವೆಂಬುದನ್ನು ಕಥೆ ಪ್ರಧಾನವಾಗಿ ಸಾರುತ್ತದೆ. ಪರಂಪರೆ ಎಂಬುದು ಮೌಢ್ಯವೆಂಬ ಭಾವನೆ ಎಲ್ಲಾ ವಿಷಯದಲ್ಲಿಯೂ ಸರಿಯಿಲ್ಲ. ಬೇರು ಹಳೆಯದಾದಷ್ಟು ಮರ ಶಕ್ತಿಯುತವಾಗುವಂತೆ ಪರಂಪರಾಗತ ಮೌಲ್ಯಗಳು ಮನುಷ್ಯನ ಚಿಂತನೆಯನ್ನು ಗಟ್ಟಿಗೊಳಿಸುತ್ತವೆ. ತಾಯಿ ಮತ್ತು ತಂದೆಯರ ನಡುವಿನ ಭಿನ್ನಾಭಿಪ್ರಾಯಗಳೇನೇ ಇದ್ದರೂ ಸಂಸಾರದ ಬಗೆಗಿನ ಪರಸ್ಪರ ಕಾಳಜಿ ಅದನ್ನು ಛಿದ್ರಗೊಳಿಸಲಿಲ್ಲ. ಪರಸ್ಪರ ಪ್ರೀತಿವಿಶ್ವಾಸಗಳು ಗರಿಷ್ಠಪ್ರಮಾಣದಲ್ಲದೇ ಇರಬಹುದು ಆದರೆ ಅವರಿಬ್ಬರ ನಡುವಿನ ಅರ್ಥೈಸಿಕೊಳ್ಳುವಿಕೆ, ನಂಬಿಕೆ, ಹೊಂದಾಣಿಕೆ ಅವರನ್ನು ಗಂಡ-ಹೆಂಡತಿ ಎಂಬ ಸಂಬಂಧದಲ್ಲಿ ಸ್ಥಿರಗೊಳಿಸಿವೆ. ಕುಟುಂಬವನ್ನೊರತಾಗಿ ಸಾಧಿಸುವ ಸಾಧನೆಗಿಂತ ಕುಟುಂಬದೊಳಗೆ ಗಳಿಸುವ ನೆಮ್ಮದಿಯೇ ಮೇಲು ಎಂಬ ತತ್ವವನ್ನು ಈ ಎರಡೂ ಪಾತ್ರಗಳು ಪರಸ್ಪರ ಒಪ್ಪಿ ಬದುಕುತ್ತವೆ.

ತಂದೆಯ ಪಶ್ಚಾತ್ತಾಪ ತಾಯಿಯ ನಿಂದನೆ ಇವೆರಡು ಸಂಬಂಧಗಳನ್ನು ಒಡೆಯದೇ ಇದ್ದುದು ನಮ್ಮ ಈ ಪರಂಪರಾಗತ ಮೌಲ್ಯದ ಕುರುಹು. ವ್ಯಕ್ತಿ-ವ್ಯಕ್ತಿಗಳ ನಡುವಿನ ವೈಮನಸ್ಸುಗಳು ಕೇವಲ ಕ್ಷಣ-ಕ್ಷಣದ ನಿಂದನೆಯಾಗಿರಬೇಕೇ ವಿನಃ ಅವು ಸಂಬಂಧಗಳನ್ನು ಮುರಿಯುವಷ್ಟು ಪರಿಣಾಮಕಾರಿಯಾಗಿರಬಾರದು. ಇಂತಹ ವೈಮನಸ್ಸುಗಳೇ ಪ್ರಧಾನವಾದರೇ ಯಾವ ಸಂಬಂಧಗಳೂ ಉಳಿಯಲಾರವು. ಏಕೆಂದರೆ ಎಲ್ಲಾ ಸಂಬಂಧಗಳಲ್ಲಿ ಇಂತಹ ಭಿನ್ನಾಭಿಪ್ರಾಯಗಳು ಇದ್ದೇ ಇರುತ್ತವೆ. ತಂದೆಯ ಬಗೆಗೆ ತಾಯಿಯು ಆಡುವ ನುಡಿಗಳು ಅವರಲ್ಲಿನ ಮನಸ್ತಾಪಗಳಿಗೆ ನಿದರ್ಶನವಾಗಿವೆ.

''ಜಗತ್ತಿನಲ್ಲಿ ಒಂದೇ ಸುಂದರ ಮಗು ಇರುತ್ತದೆಯಂತೆ. ಪ್ರತಿ ತಾಯಿಯ ಹತ್ತಿರ ಮಕ್ಕಳನ್ನು ಹೆತ್ತಮೇಲೆ, ಇವರ ಹೊಣೆಗಾರಿಕೆ ಮುಗಿದಂತೆ ಎಂದು ಇವರು ಭಾವಿಸುತ್ತಿದ್ದರು. ಎಂದೂ ಕಠಿಣ ಪ್ರಸಂಗಗಳಲ್ಲಿ ಇವರು ಒದಗಿಸಿದವರಲ್ಲ. ತಮ್ಮ ನೌಕರಿ ಆಯಿತು, ತಾವಾಯಿತು, ಬೇಡಿದಾಗ ಕೇಳಿದಷ್ಟು ದುಡ್ಡು ಒಪ್ಪಿಸಿದರೆ ತಮ್ಮ ಜವಾಬ್ದಾರಿ ಮುಗಿಯಿತೆಂದೇ ಇವರ ಲೆಕ್ಕ ಮನೆಯಲ್ಲಿ ಒಬ್ಬಳಿಗೆ ಹೆಂಗಸು, ಹೆದರಿ

ಹೆದರಿ ಕೈಯಲ್ಲಿ ಜೀವ ಹಿಡಿದು, ಮೂಕವೇದನೆಯನ್ನು ಅನುಭವಿಸುತ್ತಿದ್ದೆ. ಇವರು ಸ್ವಭಾವದಿಂದ ಕೆಟ್ಟವರಲ್ಲ. ಆದರೆ ಬಹಳ ಸ್ವಾರ್ಥಿಯಾಗಿದ್ದರು.''

ತಂದೆಯ ಬಗೆಗಿನ ಈ ಎಲ್ಲಾ ಮಾತುಗಳು ಅವರ ಬಗೆಗೆ ತಾಯಿಗಿದ್ದ ಅಪಾರ ಮನಸ್ತಾಪ, ನಿಂದನಾಭಾವವನ್ನು ವ್ಯಕ್ತಪಡಿಸುತ್ತವೆ. ಮಗ ರಿತ್‌ವಿತ್ ತಪ್ಪು ಹಾದಿ ಹಿಡಿದು ಜೈಲುಪಾಲಾದುದಕ್ಕೆ ತಂದೆಯೇ ಕಾರಣ ಎಂಬ ಪರೋಕ್ಷವಾದ ಆರೋಪ ಅವರ ಮಾತುಗಳಲ್ಲಿದೆ. ಅವಳ ಈ ನಿಂದನೆ ಕೇವಲ ಮಾತುಗಳಲ್ಲೇ ತಣ್ಣಗಾಗುವುದು ಮಾತ್ರ ವಿಪರ್ಯಾಸ. ತಂದೆಯ ಬಗೆಗಿನ ಪ್ರತಿಯೊಂದು ಆರೋಪವೂ ಅವಳ ನೆಮ್ಮದಿಯನ್ನು ಕಡಿಸುವಾಗಲೂ ಕೂಡ ಆತನಿಂದ ದೂರವಾಗದೇ ಸಹಿಸಿಕೊಂಡು ಬದುಕುವ ತಾಳ್ಮೆಯನ್ನು ಅವಳು ಪರಂಪರಾನುಗತ ಪ್ರಜ್ಞೆಯಿಂದ ಅನಿವಾರ್ಯವೆಂದು ಭಾವಿಸಿ ಬದುಕುತ್ತಿದ್ದಳು. ಇದರ ಭೀಕರ ಪರಿಣಾಮ ಸಂಸಾರವನ್ನು ದುರಂತದೆಡೆಗೆ ತಂದು ನಿಲ್ಲಿಸುವಲ್ಲಿ ಯಶಸ್ವಿಯಾಯಿತು. ಒಂದು ಕಡೆ ರಿತ್‌ವಿಕ್ ಜೈಲುಪಾಲಾದರೆ ಮತ್ತೊಂದೆಡೆ ಚಾರು ತಾನು ನಾಟಕೀಯವಾಗಿ ಪ್ರೀತಿಸಿ ತನ್ನ ಸ್ವಾರ್ಥಸಾಧನೆಯ ನಂತರ ಸಖಾರಾಮ ಕಾಂಬಳೆಯವರನ್ನು ತಿರಸ್ಕರಿಸಿ ವಿದೇಶದ ಪಾಲಾದುದು ತಂದೆ ತಾಯಿಗಳಿಗೆ ನುಂಗಲಾರದ ತುತ್ತಾಗಿತ್ತು. ತಂದೆಯ ಸ್ವಾರ್ಥ ಅವಳಲ್ಲೂ ಮನೆ ಮಾಡಿತ್ತು. ನಂಬಿದವರ ಹೆಗಲಮೇಲೆ ಕಾಲಿಟ್ಟು ಮೇಲೇರಿ ಕೆಳಗಿದ್ದವರನ್ನು ಒದ್ದು ಕೆಡವಿ ಮೇಲೇರುವ ಸ್ವಾರ್ಥಪರ ಕುಯುಕ್ತಿಯನ್ನು ಅವಳು ಸಂಸಾರದಿಂದಲೇ ಸಂಪಾದಿಸಿದ್ದಳು. ಯಶಸ್ಸಿನ ಏಣಿಯ ತುಟ್ಟ ತುದಿಯನ್ನು ಮುಟ್ಟಿ ತಾನು ಆಶ್ರಯ ಪಡೆದ ಏಣಿಯನ್ನೇ ಒದ್ದು ಬಿಟ್ಟು ಈ ಹುಡುಗಿಗೆ ತುದಿಯಲ್ಲಿ ಸದಾಕಾಲವೂ ಉಳಿಯಲಿಕ್ಕೆ ಸಾಧ್ಯವಿಲ್ಲವೆಂಬ ಅಂತಿಮಸತ್ಯ ಕೊನೆಯಲ್ಲಿ ಅರಿವಿಗೆ ಬಂದು ಮತ್ತೆ ದಾಂಪತ್ಯವನ್ನು ಸ್ವೀಕರಿಸಿದ ಚಾರುಮತಿ ತನ್ನ ಸೂಕ್ಷ್ಮಬುದ್ಧಿಯಿಂದ ಪಾರಾಗುತ್ತಾಳೆ. ಇಲ್ಲಿಯೂ ಅವಳ ಸ್ವಾರ್ಥವೇ ಒಂದುಕಡೆ ಕೆಲಸಮಾಡಿದೆಯನ್ನಬಹುದು. ಮುಂದೊದಗಬಹುದಾದ ಅಪಾಯದ ಘಂಟೆ ಅವಳನ್ನು ಸಕಾಲಕ್ಕೆ ಎಚ್ಚರಿಸಿದಾಗ ಎಚ್ಚೆತ್ತುಕೊಂಡ ಜಾಣ್ಮೆ ಚಾರುಮತಿಯದು.

ರಿತ್‌ವಿಕ್‌ನ ವಿಷಯ ತೀರಾ ಭಿನ್ನ. ಕುಟುಂಬದ ಬಗೆಗಿದ್ದ ಅಸಹನೆ, ತಂದೆಯಬಗೆಗಿದ್ದ ಕೋಪ ಅವನನ್ನು ಅಪಾಯದ ಮಾರ್ಗವನ್ನು ತುಳಿಯುವಂತೆ ಪ್ರೇರೇಪಿಸಿತ್ತು. ಗೊಡ್ಡು ಸಂಪ್ರದಾಯಗಳು ಇಬ್ಬಗೆಯ ಧಾರ್ಮಿಕ, ಮೂಢನಂಬಿಕೆಗಳು ಹಾಸ್ಯಾಸ್ಪದವಾದ ನೀತಿ ಸಂಹಿತೆಗಳು ಇಡೀ ಕುಟುಂಬವನ್ನೇ ಬಲಿತೆಗೆದುಕೊಳ್ಳುತ್ತಿರುವುದನ್ನು ಕಂಡು ಮನೆಯಿಂದ ದೂರಾಗಿ ಹೊರಗಿನ ಬಾಗಿಲನ್ನು ತಟ್ಟಿದ್ದ. ನ್ಯಾಯ। ಮಾರ್ಗದ ಬಾಗಿಲುಗಳು ಮುಚ್ಚಿದ್ದರಿಂದ ಅನ್ಯಾಯದ ತೆರೆದ ಬಾಗಿಲುಗಳು ಅವನನ್ನು ಸ್ವಾಗತಿಸಿದ್ದವು. ತಂದೆಯನ್ನು, ತಂದೆಯ

ಟೊಳ್ಳುತನವನ್ನು ಆಕ್ಷೇಪಿಸುವ ಅವನ ಮಾತುಗಳಲ್ಲಿ ಪರಸ್ಪರರ ಬಗೆಗಿದ್ದ ತಿರಸ್ಕಾರಭಾವಗಳು ಹೊರಹೊಮ್ಮುತ್ತವೆ.

''ಕುಟುಂಬಕ್ಕೆ ಬೇಡಿದಾಗ ಬೇಡಿದಷ್ಟು ದುಡ್ಡು ಕೊಟ್ಟಿರಿ. ಆದರೆ ಅವರಿಗೆ ಪ್ರೀತಿ ಕೊಟ್ಟಿರಾ ? ನೀವು ಎಂದಾದರೂ ಸ್ವತಃ ಮಹತ್ವದ ನಿರ್ಣಯಗಳನ್ನು ತೆಗೆದುಕೊಂಡದ್ದುಂಟೇ? ಅದಕ್ಕಾಗಿ ನೀವು ಯಾವಾಗಲೂ ಪರರನ್ನೇ ಅವಲಂಬಿಸುತ್ತಿದ್ದೀರಿ. ನನ್ನ ಶಿಕ್ಷಣ ನಿಮ್ಮಿಂದಾಗಿ ಅರ್ಥವಾಯಿತು. ನನ್ನ ಕೋಮಲ ಹೃದಯ ನಿಮ್ಮ ದರ್ಪದ ಅಹಂಭಾವದಲ್ಲಿ ಮುರುಟಿ ಹೋಯಿತು''.

ತಂದೆಯ ಬಗೆಗೆ ಮಗನಿಗಿದ್ದ ಇಂತಹ ಆಕ್ಷೇಪಣೆಗಳೇ ಅವನನ್ನು ತಂದೆಗಿಂತ ತಂದೆಯ ಗುಣ-ಸ್ವಭಾವಕ್ಕಿಂತ ಭಿನ್ನವಾದ, ತಂದೆಯ ಬದುಕಿಗೆ ವಿಮುಖವಾದಂಥ ಬದುಕಿನೆಡೆಗೆ ಚಲಿಸಿತು. ತಂದೆಯ ಬಗೆಗಿನ ಅತೃಪ್ತಿ ರಿತ್‌ವಿಕ್‌ನನ್ನು ಬೇರೊಂದು ಪ್ರಪಂಚಕ್ಕೇ ತಂದುನಿಲ್ಲಿಸಿತ್ತು. ಬದುಕಿನ ಘರ್ಷಣೆಗಳಿಗೆ ತಲೆಬಾಗಿ ಬದುಕುವುದನ್ನು ಹೇಡಿತನ ಎಂದು ಭಾವಿಸಿದ್ದ ಅವನು ಬದುಕಿರುವಷ್ಟು ಕಾಲ ಹುಲಿಯಂತೆ ಬದುಕಬೇಕೆಂಬ ಮಹತ್ವಾಕಾಂಕ್ಷೆಯನ್ನು ಅಪ್ಪಿಕೊಂಡವನು.

''ನಿಮ್ಮಂತಹ ನರಸತ್ತ ಪುಕ್ಕಲು ತಂದೆಯ ಮಗನಾಗಿ ಹುಟ್ಟಿರುವುದು ನನಗೊಂದು ಶಾಪವಾಗಿದೆ. ಈ ಶಾಪದಿಂದ ವಿಮೋಚನೆಗಾಗಿ ಹಂಬಲಿಸಿದ್ದೇನೆ. ರಾತ್ರಿಯ ಜಗತ್ತಿನ ಅನಭಿಷಿಕ್ತ ದೊರೆ ನಾನು''.

ಮನಷ್ಯನಲ್ಲಿನ ಸಾಮಾನ್ಯತೆ ರಿತ್‌ವಿಕ್‌ನಲ್ಲಿ ಕೀಳರಿಮೆಯನ್ನುಂಟು ಮಾಡಿತ್ತು. ತಮ್ಮ ಕುಟುಂಬದ ಅತೃಪ್ತ ಜೀವನಕ್ಕೆ, ತಾಯಿಯ ಮಾನಸಿಕ ತೊಳಲಾಟಕ್ಕೆ ತಂದೆಯೇ ಕಾರಣವೆಂಬ ಬೇರು ಅವನಲ್ಲಿ ಆಳಕ್ಕೆ ಇಳಿದಿದ್ದರಿಂದಲೇ ತಂದೆಯನ್ನು ಅವನು ದ್ವೇಷದಿಂದಲೇ ಖಂಡಿಸುತ್ತಿದ್ದನು. ತಂದೆಯ ಬಗೆಗಿನ ದ್ವೇಷ ತಾಯಿಯ ಬಗೆಗೆ ಅಪಾರವಾದ ಕನಿಕರವಾಗಿ ಬೆಳೆದುನಿಂತಿತ್ತು. ತಾಯಿಯನ್ನಾದರೂ ನೆಮ್ಮದಿಯಿಂದ ಬದುಕುವಂತೆ ನೋಡಿಕೊಳ್ಳಲು ಅವನು ಮಾಡುವ ಮನವಿ ತಾಯಿಯ ಬಗೆಗೆ ಅವನಿಗಿದ್ದ ಅಪಾರ ಪ್ರೀತಿಯ ಸಂಕೇತವಾಗಿದೆ. ಕುಟುಂಬದ ಪ್ರಧಾನ ಪಾತ್ರವಾದ ತಂದೆಯ ಬೇಜವಾಬ್ದಾರಿತನ, ಅಹಂಗಳನ್ನೂ ಮಗ, ತಾಯಿ ಆಕ್ಷೇಪಿಸಿದರೆ ತಂದೆಯು ಉಳಿದವರನ್ನು ಆಕ್ಷೇಪಿಸುತ್ತಾರೆ. ಇದು ಮನುಷ್ಯನ ಸಹಜಗುಣ. ತನ್ನ ಸ್ವಯಂರಕ್ಷಣೆಗಾಗಿ ಇತರರನ್ನು ಬಲಿಕೊಡುವ ಮನುಷ್ಯ ಯಾವ ಮುಖಗಳಿಂದ ನೋಡಿದರೂ ಅವನ ಅಂತಿಮರೂಪ ಸ್ವಾರ್ಥಪರವೇ ಸಂಬಂಧಗಳ ಮೂಲಕ ಕಾಲವೆಂಬ ಅಶ್ವವನ್ನೇರಿ ಹೊರಡುವ ಮನುಷ್ಯನ ನಿರಂತರ ಹುಡುಕಾಟ ಪರಸ್ಪರ

ಪ್ರೇಮ-ಒಲವುಗಳನ್ನೇ ಅಂತಿಮ ಗುರಿಯನ್ನಾಗಿಸಿಕೊಂಡದ್ದು ಸರೋವರದ ಮೇಲಿನ ಹಿಮದ ಪದರದ ಮೇಲೆ ಚಲಿಸುತ್ತಲೇ ಸರೋವರವನ್ನು ಹುಡುಕುವ ರೀತಿಯದು ಮನುಷ್ಯನ ಹುಡುಕಾಟ. ಇಲ್ಲಿ ಬರುವ ತಂದೆ ತಾಯಿ, ಚಾರು, ರಿತ್‌ವಿಕ್ ಎಲ್ಲಾ ಪಾತ್ರಗಳಿಗೂ ಈ ಮಾತು ಅನ್ವಯಿಸುತ್ತದೆ. ಅವನ ನಿರಂತರ ಹುಡುಕಾಟದ ಪಯಣ ಅಂತಿಮಗೊಳ್ಳುವುದು ನಡುಗಡ್ಡೆಯಲ್ಲಿ ಅಂದರೆ ಸಾವಿನಲ್ಲಿ. ಸಾವಿನ ಕೊನೆಯ ಮೆಟ್ಟಲವರೆಗೂ ತನ್ನ ತಪ್ಪಿಗಾಗಿ ಪರರನ್ನು ಆಕ್ಷೇಪಿಸುವ, ತನ್ನ ಅಪರಾಧಗಳನ್ನು ಬೇರೆಯವರ ತಲೆಗೆ ಹೊರಿಸುವ ಹುಟ್ಟುಕಾರ್ಯ ನಿರಂತರವಾಗಿ ಸಾಗಿಯೇ ಇರುತ್ತದೆ. ಇದು ಮನುಷ್ಯ ಬದುಕಿಗಾಗಿ ನಡೆಸುವ ಹೋರಾಟ. ಕುಟುಂಬವನ್ನು ಕೇಂದ್ರವಾಗಿಟ್ಟುಕೊಂಡು ಹೊರಟ ಅವನ ಪಯಣದ ರೇಖೆಗಳು ಹಲವು ಬಾರಿ ವಕ್ರತೆಗಳ ಪರಿಣಾಮವಾಗಿ ದಿಕ್ಕುತಪ್ಪುವುದುಂಟು. ಬದುಕನ್ನು ಕೇಂದ್ರೀಕರಿಸುವ ಅವನ ಪ್ರಯತ್ನಗಳು ಅವರ ಹುಡುಕಾಟದ ಸ್ಥಿತಿಯಲ್ಲೇ ಅಂತ್ಯಗೊಳ್ಳುವ ಪ್ರಕ್ರಿಯೆ, ಮನುಷ್ಯನ ವ್ಯರ್ಥ ಪ್ರಯತ್ನವನ್ನು ಮೂದಲಿಸುತ್ತದೆ. ಸಾಮಾಜಿಕ ಸಂಬಂಧಗಳ ಮಧ್ಯೆ ಬದುಕುವ ಅವನು ಕೌಟುಂಬಿಕ ಸಂಬಂಧಗಳಲ್ಲಿ ಹೆಚ್ಚು ಆಪ್ತವಾಗಿ ಬದುಕುತ್ತಾನೆ. ಅವನು ಬೆಳೆಯಲು ಕಾರಣವಾದ ಬೇರುಗಳು ಕುಟುಂಬದಲ್ಲಿಯೇ ಆಳವಾಗಿರುವುದರಿಂದ ಅಲ್ಲಿಂದ ಹೊರಟ ಪಯಣದ ನಿಯಂತ್ರಣವನ್ನು ಕುಟುಂಬ ಸಾಧಿಸುತ್ತಲೇ ಇರುತ್ತದೆ. ಅಂತಹ ಸಾಧನೆಗೆ ಮುಖ್ಯವಾದ ಅಸ್ತ್ರಗಳು ಪ್ರೀತಿ - ವಾತ್ಸಲ್ಯ ಮಮತೆಯಂತಹ ಭಾವಗಳು. ವ್ಯಕ್ತಿಯೊಬ್ಬನನ್ನು ಕುಟುಂಬಕ್ಕೆ ಸಮೀಪವಾಗಿ ಬದುಕುವಂತೆ ಮಾಡುವಲ್ಲಿ ಈ ಅಸ್ತ್ರಗಳನ್ನು ಬಳಸುವ ಕೌಟುಂಬಿಕ ಸಂಬಂಧಗಳು ಮನುಷ್ಯನನ್ನು ದೈಹಿಕವಾಗಿ, ಮಾನಸಿಕವಾಗಿ ಬಿಗಿಯಲ್ಪಟ್ಟಿರುತ್ತವೆ. ಅಂತಹ ಬಿಗುತನದ ಹಲವು ಮಾದರಿಗಳನ್ನು ಖಾಸಾನೀಸರ ಕಥೆಗಳು ಚರ್ಚಿಸುತ್ತವೆ.

ಮನುಷ್ಯ ಸಂಬಂಧಗಳಲ್ಲೇ ಪ್ರಾತಿನಿಧಿಕವಾದ ಮತ್ತು ಪ್ರಮುಖವಾದ ಕೌಟುಂಬಿಕ ಸಂಬಂಧಗಳನ್ನು ಇವರ ಕಥೆಗಳು ಪ್ರಧಾನ ನೆಲೆಯಲ್ಲಿ ವಸ್ತುವಾಗಿಟ್ಟುಕೊಂಡು ಆ ಮೂಲಕ ಸಂಬಂಧಗಳನ್ನು ಕಥೆಯ ಹೊರಗೂ ವಿಸ್ತರಿಸುವಂತೆ ಮಾಡಿವೆ. ಇಲ್ಲಿನ ತಂದೆ, ತಾಯಿ, ತಂಗಿ, ತಮ್ಮ ಹೀಗೆ ಕೇವಲ ಸಂಬಂಧಗಳನ್ನು ಹೆಸರಾಗುಳ್ಳ ಪಾತ್ರಗಳು ಕಥೆಯನ್ನು ಕೇವಲ ಕತೆಯಾಗಿಸದೇ, ಘಟನೆಯನ್ನು ಕಥೆಯಲ್ಲಿ ಪ್ರಧಾನವಾಗಿಸದೇ ಇಲ್ಲಿನ ಪ್ರತಿಯೊಂದು ಪಾತ್ರದ ಸಂವೇದನೆಯಲ್ಲಿ ಪ್ರಸ್ತುತ ಸಮಾಜದ ಕೌಟುಂಬಿಕ ಸಂಬಂಧಗಳಲ್ಲಿ ಪ್ರತಿಬಿಂಬಿಸುವಂತೆ ಮಾಡಿವೆ. ಇಲ್ಲಿನ ತಂದೆ-ತಾಯಿ.ಹೀಗೆ ಯಾವ ಪಾತ್ರವಾದರೂ ಕಥೆಯ ಪಾತ್ರವಾಗಿರದೇ ರೂಪಕವಾಗಿ ಸ್ಥಾನಪಡೆಯುತ್ತವೆ. ಅಲ್ಲಿ ಈ ಪಾತ್ರಗಳು ಸೀಮಿತತೆಯನ್ನು ಕಳೆದುಕೊಂಡು ಕಥೆಯಾಚೆಗಿನ ವಿಸ್ತರಣೆಗೆ ಸಹಕಾರಿಯಾಗಿವೆ ಎನ್ನಬಹುದು.

ಇ. ಸ್ನೇಹ ಸಂಬಂಧಗಳು

ಖಾಸನೀಸರ ಒಟ್ಟು ಕಥೆಗಳಲ್ಲಿ ಸಾಮಾನ್ಯವಾಗಿ ಕೌಟುಂಬಿಕ ಮತ್ತು ಪುರುಷ-ಸ್ತ್ರೀಸಂಬಂಧಗಳೇ ಪ್ರಧಾನಸ್ತರದಲ್ಲಿ ಕಾಣಸಿಗುತ್ತವೆಯಾದರೂ ಇವುಗಳನ್ನೊರತಾದ ಮನುಷ್ಯ ಸಂಬಂಧಗಳ ಸ್ವರೂಪಗಳಿಂದಲೂ ಇವರ ಕಥೆಗಳು ಹೆಚ್ಚು ಸಂಬಂಧಗಳ ವಿಸ್ತರಣೆಯನ್ನು ಸಾಧ್ಯವಾಗುವಂತೆ ರಚಿತವಾಗಿವೆ ಎನ್ನಬಹುದು. ಮನುಷ್ಯ ಕೌಟುಂಬಿಕ ಜಗತ್ತನ್ನು ಮೀರಿ ಬೆಳೆಯುವ ಅವನ ಬೆಳವಣಿಗೆಯ ಅವಾಸ್ಥಾಂತರದಲ್ಲಿ ಕುಟುಂಬವನ್ನೊರತಾದ ಹಲವು ವ್ಯಕ್ತಿಗಳ ಸಂಬಂಧಗಳು ಅವನೊಂದಿಗೆ ಬೆಸೆಯುತ್ತವೆ. ಇದು ಕೆಲವೊಮ್ಮೆ ಅನಿರೀಕ್ಷಿತವಾಗಿಯೂ, ಮತ್ತೊಮ್ಮೆ ಅನಿವಾರ್ಯವಾಗಿಯೂ ನಡೆಯುವ ಸಾಧ್ಯತೆಯಿರಬಹುದು. ಮಾನವನ ಹುಟ್ಟು ಕುಟುಂಬದಲ್ಲೇ ಅದರೂ ಬೆಳವಣಿಗೆ ಕುಟುಂಬದಾಚೆಗಿನ ವಲಯದಲ್ಲಿ ಅಂದರೆ, ಶಿಕ್ಷಣ, ಉದ್ಯೋಗ ಎಲ್ಲವನ್ನೂ ಕುಟುಂಬದಾಚೆಗಿನ ಸಾಮಾಜಿಕ ಸಂಸ್ಥೆಗಳ ಮೂಲಕ ಪಡೆಯುತ್ತಾನಾದ್ದರಿಂದ ಅಲ್ಲಿಯ ವ್ಯಕ್ತಿಗಳ ಸಂಪರ್ಕ ಸಹಜವಾಗಿಯೇ ಅವರಿಬ್ಬರಲ್ಲಿ ಒಂದು ಸಂಬಂಧದ ಸೃಷ್ಟಿಗೆ ಕಾರಣವಾಗುತ್ತದೆ. ಪರಿಚಯದಿಂದ ಶುರುವಾದ ಸಂಬಂಧ ಸ್ನೇಹದಲ್ಲಿ ಗಟ್ಟಿತನವನ್ನು ಪಡೆಯುತ್ತದೆ. ಹಲವು ವೇಳೆ ಅದು ಪ್ರೇಮವಾಗಿಯೂ ಹೊಸರೂಪವನ್ನು ಪಡೆಯಬಹುದು. ಆದರೂ ಪ್ರೇಮಕ್ಕಾಗಲೀ, ದಾಂಪತ್ಯಾಕ್ಕಾಗಲೀ ಹಲವು ನಿರ್ಬಂಧಗಳಿವೆ. ಅದರೆ ಸ್ನೇಹಕ್ಕೆ ಇಂತಹ ಯಾವ ನಿರ್ಬಂಧಗಳೂ ಇಲ್ಲ.

ಪರಿಚಯ ಮತ್ತು ಅನಂತರದ ಯಾವುದೇ ಸ್ವರೂಪದ ಸಂಬಂಧಗಳ ಬೆಳವಣಿಗೆಯ ಮಧ್ಯಮ ಹಂತ ಸ್ನೇಹ. ಸ್ನೇಹವನ್ನೊರತಾದ ಪ್ರೀತಿ, ಬಾಂದವ್ಯ, ದಾಂಪತ್ಯಗಳಿಗೆ ಅಸ್ತಿತ್ವವೇ ಇಲ್ಲ. ಪ್ರೇಮದ ತಳಹದಿ ಸ್ನೇಹ. ಇಲ್ಲಿ ಪುರುಷ ಮತ್ತು ಸ್ತ್ರೀಯನಡುವೆ, ಪುರುಷ ಮತ್ತು ಪುರಷನ ನಡುವೆ, ಸ್ತ್ರೀ ಮತ್ತು ಸ್ತ್ರೀಯ ನಡುವೆ ಯಾವುದೇ ಲಿಂಗತಾರತಮ್ಯವಿಲ್ಲದೆ ಈ ಸಂಬಂಧ ರೂಪು ಪಡೆಯಬಲ್ಲುದು. ಅಷ್ಟೇ ಏಕೆ, ಜಾತಿ, ಧರ್ಮ, ಅಂತಸ್ತು, ವಿದ್ಯೆ, ದೇಶ, ಭಾಷೆ, ಸಂಸ್ಕೃತಿ ಇನ್ನಾವುದೇ ತರಹದ ಭೇದವಿಲ್ಲದೆ ಉಂಟಾಗಬಹುದಾದ ಸಂಬಂಧದ ವಿಶಿಷ್ಟ ಸ್ವರೂಪ ಸ್ನೇಹ.

ಮನುಷ್ಯನೊಬ್ಬನಿಗೆ ಹುಟ್ಟಿಗೆ ಹೇಗೆ ಕೌಟುಂಬಿಕ ಸಂಬಂಧ ಅನಿವಾರ್ಯ ಮತ್ತು ಅವಶ್ಯಕವೋ, ಅದೇ ರೀತಿ ಅವನ ಸರ್ವತೋಮುಖ ಬೆಳವಣಿಗೆಗೆ ಸ್ನೇಹ ಸಂಬಂಧವೂ ಅಷ್ಟೇ ಅವಶ್ಯಕ ಮತ್ತು ಅನಿವಾರ್ಯ. ವ್ಯಕ್ತಿಯೊಬ್ಬನ ಮೇಲೆ ಈ ಸಂಬಂಧ ಬಲವಂತವಾಗಿ ಏರಿಕೆಯಾಗುವಂತದ್ದಲ್ಲ. ಬದಲಾಗಿ ವ್ಯಕ್ತಿಯೇ ತನ್ನ ಇಚ್ಛಗನುಗುಣವಾಗಿ ತನಗಿಷ್ಟವಾಗುವ

ವ್ಯಕ್ತಿಯೊಂದಿಗೆ ರೂಪಿಸಿಕೊಳ್ಳುವ ಸಂಬಂಧವಿದು. ಮನುಷ್ಯನ ಈ ಸಂಬಂಧಗಳ ರೂಪುಗೊಳ್ಳುವಿಕೆ ಬಾಲ್ಯದಿಂದಲೇ ಶುರುವಾಗುತ್ತದೆ. ಮೊದಲು ನೆರೆಹೊರೆಯವರೊಡನೆ. ನಂತರ ಶಾಲೆಯಲ್ಲಿ ಸಹಪಾಠಿಗಳೊಡನೆ, ನಂತರ ಸಹೋದ್ಯೋಗಿಗಳೊಡನೆ ಈಗೆ ಸ್ನೇಹಸಂಬಂಧಗಳ ರೂಪುಗೊಳ್ಳುವಿಕೆ ಮನುಷ್ಯನೊಬ್ಬನ ಜೀವಿತದ ಪ್ರತಿಯೊಂದು ಹಂತದಲ್ಲೂ ನಿರಂತರವಾಗಿ ನಡೆಯುತ್ತದೆ.

ಸ್ನೇಹವೆಂಬುದು ವ್ಯಕ್ತಿ-ವ್ಯಕ್ತಿಗಳ ಪರಸ್ಪರ ಪರಿಚಯದ ನಂತರದ ಅವಸ್ಥೆ. ಪರಿಚಯದ ಸಂಬಂಧ ಇನ್ನೂ ಹೆಚ್ಚು ನಿಕಟವಾದಾಗ ಅಲ್ಲಿ ಸ್ನೇಹ ಸಂಬಂಧ ಸೃಷ್ಟಿಯಾಗುತ್ತದೆ. ಅಂತೆಯೇ ಸ್ನೇಹವು ಕುಟುಂಬದೊಳಗೂ ಇರುವ ಒಂದು ಭಾವ. ಏಕೆಂದರೆ ಕುಟುಂಬದ ವ್ಯಕ್ತಿಗಳ ನಡುವೆ ಪರಸ್ಪರ ಪ್ರೀತಿ-ವ್ಯಾತ್ಸಲ್ಯ ಇರುವುದಾದರೆ ಅಲ್ಲಿ ಅವುಗಳ ಪ್ರಾಥಮಿಕ ಸ್ವರೂಪವಾದ ಸ್ನೇಹವೂ ಅಡಗಿರುತ್ತದೆ. ಆದರೆ ಸ್ನೇಹ ಎಂಬುದನ್ನು ನಾವು ಕುಟುಂಬದಾಚೆಗಿನ ಮನುಷ್ಯ ಸಂಬಂಧಗಳಾಗಿಯೇ ಪರಿಗಣಿಸುತ್ತೇವೆ. ಆದರೆ ಸ್ನೇಹ ಕುಟುಂಬದೊಳಗೆ ಮತ್ತು ಕುಟುಂಬದಾಚೆಗೂ ಹರಡಿರುವ ವಿಶಾಲವಾದ ಸಂಬಂಧ. ಆದಾಗ್ಯೂ ಖಾಸನೀಸರ ಸಂಬಂಧಗಳ ಸ್ವರೂಪದ ಅಧ್ಯಯನದ ಹಿನ್ನಲೆಯಲ್ಲಿ ಸ್ನೇಹಸಂಬಂಧಗಳು ಎಂಬುದನ್ನು ಕುಟುಂಬದಾಚೆಗಿನ, ಅಂದರೆ ರಕ್ತಸಂಬಂಧಕ್ಕೆ ಬಾಹ್ಯವಾದ ಸಂಬಂಧಗಳು ಎಂಬುದಾಗಿಯೇ ಪರಿಗಣಿಸುತ್ತಾ ಚರ್ಚಿಸಲಾಗಿದೆ. ಏಕೆಂದರೆ ಕೌಟುಂಬಿಕ ಸಂಬಂಧಗಳು ಎಂಬ ಶೀರ್ಷಿಕೆಯಡಿಯಲ್ಲಿ ಚರ್ಚಿಸಲಾದ ಸಂಬಂಧಗಳು ಮತ್ತೆ ಪುನರಾವರ್ತನೆಯಾಗಬಾರದೆಂಬ ಉದ್ದೇಶಕ್ಕೆ ಅಲ್ಲಿ ಚರ್ಚೆಗೊಳಗಾಗದ ಕತೆಗಳಲ್ಲಿನ ಇತರ ಸಂಬಂಧಗಳನ್ನು 'ಸ್ನೇಹ ಸಂಬಂಧಗಳು' ಎಂಬ ಪ್ರಸ್ತುತ ಶೀರ್ಷಿಕೆಯಡಿಯಲ್ಲಿ ಚರ್ಚಿಸಲಾಗುತ್ತಿದೆ.

ಖಾಸನೀಸರ ಸಮಗ್ರ ಕಥೆಗಳನ್ನು ಗಮನಿಸಿದಾಗ ಅವುಗಳಲ್ಲಿನ ಮನುಷ್ಯ ಸಂಬಂಧಗಳು ಹೆಚ್ಚು ಕೌಟುಂಬಿಕ ನೆಲೆಯಲ್ಲಿಯೇ ರೂಪುಪಡೆಯುತ್ತವೆ. ಅಥವಾ ಪ್ರೇಮ, ದಾಂಪತ್ಯ ಎಂಬ ಹಣೆಪಟ್ಟಿಯನ್ನಚ್ಚಿಕೊಂಡಾದರೂ ಬದುಕುತ್ತವೆ. ಅಥವಾ ಇವೆರಡನ್ನೂ ಹೊರತಾದ ಕೇವಲ ಕಾಮ ಕೇಂದ್ರಿತವಾದ ಪುರುಷ-ಸ್ತ್ರೀ ಸಂಬಂಧಗಳಂತಹ ನೆಲೆಯಲ್ಲಾದರೂ ಕಂಡು ಬರುತ್ತವೆ. ಇಲ್ಲಿ ಸ್ನೇಹವೂ ಅಲ್ಲದ, ಪ್ರೇಮವೂ ಅಲ್ಲದ, ಕೌಟುಂಬಿಕವೂ ಅಲ್ಲದ ಕೇವಲ ದೈಹಿಕಸಂಬಂಧ ಮಾತ್ರ ಏರ್ಪಟ್ಟಿರುವಂತಹ ಪಾತ್ರಗಳೇ ಹೆಚ್ಚಾಗಿ ಕಾಣಸಿಗುತ್ತದೆ. ಆದರೂ ಎಲ್ಲಾ ಅಂದಕ್ಕೆ ಕುಟುಂಬದಾಚೆಗಿನ, ಪ್ರೇಮ-ದಾಂಪತ್ಯಗಳಿಂದ ಹೊರತಾದ, ದೈಹಿಕ ಸಂಬಂಧದಿಂದಲೂ ಬೆಸೆದಿರದ ಮತ್ತಷ್ಟು ಸಂಬಂಧಗಳನ್ನು ಈ ಕಥೆಗಳ ಸಂಬಂಧಗಳ

ಸ್ವರೂಪದ ಹಿನ್ನಲೆಯಲ್ಲಿ ಪರಿಗಣಿಸಲಾಗಿದೆ. ಆದ್ದರಿಂದ ಇಂತಹ ವಿಶಿಷ್ಟ ಸಂಬಂಧಗಳನ್ನು ಕಾಣಬಹುದಾದ ಪ್ರಮುಖವಾದ ೩ ಕಥೆಗಳನ್ನು ಇಲ್ಲಿ ಸ್ನೇಹ ಸಂಬಂಧಗಳ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅವು, ಅಪಘಾತ, ಮೊನಾಲಿಸಾ ಮತ್ತು ಅನಿರೀಕ್ಷಿತ, ಕಥೆಗಳು. ಮೂರೂ ಕಥೆಗಳಲ್ಲಿನ ಸ್ನೇಹಸಂಬಂಧಗಳು ವಿಭಿನ್ನನೆಲೆಯಲ್ಲಿ ನಿರೂಪಿತವಾಗಿವೆ. ಮನುಷ್ಯ ಬಾಲ್ಯ, ಯೌವ್ವನ, ವೃದ್ಧಾಪ್ಯ ಇಂತಹ ಎಲ್ಲಾ ವಯಸ್ಸಿನ ಹಂತದಲ್ಲಿಯೂ ಸ್ನೇಹಕ್ಕಾಗಿ ಹಾತೊರೆಯುತ್ತಾನೆ. ಅದೇರೀತಿ ಇಲ್ಲಿನ ಕಥೆಗಳ ಸ್ನೇಹ ಸಂಬಂಧಗಳೂ ಈ ಮೂರು ವಯಸ್ಸಿನ ಹಂತಗಳಲ್ಲಿನ ಸ್ನೇಹವನ್ನು ನಿರೂಪಿಸುತ್ತವೆ. ಅಪಘಾತ ಕಥೆಯಲ್ಲಿನ ಸ್ನೇಹ ಬಾಲ್ಯತನದ ಸ್ನೇಹದ ನೆನಪುಗಳಾಗಿ ಮೂಡಿಬಂದರೆ, ಅನಿರೀಕ್ಷಿತ ಕಥೆಯಲ್ಲಿನ ಸ್ನೇಹ ಬಾಲ್ಯವನ್ನು ಮೀರಿದ ಪ್ರೌಢವಸ್ಥೆಯಲ್ಲಿನ ಸ್ನೇಹದ ಗಾಢತೆಯನ್ನು ಚಿತ್ರಿಸುತ್ತದೆ. ಮುಂದೆ ಮೊನಾಲಿಸಾ ಕಥೆಯಲ್ಲಿನ ಪೆರ್ರೂಗ್ರಿ ಮತ್ತು ಯುವತಿಯ ನಡುವಿನ ಸ್ನೇಹ ವೃದ್ಧಾಪ್ಯದ ಮನಸ್ಸು ಸ್ನೇಹದ ಭಾವನೆಗಳಿಗಾಗಿ ಹಾತೊರೆಯುವ ಹಂಬಲವನ್ನು ನಿರೂಪಿಸುತ್ತದೆ.

* ಅಪಘಾತ ಕಥೆಯಲ್ಲಿ ರಾಮನಾಥನ ಸ್ನೇಹಸಂಬಂಧಗಳು ಅನಾವರಣಗೊಳ್ಳುವುದೇ ವಿಶಿಷ್ಟನೆಲೆಯಲ್ಲಿ. ಮುಂಬೈ ರೈಲುನಿಲ್ದಾಣವನ್ನು ಪ್ರವೇಶಿಸಲು ಇರುವ ಅಡ್ಡದಾರಿ ಅಲ್ಲಿನ ಒಂದು ಕಿಂಡಿ. ಕಬ್ಬಿಣದ ಸಲಾಕೆಗಳನ್ನು ಬಗ್ಗಿಸಿ, ಎಳೆದುನಿಲ್ಲಿಸಿ ಮಾಡಿದ ಕಿಂಡಿಯದು. ರಾಮನಾಥ ರೈಲಿಗಾಗಿ ಕಾಯುತ್ತಿದ್ದಾಗ ಅದರೊಳಗಿಂದ ದಾವಿಸುತ್ತಿದ್ದ ಪ್ರಯಾಣಿಕರ ನಡುವೆ ತನ್ನ ಬಾಲ್ಯಸ್ನೇಹಿತ ನೌಶೇರ್‌ಬರೂಚ ನುಗ್ಗಿಬರುತ್ತಿರುವ ದೃಶ್ಯ ಅವನ ಕಣ್ಣುಗಳನ್ನು ತುಂಬುತ್ತದೆ. ಆ ದೃಶ್ಯದ ಹಿನ್ನಲೆಯಲ್ಲಿ ಅವನ ಸ್ನೇಹದ ನೆನಪುಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ.

ಡಾನ್‌ಬಾಸ್ಕೋ ಶಾಲೆಯಲ್ಲಿ ತನ್ನ ಸಹಪಾಠಿಗಳಾಗಿದ್ದ ನೌಶೇರ್ ಬರೂಚ ಮತ್ತು ಅರ್ದೇಸರ್ ಇರಾನಿ ರಾಮನಾಥನ ಬಾಲ್ಯಗೆಳೆಯರಲ್ಲಿ ಆಪ್ತರು. ಸುಮಾರು ೨೦ ವರ್ಷಗಳ ಹಿಂದಿನ ನೆನಪು.

"ಒಂದು ಕೈಯಲ್ಲಿ ಅತೀ ದೊಡ್ಡದಾದ ಸ್ಕೂಲ್‌ಬ್ಯಾಗ್ ಹಾಗೂ ಇನ್ನೊಂದರಲ್ಲಿ ಲಂಚ್ ಇದ್ದ ಹ್ಯಾವರ್‌ಸ್ಯಾಕ್ ಎರಡನ್ನೂ ಮೊದಲು ಕಿಂಡಿಯೊಳಗಿಂದ ಮುಂದೆ ನೂಕಿ, ತನ್ನ ಎರಡೂ ಕೈಗಳನ್ನು ಮುಂದೆ ಜೋಡಿಸಿಕೊಂಡು ನೌಶೇರ್ ಯುದ್ದದಲ್ಲಿ ಶರಣು ಬರುವ ಸೈನಿಕರಂತೆ ತಲೆಬಾಗಿಸಿ ಅಲ್ಲಿಂದ ಪ್ರವೇಶಿಸತೊಡಗಿದ್ದ."

ಬಾಲ್ಯದ ದೃಶ್ಯ ಕಣ್ಣಿಗೆಕಟ್ಟಿದಂತೆ ರಾಮನಾಥನಿಗೆ ಭಾಸವಾಗುತ್ತದೆ. ನೌಶೇರ್‌ನು ಚಿಕ್ಕವನಾಗಿದ್ದಾಗ ಕಂಡ ಆ ಮುಖ ರಾಮನಾಥನಿಗೆ ಇಂದು ಯಾವ ರೀತಿಯ ಬದಲಾವಣೆಯಾಗಿರಬಹುದೆಂಬ ಕಲ್ಪನೆಯನ್ನು ಕೂಡ ಮಾಡಲು ಸಾಧ್ಯವಾಗದಿರುವಷ್ಟರ ಮಟ್ಟಿಗೆ ಬಾಲ್ಯದ ನೆನಪು ಅವನಲ್ಲಿ ಹಚ್ಚಹಸುರಾಗಿದೆ. ಜನರು ಕಿಂಡಿಯಿಂದ ನುಗ್ಗಿಬರುತ್ತಿದ್ದ ದೃಶ್ಯ ತನ್ನ ಬಾಲ್ಯ ಮತ್ತು ಗೆಳೆತನದ ಚಿತ್ರಗಳನ್ನು ಕಣ್ಣೆದುರಿಗೆ ತಂದು ನಿಲ್ಲಿಸುತ್ತದೆ. ಸ್ಕೂಲ್‌ಗಾಗಿ ಆ ಕಳ್ಳಗಿಂಡಿಯಿಂದಲೇ ನುಗ್ಗಿಬರುತ್ತಿದ್ದ ಮೂವರು ಗೆಳೆಯರು ಇಂದು ಚದುರಿಹೋಗಿದ್ದಾರೆ.

ಇಂದು ನೌಶೇರ್ ಮತ್ತು ಅರ್ದೇಸರ್ ರಾಮನಾಥನ ನೆನಪಿನಲ್ಲಿ ಮಾತ್ರ ಉಳಿದಿದ್ದಾರೆ. ಮನುಷ್ಯನೇ ಆಗೆ ದೈಹಿಕವಾಗಿ ಮತ್ತು ಬೌದ್ಧಿಕವಾಗಿ ಬೆಳೆಯುತ್ತಲೇ ತನ್ನ ಮುಂದಿರುವ ದಾರಿಗಳ ಆಯ್ಕೆಯಲ್ಲಿ ಸ್ವಾರ್ಥಿಯಾಗುತ್ತಾನೆ. ತನ್ನ ಇಷ್ಟಕ್ಕೆ ಬಿಟ್ಟ ಜೀವನದ ಮುಂದಿನ ದಾರಿಗಳಲ್ಲಿ ತನಗೆಬೇಕಾದ ದಾರಿಗಳನ್ನು ಆಯ್ದುಕೊಳ್ಳುತ್ತಾನೆ. ಅಂತಹ ಕೆಲವೊಂದು ದಾರಿಗಳು ಸ್ನೇಹ, ಕುಟುಂಬ ಎಲ್ಲವನ್ನೂ ದೂರಗೊಳಿಸುವ ದಾರಿಗಳಾಗಿರುತ್ತವೆ. ಆದರೆ ಇದಾವುದೂ ಅವನನ್ನು ತಡೆಯುವುದೇ ಇಲ್ಲ. ಹಣದ ಗಳಿಕೆಗಾಗಿಯೂ, ಪ್ರಸಿದ್ಧಿಗಾಗಿಯೇ ವಿದೇಶಕ್ಕೆ ಹೋಗುವ ವ್ಯಕ್ತಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದಕ್ಕೆ ಸ್ವದೇಶದ ಸಂಬಂಧಗಳು ವಿದೇಶೀ ಆಕರ್ಷಣೆಯಿಂದ ಸೋಲುತ್ತಿರುವುದು, ಇದಕ್ಕೆ ಪ್ರಮುಖ ಕಾರಣ. ಇದರಲ್ಲಿ ಪೋಷಕರ ಪಾಲೂ ಬಹಳಷ್ಟಿದೆ. ವಿದೇಶಗಳಲ್ಲಿ ಉದ್ಯೋಗಾವಕಾಶ ಲಭಿಸುವುದೇ ಜೀವನದ ಬಹುಮುಖ್ಯ ಅವಕಾಶವೆಂದು ಭಾವಿಸುವಂತಹ ಸ್ಥಿತಿಯಲ್ಲಿ ವಿದೇಶಕ್ಕೆ ಹೋಗುವ ಅವಕಾಶವನ್ನು ಬಿಟ್ಟರೆ ಅಂತಹ ಮೂರ್ಖತನ ಮತ್ತೊಂದಿಲ್ಲ ಎಂಬುದು ಎಲ್ಲರೂ ಒಪ್ಪುವಂತಹ ಮಾತಾದ್ದರಿಂದ ವಿದೇಶೀ ವಾಸ್ತವ್ಯ ಇಂದು ಅನಿವಾರ್ಯವಾಗಿದೆ.

ಸ್ನೇಹ ದೂರಾಗಲು, ಸ್ನೇಹಿತರು ಚದುರಿಹೋಗಲು ಹಲವು ಕಾರಣಗಳಿದ್ದರೂ ಬಲವಾದ ಎರಡು ಕಾರಣ, ಉನ್ನಂತವ್ಯಾಸಂಗ ಮತ್ತು ಉದ್ಯೋಗ, ಅಭಿರುಚಿ ಮತ್ತು ಅವಕಾಶಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ. ಒಂದು ಹಂತದವರೆಗೆ ಅಂದರೆ ಶಾಲೆಯಲ್ಲಿರುವವರೆಗೆ ಒಂದಾಗಿದ್ದ ಸ್ನೇಹಿತರು ಅನಂತರ ಬೇರೆ-ಬೇರೆಯಾಗುವುದು ಸಾಮಾನ್ಯವಿಷಯ. ಇದನ್ನೇ ರಾಮನಾಥ "ಎಲ್ಲೆಲ್ಲೋ ಚದುರಿಹೋದರು" ಎಂಬ ಪದದಲ್ಲಿ ಹಿಡಿದಿಟ್ಟಿದ್ದಾನೆ.

ಮನುಷ್ಯ ಸಂಬಂಧಗಳ ಈ ಚದುರುವಿಕೆ ಹೊಸ-ಹೊಸ ಸಂಬಂಧಗಳಿಗೆ ತನ್ನನ್ನು ತಾನು ತೆರೆದುಕೊಳ್ಳುತ್ತದೆ. ಪ್ರೇಮ, ದಾಂಪತ್ಯ ಇಂತಹ ಹಲವು ಸಂಬಂಧಗಳು ಒಬ್ಬ

ವ್ಯಕ್ತಿಯ ಬದುಕಿನಲ್ಲಿ ಪ್ರವೇಶಿಸಿದಾಗ ಉಳಿದ ಸಂಬಂಧಗಳು ಗೌಣವಾಗುತ್ತದೆ.ಅಂತಹ ಗೌಣಸಂಬಂಧಗಳಲ್ಲಿ ಒಂದು ಸ್ನೇಹ. ಇದು ಎಲ್ಲಾ ಸಂಬಂಧಗಳಲ್ಲೂ ಖಡ್ಡಾಯವೆಂದು ಅರ್ಥವಲ್ಲ ಬಹುತೇಕ ಸಂಬಂಧಗಳು ಈ ರೀತಿಯ ತಿರುವನ್ನು ಪಡೆಯುತ್ತವೆ.

ರಾಮನಾಥನ ಸ್ನೇಹ ಸಂಬಂಧಗಳೂ ಸಹ ಈ ರೀತಿಯ ಸಾಮಾನ್ಯತೆಗೆ ಹೊರತಾಗಿಲ್ಲ ಎನ್ನಬಹುದು. ನೌಶೇರ್ National Defense Academy ಸೇರಿ Commissioned officer ನಾಗಿ ಪಾಕಿಸ್ತಾನದ ಗಡಿಯಲ್ಲೆಲ್ಲೋ ಯುದ್ದದಲ್ಲಿ ನಿರತನಾಗಿದ್ದಾನೆಂಬ ಪತ್ರಿಕೆಯ ಸುದ್ದಿಯೊಂದೇ ರಾಮನಾಥನಿಗೆ ತನ್ನ ಸ್ನೇಹಿತನ ಬಗೆಗಿದ್ದ ಮಾಹಿತಿ. ತನ್ನ ಸ್ನೇಹಿತನೊಬ್ಬನ ಇರುವಿಕೆಯನ್ನು ಪತ್ರಿಕೆಯ ಸುದ್ದಿಯ ಮೂಲಕ ತಿಳಿದುಕೊಳ್ಳಬೇಕಾದ ಅನಿವಾರ್ಯತೆ ಅವರಿಬ್ಬರ ನಡುವಿನ ಸ್ನೇಹಸಂಬಂಧದ ಅಂತರಕ್ಕೆ ಬಹುದೊಡ್ಡ ಸಾಕ್ಷಿಯಂತಿದೆ.

ವ್ಯಕ್ತಿಯೊಬ್ಬನ ವೈಯುಕ್ತಿಕ ಬದುಕಿನ ಮುಂದೆ ಸುತ್ತಲಸಂಬಂಧಗಳು ಅಮುಖ್ಯವಾಗುವುದಕ್ಕೆ ಹಲವುಕಾರಣಗಳಿರಬಹುದು. ಆದರೆ ಅಂತಹ ಅಮುಖ್ಯತೆ ಅನಿವಾರ್ಯವೇನೂ ಅಲ್ಲ. ಸಂಬಂಧಗಳ ನಡುವಿನ ಸಂಪರ್ಕದ ನೆಲೆಸುವಿಕೆಗೆ ಇಂದು ಸಂಪರ್ಕಮಾಧ್ಯಮಗಳ ಕೊರತೆಯೇನಿಲ್ಲ. ಆದರೆ ಅಂತಹ ಸಂಪರ್ಕವ್ಯಕ್ತಿಯು ಇಚ್ಛೆಗನುಗುಣವಾಗಿರುತ್ತದೆ. ಮನುಷ್ಯನ ಬದುಕು ಯಾಂತ್ರಿಕವಾಗುವುದು ಇಂತಹ ಸಂಬಂಧಗಳ ನಶಿಸುವಿಕೆಗೆ ಬಹುಮುಖ್ಯ ಕಾರಣ. ದಿನನಿತ್ಯದ ಬದುಕಿನ ಒತ್ತಡಗಳಲ್ಲಿಯೇ ಜೀವಿಸುವ ವ್ಯಕ್ತಿಗೆ ಸಂಬಂಧಗಳ ಮೌಲ್ಯದ ಬಗ್ಗೆ ಚಿಂತಿಸಲು ಸಮಯವೇ ಇಲ್ಲ. ರಕ್ತ ಸಂಬಂಧಗಳನ್ನೇ ದೂರಗೊಳಿಸುವಾಗ ಸ್ನೇಹ ಸಂಬಂಧದ ನಶಿಸುವಿಕೆ ಸಾಧ್ಯವಾಗುವುದು ಇಂತಹ ಒತ್ತಡದ ಬದುಕಿನಲ್ಲಿ ಆಶ್ಚರ್ಯವೇನಲ್ಲ.

ರಾಮನಾಥ ಮತ್ತು ಅವನ ಸ್ನೇಹಿತರ ಸಂಬಂಧಗಳ ಮರೆಯಾಗುವಿಕೆಗೆ ಈ ಯಾಂತ್ರಿಕ ಬದುಕೇ ಬಹುಮುಖ್ಯಕಾರಣ. ಮೂವರು ಸ್ನೇಹಿತರು ಮೂರು ದಿಕ್ಕುಗಳಲ್ಲಿ ಬದುಕುತ್ತಿದ್ದೇವೆಂಬ ಮಾಹಿತಿಯ ಹೊರತಾಗಿ ಮತ್ತಾವ ವಿಷಯಗಳೂ ಕೂಡ ಪರಸ್ಪರರಿಗೆ ತಿಳಿದಿರಲೇ ಇಲ್ಲ ಎನ್ನಬಹುದು. ನೌಶೇರ್ ತನ್ನ ಬದುಕನ್ನು ದೇಶಸೇವೆಯಲ್ಲಿ ರೂಪಿಸಿಕೊಂಡಿದ್ದರೆ, ಅರ್ದೇಸರನ ಬದುಕು ವಿದೇಶದಲ್ಲಿ ನೆಲೆಗೊಂಡಿತ್ತು. ಉನ್ನತ ವ್ಯಾಸಂಗಕ್ಕಾಗಿ ಲಂಡನ್ನಿಗೆ ಹೋದ ಅವನು ಕೆಲಸವನ್ನು ಸಂಪಾದಿಸುವುದರ ಜೊತೆಗೆ ಬ್ರಿಟೀಷ್ ಹುಡುಗಿಯನ್ನೂ ಮದುವೆಯಾಗಿ ಶಾಶ್ವತವಾಗಿ ವಿದೇಶದಲ್ಲಿಯೇ ನೆಲೆಸಿದ್ದ. ಲಗ್ನವಾದ ಹೊಸದರಲ್ಲಿ ಗಂಡಹೆಂಡಿರ snap-shot ಒಂದನ್ನು ಜತೆಗಿಟ್ಟು ಸುದೀರ್ಘವಾದ ಆತ್ಮೀಯ ಪತ್ರವೊಂದನ್ನು ಬರೆದಿದ್ದ ಅರ್ದೇಸರನ ಆತ್ಮೀಯತೆ ರಾಮನಾಥನ ಪಾಲಿಗೆ ಆ ಕೊನೆಯ ಪತ್ರದೊಂದಿಗೇ ಕೊನೆಯಾಗಿತ್ತು.

ಈ ಎಲ್ಲಾ ನೆನಪುಗಳು ರಾಮನಾಥನಿಗೆ ಪ್ರಪಂಚವನ್ನು ಫ್ಲಾಟ್‌ಫಾರ್ಮ್ ಪ್ರತಿಬಿಂಬಿಸುತ್ತಿರುವಂತೆ ಕಾಣಿಸಿತು. ಇಲ್ಲಿನ ನೂರಾರು ಪ್ರಯಾಣಿಕರು ಪ್ರಯಾಣಿಸುವ ಮಾರ್ಗಗಳೇ ಬೇರೆ ರೈಲುಬರುವವರೆಗೂ ಜೊತೆ-ಜೊತೆಯಾಗಿದ್ದ ಅವರು ತಮ್ಮ-ತಮ್ಮ ರೈಲುಗಳು ಬಂದೊಡನೇ ತಮ್ಮ ರೈಲನ್ನಿಡಿದು ಮತ್ತೊಬ್ಬನಿಗೆ ತಿಳಿಯದಂತೆ ಎಲ್ಲಿಯೋ ಹೋಗಿಬಿಡುತ್ತಾರೆ. ಅವರಿಗೆ ತಾವು ತಲುಪಬೇಕಾದ ಗುರಿ ಮುಖ್ಯವೇ ವಿನಃ ತನ್ನ ಜೊತೆಗಿದ್ದ ಸಹ ಪ್ರಯಾಣಿಕರ ಸಂಬಂಧ ಮುಖ್ಯವಲ್ಲ. ಆಗೆಯೇ ಮನುಷ್ಯನೂ ತನ್ನ ಕನಸುಗಳು ಸಾಕಾರಗೊಳ್ಳುವ ಹಾದಿಗಳನ್ನು ಹಿಡಿದು ಸಾಗುವನೇ ವಿನಃ ಸಂಬಂಧಗಳಿಗೆ ಜೋತುಬಿದ್ದು, ಕನಸುಗಳನ್ನು ಹಗಲುಗನಸಾಗಿಸುವುದಿಲ್ಲ. ಪ್ರಪಂಚದಲ್ಲಿ ಯಾರು-ಯಾರಿಗೂ ಬಂಧಿತರಾಗಿಲ್ಲ. ಯಾರು-ಯಾರಿಗೋಸ್ಕರವೂ ಬದುಕುತ್ತಿಲ್ಲ. ಪ್ರತಿಯೊಬ್ಬನೂ ವೈಯಕ್ತಿಕತೆಗಾಗಿಯೇ, ಬದುಕುತ್ತಾನೆ. ಕೆಲ ಸಮಯ ಜೊತೆಯಾಗಿ ಪ್ರಯಾಣಿಸಿದ್ದ ಸಹ ಪ್ರಯಾಣಿಕರು ತಮ್ಮ-ತಮ್ಮ ಸ್ಥಳಗಳಲ್ಲಿಳಿದು ಮರೆಯಾಗುವಂತೆ ಮನುಷ್ಯನೂ ಸಹ ತನ್ನ ದಾರಿಗಳನ್ನು ಹಿಡಿದು ನಡೆಯುತ್ತಾನೆ. ದಾರಿಗಳು ಬೇರೆಯಾದಾಗ ಮುಖಗಳು ಮರೆಯಾಗುವುದು ಸಹಜವೇ. ಇದೇ ಬದುಕಿನ ವಾಸ್ತವ. ಜೊತೆಯಾಗಿದ್ದಾಗಿನ ನೋವು ನಲಿವುಗಳು, ಪ್ರೀತಿ-ವಿಶ್ವಾಸಗಳು ಅವರವರ ನೆನಪಿನಲ್ಲುಳಿಯಬಲ್ಲುದೇ ವಿನಃ ವಾಸ್ತವದಲ್ಲಿ ಅವರಿಬ್ಬರೂ ಅಪರಿಚಿತರು. ಸ್ನೇಹ ಸಂಬಂಧದ ಬಗೆಗಿನ ಈ ಕಟು ಸತ್ಯವನ್ನು ರಾಮನಾಥನ ಮಾತುಗಳು ಸುಂದರವಾಗಿ ಚಿತ್ರಿಸಿವೆ.

"ಇಲ್ಲಿ ಒಮ್ಮೆ ನೋಡಸಿಕ್ಕ ಮುಖ ಇನ್ನೊಮ್ಮೆ ನೋಡ ಸಿಗುವುದು ದುರ್ಲಭ. ಜುಹೂ ದಂಡೆಯ ಮೇಲೆ, ಅವಾಢವ್ಯವಾಧ ತೆರೆಗಳ ಸುರುಳಿಯಲ್ಲಿ ಸಿಕ್ಕು ನಡುಸಮುದ್ರದ ಭವ್ಯತೆಯಲ್ಲಿ ದಿಕ್ಕಾಪಾಲಾಗಿ ಹೋಗುವ 'ಲಾಲೀಪಾಪಿ'ನ 'ಸೆಲೋಫೇನ' ಪಾರದರ್ಶಕ ಕಾಗದದಂತೆ, ವಿಧಿಯು ಯಾರುಯಾರನ್ನೋ ಎತ್ತಿಕೊಂಡು ಎಲ್ಲೆಲ್ಲೋ ತೇಲಿಸಿ ಎಲ್ಲೆಲ್ಲೋ ಮುಳುಗಿಸಿ ಎಲ್ಲರನ್ನೂ ದಿಕ್ಕಾಪಾಲು ಮಾಡಿಬಿಡುತ್ತಿತ್ತು."

ಇಂತಹ ಮಾತುಗಳು ಮನುಷ್ಯ ಸಂಬಂಧಗಳ ನಿರಂತರತೆಯನ್ನು ಸೂಚಿಸುತ್ತವೆ, ಆದರೆ ಆ ನಿರಂತರತೆ ಕೆಲವೇ ಸಂಬಂಧಗಳಿಗೆ ಸೀಮಿತವಾಗಿರುವುದಿಲ್ಲ. ತನ್ನ ಬಾಳಪ್ರಯಾಣದಲ್ಲಿ ಬಂದುಹೋಗುವ ಸಹಪ್ರಯಾಣಿಕರಂತೆ ಲೆಕ್ಕವಿರದಷ್ಟು ಸಂಬಂಧಗಳು ಬರುತ್ತವೆ ಬಂದಷ್ಟೇ ವೇಗವಾಗಿ ಮರೆಯಾಗುತ್ತವೆ. ಮರೆಯಾಗುವ ನೂರಾರು ಸಂಬಂಧಗಳಲ್ಲಿ ತಮ್ಮ ನೆನಪನ್ನು ಉಳಿಸಿಹೋಗುವ ಸಂಬಂಧಗಳು ತೀರಾ ಕಡಿಮೆ. ರಾಮನಾಥನ ಬದುಕಿನಲ್ಲಿ ಅಂತಹ

ನೆನಪನ್ನು ಉಳಿಸಿಹೋದದ್ದು ಎರಡೇ ಎರಡು ಸ್ನೇಹ ಸಂಬಂಧಗಳು. ಒಂದು ನೌಶೇರ್ ಮತ್ತೊಂದು ಅರ್ದೇಸರನ ಸಂಬಂಧ.

ಇಪ್ಪತ್ತು ವರ್ಷಗಳ ಹಿಂದೆ ರಾಮನಾಥನಿಗೆ ಒಡಹುಟ್ಟಿದವರಿಗಿಂತ ಸಮೀಪದವನಾಗಿ ತನ್ನ ಬಾಲ್ಯದ ಕನಸುಗಳನ್ನು, ರಹಸ್ಯಗಳನ್ನು ತನ್ನ ಜೊತೆಗೆ ಹಂಚಿಕೊಂಡ ನೌಶೇರ್ ಇಂದು ರಾಮನಾಥನ ಬಾಳಿನಲ್ಲಿ ಅಪರಿಚಿತ. ಅದೇ ರೀತಿ ಅವನ ಜೀವನದ ಅತೀ ಭಯಾನಕ ಕ್ಷಣದಲ್ಲಿ ತನ್ನ ಜೊತೆಗಿದ್ದು ಆ ದುರಂತದ ವೇದನೆಯನ್ನು ಕಣ್ಣಾರೆಕಂಡ ಅರ್ದೇಸರ್ ಇಂದು ಅಪರಿಚಿತನಂತೆ ದೂರಉಳಿದು ಎಂದೋ ಒಮ್ಮೆ ಒಂದು ಪತ್ರಬರೆದು ಮರೆಯಾಗಿ ಹೋಗಿದ್ದ. ಅವನೊಂದಿಗೆ ಅವನ ಸ್ನೇಹವೂ ದಿನೇ-ದಿನೇ ಮರೆಯಾಗತೊಡಗಿತ್ತು. ಜೀವನದ ಯಾವುದೇ ಒಂದು ಘಟ್ಟದಲ್ಲಿ ಒಬ್ಬರನ್ನೊಬ್ಬರು ಬಿಟ್ಟರಲಾರದಷ್ಟು ಗಾಢ ಸ್ನೇಹ ಈ ಮೂವರನ್ನು ಆವರಿಸಿತ್ತಾದರೂ ನಂತರದ ಬದುಕಿನ ಘಟ್ಟಗಳು ಅವರ ಸ್ನೇಹದ ಗಾಢತೆಯನ್ನು ಸಡಿಲಿಸುತ್ತಾಬಂದವು. ಆ ಸಡಿಲತೆ ಸಂಬಂಧಗಳ ನಡುವಿನ ಎಲ್ಲಾಸಂಪರ್ಕಗಳನ್ನು ಬಹುದೂರಕ್ಕೆ ತಳ್ಳಿ ಕಣ್ಮರೆಯಾಗುವಂತಹ ಅಜಾತಸಂಬಂಧವಾಗಿ ಮಾರ್ಪಟ್ಟಿತ್ತು.

* ಅಪಘಾತ ಕಥೆಯಲ್ಲಿ ಬಾಲ್ಯದಲ್ಲಿ ಕಳೆದುಹೋದ ಸ್ನೇಹದ ಘಟನೆಗಳು ರಾಮನಾಥನ ನೆನಪಿನಲ್ಲಿ ಭಿತ್ತರಗೊಂಡರೆ ಅನಿರೀಕ್ಷಿತ ಕಥೆ ವರ್ತಮಾನದ ಸ್ನೇಹದ ಜೊತೆಗೆ ಮುಂದುವರೆಯುತ್ತಾ ಸಾಗುತ್ತದೆ. ಇಲ್ಲಿನ ಸ್ನೇಹ ಸಂಬಂಧ ದುರ್ಗಾ ಮತ್ತು ಅಭಿಜಿತ್ ಎಂಬ ಸಹಪಾಠಿಗಳ ನಡುವಿನದ್ದು. ಆಗತಾನೇ ಬಾಲ್ಯವನ್ನು ಮುಗಿಸಿ ಹರೆಯದ ಮೊದಲ ಮೆಟ್ಟಿಲಿನಲ್ಲಿ ನಿಂತಿದ್ದ ಪ್ರೌಢಶಾಲಾ ವಿದ್ಯಾರ್ಥಿಗಳು ಅವರು. ಬಾಲ್ಯದ ಆಟ-ಪಾಠಗಳು, ತುಂಟು ತರತಿಗಳು ಕ್ರಮೇಣ ಕಡಿಮೆಯಾಗುತ್ತಾ ತಾನು ಮತ್ತು ತನ್ನ ಸುತ್ತಣ ಸಮಾಜದ ಆಗುಹೋಗುಗಳ ಕಡೆಗೆ ಗಮನಹರಿಯುತ್ತಿದ್ದ ಕಾಲವದು. ಯಾವ ವಿಷಯವನ್ನೇ ಆಗಲೀ ತಿಳಿಯುವಲ್ಲಿನ ಆಸಕ್ತಿ, ಕುತೂಹಲ ಪ್ರವರ್ಧಮಾನದಲ್ಲಿದ್ದ ಸಮಯ. ಅವರ ಪ್ರೌಢ ವಯಸ್ಸಿನಂತೆ ಅವರ ಗೆಳೆತನದಲ್ಲೂ ಪ್ರೌಢತೆ ಎದ್ದುಕಾಣುತ್ತಿತ್ತು. ಯಾವ ವಿಷಯವನ್ನೇ ಆದರೂ ಚರ್ಚಿಸುವ ಅವರು ಪರಸ್ಪರ ಅಭಿಪ್ರಾಯಗಳನ್ನು ಅಭಿವ್ಯಕ್ತಿಸುವ, ತಮ್ಮ ವಾದಕ್ಕನುಸಾರವಾಗಿ ಸಾಬೀತುಪಡಿಸುವ ವಿಷಯಗಳನ್ನು ಮಂಡಿಸುವ ಬೌದ್ಧಿಕ ಮಟ್ಟದಲ್ಲೂ ಪ್ರೌಢತೆಯನ್ನು ಗಳಿಸಿದ್ದರು.

ಸ್ನೇಹವೆಂಬುದರ ನಿಜವಾದ ಅರ್ಥವೇನು? ಎಂಬುದಕ್ಕೆ ಉತ್ತರದಂತಿತ್ತು ದುರ್ಗಾ ಮತ್ತು ಅಭಿಜಿತ್‌ರ ಸ್ನೇಹ. ಕಪಟವಾಗಲೀ, ಮೋಸವಾಗಲೀ, ಸ್ವಾರ್ಥವಾಗಲೀ, ಇನ್ನಾವುದೇ

ಅಶ್ಲೀಲ ಭಾವನೆಯಾಗಲೀ ಅವರಿಬ್ಬರ ನಡುವಿನ ಸಂಬಂಧವನ್ನು ಎಂದೂ ಸೋಕಿರಲಿಲ್ಲ. ಅವರ ಸ್ನೇಹಪರಚರ್ಚೆಗೆ ಪದೇ-ಪದೇ ವಸ್ತುವಾಗುತ್ತಿದ್ದುದು ಸಿನಿಮಾ. ಸಿನಿಮಾಲೋಕದ ಬಣ್ಣದ ತೆರೆಯ ಹೊರಗಿನ ಮತ್ತು ಒಳಗಿನ ಹಲವು ವಿಷಯಗಳ ಬಗೆಗೆ ತಾರೆಯರ ಜೀವನದ ಬಗೆಗಿನ ಗಾಸಿಪ್‌ಗಳ ಬಗೆಗಿನ ಕುತೂಹಲಗಳು ಅವರನ್ನು ಇಂತಹ ಚರ್ಚೆಗೆ ಒಳಪಡಿಸುತ್ತಿದ್ದವು. ಇಂತಹ ವಿಷಯಗಳ ಬಗೆಗೆ ಅವರಿಗೆ ಆಸಕ್ತಿ ಇದ್ದುದು ಅವರ ವಯಸ್ಸಿಗೆ ಸಹಜವಾಗಿಯೇ ಇರುವಂತಹ ಗುಣ. ಅವರಿಬ್ಬರ ನಡುವಿನ ಹರಟೆಗೆ ಸಿನಿಮಾ ಒಂದು ಕೇಂದ್ರ ವಸ್ತುವಾಗಿತ್ತು.

ದುರ್ಗಾ ಆಗತಾನೇ ಯೌವ್ವನಕ್ಕೆ ಕಾಲಿಡುತ್ತಿರುವ ಹೊಸಪ್ರಾಯದ ಹುಡುಗಿ ಅವಳ ಮನೆಗೆ ಬಂದಿದ್ದ ಪ್ರಸಿದ್ಧ ಸಿನಿಮಾನಟ ಸೋಹಂ ಅವಳನ್ನು ವಿವರವಾಗಿ, ಸೂಕ್ಷ್ಮವಾಗಿ ನೋಡುತ್ತಿರುವುದರ ಹಿಂದೆ ಯಾವುದೇ ಸ್ವಾರ್ಥ, ಅಥವಾ ಪುರುಷ ಸಹಜವಾದ ಕಾಮನೆಗಳು ಒಂದು ಕ್ಷಣ ಅವನ ನೋಟದಲ್ಲಿ ಬಿಂಬಿತವಾಗುತ್ತಿತ್ತು. ಆದರೆ ಅಭಿಜಿತ್ ಮತ್ತು ದುರ್ಗಾರ ಪಾತ್ರಗಳು ಇಂತಹ ಯಾವುದೇ ಭಾವನೆಗಳಿಂದ ಮುಕ್ತವಾಗಿದ್ದವು. ಅವರ ಮುಗ್ಧ ಮನಸ್ಸುಗಳಲ್ಲಿ ಅಂತಹ ಯಾವ ಭಾವನೆಯ ಸುಳಿವೂ ಕೂಡ ಇರಲಿಲ್ಲ. ಅದೊಂದು ನಿಷ್ಕಲ್ಮಶ, ಶುಭ್ರವಾದ ಗಾಢಸ್ನೇಹ ಮಾತ್ರ. ತನ್ನ ಮನಸ್ಸಿನ ದುಃಖ, ಸುಖದ ಭಾವನೆಗಳನ್ನು ಮುಚ್ಚುಮರೆಯಿಲ್ಲದೆ ಸಹಜವಾಗಿಯೇ ಅಭಿಜಿತ್‌ನೊಂದಿಗೆ ಹಂಚಿಕೊಳ್ಳುತ್ತಿದ್ದ ದುರ್ಗಾಳ ವರ್ತನೆ ಅವಳ ಮತ್ತು ಅವನ ನಡುವಿನ ಮಧುರವಾದ ಸ್ನೇಹಬಾಂದವ್ಯದ ಕುರುಹಾಗಿತ್ತು. ಅವರು ವಯಸ್ಸಿನಲ್ಲಿ ಪ್ರೌಢರಾಗಿದ್ದರೂ ಅವರಲ್ಲಿನ ಚೇಷ್ಟೆ, ಒಬ್ಬರನ್ನೊಬ್ಬರು ಇಯ್ಯಾಳಿಸುವ ತುಂಟತನ ಇವೆಲ್ಲವೂ ಅವರ ಮನಸ್ಸುಗಳು ಇನ್ನೂ ಬಾಲ್ಯವನ್ನು ಮೀರದ ಮನಸ್ಸುಗಳಾಗಿ ಕಾಣಿಸುತ್ತಿದ್ದವು.

ಒಬ್ಬ ಸ್ನೇಹಿತನಾದವನು ಮತ್ತೊಬ್ಬ ಸ್ನೇಹಿತನ ನೋವು-ನಲಿವುಗಳಲ್ಲಿ ಪಾತ್ರನಾಗಬೇಕು. ದುಃಖದಲ್ಲಿ ಸಮಾಧಾನಿಸಬೇಕು. ಸೋಲಿನಲ್ಲಿ ಸಾಂತ್ವಾನಹೇಳಬೇಕು. ನೋವು-ನಲಿವುಗಳನ್ನು ಸಮನಾಗಿ ಹಂಚಿಕೊಳ್ಳುವಂತಹ ಸಂಬಂಧಗಳೇ ನೈಜಸ್ನೇಹದ ಸಂಬಂಧಗಳು. ಅಭಿಜಿತ್ ತನ್ನ ಸ್ನೇಹಿತೆ ದುರ್ಗಾ ನಟ ಸೋಹಂನಿಂದ ಉಂಟಾದ ಅವಮಾನದಿಂದ ಮಾನಸಿಕವಾಗಿ ಕುಗ್ಗಿಹೋದಾಗ ಅವಳನ್ನು ಸಾಂತ್ವಾನಪಡಿಸಲು ಆಡುವ ಮಾತುಗಳು ಅವರಲ್ಲಿನ ಸ್ನೇಹದ ಗಟ್ಟಿತನಕ್ಕೆ ನಿದರ್ಶನ.

" ದುರ್ಗಾ ಇದರಲ್ಲಿ ನಿನ್ನದೇನು ತಪ್ಪಿದೆ?"

ತನ್ನ ಸ್ನೇಹಿತರೆಲ್ಲರಿಗೆ ಉಂಟಾದ ಅವಮಾನಕ್ಕೆ ತಾನೇ ಕಾರಣಳೆಂಬ ಅಪರಾಧಿ ಮನೋಭಾವದಿಂದ ದುಃಖಿತಳಾಗಿದ್ದ ದುರ್ಗಾಳಿಗೆ ಅಭಿಜಿತ್‌ನ ಈ ಒಂದೇ ಮಾತು ಅವಳನ್ನು ದುಃಖದ ಮಡುವಿನಿಂದ ಹೊರಗೆತಂದಿತ್ತು. ಅವನ ಮಾತುಗಳನ್ನು ಕೇಳಿದ ತಕ್ಷಣ ದುರ್ಗಾಳ ಕಣ್ಣುಗಳು ತುಂಬಿಬಂದವು. ಆ ಕಣ್ಣಿನಲ್ಲಿ ಅಭಿಜಿತ್‌ನ ಬಗೆಗಿನ ಮಧುರ ಸ್ನೇಹಭಾವನೆಗಳು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಅಭಿಜಿತ್‌ನ ನಿಷ್ಕಲ್ಮಶ ಗಾಢ ಸ್ನೇಹಕ್ಕೆ ಅವಳು ತನ್ನ ಕಣ್ಣುಗಳ ಮೂಲಕವೇ ಶರಣಾಗಿದ್ದಳು. ಅಭಿಜಿತ್ ಆ ದುಃಖದಿಂದ ದುರ್ಗಾಳನ್ನು ಹೊರಕ್ಕೆ ತರಲು ದಿನನಿತ್ಯದ ತನ್ನ ಚೇಷ್ಟೆಯ ಮಾತುಗಳನ್ನಾಡಿ ಅವಳನ್ನು ನಗಿಸಲು ಪ್ರಯತ್ನಿಸಿದ ಅವನ ಮನಸ್ಸು ಮಗುವಿನಷ್ಟೇ ಕೋಮಲವಾಗಿತ್ತು. ಅವನ ಈ ಮುಗ್ಧತೆಯೇ ದುರ್ಗಾಳಿಗೆ ತನ್ನ ಸ್ನೇಹಿತ ಎಂಥಹ ಸಮಯದಲ್ಲಾದರೂ ತನ್ನ ಜೊತೆಗಿರುತ್ತಾನೆಂಬ ಧೈರ್ಯ ತಂತಾನೇ ಅವಳನ್ನು ಆವರಿಸಿತ್ತು.

ಮನುಷ್ಯ ಸಂಬಂಧಗಳಲ್ಲಿ ಸ್ನೇಹ ಸಂಬಂಧ ಪವಿತ್ರವಾದುದು, ಶ್ರೇಷ್ಠವಾದುದು, ಎಂಬುದನ್ನು ನಿರೂಪಿಸುವಂತಿತ್ತು ದುರ್ಗಾ ಮತ್ತು ಅಭಿಜಿತ್‌ನ ನಡುವಿನ ಸ್ನೇಹಸಂಬಂಧ. ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲಿ ಸ್ನೇಹ ಸಂಬಂಧವಿರಲೇಬೇಕು ಎಂಬುದನ್ನು ಮತ್ತೆ-ಮತ್ತೆ ಸಾರುತ್ತಿದ್ದವು ದುರ್ಗಾ ಮತ್ತು ಅಭಿಜಿತ್ ಪಾತ್ರಗಳು.

* ಖಾಸನೀಸರ ಸ್ನೇಹ ಸಂಬಂಧಗಳ ಸ್ವರೂಪವನ್ನು ನಿರೂಪಿಸುವ ಮತ್ತೊಂದು ಕಥೆ ಮೊನಾಲಿಸಾ ಈ ಕಥೆಯ ವಿಶೇಷತೆಯೆಂದರೆ ಇಲ್ಲಿನ ಪ್ರೇಮ ಮತ್ತು ಸ್ನೇಹ ಈ ಎರಡೂ ಸಂಬಂಧಗಳು ಇತರ ಕಥೆಗಳಿಗೆ ಹೋಲಿಸಿದರೆ ತೀರಾ ಭಿನ್ನ ಮತ್ತು ತೀರಾ ವಿಶಿಷ್ಟವಾದುದು. ಸ್ನೇಹ ಸಾಮಾನ್ಯವಾಗಿ ಸೃಷ್ಟಿಯಾಗುವುದು ಸಮಾನ ಮನಸ್ಥಿತಿಯುಳ್ಳ ಸಮಾನವಯಸ್ಸಿನ, ಸಮಾನ ಅಭಿರುಚಿಯುಳ್ಳ ಪರಸ್ಪರ ವ್ಯಕ್ತಿಗಳ ನಡುವಿನಲ್ಲಿ. ಆದರೆ ಮೊನಾಲಿಸಾ ಕಥೆಯಲ್ಲಿನ ಸ್ನೇಹ ಸಂಭವಿಸುವುದು ಎಂಭತ್ತರ ವಯಸ್ಸಿನ ಪೆರ್ರೂಗಿ ಎಂಬ ಮುದುಕ ಮತ್ತು ಹದಿಹರೆಯದ ಒಬ್ಬ ಯುವತಿಯರ ನಡುವೆ.

ಇದೊಂದು ಆಕಸ್ಮಿಕವಾದ ಸ್ನೇಹ. ವಂಚಕ ಜಗತ್ತಿನ ವಂಚನೆಗೊಳಗಾಗಿ ಸಹಾಯವನ್ನು ಹರಸುತ್ತಾ ಬಂದ ಮುಗ್ಧ ಹುಡುಗಿಯೊಬ್ಬಳನ್ನು ಸ್ನೇಹಭಾವದಿಂದ ರಕ್ಷಿಸುವ ಪೆರ್ರೂಗಿಯಲ್ಲಿ ಕರುಣಾಭರಿತವಾದ ಸ್ನೇಹವಿತ್ತು ಎಂದು ಹೇಳಬಹುದು.

"ಯಾಕಿಷ್ಟು ದುಗುಡ? ಪಾಪದ ಹೊರೆಹೊತ್ತು ಬಂದವರಲ್ಲಿ ನೀನೇ ಮೊದಲಿಗಳೆಂದು ಭಾವಿಸಬೇಡ. ಪ್ಯಾರೀಸಿನಲ್ಲಿ ನಿನ್ನಂಥವರು ಸಾವಿರಾರು ಹುಡುಗಿಯರಿದ್ದಾರೆ. ಪ್ಯಾರಿಸ್ ಸ್ನೇಹಮಯಿ. ಮಹಾತಾಯಿಯಂತೆ ಎಲ್ಲರನ್ನೂ ತನ್ನ ಅಪ್ಪುಗೆಯಲ್ಲಿ ಸಂತೈಸುತ್ತಾಳೆ."

ಪೆರ್ರೂಗ್ರಿಯ ಈ ಮಾತಿನಲ್ಲಿ ಅವನೊಬ್ಬ ಸ್ನೇಹಮಯಿ ಎಂಬುದು ಮತ್ತೆ-ಮತ್ತೆ ಗೋಚರಿಸುತ್ತದೆ. ಅಪರಿಚಿತ ಯುವತಿಯೊಬ್ಬಳನ್ನು ರಕ್ಷಿಸುವ ಅವನದು ಸ್ನೇಹಮಯಿ ಗುಣವಲ್ಲದೆ ಮತ್ತೇನು? ವೃದ್ಧಾಪ್ಯದ ಒಂಟಿಬದುಕಿನಲ್ಲಿ ಯುವತಿಯ ಸ್ನೇಹಕ್ಕಾಗಿ, ಹಾತೊರೆಯುವ ಅವನ ಮನಸ್ಸಿನಲ್ಲಿ ಸ್ನೇಹವನ್ನೊರತಾದ ಅನ್ಯಭಾವನೆಗಳಿಗೆ ಕೊಂಚಸ್ಥಾನವೂ ಇಲ್ಲ. ತನ್ನ ಬದುಕಿನಲ್ಲಿ ಬಂದು ಮಾಯವಾದ ಹೆಣ್ಣುಗಳು ತಂದ ಪ್ರೇಮದ ನೋವು ಅವನನ್ನು ಇಂತಹ ಮುಗ್ಧಸ್ನೇಹಕ್ಕಾಗಿ ಹಂಬಲಿಸುತ್ತಿತ್ತು ಎನ್ನಬಹುದು. ಹೆಣ್ಣನ್ನು ಭೋಗದವಸ್ತುವಾಗಿ ಬಳಸುವ ಕ್ರೂರಜಗತ್ತಿನಲ್ಲಿ ಸ್ನೇಹ ಭಾವದಿಂದ ರಕ್ಷಿಸಿಪೊರೆಯುವ ಮನಸ್ಥಿತಿ ಇರುವುದು ಕೆಲವರಲ್ಲಿ ಮಾತ್ರ. ಅಂತಹ ಕೆಲವೇ ಕೆಲವರಲ್ಲಿ ಒಬ್ಬ ಪೆರ್ರೂಗ್ರಿ.

ಪೆರ್ರೂಗ್ರಿ ಪ್ರೇಮಕ್ಕಾಗಲೀ, ದಾಂಪತ್ಯಕ್ಕಾಗಲೀ ಯುವತಿಯನ್ನು ರಕ್ಷಿಸಿದ್ದಾನೆನ್ನಲು ಅವನದು ಪ್ರೇಮಕ್ಕಾಗಿ ಹಾತೊರೆಯುವ ಮನಸ್ಸೂ ಅಲ್ಲ. ಮೊನಾಲಿಸಾ ಎಂದು ಕರೆಯುವ ಆ ಯುವತಿಯರಲ್ಲಿ ಕಂಡದ್ದು ಸ್ನೇಹಪರವಾದ ಅವಳ ಕಣ್ಣುಗಳನ್ನೇ ವಿನಃ ಮತ್ತಾವ ದೃಷ್ಟಿಯಿಂದಲೂ ನೋಡಿದವನಲ್ಲ. ಪ್ರೇಮವೂ, ಅಲ್ಲದ ಕಾಮವೂ ಅಲ್ಲದ ಇವರಿಬ್ಬರ ನಡುವಿನ ಸಂಬಂಧ ಸ್ನೇಹಸಂಬಂಧವೆನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಪೆರ್ರೂಗ್ರಿಯಂತಹ ಯಾವ ಮನಸ್ಸಾದರೂ ತನ್ನ ಕೊನೆಯಕಾಲದಲ್ಲಿ ಎದುರಿಸುವ ಏಕಾಂಗಿ ತನದಿಂದ ಬಹಳವಾಗಿಯೇ ಕುಗ್ಗಿಹೋಗಿರುತ್ತದೆ. ಏಕಾಂಗಿತನ ಅವರನ್ನು ಕಾಡುತ್ತಿರುತ್ತದೆ. ಕುಟುಂಬದವರು, ಆಪ್ತರು, ಯಾರೂ ತನಗೆ ಲಭ್ಯವಾಗದಿದ್ದ ಪಕ್ಷದಲ್ಲಿ ಏಕಾಂಗಿತನದ ನಿವಾರಣೆಗಾಗಿ ಸ್ನೇಹಸಂಬಂಧವೊಂದರ ಅವಶ್ಯಕತೆ ಖಂಡಿತವಾಗಿಯೂ ಇರುತ್ತದೆ. ಅಂತಹ ಅವಶ್ಯಕತೆಯಲ್ಲಿ ಅನಿರೀಕ್ಷಿತವಾಗಿ ದೊರೆತವಳು ಪೆರ್ರೂಗ್ರಿಯ ಸ್ನೇಹಿತೆ.

ಸ್ನೇಹ ವಯಸ್ಸನ್ನೂ ಮೀರಿ ಬೆಳೆಯಬಲ್ಲದು ಅದರ ಸಂಬಂಧ ಸೃಷ್ಟಿಗೆ ಯಾವುದೇ ವಯಸ್ಸಿನ ಗಡಿಯಲ್ಲ ಎಂಬುದನ್ನು ಪೆರ್ರೂಗ್ರಿ ಮತ್ತು ಯುವತಿಯ ಸ್ನೇಹ ಪ್ರತಿಪಾದಿಸುತ್ತಿತ್ತು. ಕಥೆಯಲ್ಲಿ ಇವರಿಬ್ಬರ ಸ್ನೇಹ ಆಕಸ್ಮಿಕವಾಗಿ ಜೊತೆಯಾದರೂ ಇಂತಹ ಮನುಷ್ಯ ಸಂಬಂಧಗಳು ಪೂರ್ವನಿಯೋಜಿತವೇ ಎಂಬುದನ್ನು ಪೆರ್ರೂಗ್ರಿಯ ಮಾತುಗಳು ಅಭಿವ್ಯಕ್ತಿಸುತ್ತವೆ.

"ಬೇಟೆಗಾರನ ಕೈಗೆ ಸಿಕ್ಕ ಕಾಡುಪ್ರಾಣಿಯಂತೆ ತಪ್ಪಿಸಿಕೊಂಡು ಓಡಿಬಂದು ಈ ಹೋಟೆಲ್ಲನ್ನು ಹೊಕ್ಕದ್ದು ಕೇವಲ ಆಕಸ್ಮಿಕವಲ್ಲ. ಎಲ್ಲವೂ ಪೂರ್ವನಿಯೋಜಿತವೇ!"

ಪೆರ್ರೂಗಿಯ ಈ ಮಾತುಗಳು ಯುವತಿಯ ಜೊತೆಗೆ ಅವನಿಗಿರುವ ಸ್ನೇಹಕ್ಕೆ ಮತ್ತಷ್ಟು ಗಟ್ಟಿತನವನ್ನು ಒದಗಿಸುತ್ತವೆ. ಮನುಷ್ಯನ ಯಾವ ಸಂಬಂಧಗಳೂ ಆಕಸ್ಮಿಕವಾಗಿರದೇ ಅವನ ಬದುಕಿನುದ್ದಕ್ಕೂ ಆಯಾ ಅವಧಿಯಲ್ಲಿ ಬೆಸೆಯುತ್ತವೇ ಹೊರತು ಆ ಸಂಬಂಧಗಳು ಮೊದಲೇನಿಯೋಜಿತವಾಗಿರುತ್ತವೆ. ಪೆರ್ರೂಗಿ ಯುವತಿಯೊಡನಾಡುವ ಆತ್ಮೀಯತೆಯ ಮಾತುಗಳು, ಯಾವಸ್ವಾರ್ಥವೂ ಇರದೆ ಅವಳನ್ನು ಪೊರೆದದ್ದು, ಅವನಲ್ಲಿನ ಸ್ನೇಹಮಯಿ ಗುಣಕ್ಕೆ ನಿದರ್ಶನವಾಗಿದೆ. ಪ್ಯಾರಿಸ್ ಸ್ನೇಹಮಯಿ ಎಂದು ಹೇಳುವ ಅವನಲ್ಲಿ ಸ್ನೇಹದ ಭಾವನೆಗಳು ಅಳವಾಗಿ ಬೇರೂರಿರುವುದನ್ನು ಕಾಣಬಹುದು. ವ್ಯಕ್ತಿಯೊಬ್ಬ ನಿಷ್ಕಾರಣವಾಗಿ ಮತ್ತೊಬ್ಬ ವ್ಯಕ್ತಿಯ ಮೇಲೆ ತೋರುವ ಕರುಣೆಯ ಹಿಂದಿನ ಸಂಬಂಧ ಸ್ನೇಹಮಯವಾದದ್ದು ಎಂಬುದನ್ನು ಪೆರ್ರೂಗಿ ಮತ್ತು ಯುವತಿಯ ನಡುವಿನ ಪವಿತ್ರವಾದ ಸ್ನೇಹಸಂಬಂಧ ನಿರೂಪಿಸುತ್ತದೆ.

ಅನಿರೀಕ್ಷಿತ ಕಥೆಯಲ್ಲಿ ದುರ್ಗಾಳನ್ನು ಹೊರತರಲು ಅಭಿಜಿತ್ ಮಾಡುವ ಪ್ರಯತ್ನದಂತೆ ಯುವತಿಯನ್ನು ಪಾಪಪ್ರಜ್ಞೆಯಿಂದ ಹೊರತರಲು ಪೆರ್ರೂಗಿ ಆಡುವ ಮಾತುಗಳು ಸಂಪೂರ್ಣವಾಗಿ ಸ್ನೇಹಮಯದಿಂದ ಕೂಡಿದ ಮಾತುಗಳು.

"ನಮ್ಮೆಲ್ಲರ ಕಣ್ಣಿನ ನಿರ್ಲಜ್ಜ ಸ್ವಚ್ಛಂದಕ್ಕೆ ಪಾಪವಿಲ್ಲ. ನಾಲಿಗೆಯ ಹೊಲಬುಗೆಟ್ಟ ದಾಹಕ್ಕೆ ಪಾಪವಿಲ್ಲ. ಅಂದಮೇಲೆ ದೇಹದ ಹಸಿವೆಗೆಲ್ಲಿಯ ಪಾಪ ಬಂತು, ಹೇಳು? ವ್ಯಥೆ ಪಡಬೇಡ. ನಿನ್ನಿಂದ ಯಾವ ಪಾಪವೂ ಘಟಿಸಿಲ್ಲ"

ಈ. ಜನ್ಮಾಂತರದ ಸಂಬಂಧಗಳು

ಖಾಸನೀಸರನ್ನು ಕನ್ನಡದ ವಿಶಿಷ್ಟ ಕಥೆಗಾರ ಎಂದು ಹಲವು ಕಾರಣಗಳಿಗಾಗಿ ಸಂಭೋಧಿಸುತ್ತೇವೆ. ಅವರ ಕಥೆಗಳ ವಸ್ತುವಿನ ಆಯ್ಕೆಗೆ ಸಂಬಂಧಿಸಿದಂತೆಯೂ ಮೇಲಿನ ಮಾತು ಅನ್ವಯಿಸುತ್ತದೆ. ಏಕೆಂದರೆ ಸಣ್ಣಕಥೆ ಎಂದರೆ ಒಂದು ಘಟನೆಯನ್ನೋ, ಅಥವಾ ಒಬ್ಬ ವ್ಯಕ್ತಿಯ ಜೀವನದ ಅನುಭವಗಳನ್ನೋ, ಸಂಕ್ಷಿಪ್ತಗೊಳಿಸಿ ಕಥೆಯಲ್ಲಿ ಹಿಡಿದಿರುವ ಸಾಹಿತ್ಯ ಪ್ರಕಾರ ಎಂಬುದು ಸಾಮಾನ್ಯವಾದ ವ್ಯಾಖ್ಯಾನ. ಆದರೆ ಖಾಸನೀಸರ ಕಥೆಗಳು ಇಂತಹ ಸಾಮಾನ್ಯ ವ್ಯಾಖ್ಯಾನವನ್ನು ಮೀರಿ ಬೆಳೆಯುತ್ತವೆ. ಏಕೆಂದರೆ ಇವರ ಕಥೆಗಳಲ್ಲಿನ ವಿಸ್ತಾರತೆ ಬೃಹತ್ ವ್ಯಾಪ್ತಿಯನ್ನು ಒಳಗೊಂಡಿರುತ್ತದೆ. ಅವರ ಕಥೆಗಳಲ್ಲೆಲ್ಲಾ ಅಪಘಾತ ಕಥೆಯೊಂದೇ ಕೆಲವೇ ಘಂಟೆಗಳ ಒಂದು ಘಟನೆಯನ್ನು ವಸ್ತುವಾಗುಳಾದ್ದು. ಆದರೂ ಕಥೆಗೆ ಪೂರಕವಾಗಿ ಬರುವ ರಾಮನಾಥನ ಬಾಲ್ಯದ ನೆನಪುಗಳು. ಸ್ನೇಹದ ಅನುಭವಗಳು ಕಥೆಯನ್ನು ಘಟನೆಯೊಚೆಗೂ ವಿಸ್ತರಿಸುವಲ್ಲಿ ಸಹಾಯಕವಾಗಿವೆ. ಅಂದರೆ ಒಂದು ಕಥೆ ಒಬ್ಬ ವ್ಯಕ್ತಿಯ ಜೀವಿತದ ಅನುಭವಗಳ ಸಾರಾಂಶವನ್ನು ಹಿಡಿದಿಡಬಹುದು. ಇದು ಒಂದು ಕಥೆಯ ವ್ಯಾಪ್ತಿಗೆ ಸರಿಹೊಂದುವಂತದ್ದೆಂಬುದು ನಮ್ಮ ಅನೇಕ ಲೇಖಕರ ಕಥೆಗಳನ್ನು ನೋಡಿದಾಗ ಅರಿವಿಗೆ ಬರುತ್ತದೆ. ಅಂದಾಗ ಒಬ್ಬ ಮನಷ್ಯನ ಜೀವಿತದ ಅವಧಿಯನ್ನೂ ಮೀರಿದ ಬದುಕಿನ ಚಿತ್ರಣವನ್ನು ನೀಡಿದಾಗ ಅಂತಹ ಕಥೆ ಉಳಿದ ಕಥೆಗಳಿಗಿಂತ ವಿಶಿಷ್ಟನೆಲೆಯಲಿ ನಿಲ್ಲುತ್ತದೆ ಎನ್ನಬಹುದು. ಆಗ ಆ ಕಥೆಯ ಲೇಖಕ ವಿಶಿಷ್ಟಕಥೆಗಾರರ ಸಾಲಿಗೆ ಸೇರುತ್ತಾನೆ. ಖಾಸನೀಸರ ಎಲ್ಲಾ ಕಥೆಗಳೂ ವಿಶಿಷ್ಟಕಥೆಗಳೇ ಅದರೂ ಮೊನಾಲಿಸಾ ಕಥೆನ ಆ ವಿಶಿಷ್ಟ ಕಥೆಗಳಲ್ಲಿ ವಿಶಿಷ್ಟವಾಗಿ ಮೂಡಿಬಂದಿದೆ.

ಎಂಭತ್ತರ ದಶಕದಲ್ಲಿ [೧೯೮೩] ಪ್ರಕಟವಾದ ಮೊನಾಲಿಸಾ ಕಥೆ ಕನ್ನಡದ ಪ್ರಬುದ್ಧ ನವ್ಯಕಥೆಗಳ ಸಾಲಿಗೆ ಸೇರುತ್ತದೆ. ಖಾಸನೀಸರ ಇತರಕತೆಗಳ ಸಾಲಿನಲ್ಲಿ ಈ ಕತೆ ಭಿನ್ನನೆಲೆಯನ್ನು ಕಂಡುಕೊಂಡಿದೆ. ಮೊನಾಲಿಸಾ ಕಥೆಯಲ್ಲಿ ಖಾಸನೀಸರು ಭಿನ್ನವಾದ ವಸ್ತು, ಭೌಗೋಳಿಕ ಪರಿಸರ, ಕಾಲ, ಪುನರ್ಜನ್ಮ ಮುಂತಾದವುಗಳ ಬಗ್ಗೆ ಹೊಸ ಒಳನೋಟಗಳನ್ನು ಪ್ರಕಟಿಸಿರುವ ಸಂಗತಿ ಮೊನಾಲಿಸಾ ಕಥೆಯನ್ನು ಅವರಕಥೆಗಳೆಲ್ಲೆಲ್ಲಾ ಪ್ರತ್ಯೇಕ ಸ್ಥಾನದಲ್ಲಿ ತಂದುನಿಲ್ಲಿಸುತ್ತದೆ. ಇದು ಹಿಂದೆಯೇ ಹೇಳಿದಂತೆ ಒಬ್ಬ ವ್ಯಕ್ತಿಯ ಒಂದು ಜನುಮದ ಕಥೆಯಲ್ಲ. ಅವನ ಮತ್ತು ಅವನ ಪ್ರಿಯತಮಳ ಹಲವು ಜನುಮಗಳು ಇಲ್ಲಿ ಕಥೆಯ ರೂಪವನ್ನು ಪಡೆದಿದೆ. ಇಂತಹ ಹಲವುಜನ್ಮಗಳ ಬದುಕನ್ನು ಕಾದಂಬರಿಯಾಗಿಸಬಹುದೇ ವಿನಃ ಅದನ್ನು ಒಂದು ಸಣ್ಣಕಥೆಯ ವ್ಯಾಪ್ತಿಗೆ ಒಳಪಡಿಸುವುದು ತುಂಬಾ ಪ್ರಯಾಸಕರ ಕೆಲಸ, ಅದು ಎಲ್ಲ ಕಥೆಗಾರರಿಂದಲೂ

ಸಾಧ್ಯವಾಗುವ ಕೆಲಸವಲ್ಲ. ಅಂತಹ ಪ್ರಯಾಸಕರವಾದ ಕೆಲಸವನ್ನು ಖಾಸನೀಸರು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆನ್ನಬಹುದು. ಹಲವು ಜನ್ಮಗಳ ಬದುಕಿನ ಸಾರವನ್ನು ಕೆಲವೇ ಪುಟಗಳಲ್ಲಿ ಕುತೂಹಲಕಾರಿಯಾಗಿ ಹಿಡಿದಿಟ್ಟಿರುವುದು ಅವರ ಕಥಾಶಕ್ತಿಯ ಹೆಗ್ಗುರುತು. ಒಂದು ಪುಟಹೇಳ ಬೇಕಾಗಿದುದನ್ನು ಒಂದು ವಾಕ್ಯದಲ್ಲಿಯೇ ಸಾಬೀತುಮಾಡುವುದು ಕಥಾ ನಿರೂಪಣಾ ಜಾಣ್ಮೆಯ ಸಂಕೇತ, ಅಂತಹ ಜಾಣ್ಮೆ ಖಾಸನೀಸರಿಗಿದೆ ಎಂಬುದನ್ನು ಮೊನಾಲಿಸಾ ಕಥೆಯನ್ನೋದಿದ ಪ್ರತಿಯೊಬ್ಬ ಓದುಗನಿಗೂ ಅರ್ಥವಾಗುತ್ತದೆ.

ಅವರ ಸಮಗ್ರ ಕಥೆಗಳಲ್ಲಿ ಮೊನಾಲಿಸಾ ಕಥೆಯೊಂದೇ ಭಾರತೀಯ ಸಂಸ್ಕೃತಿಗಿಂತ ಭಿನ್ನವಾದ ನೆಲೆಯಲ್ಲಿ ರಚಿತಗೊಂಡಿದೆ. ಅವರ ಎಲ್ಲಾ ಕಥೆಗಳಲ್ಲೂ ನಗರ ಜೀವನ ಸಾಮಾನ್ಯವಾದರೂ ಅದು ಮುಂಬೈ ಅಥವಾ ಪುಣೆಯ ಸುತ್ತಮುತ್ತಲಿನ ಪ್ರದೇಶವ್ಯಪ್ತಿಗೆ ಸೀಮಿತವಾಗಿತ್ತು. ಆದರೆ ಮೊನಾಲಿಸಾ ಕಥೆಯ ಪಾತ್ರಗಳ ಜೀವನ ನಗರ ಜೀವನವೇ ಆದರೂ ಅದು ಭಾರತದಿಂದಲೇ ಹೊರತಾದ ವಿದೇಶದಲ್ಲಿ [ಪ್ಯಾರಿಸ್] ನಡೆಯುವ ಒಂದು ಘಟನೆ ಮತ್ತು ಆ ಘಟನೆಯ ಸುತ್ತ ಬೆಸೆದುಕೊಂಡಿರುವ ಪಾತ್ರಗಳ ಬದುಕು ಮೊನಾಲಿಸಾ ಕಥೆಯಾಗಿ ರೂಪುಪಡೆದಿದೆ. ಮತ್ತು ಅವರ ಇತರ ಕಥೆಗಳಲ್ಲಿ ಬರುವ ಸಂಬಂಧಗಳ ಸ್ವರೂಪಕ್ಕಿಂತ ತೀರಾ ಭಿನ್ನವಾದ ಸಂಬಂಧದ ಸ್ವರೂಪ ಕತೆಯಲ್ಲಿ ಚಿತ್ರಿತವಾಗಿದೆ.

ಮೊನಾಲಿಸಾ ಒಂದು ಪುನರ್ಜನ್ಮದ ವಸ್ತುವುಳ್ಳ ಕಥೆ. ಕಥೆಯ ವಸ್ತು ವಾಸ್ತವವೋ ಅಥವಾ ಅವಾಸ್ತವವೋ ಎಂಬುದು ಕಥೆಯನ್ನೊರತಾದ ಪ್ರಶ್ನೆಯಾಗುತ್ತದೆ, ಏಕೆಂದರೆ ಕಥೆಯಲ್ಲಿನ ಪೆರ್ರೂಗಿ ಎಂಬ ಪಾತ್ರದ ಬದುಕು ಇಲ್ಲಿ ಕಥೆಯಾಗಿದೆ. ಅವನು ಹೇಳುವ ಪುನರ್ಜನ್ಮದ ಕಥೆ ಸುಳ್ಳಾಗಿರಬಹುದು, ಆದರೆ ಕಥೆಯಲ್ಲಿ ಅದು ಪ್ರಧಾನವಲ್ಲ, ಏಕೆಂದರೆ ಅದು ಕಥೆಯೊಳಗಿನ ಕಥೆ, ಆದ್ದರಿಂದ ಕಥೆಯ ಪಾತ್ರದ ಬದುಕನ್ನು ಮುಖ್ಯವೆಂದು ಪರಿಗಣಿಸಿದಾಗ ಮೊನಾಲಿಸಾ ಅಂತಹ ಅವಾಸ್ತವಿಕತೆಗೇನೂ ಬಳಗಾಗುವುದಿಲ್ಲ. ಏಕೆಂದರೆ ಇದು ಪೆರ್ರೂಗಿ ಎಂಬ ವ್ಯಕ್ತಿಯನ್ನು ಮತ್ತವನ ಜೀವನವನ್ನು ಕುರಿತ ಒಂದು ನೈಜಕಥೆ. ಇದನ್ನು ಖಾಸನೀಸರೇ ಈ 'ಮೊನಾಲಿಸಾ' ಕಥೆಯ ಸೃಷ್ಟಿಯ ಹಿನ್ನಲೆಯನ್ನು ಕುರಿತು ಮಾತನಾಡುತ್ತಾ ಹೀಗೆ ವಿವರಿಸುತ್ತಾರೆ.

"ಡೆನಿಸ್ ಬಾರ್ಡೆನ್ಸ್ ಎನ್ನುವವರು ಇಂಗ್ಲೀಷ್‌ನಲ್ಲಿ ಬರೆದ "ಮಿಸ್ಟೀರಿಯಸ್ ವರ್ಲ್ಡ್ಸ್" ಎಂಬ ಪುಸ್ತಕವನ್ನು ಓದುತ್ತಿದ್ದಾಗ ಅದರಲ್ಲಿ ನಮೂದಿತವಾದ ಪ್ರಸಿದ್ಧ ತೈಲಚಿತ್ರ 'ಮೊನಾಲಿಸಾ'ದ

ಕಳವಿನ ಘಟನೆ, ಅದರ ನಾಟಕೀಯ ಘಟನೆಗಳಿಂದ ನನ್ನ ಮನಸ್ಸು ಆಕರ್ಷಿಸಿತು. ಆ ಚಿತ್ರವನ್ನು ಅಸಂಬಂಧ ಕಾರಣಕ್ಕಾಗಿ ಅಪಹರಿಸಿದ ಪೆರ್ರೂಗ್ಗಿ ಎನ್ನುವ ವ್ಯಕ್ತಿ ನನ್ನ ಕತೆಯ ಕೇಂದ್ರಶಕ್ತಿ, ಪುನರ್ಜನ್ಮದಂತಹ ಅನುಭವಾತೀತ ಸತ್ಯವನ್ನು ಕೋರ್ಟ್‌ಗೆ ಮನದಟ್ಟು ಮಾಡಿಕೊಟ್ಟು ಜೇಲಿನಿಂದ ಬಿಡುಗಡೆಪಡೆಯುವುದು ಪೆರ್ರೂಗ್ಗಿಯ ವ್ಯಕ್ತಿತ್ವದ ಆಕರ್ಷಣೆ. ಈ ಘಟನೆಯನ್ನು ಕೇಂದ್ರವಸ್ತುವಾಗುಳ್ಳ ಸ್ವತಂತ್ರ ಕಥೆ ಇದು."

ಪುನರ್ಜನ್ಮದಂತಹ ಅನುಭವಾತೀತ ಸತ್ಯವನ್ನು ವಸ್ತುವಾಗುಳ್ಳ ಮೊನಾಲಿಸಾ ಕಥೆ ಉಳಿದೆಲ್ಲಾ ಕಥೆಗಳಿಗಿಂತ ಹೆಚ್ಚಿನ ಕುತೂಹಲತೆಯನ್ನು ತನ್ನೊಳಗೆ ಹುದುಗಿಸಿಕೊಂಡಿದೆ. ಎಂಭತ್ತರ ವಯಸ್ಸಿನ ಗಡಿ ದಾಟಿದ ಪೆರ್ರೂಗ್ಗಿ ಎಂಬ ಒಂಟಿ ಮುದುಕನ ಆತ್ಮವೃತ್ತವನ್ನು ಈ ಕಥೆ ಚಿತ್ರಸುತ್ತದೆ. ಒಬ್ಬ ವಿಚಿತ್ರ ವ್ಯಕ್ತಿತ್ವದ, ಪುನರ್ಜನ್ಮದಲ್ಲಿ ಆಳವಾದ ನಂಬಿಕೆಯುಳ್ಳ ಈ ಮುದುಕ ಹೇಳುವ ತನ್ನ ಬದುಕಿನ ಕಥೆ ಅಸಾಧಾರಣವಾದದ್ದು, ಆಶ್ಚರ್ಯವೆನಿಸುವಂತಹದ್ದಾಗಿರುತ್ತದೆ. ಪುನರ್ಜನ್ಮವನ್ನು ಕೇವಲ ಕಲ್ಪನೆ ಎಂದು ತಿಳಿದಿರುವ ಮನಸ್ಸುಗಳೂ ಕೂಡ ಪೆರ್ರೂಗ್ಗಿಯ ಕಥೆಯನ್ನು ಕೇಳಿದಾಗ ಒಂದು ಕ್ಷಣ ಅವನ ಕಥೆ ನಿಜವಿರಬಹುದು ಎಂದೆನಿಸುವುದರಷ್ಟರ ಮಟ್ಟಿಗೆ ಅವನ ಕಥಾನಿರೂಪಣೆ ಕೆಲಸಮಾಡುತ್ತದೆ.

'ಮೊನಾಲಿಸಾ' ಎಂಬ ಜಗತ್ಪಸಿದ್ದ ತೈಲಚಿತ್ರದ ರೂಪದರ್ಶಿಯೊಡನೆ ೪೦೦ ವರ್ಷಗಳ ಕೆಳಗೆ ತನ್ನ ಹಿಂದಣ ಜನ್ಮದಲ್ಲಿ ಅವಳ ಸಂಗಡ ಸಂಸಾರ ನಡೆಸಿದ್ದೆ ಎಂದು ಹೇಳುವ ಪೆರ್ರೂಗ್ಗಿಯ ಧೃಡವಾದ ನಂಬಿಕೆ ಅಷ್ಟೇ ಧೃಢವಾದ ಅವನ ಮಾತುಗಳಲ್ಲಿ ವ್ಯಕ್ತವಾಗುತ್ತದೆ. ಅವನ ಈ ಧೃಡ ನಂಬಿಕೆಯ ಮಾತುಗಳು ಕೇಳುಗರ, ಮನಸ್ಸನ್ನು ವಿಚಲಿತಗೊಳಿಸುವಲ್ಲಿ ಅಶ್ಚರ್ಯವೇನೂ ಇಲ್ಲ ಏಕೆಂದರೆ ಅವನು ತನ್ನ ಕಥೆಯ ನಿರೂಪಣೆಗೆ ಬಳಸುವ ಅನುಭವ ಚಿತ್ರಣಗಳು ಅಷ್ಟರಮಟ್ಟಿನದು. ಈ ನಿಟ್ಟಿನಲ್ಲಿ ನೋಡುವುದಾದರೆ ಅವನದೊಂದು ಅಸಾಧಾರಣವಾದ ಪ್ರೇಮದ ಕಥೆ. ಅವನು ಹೇಳುವ ಈ ಪ್ರೇಮದ ಕಥೆ ಅವನ ಕಳ್ಳತನವನ್ನು ಸಮರ್ಪಿಸಿಕೊಳ್ಳಲಿಕ್ಕಾಗಿ, ಅಥವಾ ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ಉದ್ದೇಶಕ್ಕಾಗಿಯೇ ಸೃಷ್ಠಿಸಿ ಹೇಳುತ್ತಿದ್ದಾನೆಯೋ ಎಂಬ ಅನುಮಾನ ಮೂಡಿದರೂ ಅವನ ಮಾತುಗಳಲ್ಲಿನ ನಂಬಿಕೆ ಅವನ ಕಥೆಯನ್ನು ನಂಬುವಂತೆ ಮಾಡುತ್ತವೆ. ಅಂತಹ ಮಾತಿನ ಶಕ್ತಿಯಿಂದಲೇ ಅವನು ಹಿಡೀ ನ್ಯಾಯಾಲಯವನ್ನೇ ದಂಗುಬಡಿಸಿದ್ದು.

ಪ್ಯಾರಿಸ್‌ನ ಲೂವ್ರ್ ಎಂಬ ಪುಖ್ಯಾತ ಮ್ಯೂಸಿಯಂನಿಂದ ಮೊನಾಲಿಸಾ ವರ್ಣಚಿತ್ರವನ್ನು ಅಪಹರಿಸಿದ ಕಾರಣದ ಹಿಂದೆ ಅಡಗಿರುವ ಕಥೆ ಮೊನಾಲಿಸಾ ಕಥೆಯ ಕೇಂದ್ರವಸ್ತು.

ಅಂತಹ ಕಾರಣವನ್ನು ವಿವರಿಸುವ ಪೆರ್ರೂಗಿಯ ಬದುಕು ಕಥೆಯನ್ನು ವಿಸ್ತರಿಸುತ್ತದೆ. ಅವನ ಕಥಾವಿಸ್ತರಣೆಯಲ್ಲಿ ಬರುವ ಸಂಬಂಧಗಳೇ ಪೆರ್ರೂಗಿ ಮತ್ತು ಮೊನಾಲಿಸಾ ಚಿತ್ರಕ್ಕೆ ರೂಪದರ್ಶಿಯಾಗಿದ್ದ ವ್ಯಕ್ತಿಯ ನಡುವಿನದ್ದು. ಒಂದು ಜನ್ಮದಲ್ಲಿ ಒಟ್ಟಿಗೆ ಬದುಕಿದ ಜೀವಗಳು, ಮತ್ತೊಂದು ಜನ್ಮದಲ್ಲಿಯೂ ಪರಸ್ಪರ ಭೇಟಿಯಾಗುವ ಆಶ್ಚರ್ಯಕರ ಮತ್ತು ನಂಬಲಸಾಧ್ಯವಾದ ಕಥೆಯನ್ನು ಮೊನಾಲಿಸಾ ಕಥೆಯ ಮೂಲಕ ಖಾಸನೀಸರು ಅದ್ಭುತವಾಗಿ ಅಭಿವ್ಯಕ್ತಿಸಿದ್ದಾರೆ.

ಪೆರ್ರೂಗಿ ಮತ್ತು ಮೊನಾಲಿಸಾಳ ಪ್ರೇಮ ಅಸಾಧಾರಣವಾದುದೆಂಬುದಕ್ಕೆ ಬಲವಾದ ಕಾರಣ ಅದು ಜನ್ಮಾಂತರಗಳಲ್ಲಿ ಮುಂದುವರೆದದ್ದು. ಇಬ್ಬರೂ ಮತ್ತೊಂದು ಜನ್ಮವನ್ನು ಪಡೆದಿದ್ದಾರೆ. ಆದರೆ ಹಿಂದಣ ಜನ್ಮದ ನೆನಪಿರುವುದು ಪೆರ್ರೂಗಿಗೆ ಮಾತ್ರ. ಮೊನಾಲಿಸಾದ ರೂಪದರ್ಶಿ ನಂತರದ ಜನ್ಮದಲ್ಲಿ ಮೆಟಿಲ್ಡಾ ಆಗಿ ಹುಟ್ಟಿ ಅನಿರೀಕ್ಷಿತವಾಗಿ ಪೆರ್ರೂಗಿಗೆ ಸಿಕ್ಕರೂ ಪೆರ್ರೂಗಿಯ ಮಾತನ್ನು ಅವಳು ಸಾಯುವವರೆಗೂ ನಂಬುವುದೇ ಇಲ್ಲ. ಜಗತ್ತಿನ ಲಕ್ಷೋಪಲಕ್ಷ ಆಕಸ್ಮಿಕಗಳಲ್ಲಿ ತನ್ನ ಮತ್ತು ಮೊನಾಲಿಸಾ ಚಿತ್ರದ ರೂಪ ಒಂದೇ ಆಗಿರುವುದೊ ಕೂಡ ಒಂದು ಆಕಸ್ಮಿಕ ಎನ್ನುವ ಅವಳು ಪುನರ್ಜನ್ಮದಂತಹ ಅನುಭವಾತೀತ ಸತ್ಯವನ್ನು ಸತ್ಯವೆಂದು ಪರಿಗಣಿಸುವುದೇ ಇಲ್ಲ. ಪೆರ್ರೂಗಿಯ ಮಾತಿನ ಹಿನ್ನಲೆಯಿಂದ ಕಥೆ ಹೆಣೆಯಲ್ಪಟ್ಟಿದೆ.

ಪೆರ್ರೂಗಿ ಮೊನಾಲಿಸಾ ತೈಲಚಿತ್ರವನ್ನು ನೋಡುವವರೆಗೂ ಅವನ ಪೂರ್ವ ಜನ್ಮದ ಸುಳಿವು ಕೂಡ ಇರಲಿಲ್ಲ. ಆಕಸ್ಮಿಕವಾಗಿಯೇ ಲೂವ್ರ ಕಲಾಶಾಲೆಗೆ ಭೇಟಿ ನೀಡಿದ ಪೆರ್ರೂಗಿ ಮೊನಾಲಿಸಾಚಿತ್ರವನ್ನು ನೋಡುವ ಉದ್ದೇಶವನ್ನಂತು ಖಂಡಿತವಾಗಿಯೂ ಹೊಂದಿರಲಿಲ್ಲ. ಮೊನಾಲಿಸಾ ಚಿತ್ರದ ಮುಂದೆ ನಿಂತ ಪ್ರವಾಸಿ–ಹುಡುಗಿಯೊಬ್ಬಳು ಬೈನಾಕ್ಯೂಲರ್‌ನ ಮೂಲಕ ಪುನಃ ಪುನಃ ತದೇಕ ಚಿತ್ತದಿಂದ ಚಿತ್ರವನ್ನು ವೀಕ್ಷಿಸುತ್ತಿದ್ದ ಪರಿ ಪೆರ್ರೂಗಿಗೆ ಆ ಚಿತ್ರವಾದರೂ ಯಾವುದು? ಎನ್ನುವ ಕುತೂಹಲವನ್ನು ಮೊದಲಬಾರಿಗೆ ಉಂಟುಮಾಡಿತು, ಅದಕ್ಕು ಮುಂಚೆ ಚಿತ್ರದ ಕಲಾತೀತ ಮುಗುಳ್ನಗೆಯ ಮಾದಕತೆಯ ಬಗ್ಗೆ ಕೇಳಿದ್ದನೇ ವಿನಃ ಅಂತಹ ವಿಸ್ಮಯವಾವುದೂ ಅವನನ್ನು ಕಾಡಿರಲಲ್ಲ. ಚಿತ್ರವನ್ನು ನೋಡಿದಾಗಲೂ ಅವನನ್ನು ವಿಸ್ಮಯಗೊಳಿಸಿದ್ದ ಮೊನಾಲಿಸಾಳ ಮೋಹಕನಗೆಯಲ್ಲ, ಬದಲಾಗಿ ಅವನ ಮನಸ್ಸು ಮುಖದ ಪರಿಚಯವನ್ನು ಹುಡುಕಿ ತೆಗೆಯಲು ಪರದಾಡಿತ್ತು. ಕ್ರಮೇಣ ಪೆರ್ರೂಗಿಯ್ಲ ಮನಸ್ಸು ಅವಳ ಮತ್ತು ತನ್ನ ಸಂಬಂಧದ ಬಗೆಗಿನ ಸತ್ಯದ ನಿರಂತರ ಹುಡುಕಾಟದಲ್ಲಿ ತೊಡಗಿತು, ಇದರ ಫಲವಾಗಿ ಪೆರ್ರೂಗಿಯ ಕನಸಿನಲ್ಲಿ ಅರೆನಿದ್ದೆಯಲ್ಲಿ ಸ್ವಪ್ನವಾಗಿ ಅವಳೊಡನೆ ತಾನು ಜೀವಿಸಿದ್ದ ಘಟನೆಗಳು ಸುಳಿದು ಅವಳ ಮತ್ತು ಅವನ ನಡುವಿನ ಸಂಬಂಧದ ಸತ್ಯವನ್ನು ಇನ್ನೂ ನಿಖರಗೊಳಿಸಿದವು.

ಆ ಮೂಲಕ ೪೦೦ ವರ್ಷಗಳ ಹಿಂದಿನ ಪ್ರೇಮಕಥೆ ಬಿಚ್ಚಿಕೊಳ್ಳುತ್ತಾ ಹೋಯಿತು. ಪರಿಣಾಮವಾಗಿ ಪೆರ್ರೂಗಿ ಮತ್ತು ಚಿತ್ರದ ಸಂಬಂಧ ತೀರಾ ನಿಕಟವಾಯಿತು. ಪದೇ-ಪದೇ ಕಲಾಶಾಲೆಗೆ ಬರುತ್ತಿದ್ದ ಪೆರ್ರೂಗಿ ಗಂಟೆಗಟ್ಟಲೆ ಚಿತ್ರದ ಮುಂದೆ ಮೈಮರೆತು ನಿಲ್ಲುವಷ್ಟರ ಮಟ್ಟಿಗೆ ಚಿತ್ರ ಅವನಲ್ಲಿ ಪ್ರಭಾವವನ್ನು ಬೀರುತ್ತು, ಪ್ರಖ್ಯಾತಿಯಾದ ಮೊನಾಲಿಸಾ ಚಿತ್ರಕ್ಕೆ ರೂಪದರ್ಶಿಯಾಗಿದ್ದ ಸ್ತ್ರೀಯೊಡನೆ ಕೇವಲ ಪರಿಚಯದ ಸಂಬಂಧ ಮಾತ್ರವಿರದೇ ಅದು ಸಂಸಾರಸಂಬಂಧದಂತಹ ತೀರಾ ನಿಕಟವಾದ ಸಂಬಂಧವಿತ್ತೆಂಬುದನ್ನು ಅವನ ಮಾತುಗಳು ಮತ್ತೆ-ಮತ್ತೆ ಒತ್ತಿ ಹೇಳಿದವು.

"ಬಾಹ್ಯ ಜಗತ್ತಿಗೆ ಬರೀ ಅವಳ ಮುಗಳ್ನಗೆಯ ಪರಿಚಯವಿತ್ತು. ಆದರೆ ನನಗೋವೇದನೆ, ಉದ್ರೇಕ, ಕೋಪ ಮುಂತಾದ ವಿವಿಧ ಭಾವಗಳಿಂದ, ವಿವಿಧ ಸಮಯಗಳಲ್ಲಿ ಉತ್ತೇಜಿತವಾದ ಆ ಮುಖದ ನಿಕಟವಾದ ಸಜೀವವಾದ ಪರಿಚಯವಿತ್ತು."

ಪೆರ್ರೂಗಿಂಯ ಇಂತಹ ಗತಕಾಲದ ನೆನಪು ದಿನಕಳೆದಂತೆ ಅವನು ಮನೋರೋಗಿಯಾಗುವಷ್ಟರಮಟ್ಟಿಗೆ ಆಳವಾಗಿ ನೆಲೆಯಾಗಿತ್ತು. ಮೊನಾಲಿಸಾ ಚಿತ್ರವಾಗಿದ್ದವಳು ಸಶರೀರವಾಗಿ ಸಿಗದ ಹೊರತು ತನ್ನಬದುಕೇ ಶೂನ್ಯ ಎಂದು ತಿಳಿದು ಅವಳಿಗಾಗಿ ಹರಸುತ್ತಾ ಹಂಬಲಿಸುತ್ತಿರುವಾಗ ಮೆಟಿಲ್ಡಾ ಆಕಸ್ಮಿಕವೆಂಬಂತೆ ಪೆರ್ರೂಗಿಯ ಬಾಳಿನಲ್ಲಿ ಪ್ರವೇಶ ಪಡೆಯುವಳು.

ಪುರುಷನೊಬ್ಬನ ಬಣ್ಣದ ಮಾತುಗಳಿಗೆ ಬಲಿಯಾಗಿ ವೇಶ್ಯವಾಟಿಕೆಯ ಪ್ರಪಾತಕ್ಕೆ ಬೀಳಲು ತಯಾರಾದ ಅಸಹಾಯಕ ಹೆಣ್ಣಾಗಿ ಪೆರ್ರೂಗಿಗೆ ಮೊದಲು ಮೆಟಿಲ್ಡಾ ಕಾಣಸಿಗುವಳು. ಆ ವ್ಯಕ್ತಿಯ ಮುಖದಲ್ಲಿನ ಎದ್ದುಕಾಣುವ ಕ್ರೌರ್ಯ ಮತ್ತು ಆ ಹೆಣ್ಣಿನ ಮುಖದಲ್ಲಿನ ಗಾಢವಾದ ನೋವಿನ ಅಳಲು ಬಾಹ್ಯ ಜಗತ್ತಿಗೆ ಪ್ರಧಾನವಾಗಿ ಕಾಣಿಸುತ್ತಿರುವಾಗ ಪೆರ್ರೂಗಿಗೆ ಮೆಟಿಲ್ಡಾಳ ಮುಖ ಬೇರೆಯಾಗಿಯೇ ಗೋಚರಿಸಿತ್ತು. ಒಂದು ಕ್ಷಣ ಅವನ ಕಣ್ಣುಗಳನ್ನು-ಅವನೇ ನಂಬಲಿಲ್ಲ. ಕೊನೆಗೂ ಮೊನಾಲಿಸಾ ಈ ಕೈಗೆ ಸಿಕ್ಕಿದಳು ಎಂಬ ಸಂತೋಷಕರ ಸಮಾಧಾನದ ನಡುವೆ ಆ ಯುವತಿಯ ಒಂದೇ ಒಂದು ನಗುವಿಗಾಗಿ ಪೆರ್ರೂಗಿಯ ಮನಸ್ಸು ಹಾತೊರೆಯುತ್ತಿತ್ತು. ಹಿಂದಿನ ಜನ್ಮದ ಅವರಿಬ್ಬರ ನಡುವಿನ ಸಂಬಂಧವನ್ನು ಸಾಬೀತುಪಡಿಸಲೋ ಏನೋ ಎಂಬಂತೆ ಹುಡುಗಿ ಅನಿರೀಕ್ಷಿತವಾಗಿ ಪೆರ್ರೂಗಿಯನ್ನು ನೋಡಿ ಪರಿಚಯದ ನಗೆಯನ್ನು ನಕ್ಕ ದೃಶ್ಯವಂತೂ ಪೆರ್ರೂಗಿ ಮತ್ತು ಮೆಟಿಲ್ಡಾಳ ನಡುವಿನ ಪ್ರೇಮ ಸಂಬಂಧಕ್ಕೆ ಉತ್ತಮ ಸಾಕ್ಷಿಯಂತೆ ಕಂಡುಬರುತ್ತದೆ.

ಮೆಟಿಲ್ಡಾ ಚಿತ್ರಕ್ಕೆ ಜೀವತುಂಬುವುದಕ್ಕಾಗಿಯೇ ತನಗೋಸ್ಕರ ಬಂದಳೆಂಬ ಸಮಾಧಾನ ಪೆರ್ರೂಗಿಯ ಮನಸ್ಸಿನಲ್ಲಿ ಅವಳ ಮತ್ತು ಅವನ ಹಿಂದಿನ ಜನ್ಮದ ಪ್ರೇಮಕತೆಯನ್ನು ಮತ್ತಷ್ಟು ನಿಖರಗೊಳಿಸುತ್ತು. ಅದನ್ನು ಸಾಬೀತುಮಾಡಲು ಮೆಟಿಲ್ಡಾಳ ಮುಂದೆ ನಡೆಸಿದ ಪ್ರಯತ್ನವೆಲ್ಲವೂ ವಿಫಲವಾಯಿತು. ಅವನ ಮಾತುಗಳಿಗೆ ಸಹಜವಾಗಿಯೇ ವರ್ತಿಸುತ್ತಿದ್ದ ಮೆಟಿಲ್ಡಾ ಹೋಲಿಕೆ ತೀರಾ ಆಕಸ್ಮಿಕವೆಂದು ಜರೆದಳಲ್ಲದೆ ಮೊನಾಲಿಸಾ ಚಿತ್ರವನ್ನು ನೋಡಬೇಕೆಂಬ ಕುತೂಹಲ ಕೊಂಚವೂ ಅವಳಿಗೆ ಬರಲಿಲ್ಲ.

ಮೆಟಿಲ್ಡಾ ಮತ್ತು ಮೊನಾಲಿಸಾ ಚಿತ್ರದ ಮುಖದ ಹೋಲಿಕೆ ಎಷ್ಟಿತ್ತೆಂದರೆ ಬಲವಂತದಿಂದ ಚಿತ್ರದ ಮುಂದೆ ಮೆಟಿಲ್ಡಾಳನ್ನು ಪೆರ್ರೂಗಿತಂದುನಿಲ್ಲಿಸಿದಾಗ ಅಲ್ಲಿ ನೆರೆದಿದ್ದ ವೀಕ್ಷಕರು ಅವರಿಬ್ಬರ ನಡುವಿದ್ದ ಹೋಲಿಕೆಯನ್ನು ಕಂಡು ವಿಸ್ಮಿತರಾದರೇ ವಿನಃ ಮೆಟಿಲ್ಡಾಳ ಮುಖ ಮಾತ್ರ ಆ ಆಗಂತುಕನ ನೆನಪಿನಿಂದ ಅವನು ಮಾಡಿದ ಗಾಯದಂತೆಯೇ ನೋವಿನಿಂದ ತುಂಬಿತ್ತು. ಕಾಲಕಳೆದಂತೆ ಪೆರ್ರೂಗಿ ಮತ್ತು ಮಟಿಲ್ಡಾಳ ಸಂಬಂಧ ಸ್ನೇಹದ ಹಂತವನ್ನು ಮೀರಿ ಪ್ರೇಮಕ್ಕೆ ಬಂದಾಗ ಪೆರ್ರೂಗಿಯ ಮನಸ್ಸು ಸುಂದರವಾದ ಬಾಂದಳದಲ್ಲಿ ಸ್ವತಂತ್ರವಾಗಿ ವಿಹರಿಸುತ್ತಿತ್ತು. ಆದರೆ ಆ ವಿಹಾರ ಅಷ್ಟುಬೇಗ ಅಪಘಾತಕ್ಕೊಳಗಾಗುವುದು ಮಾತ್ರ ಕಥೆಯ ಮುಖ್ಯ ತಿರುವಿಗೆ ಕಾರಣವಾಗುತ್ತದೆ. ಸಜೀವ ಮೆಟಿಲ್ಡಾ ನಿರ್ಜೀವ ಮೊನಾಲಿಸಾ ಚಿತ್ರವನ್ನು ಪೆರ್ರೂಗಿಯಿಂದ ಕೆಲಕಾಲ ದೂರ ಮಾಡಿತ್ತಾದರೂ ಅವಳ ಸಾವು ಅನಿವಾರ್ಯವಾಗಿ ಮತ್ತೆ ಪೆರ್ರೂಗಿ ಮೊನಾಲಿಸಾಳ ಚಿತ್ರದ ಹಿಂದೆ ಹೋಗುವಂತೆ ಮಾಡಿತೆನ್ನಬಹುದು.

ಮೆಟಿಲ್ಡಾಳನ್ನು ಕಳೆದುಕೊಂಡ ಪೆರ್ರೂಗಿಗೆ ಚಿತ್ರ ಮತ್ತಷ್ಟು ಆಪ್ತವಾಯಿತು. ಪರಿಣಾಮವಾಗಿ ಅವನ ಬುದ್ಧಿಗೆಟ್ಟ ಅಲೆದಾಟ ಮತ್ತೆ ಪ್ರಾರಂಭವಾಗಿ ಸಿಕ್ಕ ಸಮಯವನ್ನೆಲ್ಲಾ ಮೊನಾಲಿಸಾಳೊಂದಿಗೆ ಕಳೆಯುವುದಕ್ಕೆ ಸೀಮಿತವಾಯಿತು. ಇವೆಲ್ಲದರ ಕೊನೆಯ ಹಂತ ಪೆರ್ರೂಗಿಯನ್ನು ತೈಲಚಿತ್ರದ ಸಾನಿಧ್ಯವಿಲ್ಲದೆ ಬದುಕುವುದು ಅಸಾಧ್ಯವೆನ್ನುವಷ್ಟರ ಮಟ್ಟಿಗೆ ತಂದುನಿಲ್ಲಿಸಿತ್ತು. ಅಂತಹ ಅಸಾಧ್ಯತೆಯ ಕಾರಣದಿಂದಾಗಿ ಆಗಸ್ಟ್ ೨೨,೧೯೧೧ರಂದು ಲೂವ್ರದಿಂದ ಸುಪ್ರಸಿದ್ಧವಾದ ತೈಲಚಿತ್ರ 'ಮೊನಾಲಿಸಾ' ಕಳುವಾಗಿತ್ತು. ಇಂತಹ ಜಗತ್ಪ್ರಸಿದ್ಧ ಚಿತ್ರವೊಂದರ ಕಳುವಿಗೆ ಕಾರಣವಾದದ್ದಾದರೂ ಏನು? ೪೦೦ ವರ್ಷಗಳ ಹಿಂದೆ ಇತ್ತೆಂದು ಹೇಳಲಾಗುವ ಪುನರ್ಜನ್ಮದ ನೆನಪಿನ ಒಂದು ಪ್ರೇಮ. ಕಾಲಾತೀತವಾದ ಇಂತಹ ಸಂಬಂಧವೊಂದನ್ನು ಸಾಬೀತುಮಾಡಲು ಪೆರ್ರೂಗಿಯ ಮಾತುಗಳನ್ನು ಬಿಟ್ಟು ಬೇರಾವ ಸಾಕ್ಷಿಗಳೂ ಇಲ್ಲ. ಅದನ್ನು ಅವನ ಮಾತುಗಳೇ ವ್ಯಕ್ತಿಪಡಿಸುತ್ತವೆ.

“ಗಡಿಯಾರದ ಮುಳ್ಳುಗಳಂತೆ ಸಮಯವನ್ನು ಹಿಂದೆ ಸರಿಸಲು ಸಾಧ್ಯವಿದ್ದರೆ? ಗತಿಸಿಹೋಗಿದ್ದ ಸಮಯದ ಜಾಡು ಹಿಡಿದು ನಾಲ್ಕುನೂರು ವರ್ಷಗಳ ಹಿಂದೆ ಹೋಗಲು ಬರುವಂತಿದ್ದರೆ? ಎಷ್ಟೆಲ್ಲ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರದೊರೆಯಬಹುದಿತ್ತು.”

ಅವನ ಇಂತಹ ಮಾತುಗಳು ಕಾಲವನ್ನು ಮೀರಿದ ಸತ್ಯವನ್ನು ಪ್ರಕಟಿಸುವಂತೆ ಬಾಸವಾಗುತ್ತವೆ. ಪೆರೂಗ್ಗಿ ಇಂತಹ ಕಳ್ಳತನದ ಪ್ರಯಾಸಕ್ಕೆ ಕೈಹಾಕಿದ್ದು ತನ್ನ ಪ್ರೇಮದ ಬಗೆಗಿನ ಉತ್ಕಟವಾದ ಭಾವದಲ್ಲಿ, ಮನುಷ್ಯ ಸಂಬಂಧಗಳು ಒಂದೇ ಜನ್ಮಕ್ಕೆ ಸೀಮಿತವಾಗದೇ ಮತ್ತೊಂದು ಜನ್ಮಕ್ಕೂ ಹರಿಯುವುದು ಎಂಬುದರ ಸತ್ಯಾಸತ್ಯತೆಗಳು ಏನೇ ಆದರೂ ಪೆರೂಗ್ಗಿಯ ಕಳ್ಳತನದ ಆರೋಪ ಅವನನ್ನು ಕೋರ್ಟ್‌ನಲ್ಲಿ ಅಪರಾಧಿಯನ್ನಾಗಿಸುತ್ತದೆ. ಹಾಡುಹಗಲಲ್ಲೇ ೧೫೦ ಜನರ ಭದ್ರತಾಪಡೆಯ ಬಿಗಿರಕ್ಷಣೆಯಿದ್ದಾಗಲೇ ಮೊನಾಲಿಸಾಳ ಚಿತ್ರವನ್ನು ಅಪಹರಿಸಿದ್ದು ಅವರಿಬ್ಬರ ನಡುವಿನ ಪ್ರೇಮದ ಗಾಢತೆಗಾಗಿ ಮುಂದಿನ ಪರಿಣಾಮವನ್ನು ಲೆಕ್ಕಿಸದ ಪೆರೂಗ್ಗಿಯ ಮನಸ್ಥಿತಿ, ಇಂತಹ ದುಸ್ಸಾಹಸಕ್ಕೆ ಪ್ರೇರೇಪಿಸಿತು ಎನ್ನಬಹುದು,

ಪೆರೂಗ್ಗಿ ಕೋರ್ಟಿನಲ್ಲಿ ನ್ಯಾಯಾಲಯದ ಮುಂದೆ ತನ್ನ ಅಪರಾಧಕ್ಕಾಗಿ ನೀಡುವ ಪ್ರೇಮಸಮರ್ಥನೆಯಂತೂ ನ್ಯಾಯಾಧೀಶರನ್ನೂ ಸೇರಿಸಿದಂತೆ ಇಡೀ ಕೋರ್ಟನ್ನೇ ದಂಗುಬಡಿಸುತ್ತದೆ. ಅವನ ಸಮರ್ಥನೆ ನ್ಯಾಯಾಲಯ ತನ್ನ ಅಪರಾಧಕ್ಕಾಗಿ ನೀಡುವ ಶಿಕ್ಷಯಿಂದ ತಪ್ಪಿಸಿಕೊಳ್ಳುವ ಸಲುವಾಗಿಯೋ ಅಥವಾ ಅದು ನಿಜವಾದ ಪ್ರೇಮವೋ ಎಂಬುದರ ಸತ್ಯ ಮಾತ್ರ ಪೆರೂಗ್ಗಿಯನ್ನೂರೂಗಿ ಮತ್ತಾರಿಗೂ ತಿಳಿಯದ ಸತ್ಯವಾಗುತ್ತದೆ. ಒಂದುವೇಳೆ ಅವನ ಮಾತು, ಅವನು ಆ ಘಟನೆಯ ಸುತ್ತ ಕುಟ್ಟುವ ಕಥೆ ನಿಜವಾದರೆ ಅದರಂತಹ ಪ್ರೇಮಚಿತ್ರಣ ಮತ್ತೊಂದಿಲ್ಲ, ಅದೊಂದು ಅಸಾಧಾರಣವಾದ ಪ್ರೇಮ, ಒಂದು ಜನ್ಮದಲ್ಲಿ ಬೆಸೆದುಕೊಳ್ಳುವ ಸಂಬಂಧಗಳು ಸಾವಿನಿಂದ ಬೇರ್ಪಟ್ಟು ಮತ್ತೊಂದು ಜನ್ಮದಲ್ಲಿ ಮತ್ತೆ ಬೆಸೆದುಕೊಳ್ಳುವ ಪ್ರಕ್ರಿಯೆಯಂತೂ ಪ್ರೇಮದ ಬಗೆಗೆ ರೋಮಾಂಚನಕಾರಿಯಾದ ಕಲ್ಪನೆಗಳನ್ನು ಕಣ್ಣಮುಂದೆ ತರಿಸುತ್ತದೆ. ಒಂದು ವೇಳೆ ಪೆರೂಗ್ಗಿಯ ಮಾತು ಸುಳ್ಳಾದರೂ, ಅಪರಾಧದ ಭಯಕ್ಕಾಗಿ ಕಟ್ಟುವ ಕಟ್ಟುಕತೆಯೇ ಆದರೂ ಅವನೊಳಗಿನ ಅದ್ಭುತವಾದ ಕಾಲ್ಪನಿಕತೆಯನ್ನು ಮೆಚ್ಚಲೇಬೇಕು. ಜೊತೆಗೆ ಒಂದು ಕಳ್ಳತನದ ಅಪರಾಧದ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಅವನು ಬಳಸಿದ ಉಪಾಯದ ತಂತ್ರದ ಜಾಣ್ಮೆಗಾದರೂ ಪೆರೂಗ್ಗಿಗೆ ತಲೆ ಬಾಗಲೇಬೇಕು. ಅಂತಹ ಅದ್ಭುತ ಮಾತುಗಳಿಂದ ಮುರುಳುಮಾಡುವ ಮಾತಿನ ಜಾಣ್ಮೆ ಪೆರೂಗ್ಗಿಯದು.

“ ಅವ್ಯಾಹತವಾಗಿ ಹರಿಯುತ್ತಿರುವ ಈ ಕಾಲಪ್ರವಾಹದಲ್ಲಿ ಹುಟ್ಟು-ಸಾಯುವ ನಮ್ಮ ಬದುಕುಗಳಿಗೆ ಒಂದು ನಿರ್ಧಿಷ್ಟ ಪರಿಮಿತಿ ಇದೆಯೆ? ಬರೀ ಒಮ್ಮೆ ಹುಟ್ಟಿಬಂದ ಜೀವ ಮತ್ತೊಮ್ಮೆ ಹುಟ್ಟಲಾರದೆ? ಪುನರ್ಜನ್ಮ ಎಷ್ಟೇ ಅಸಂಬದವೆನಿಸಿದರೂ ನನ್ನ ಜೀವನದಲ್ಲಿ ಅದರಲ್ಲಿ ಪೂರ್ತಿನಂಬಿಕೆ ಹುಟ್ಟುವಂತಹ ಘಟನೆಗಳು ಜರುಗಿದವು. ಸುಮಾರು ೪೦೦ ವರ್ಷಗಳ ಹಿಂದೆ ನಾನು ಮೋನಾಲಿಸಾಳ ಜತೆಗೆ ಸಂಸಾರ ಮಾಡಿದ್ದೇನೆಂಬುದನ್ನು ಯಾರು ನಂಬುತ್ತಾರೆ? ನನ್ನ ಹೇಳಿಕೆಯನ್ನು ರುಜುವಾತುಪಡಿಸಲು ಸಾಕ್ಷಿಯಾಗಿ ನಿಮ್ಮಿಬ್ಬರ ಪರಿಚಯವಿರುವ ಇನ್ನೊಬ್ಬರನ್ನು, ನಾಲ್ಕುನೂರು ವರ್ಷಗಳ ನಂತರ ಎಲ್ಲಿಂದ ಕರೆ ತರಲಿ? ಮೊನಾಲಿಸಾಳೊ ಈಗ ಮೆಟಿಲ್ಡಾ ಆಗಿ ಹುಟ್ಟಿ ಮತ್ತೆ ಕೆಲವು ದಿನ ನನ್ನೊಡನೆ ಕೂಡಿ ಇದ್ದು ಹಠಾತ್ತಾಗಿ ಬಿಟ್ಟು ಹೋದಳು ಎಂದು ನಾನು ಹೇಳಿದರೆ ಯಾರು ನಂಬುತ್ತಾರೆ? ನನ್ನ ಈ ನಂಬಿಕೆಯಲ್ಲಿ ವಿಶ್ವಾಸವಿದ್ದರೆ ಮಾತ್ರ ಹಾಡು-ಹಗಲೇ ಲೂಟಿದಂಥ ಸುಭದ್ರವಾದ ಸ್ಥಳದಿಂದ ನಾನು ಮೋನಾಲಿಸಾಳನ್ನು ಕದ್ದೊಯ್ಯುವ ಹತಾಶ ಸಾಹಸವನ್ನು ಯಾಕೆ ಮಾಡಿದೆ ಎನ್ನುವದು ನಿಮಗರ್ಥವಾಗಬಹುದು”

ಪೆರ್ರೂಗಿಯ ಇಂತಹ ಪ್ರತಿಯೊಂದು ಮಾತುಗಳೂ ಸಹ ಅವನ ಮಾತಿನ ಮೇಲೆ ಅರಿವಲ್ಲದಂತೆಯೇ ವಿಶ್ವಾಸವನ್ನು ತುಂಬುತ್ತವೆ. ಅಂತಹ ವಿಶ್ವಾಸವೇ ಪುನರ್ಜನ್ಮದಂತಹ ವಿಷಯವನ್ನು ನಂಬಿ ಕೋರ್ಟನೀಡಿದ ಆದೇಶ, ಅವನನ್ನು ಶಿಕ್ಷೆಯಿಂದ ತಪ್ಪಿಸಲು ಸಹಾಯಕವಾಯಿತು. ಪುನರ್ಜನ್ಮದ ನೆನಪು ಪೆರ್ರೂಗಿಗೆ ಬಂದಂತೆ ಮೆಟಿಲ್ಡಾಳಿಗೆ ಏಕೆ ಬರಲಿಲ್ಲ? ಎಂಬ ಪ್ರಶ್ನೆ ಕಥೆಯಲ್ಲಿ ಉತ್ತರಸಿಗದೇ ಹಾಗೆಯೇ ಉಳಿಯುತ್ತದೆ. ಚಿತ್ರಪಟವನ್ನು ನೋಡಿದ ತಕ್ಷಣ ಪೆರ್ರೂಗಿಯ ನೆನಪಿಗೆ ಬರುವ ತನ್ನ ಹಿಂದಿನ ಜನ್ಮ ಮೆಟಿಲ್ಡಾಳಿಗೆ ಮಾತ್ರ, ತಾನು ಪೆರ್ರೂಗಿಯ ಜೊತೆಗೆ ದಿನಗಳನ್ನು ಕಳೆದರೂ, ಅವನ ಕಥೆಯನ್ನು ಕೇಳಿದರೂ ಬರುವುದೇ ಇಲ್ಲ. ನೆನಪಿರಲಿ, ಅಂತಹ ಪುನರ್ಜನ್ಮದ ಕಥೆಯನ್ನು ಸಂಪೂರ್ಣವಾಗಿ ತಿರಸ್ಕರಿಸುವ ಮೆಟಿಲ್ಡಾ ಇಂತಹ ರೂಪಸಾದೃಶ್ಯ ಕೇವಲ ಒಂದು ಆಕಸ್ಮಿಕವೆಂದು ಮೂದಲಿಸುತ್ತಾಳೆ.

ಮನುಷ್ಯ ಸಂಬಂಧಗಳು ತನ್ನ ಜೀವಿತ ಅವಧಿಗಿಂತ ನಂತರದ ಘಟ್ಟದಲ್ಲಿ ಮುಂದುವರೆಯುತ್ತವೆ ಎಂಬುದನ್ನು ಪೆರ್ರೂಗಿಯ ಮಾತುಗಳು ಹೇಳುವುದನ್ನು ಒಪ್ಪಿದರೆ ಮಾತ್ರ ಪೆರ್ರೂಗಿ ಮತ್ತು ಮೆಟಿಲ್ಡಾಳ ಸಂಬಂಧಗಳ ಸ್ವರೂಪ ಒಂದು ಅದ್ಭುತವಾದ ಸಂಬಂಧಗಳ ಸ್ವರೂಪವಾಗುತ್ತದೆ. ಪುನರ್ಜನ್ಮದಂತಹ ಅನುಭವಕ್ಕೆ ಬಾರದ ಸತ್ಯವನ್ನು ತಿರಸ್ಕರಿಸುವ

ಮನಸ್ಥಿತಿಗಳಿಗೆ ಮೊನಾಲಿಸಾ ಕತೆ–ಕೇವಲ ಕಾಲ್ಪನಿಕ ಕತೆಯಂತೆ ಗೋಚರವಾಗುತ್ತದೆ, ಆದರೆ ಒಂದು ಕಳ್ಳತನದ ಘಟನೆ ಅದಕ್ಕೆ ಕಾರಣವಾದ ಕಳ್ಳನ ಮೂಲಕವೇ ಮೊನಾಲಿಸಾಳಂತಹ ಅತ್ಯದ್ಭುತವಾದ ಬದುಕಿನ ಲೋಕವನ್ನು ಕಟ್ಟಿಕೊಡುವ ಕಾಲ್ಪನಿಕತೆ ಮಾತ್ರ ಎಲ್ಲರೂ ಮೆಚ್ಚುವಂತದ್ದು. ಮೊನಾಲಿಸಾಳ ಚಿತ್ರ ಅವಳಲ್ಲಿನ ಮನಮೋಹಕ ನಗುವಿನ ಹಿಂದಿನ ಬದುಕನ್ನು ಬಯಲುಮಾಡಿದ್ದು ಪೆರೂಗ್ಗಿಯ ಕಥೆಯೇ. ನಗುವಿನ ಹಿಂದಿನ ಅವಳ ಪ್ರೇಮ, ಸುಖ, ದುಃಖ ಎಲ್ಲವನ್ನೂ ಆ ಚಿತ್ರಕ್ಕೆ ಪೂರಕವಾಗಿ ಚಿತ್ರಿಸಿಕೊಟ್ಟ ಹಿರಿಮೆ ನಿಸ್ಸಂಶಯವಾಗಿ ಪೆರೂಗ್ಗಿಗೆ ಸಲ್ಲುತ್ತದೆ.

ಮಾನಾಲಿಸಾ ಕಥೆಯ ಮತ್ತೊಂದು ಪ್ರಮುಖ ಅಂಶ ಅದು ವಾಸ್ತವತೆಗೆ ಕೊಟ್ಟ ಬಹಳಮುಖ್ಯ ಉದಾಹರಣೆ, ಮನುಷ್ಯನಿಗೆ ಪ್ರೇಮ–ಪ್ರೀತಿಗಳಿಗಿಂತ ಅವನ ಮೂಲಭೂತ ಅವಶ್ಯಕತೆಗಳು ಮುಖ್ಯವಾಗುತ್ತವೆ ಎಂಬುದು, ಅದನ್ನು ಮೊನಾಲಿಸಾಳ ಕಥೆ ಅದ್ಭುತವಾಗಿ ವಿವರಿಸಿದೆ. ಪೆರೂಗ್ಗಿ ಮತ್ತು ಮೊನಾಲಿಸಾಳ ಪ್ರೇಮ ಅಸಾಧಾರಣವಾದ ಪ್ರೇಮವೆಂಬುದು ತಿಳಿಯುವುದು ಅದರ ಕಳುವಿನ ಘಟನೆಯಿಂದ. ಅದಿಲ್ಲದ ಬದುಕನ್ನು ಬದುಕಲಾರದ ಪೆರೂಗ್ಗಿ ಅದರ ಸಾನಿಧ್ಯಕ್ಕಾಗಿ ಕ್ಷಣಕ್ಷಣವೂ ಹಾತೊರೆಯುತ್ತಾನೆ. ಕೊನೆಗೆ ತನ್ನ ಪ್ರಾಣವನ್ನೇ ಪಣವಾಗಿಟ್ಟು ಚಿತ್ರವನ್ನೇ ಅಪಹರಿಸಿ ತನ್ನದಾಗಿಸಿಕೊಳ್ಳುತ್ತಾನೆ. ಜಗತ್ಪ್ರಸಿದ್ಧ ಚಿತ್ರವೊಂದು ಕಳುವಾದ ಘಟನೆ ಇಡೀ ಪ್ಯಾರಿಸ್ಸನ್ನೇ ತಲ್ಲಣಗೊಳಿಸಿತು. ಮೊನಾಲಿಸಾಳನ್ನೆತ್ತಿಕೊಂಡು ಊರು–ಊರು ಅಲೆಯುವ ಅಲೆಮಾರಿಯಂತೆ ದಿನಕಳೆದ ಪೆರೂಗ್ಗಿಯ ಹಿಂದೆ ಕಾನೂನು ಬೇಟೆನಾಯಿಗಳಂತೆ ಅಟ್ಟಿಸಿಕೊಂಡು ಬರುತ್ತಿತ್ತು. ಇಂತಹ ಸಮಯದಲ್ಲೂ ಅದನ್ನು ತನ್ನ ಜೊತೆಗಿಟ್ಟುಕೊಂಡ ಪೆರೂಗ್ಗಿಗೆ ಮೊನಾಲಿಸಾಳ ಬಗೆಗೆ ಎಷ್ಟು ಗಾಢ ಪ್ರೇಮವಿತ್ತು ಎಂಬುದನ್ನು ಸಾಬೀತುಮಾಡುತ್ತದೆ.

ಆದರೆ ಅಂತಹ ಗಾಢಪ್ರೇಮ ಪೆರೂಗ್ಗಿಯ ಹಸಿವನ್ನು ಇಂಗಿಸಲಿಲ್ಲ. ಮನುಷ್ಯ ಪ್ರೇಮವಿಲ್ಲದೆ ಬದುಕಬಲ್ಲ ಆದರೆ ಆಹಾರವಿಲ್ಲದೆ ಬದುಕಲಾರ ಎಂಬುದನ್ನು ಈ ದೃಶ್ಯ ನಿರೂಪಿಸುವಂತಿತ್ತು. ಇಡೀ ಜಗತ್ತಿಗೆ ಗೊತ್ತಿದ್ದ ತೈಲಚಿತ್ರವನ್ನು ಮಾರುವುದು ಮೂರ್ಖತನ, ತನ್ನ ವಿನಾಶದ ಗುಂಡಿಯನ್ನು ತಾನೇ ತೋಡಿಕೊಂಡಂತೆ ಎಂಬ ಸತ್ಯ ಪೆರೂಗ್ಗಿಗೆ ಚೆನ್ನಾಗಿ ತಿಳಿದಿತ್ತು. ಆದರೆ ಅವನ ಹಸಿವು ಇವುಗಳೆಲ್ಲವನ್ನು ಮರೆಸಿದ ಪರಿಣಾಮವಾಗಿ ಅವನು ಇಂತಹ ದುಸ್ಸಾಹಸಕ್ಕೆ ಕೈ ಹಾಕಿದ್ದ. ಅದನ್ನು ಕೊಳ್ಳಲು ಬಂದ ವ್ಯಾಪಾರಿಗಳ ಕೈಗೆ ಅವಳನ್ನೊಪ್ಪಿಸುವಾಗ ಅವನುಲ್ಲುಂಟಾದ ಭಾವಗಳು ಅವನ ಗಾಢ ಪ್ರೀತಿಯನ್ನು ಮತ್ತೆ ಮತ್ತೆ ಸಾರಿ ಹೇಳುವಂತಿದ್ದವು.

"ಹೋಟೆಲ್ಲಿಗೆ ಬಂದು ಕಾಗದದಲ್ಲಿ ಸುತ್ತಟ್ಟಿದ್ದ ಆ ಚಿತ್ರವನ್ನು ಅವರಿಬ್ಬರೆದುರಿನಲ್ಲಿಯೇ ಬಿಚ್ಚಿದೆ. ಮೊನಾಲಿಸಾಳ ಮುಗುಳ್ನಗೆ ನೋಡಿ ನನಗೆ ಕಣ್ಣೀರು ಬಂತು. ಹಾಗೆ ನೋಡಿದರೆ ಮೋನಾಲಿಸಾ ನನಗೆ ಎಂದೂ ಯಾವ ಮಾನಸಿಕ ಸಮಾಧಾನವನ್ನು ಕೊಡದೆ ಎಂದಿನಿಂದಲೂ ಕೇವಲ ನನ್ನ ಸುಷುಪ್ತ ಭಾವನೆಗಳನ್ನು ಮಾತ್ರ ಉದ್ರೇಕಿಸುತ್ತ ಬಂದಿದ್ದಳು. ಆದರೂ ಇದೆಂಥ ವಿಚಿತ್ರವಿರಹ ವೇದನೆ?......"

ಪೆರ‍್ರೂಗಿ ಮೊನಾಲಿಸಾಳ ಮಾರಾಟದೊಂದಿಗೆ ತನ್ನನ್ನೇ ಬಲಿಕೊಟ್ಟುಕೊಂಡಿದ್ದ. ಇದಕ್ಕೆ ಬಲವಾದ ಕಾರಣ ಅವನ ಹಸಿವು, ಅಜ್ಞಾತಸ್ಥಿತಿಯಲ್ಲಿ ಬದುಕುವವನಿಗೆ ಸಂಪಾದನೆ ಎಲ್ಲಿಂದ ಬರಬೇಕು. ಮೊನಾಲಿಸಾಳ ಮಾದಕ ನಗು ಕಣ್ಣಿಗೆ ಪ್ರೀತಿಯ ಚಿಲುಮೆಯನ್ನು ಚಿಮ್ಮುತ್ತಿತ್ತೇ ವಿನಃ ಪೆರ‍್ರೂಗಿಯ ಹಸಿವಿಗೆ ಅವಳಲ್ಲಿ ಯಾವ ಉತ್ತರವೂ ಇರಲಿಲ್ಲ. ಆ ಹಸಿವಿನ ಪ್ರತಿಯೊಂದು ಕ್ಷಣವೂ ಪೆರ‍್ರೂಗಿಗೆ ಜೀವನದ ಕಟುಸತ್ಯವನ್ನು ಮತ್ತೆ-ಮತ್ತೆ ಸಾಬೀತು ಪಡಿಸುತ್ತಿತ್ತು. ಜಗತ್ತಿನಲ್ಲಿ ಪ್ರೀತಿಯನ್ನು ಮೀರಿದ್ದು ಹಸಿವು ಎಂಬುದನ್ನು ಮೊನಾಲಿಸಾ ಕಥೆ ಒಂದು ಸುಂದರ ಚಿತ್ರದ ಮಾರಾಟದೊಂದಿಗೆ ಸುಂದರವಾಗಿ ಸಮೀಕರಿಸಿದೆ ಎಂದು ಹೇಳಬಹುದು. ಮನುಷ್ಯನ ಬದುಕಿನ ಶ್ರದ್ದೆಯನ್ನು ಕಥೆ ತನ್ನ ಮೂಲಕ ಹೇಳಲುಹೊರಟಿದೆ.

ಪೆರ‍್ರೂಗಿಯ ಬದುಕಿನಲ್ಲಿ ಮರುಕಳಿಸಿದ ಜನ್ಮಾಂತರದ ಪ್ರೇಮಸಂಬಂಧವೊಂದರ ನೆನಪು ಅವನಿಗೆ ನೀಡಿದ್ದಾದರೂ ಏನನ್ನು? ಬರೀ ನೋವು, ದುಃಖಗಳನ್ನೇ, ಚಿತ್ರವನ್ನು ನೋಡಿದ ಕ್ಷಣದಿಂದ ಅವನನ್ನು ಕಾಡಿದ ನೆನಪುಗಳು, ಮೆಟಿಲ್ಡಾಳ ಮೂಲಕ ಒಂದು ಹಂತದಲ್ಲಿ ನೆಮ್ಮದಿಯನ್ನು ತಂದುಕೊಟ್ಟರೂ ಕೆಲವು ದಿನಗಳ ಅವಳ ಸಾಮಿಪ್ಯ ಸಾವಿನೊಂದಿಗೆ ಅಂತ್ಯವಾದದ್ದು ಪೆರ‍್ರೂಗಿಯನ್ನು ಮತ್ತಷ್ಟು ಮಾನಸಿಕವಾಗಿ ಜರ್ಜರಿತಗೊಳಿಸಿತ್ತು. ಆ ಮಾನಸಿಕ ನೋವಿಗೆ ಪರಿಹಾರವೆಂದು ಚಿತ್ರವನ್ನೇ ಅಪಹರಿಸಿದ ಘಟನೆ, ಅವನ ಬದುಕಿನ ಮತ್ತೊಂದು ದುರಂತಕ್ಕೆ ನಾಂದಿಯಾಯಿತೇ ವಿನಃ ಅವನನ್ನು ಎಲ್ಲಿಯೂ ನೆಮ್ಮದಿಯಿಂದಿರಲು ಬಿಡಲಿಲ್ಲ. ಒಬ್ಬ ವ್ಯಕ್ತಿಯ ಬದುಕಿನಲ್ಲಿ ಅನಿರೀಕ್ಷಿತವಾಗಿ ಬಂದಂತಹ ಒಂದು ನೆನಪು ಏನೆಲ್ಲಾ ಬದಲಾವಣೆಗಳನ್ನು ಅವನ ಬದುಕಿನಲ್ಲಿ ತರಬಲ್ಲದು, ಯಾವ-ಯಾವ ತಿರುವುಗಳನ್ನೆಲ್ಲಾ ಅವನ ಬದುಕಿಗೆ ನೀಡಬಲ್ಲದು ಅವನ ಜೀವನವನ್ನೇ ಬುಡಮೇಲಾಗಿ ಮಾಡುವ ಶಕ್ತಿಯನ್ನು ಇಂತಹ ಸಂಬಂಧಗಳ ಒಂದೇ ಒಂದು ಕುರುಹು ಹೊಂದಿರುತ್ತದೆ ಎಂಬುದಕ್ಕೆ ಸಾಕ್ಷಿಯಂತಿದೆ ಮೊನಾಲಿಸಾ ಕಥೆ. ಮೊನಾಲಿಸಾಳ ನೆನಪು ಅವನನ್ನು ತಂದುನಿಲ್ಲಿಸಿದ್ದಾದರೂ ಎಲ್ಲಿಗೆ? ಎಂಬ ಪ್ರಶ್ನೆಯನ್ನು ಪೆರ‍್ರೂಗಿಯ ಮಾತುಗಳು ನಿರೂಪಿಸುತ್ತವೆ.

"ಮೆಟಿಲ್ಡಾ ಹೊರಟು ಹೋಗಿದ್ದಳು, ಈಗ ಮೊನಾಲಿಸಾ ನನ್ನ ಕೈ ಬಿಟ್ಟಳು, ಜೈಲಿನಿಂದ ಮುಕ್ತನಾಗಿದ್ದೆ. ಇನ್ನು ಹೋಗುವುದಾದರೂ ಎಲ್ಲಿಗೆ? ಹೋಗಲು ನನ್ನವರೆನ್ನುವವರು ಈ ಜಗತ್ತಿನಲ್ಲಿ ಯಾರೂ ಇರಲಿಲ್ಲ. ಇದ್ದ ಒಬ್ಬಿಬ್ಬರ ಮನೆಯ ಬಾಗಿಲುಗಳೂ ನಾನು ಜೇಲಿನಿಂದ ಹೊರಬಿದ್ದ ಅಪರಾಧಿಯಾದ್ದರಿಂದ ನನ್ನ ಮೇಲೆ ಮುಚ್ಚಿದವು" ಪೆರ್ರೂಗಿಯ ಜೀವನದ ಕಥೆ ಮನಷ್ಯ ಸಂಬಂಧಗಳ ನಿರಂತರತೆಯನ್ನು ಸಾರಿ ಹೇಳುತ್ತದೆ. ವಿಚಿತ್ರವೆನಿಸಿದರೂ ಸತ್ಯಕ್ಕೆ ಸಮೀಪವೆನಿಸುವ ಅವನ ಮಾತುಗಳಲ್ಲಿನ ನಿಸ್ವಾರ್ಥದ, ಕಪಟತನವಿರದ ಸತ್ಯದ ಒಳಹುಗಳು ಒಂದಕ್ಕೊಂದು ಬೆಸದುಕೊಂಡಿರುವುದನ್ನು ನೋಡಿದರೆ, ಮನುಷ್ಯ ಸಂಬಂಧಗಳು ಅವನ ಊಹೆಗೂ ಮೀರಿದಂತಹ ಹಲವು ಮಜಲುಗಳಲ್ಲಿ ಹರಿಯುವುದು ಸತ್ಯವಿರಬಹುದುದೆಂಬ ಅನುಮಾನ ಪೆರ್ರೂಗಿಯನ್ನು ಜೀವನದ್ದುದ್ದಕ್ಕೂ ಕಾಡಿದ ಪ್ರಶ್ನೆಯಂತೆ ನಮ್ಮನ್ನೂ ಕಾಡುತ್ತದೆ. ಕಥೆಯ ಕೊನೆ ಕೊಡ ಪೆರ್ರೂಗಿಯ ಇಂತಹ ಸಂಬಂಧಗಳ ಪ್ರಶ್ನೆಗಳೊಂದಿಗೇ ಅಂತ್ಯವಾಗುತ್ತದೆ.

" ನೀನು, ನಾನು, ಸೀನ್ ನದಿ, ಪ್ಯಾರೀಸ್, ನಾಃತರ್ದಾಮ್ ಕ್ಯಾಥಿಡ್ರಲ್ ಇವೆಲ್ಲಾ ಜನ್ಮ ಜನ್ಮಾಂತರಕ್ಕೂ ಪರಸ್ಪರ ಅಂಟಿಕೊಂಡಿರುವ ಕೊಂಡಿಗಳೇನೋ, ಯಾರಿಗೆ ಗೊತ್ತು? ಇಷ್ಟಕ್ಕೂ ಅಲ್ಲ ಎಂದಾದರೂ ಹೇಗೆ ಹೇಳಲಿ?"

ಉಪಸಂಹಾರ

ಖಾಸನೀಸರ ಕಥಾ ಜಗತ್ತನ್ನು ವಿಹರಿಸುವ ಪುಟ್ಟಪ್ರಯತ್ನವಾಗಿ ರೂಪುಪಡೆದ ಈ ಪ್ರಬಂಧದಲ್ಲಿ ವಿಹರಿಸಲಾರದ ಅನೇಕ ವಿಷಯಗಳು ಸಾಕಷ್ಟಿವೆ. ಈ ಅಧ್ಯಯನ ಪ್ರಬಂಧದ ವಿಷಯದ ಆಯ್ಕೆಯಿಂದ ಉಂಟಾದ ಸೀಮಿತತೆಯೋ, ಪ್ರಬಂಧದ ಪುಟ ಮತ್ತು ಕಾಲದ ಮಿತಿಯೋ ಒಟ್ಟಾರೆ ಖಾಸನೀಸರ ಸಮಗ್ರ ಪ್ರಕಟಿತ ಕಥೆಗಳ ಒಂದು ಚಿಕ್ಕ ಅಧ್ಯಯನದ ಫಲವಾಗಿ ಪ್ರಬಂಧ ರಚನೆಯಾಗಿದೆಯಷ್ಟೇ ಎನ್ನಬಹುದು ಅವರ ಕಥೆಗಳಲ್ಲಿನ ಹತ್ತಾರುವಿಷಯಗಳನ್ನು ಗೌಣಗೊಳಿಸಿ ಸಂಬಂಧಗಳಿಗೆ ಕೊಟ್ಟ ಪ್ರಾಮುಖ್ಯತೆಯೂ ಕೂಡ ಅಂತಹ ಮಿತಿಗಳಲ್ಲಿ ಒಂದು. ಜೀವನದ ಹಲವು ಮುಖಗಳನ್ನು ಅದ್ಭುತವಾಗಿ ಪರಿಚಯಿಸುವ ಅವರ ಕಥೆಗಳ ಒಟ್ಟಾರೆ ನಿರ್ಮಾಣಕ್ರಿಯ ಇಲ್ಲಿ ನಡೆದಿಲ್ಲವೆಂದೇ ಹೇಳಬಹುದು. ಕೇವಲ ಅಂತಹ ಹಲವು ಮುಖಗಳಲ್ಲಿ ಒಂದು ಮುಖವಾದ ಮನುಷ್ಯ ಸಂಬಂಧಗಳ ಬಗೆಗಿನ ವಸ್ತು ಪ್ರಬಂಧಕ್ಕೆ ವಸ್ತುವಾದ್ದರಿಂದ ಖಾಸನೀಸರ ಕಥೆಗಳಲ್ಲಿನ ಸಂಬಂಧಗಳ ಸ್ವರೂಪದ ಎಳೆಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಈ ಪ್ರಬಂಧ ಮಾಡಿದೆ ಎಂಬ ಪುಟ್ಟ ಸಮಾದಾನದೊಂದಿಗೆ ಈ ಪ್ರಬಂದಕ್ಕೆ ಸಮಾರೂಪವನ್ನು ಬರೆಯುತ್ತಿದ್ದೇನೆ,

ಈ ಪ್ರಬಂಧ ಖಾಸನೀಸರ ಕಥೆಗಳ ಅಧ್ಯಯನಕ್ಕೆ ಮತ್ತು ಖಾಸನೀಸರ ಕಥೆಗಳನ್ನು ಓದುಗ ಮತ್ತು ವಿಮರ್ಶಲೋಕಕ್ಕೆ ಪರಿಚಯಿಸುವ ಮೊದಲ ತೊದಲ ಪ್ರಯತ್ನವಾಗಿ ಮೂಡಿ ಬಂದಿದೆಯೇ ವಿನಃ ಇದೇ ಪ್ರಧಾನವಲ್ಲ. ಆ ಮೂಲಕ ಅವರ ಕಥೆಗಳ ಅಧ್ಯಯನಕ್ಕೆ ಆರಂಭವನ್ನುಂಟುಮಾಡುವ ದಾರಿಯಿಂತಿದೆ ಈ ಪ್ರಬಂಧ ಇಂತಹ ಮಾರ್ಗದಿಂದ ಪ್ರವೇಶ ಪಡೆದು ಮುಂದೆ ಅವರ ಕಥಾಜಗತ್ತಿನ ಹಲವು ಮಾರ್ಗಗಳಲ್ಲಿ ನಮ್ಮ ವಿಮರ್ಶಲೋಕ ಸಾಗಲಿ ಎಂಬುದು ಪ್ರಬಂಧದ ಬಹುಮುಖ್ಯ ಆಶಯ.

ಖಾಸನೀಸರ ಒಂದೊಂದು ಕಥೆಯ ಓದು ಕೂಡ ಒಂದೊಂದು ಅನುಭವ ಲೋಕಕ್ಕೆ ನಮ್ಮನ್ನು ಕೊಂಡೊಯ್ಯುವಲ್ಲಿನ ಸಾಧ್ಯತೆ ಅವರದು ಬರೀ ಕಥಾ ಸಾಹಿತ್ಯವಲ್ಲ, ಅನುಭವ ಕಥಾಸಾಹಿತ್ಯ ಎಂಬ ನಿಲುವನ್ನು ಉಂಟುಮಾಡುತ್ತದೆ. ಇಂತಹ ಅನುಭವವನ್ನು ಕಥೆಯಾಗಿಸಿ ಗೆದ್ದ ಕನ್ನಡದ ಕೆಲವೇ ಕಥೆಗಾರರಲ್ಲಿ ಖಾಸನೀಸರೂ ಪ್ರಮುಖರಲ್ಲೊಬ್ಬರು ಎಂದು ಹೆಮ್ಮೆಯಿಂದ ಹೇಳಬಹುದು.

ಕಥೆಯೆಂಬುದು ಕಥೆಗಾರನಲ್ಲಿ ಸುಪ್ತವಾಗಿರುವ ಅನುಭವ ಪ್ರಪಂಚ ಸೃಷ್ಟಿಸಿದ ಮತ್ತೊಂದು ಪ್ರಪಂಚ ಎಂಬುವ ಮಾತು ಖಾಸನೀಸರ ಕಥೆಗಳನ್ನು ಓದಿದವರಿಗೆ ನಿಜವೆನಿಸುತ್ತದೆ, ಒಂದೊಂದು ಕಥೆಯಲ್ಲಿನ ವಸ್ತುವೂ ಸಹ ಇಂತಹ ಅನುಭವಗಳಿಂದಲೇ ಕಥೆಯನ್ನು ಪ್ರವೇಶಿಸಿವೆ ಎಂಬುದರಲ್ಲಿ ಸಂಶಯವಿಲ್ಲ. ಒಬ್ಬ ಕಥೆಗಾರ ತನ್ನ ಸುತ್ತಮುತ್ತಲಿನ ತನ್ನ ಅನುಭವಕ್ಕೆ ಬರುವಂತಹ ಅಂಶಗಳನ್ನೇ ವಸ್ತುವಾಗಿ ಕಥೆಯನ್ನು ರಚಿಸಿದಾಗ ಅಂತಹ ಕಥೆಗಳು ಪಡೆದುಕೊಳ್ಳುವ ಗಟ್ಟಿತನ ವಿಶಿಷ್ಟವಾದದ್ದು. ಅನುಭವಸಹಿತವಾದ ಕಥೆಗಳಲ್ಲಿ ವಾಸ್ತವತೆಗೆ ದೂರವಾದ, ಕಾಲ್ಪನಿಕತೆಗೆ ಅವಕಾಶವಿಲ್ಲವೆಂಬುದನ್ನು ಖಾಸನೀಸರ ಕಥೆಗಳು ಸಮರ್ಥವಾಗಿ ಪ್ರತಿನಿಧಿಸುತ್ತವೆ, ಅವರ ಯಾವ ಕಥೆಗಳಲ್ಲೂ ಇಂತಹ ಅನುಭವದ ಗಡಿಯನ್ನು ಮೀರುವ ಅನುಭವಾತೀತ ಕಲ್ಪನೆಗಳಿಗೆ ಸ್ಥಾನವಿಲ್ಲ. ಮೇಲ್ನೋಟಕ್ಕೆ ಮೊನಾಲಿಸಾ ಕಥೆ ಅನುಭವಾತೀತ ಸತ್ಯವೊಂದನ್ನು ವಸ್ತುವಾಗುಳ್ಳ ಕಥೆ ಎನಿಸಿದರೂ ಕೂಡ ಅದು ಖಾಸನೀಸರು ಸೃಷ್ಠಿಸಿದ್ದಲ್ಲ. ಬದಲಾಗಿ ಕಥೆಯ ನಾಯಕನೇ ಕಥೆಯೊಳಗೆ ಸೃಷ್ಟಿಸುವ ಮತ್ತೊಂದು ಕಥಾಲೋಕ. ಆದ್ದರಿಂದ ಮೊನಾಲಿಸಾ ಕಥೆಯ ಕೇಂದ್ರ ಕಾಳಜಿ ಇರುವುದು ಪೆರ್ರೂಗಿಯ ಬದುಕಿನ ಬಗೆಗೇ ವಿನಃ ಅವನು ಹೇಳುವ ಕಥೆಯಬಗೆಗಲ್ಲ.

ಖಾಸನೀಸರು ಬರಹಕ್ಕಾಗಿ ಕಥೆಗಳನ್ನು ಬರೆದವರಲ್ಲ, ಬದುಕನ್ನು ಕಥೆಯಾಗಿಸಿದವರು ಎಂಬ ಮಾತಿನಂತೆ ಅವರ ಕಥೆಗಳಲ್ಲಿ ಬದುಕಿನ ಬಗೆಗಿನ ಶ್ರದ್ಧೆ ಆಳವಾಗಿ ಬೇರುಬಿಟ್ಟಿದೆ. ಅವರ ಕಥೆಗಳಲ್ಲಿ ಪಾತ್ರಗಳ ಸಂಭಾಷಣೆಯಲ್ಲಿ ವ್ಯಕ್ತವಾಗುವ ಬದುಕಿನ ಶ್ರದ್ಧೆ ಇಡೀ ಮನುಷ್ಯ ಜನಾಂಗವನ್ನು ಸಂಭೋದಿಸಿ ಹೇಳುವಂತಹುದು. ಅಲ್ಲಾವುದ್ದೀನನ ಅದ್ಭುತದೀಪ! ಕಥೆಯಲ್ಲಿನ ಈ ಸಾಲುಗಳು ಖಾಸನೀಸರ ಬದುಕಿಗೆ ಕೊಟ್ಟ ಮಾನ್ಯತೆಯನ್ನು ಒತ್ತಿ ಹೇಳುತ್ತವೆ.

" ಸಾವಿಗೆ ಮೊರೆ ಹೋಗಿ ಮನುಷ್ಯ ಸಾಧಿಸುವುದಾದರೂ ಏನನ್ನು? ಜೀವನದಲ್ಲಿ ಬದುಕಿನಲ್ಲಿಯ ಶ್ರದ್ದೆ ಮುಖ್ಯ ಬದುಕೆಂದರೆ ಮನುಷ್ಯನು ಅವ್ಯಾಹತವಾಗಿ ಸಾವಿನೊಡನಾಡುವ ಕಣ್ಣುಮಚ್ಚಾಟ. ಅದು ಮುಟ್ಟಲು ಬಂದಾಗಲೆಲ್ಲ ತಪ್ಪಿಸಿಕೊಂಡು ಪಾರಾಗುವ ಮನುಷ್ಯ ಆಟಕ್ಕೆ ಕಳೆ ತರುತ್ತಾನೆ. ಬದುಕಿನ ಬಣ್ಣ ಆಟವನ್ನು ಮುಂದುವರಿಸುವುದರಲ್ಲಿದೆ. ಅಂಥದು ನಾವೇ ಹೋಗಿ ಸಾವನ್ನು ಮುಚ್ಚಿ 'ಅಳದಿಕ್ಕಿ' ಆಟವಾಡುವುದೇ?

ಪಾತ್ರದ ಮೂಲಕ ಹೊರಹೊಮ್ಮುದ ಖಾಸನೀಸರ ಇಂತಹ ಮಾತುಗಳು ಅವರಲ್ಲಿನ ಬದುಕಿನ ಶ್ರದ್ದೆಗೆ ಕನ್ನಡಿಹಿಡಿದಂತಿವೆ. ಬದುಕಿನ ದುರಂತತೆಯನ್ನು ಯತ್ತಾವತ್ತಾಗಿ ಚಿತ್ರಿಸುವ ಅವರ ಕಥೆಗಳಲ್ಲಿ ವಾಸ್ತವ ಬದುಕಿನ ಸಹಜ ಚಿತ್ರಣವನ್ನು ಕಾಣಬಹುದು ನಿರಂತರ ಬದುಕಿನ

ಪಯಣದಲ್ಲಿ ಎದುರಾಗುವ ಅಡೆ-ತಡೆಗಳು ಉಂಟಾಗುವ ಆಗು-ಹೋಗುಗಳು ಎಲ್ಲವನ್ನು ಖಾಸನೀಸರು ತಮ್ಮಕಥೆಗಳಲ್ಲಿ ಸಾಕಾರಗೊಳಿಸಿದ್ದಾರೆ, ಆ ಮೂಲಕ ಬದುಕಿನ ಸಹಜತೆಯನ್ನು ಕಥೆಯಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ.

ಖಾಸನೀಸರ ಒಟ್ಟಾರೆ ಕಥೆಗಳನ್ನು ಗಮನಿಸಿದಾಗ ಅಲ್ಲಿನ ಘಟನೆಗಳು, ಪಾತ್ರಗಳು ನಿರೂಪಣೆ, ಇವೆಲ್ಲವುಗಳಿಗಿಂತ ಮುಖ್ಯವಾಗಿ ಗಮನಸೆಳೆಯುವ ಅಂಶ ಅಲ್ಲಿನ ಸಂಬಂಧಗಳ ವಿಶಿಷ್ಟ ಸ್ವರೂಪ. ಒಂದೇ ಕಥೆಯೊಳಗಿನ ಹಲವು ಪಾತ್ರಗಳ ನಡುವೆ ಹಲವು ಬಗೆಯ ಸಂಬಂಧಗಳು ವಿಭಿನ್ನ ನೆಲೆಯಲ್ಲಿ ಬೆಸೆದುಕೊಂಡಿರುವುದು ಮನುಷ್ಯ ಸಂಬಂಧಗಳಲ್ಲಿನ ಹಲವು ಮುಖಗಳನ್ನು ಪರಿಚಯಿಸುತ್ತದೆ. ಸಂಬಂಧಗಳ ಮೌಲ್ಯದ ಬಗೆಗೆ ಇರುವ ಕಾಳಜಿ, ಸಂಬಂಧಗಳ ಬಿರುಕಿಗೆ ಕಾರಣಗಳು, ದೈಹಿಕ ಮತ್ತು ಮಾನಸಿಕ ಸಂಬಂಧಗಳ ನಡುವಿನ ಅಂತರ, ಸಂಬಂಧಗಳಲ್ಲಿನ ಸಂಘರ್ಷಗಳು ಇವೆಲ್ಲವನ್ನೂ ಖಾಸನೀಸರು ತಮ್ಮ ಕತೆಗಳಲ್ಲಿ ಪ್ರಜ್ಞಾಪೂರ್ವಕವಾಗಿ ನಿರೂಪಿಸಿರುವುದು ಅವರಲ್ಲಿರುವ ಸಂಬಂಧಗಳ ಬಗೆಗಿನ ಪ್ರಜ್ಞೆಗೆ ಉತ್ತಮಗುರುತಾಗಿದೆ.

ಮನುಷ್ಯ ಸಂಬಂಧಗಳಲ್ಲಿನ ವಿಭಿನ್ನತೆ ಮತ್ತು ವಿಚಿತ್ರತೆಗಳನ್ನು ಖಾಸನೀಸರು ತಮ್ಮ ಕಥೆಗಳ ಮೂಲಕ ವಿಶಿಷ್ಟವಾಗಿ ನಿರೂಪಿಸಿದ್ದಾರೆ. ಸಂಬಂಧಗಳ ನಡುವಿನ ದೈಹಿಕ ಮತ್ತು ಮಾನಸಿಕ ದ್ವಂದ್ವಗಳನ್ನು ಪಾತ್ರದಿಂದ ಪಾತ್ರಕ್ಕೆ ಭಿನ್ನ ಪರಿಕಲ್ಪನೆಯಲ್ಲಿ ನೋಡುವ ಖಾಸನೀಸರ ಕಥೆಗಳಲ್ಲಿನ ಸಂಬಂಧಗಳಲ್ಲಿ ಏಕರೂಪತೆ ಕಾಣುವುದಿಲ್ಲ. ಅವು ಮನಸ್ಸುಗಳಿಂದ ಮನಸ್ಸುಗಳಿಗೆ, ವ್ಯಕ್ತಿಯಿಂದ ವ್ಯಕ್ತಿಗೆ, ಸಮಾಜದಿಂದ ಸಮಾಜಕ್ಕೆ ಬೇರೆ-ಬೇರೆಯಾಗಿಯೇ ನೆಲಗೊಂಡಿರುವ ಸಂಬಂಧಗಳ ಸಹಜತೆಯನ್ನು ಸಹಜವಾಗಿಯೇ ಕಥೆಗಳಲ್ಲಿ ಭಿತ್ತರಗೊಳಿಸಿದ್ದಾರೆ. ಅಲ್ಲಿನ ಪ್ರೇಮ, ದಾಂಪತ್ಯ, ಸ್ನೇಹ, ಮುಂತಾದ ಯಾವ ಸ್ವರೂಪದ ಸಂಬಂಧವೇ ಆದರೂ ಸಹ ಅವು ನಮ್ಮ ಅನುಭವಕ್ಕೆ ಮೀರದ ಸಂಬಂಧಗಳಾಗಿ ಇರುವುದಿಲ್ಲ. ಅಂತಹ ಸಂಬಂಧಗಳೊಂದಿಗೇ ಅಥವಾ ಆ ಸಂಬಂಧದ ಸುತ್ತಮುತ್ತಲಿನ ಪರಿಸರದಲ್ಲೇ ಬದುಕುತ್ತಿರುವುದು ತಿಳಿದುಬರುತ್ತದೆ.

ಈ ಪ್ರಬಂಧಕ್ಕೆ ಸಮಾರೂಪವನ್ನು ಬರೆಯುವಾಗ ಹೇಳಬಹುದಾದ ಮತ್ತೊಂದು ಮಾತೆಂದರೆ, ಓದಿ ಆನಂದಪಟ್ಟ ಖಾಸನೀಸರ ಹಲವು ಕಥೆಗಳ ಹಲವು ಘಟನೆ ಚಿತ್ರಣಗಳನ್ನು ಈ ಪ್ರಬಂಧಕ್ಕೆ ತರುವಲ್ಲಿ ಸೋತಿದ್ದೇನೆ. ಅದಕ್ಕೆ ಇದೊಂದು ಪ್ರಬಂಧ ರಚನೆ ಎಂಬುದರ ಬಗೆಗಿನ ಹಲವು ನಿಯಮಗಳು ಕಾರಣವಿರಬಹುದು. ಹೇಳಬೇಕಾದ ಹಲವು ವಿಷಯಗಳು,

ಇಣುಕಿನೋಡಬೇಕಾದ ಹಲವು ಪಾತ್ರಗಳು, ಚಿತ್ರಿತಗೊಳ್ಳಬೇಕಾದ ಹಲವು ಘಟನೆಗಳು ಹೀಗೆ ಹತ್ತು-ಹಲವು ಅಂಶಗಳು ಪ್ರಬಂಧದಲ್ಲಿ ಅನಿವಾರ್ಯವಾಗಿ ಮರೆಯಾಗಿವೆ ಎಂಬ ವಿಷಾಧನೀಯವೂ ಈ ಪ್ರಬಂಧ ರಚನೆಯಲ್ಲಿ ಮನೆಮಾಡಿದೆ.

ಪ್ರಸ್ತುತ ಪ್ರಬಂಧದ ಕೇಂದ್ರ ಖಾಸನೀಸರ ಕಥೆಗಳಲ್ಲಿನ ಮನುಷ್ಯ ಸಂಬಂಧಗಳ ಹುಡುಕಾಟವೇ ಆಗಿದ್ದರಿಂದ ಆ ಹುಡುಕಾಟದ ಕ್ರಿಯೆಯಲ್ಲಿ ಸಂಬಂಧಗಳನ್ನೊರತಾದ ಹಲವು ವಿಷಯಗಳು ಅಲಕ್ಷ್ಯಕ್ಕೆ ಗುರಿಯಾಗಿರುವ ಸಂಭವವೂ ಇದೆ. ಉಳಿದ ಹಲವು ಸನ್ನಿವೇಶ, ಸಂದರ್ಭ, ಘಟನೆಗಳು ಸಂಬಂಧಗಳ ಸ್ವರೂಪದ ವಿವರಕ್ಕೆ ಪೂರಕವಾಗಿ ಬಂದಿವೆಯೇ ವಿನಃ ಅವುಗಳಿಗೆ ತಮ್ಮದೇ ಆದ ಪ್ರತ್ಯೇಕತೆಯೇನೂ ಇರಲಾರದು.

ಒಟ್ಟಾರೆಯಾಗಿ ಖಾಸನೀಸರ ಕಥೆಗಳನ್ನು ಸಂಬಂಧಗಳ ಸ್ವರೂಪದ ಹಿನ್ನಲೆಯಾಗಿ ನೋಡುವ ಪ್ರಯತ್ನವಾಗಿ ಈ ಪ್ರಬಂಧ ರಚನೆಯಾಗಿದೆ ಎಂದು ಹೇಳಬಹುದು.

ಗ್ರಂಥಸೂಚಿ

೧. ಅಶೋಕ.ಟಿ.ಪಿ. : ಸಾಹಿತ್ಯ ಸಂದರ್ಭ, ಅಕ್ಷರಪ್ರಕಾಶನ, ಸಾಗರ, ೧೯೮೪.

೨. ಆಮೂರ ಜಿ.ಎಸ್. : ಕನ್ನಡ ಕಥನ ಸಾಹಿತ್ಯ : ಸಣ್ಣಕಥೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೩.

೩. ಆಮೂರ ಜಿ.ಎಸ್. : ಕಥನಶಾಸ್ತ್ರ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧.

೪. ಕರೀಗೌಡ ಬೀಚನಹಳ್ಳಿ : ವ್ಯಷ್ಟಿ ಮತ್ತು ಸಮಷ್ಟಿ, ಅಜಂತಪ್ರಕಾಶನ, ಬೆಂಗಳೂರು, ೧೯೯೧.

೫. ಕೀರ್ತಿನಾಥ ಕುರ್ತುಕೋಟಿ : ಯುಗಧರ್ಮ ಮತ್ತು ಸಾಹಿತ್ಯದರ್ಶನ; ಮನೋಹರ ಗ್ರಂಥಮಾಲಾ, ಧಾರವಾಡ, ೧೯೬೨.

೬. ಕೃಷ್ಣಮೂರ್ತಿ ಎಂ.ಜಿ. : ಆಧುನಿಕ ಭಾರತೀಯ ಸಾಹಿತ್ಯ, ಅಕ್ಷರ ಪ್ರಕಾಶನ, ಸಾಗರ, ೧೯೭೦.

೭. ಗಿರಡ್ಡಿ ಗೋವಿಂದರಾಜ : ಸಣ್ಣಕತೆಯ ಹೊಸ ಒಲವುಗಳು, ಸಂಕ್ರಮಣ ಪ್ರಕಾಶನ, ಧಾರವಾಡ,೧೯೬೫.

೮. ದಿವಾಕರ.ಎಸ್. : ಶತಮಾನದ ಸಣ್ಣಕತೆಗಳು – ಪ್ರಿಸಂ ಬುಕ್ ಹೌಸ್, ಬೆಂಗಳೂರು, ೧೯೮೪.

೯. ನಾಯಕ ಜಿ.ಎಚ್. : ಕನ್ನಡ ಸಣ್ಣಕಥೆಗಳು (ಸಂ), ನ್ಯಾಷನಲ್ ಬುಕ್ ಟ್ರಸ್ಟ್, ದೆಹಲಿ, ೧೯೭೮.

೧೦. ರಾಘವೇಂದ್ರ ಖಾಸನೀಸ : ಬೇಡಿಕೊಂಡವರು, ಮನೋಹರ ಗ್ರಂಥಮಾಲೆ, ಧಾರವಾಡ,

೧೧. ಶಾಂತಿನಾಥ ದೇಸಾಯಿ : ನವ್ಯ ಸಾಹಿತ್ಯದರ್ಶನ, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ೧೯೯೦.

೧೨. ಶೇಷಗಿರಿರಾವ್ ಎಲ್.ಎಸ್. : ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತಪುಸ್ತಕ, ಬೆಂಗಳೂರು, ೧೯೯೯.

೧೩. ಶೇಷಗಿರಿರಾವ್. ಎಲ್.ಎಸ್. : ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ & ಸಂಸ್ಕೃತಿ [ಸಂ], ಉದಯಭಾನು ಕಲಾಸಂಘ, ಬೆಂಗಳೂರು, ೧೯೯೩.